Reg. No. B 1270. Monday, 7th August, 1939

ವರ್ಷ ೨೨

ಪತ್ರದ ವರ್ಗಣೆ.

ಕುಮಟೆಯಲ್ಲಿ ಅಗಾವಿ
ರೂಪಾಯಿ ೨-೪-೦
ಮುನಿಯಾರ್ಡರಿನಿಂದ
ರೂ. ೩-೧-೦.
ವಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ ೩-೪-೦.
ಪತಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೨-೦

ಕಾನಡಾವೃತ್ತ.

THE KANARA NEWS.

ಸರ್ವಜನಹಿತಕರ್ತೆ ಶ್ರೇಷ್ಠತಾ ಯಾತಿ ಲೋಕೆ ಜನಪಹಿತಕರ್ತಾ ಸ್ವಲ್ಪಕೇ ಬಾಧಿತೇಽಪಿ:।
ಇತಿ ಮಹತಿ ವಿರೋಧೇ ವರ್ತಮಾನೇ ಸಮಾನೇ ಭೂಪತಿಜನಪದಾನಾಂ ದುರ್ಜನ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೬

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಮೈಕಾ ಟೈಪಿನ (೧೫ ಎಮ್ ಉದ್ದ)
೪ ಸಾಲುಗಳವರೆಗೆ ರೂ.೧-೦-೦
೪ ನಂತ್ರ ಪ್ರತಿಸಾಲಿಗೆ ೦-೨-೦
ಕಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಸಾಲಿಗೆ ಬಿಂದ ಅದ್ದು ಸಾಲುಗಳಿಗೆ ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡುವದು ತಕ್ಕ ಸಮಯವಲ್ಲ.

-*(ಕುಮಟಾ— ಕಾನಡಾವೃತ್ತ, ಸೋಮವಾರ, ಕಾರೀಖು ೭ ಮಾಹೆ ಅಗಸ್ಟ ಸನ್ ೧೯೩೯ನೇ ಇಸವಿ.)*-

ದಿ ವೆಸ್ಟರ್ನ ಪ್ರೊವಿಡೆಂಟ

&

* ಜನರಲ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್. *

ಹೆಡ್ ಆಫೀಸು:— ರಹಿಮತುಲ್ಲಾ ಹೌಸ, ಹೋತುಜಿ ಸ್ಟ್ರೀಟ್,
ಸರ್ ಫೆರೋಜಶಹಾ ಮೇಥಾ ರೋಡ, ಫೋರ್ಟ, ಮುಂಬಯಿ.

ಸರ್ವ ವಿಧದ ವಿಮಾ-ಸೌಕರ್ಯಗಳುಳ್ಳ, ರೂ. ೧೦೦ ರಿಂದ ೫೦೦ ವರೆಗಿನ ಜೀವವಿಮೆ ಇಳಿಸುವ

ಭದ್ರ ಆಡಳಿತದ ಪ್ರಗತಿಪರ ವಿಮಾ ಕಂಪನಿ.

ಏಜನ್ಸಿ ಅರ್ಗನೈಝರುರು:— ಎಚ್. ಆರ್. ಪ್ರಭು, ಕುಮಟಾ.

ಕಾನಡಾ ಜಿಲ್ಲೆಯೊಳಗಿನ ಏಜಂಟರು:—

ಕುಮಟಾ:-	ಹೊನ್ನಾವರ:-	ಅಂಕೋಲಾ:-	ಶಿರಸಿ:-
ಎಮ್ ಆರ್ ಪ್ರಭು	ಹೊನ್ನಾವರ ಬುಕ್ ಡಿಪೋ	ಪಿ ಎಸ್ ತೇಲಂಗ	ಎಮ್. ವಿ. ನಾಯಕ
ಎಸ್ ಎಲ್ ನೆರ್ಲೇಕರ	ಎಸ್. ಕೆ. ಕಾಮತ.	ಟಿ. ಎಮ್ ಶಿಕರ್ಕೆ.	ಎಸ್. ಕೆ. ಭಗತ
ಎಸ್. ಎಲ್. ಶಾನಭಾಗ	ಮುಡೇಶ್ವರ:-	ಬಿಣಗಿ:-	
	ಡಿ. ಆರ್ ಕಾಮತ	ಆರ್. ಪಿ. ಕಾಮತ	

ಕರ್ನಾಟಕದ ಪ್ರಮುಖ ಸ್ಥಳಗಳಲ್ಲೆಲ್ಲ ಶಾಖೆಗಳಿಗಿದ್ದಾರೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ರಿಜಿಸ್ಟರ್ಡ ಆಫೀಸು:— "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ— ಕುಂದಾಪುರ. ದ. ಕ.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟ್ಸುಗಳು ಸ್ವೀಕರಿಸಲ್ಪಡುವವು.

ಕಾಯಂ ಠೇವಣಾತಿಗಳ ಬಡ್ಡಿ ದರಗಳು- 6 ತಿಂಗಳು ಮುದ್ದತ್ತಿಗೆ 3½%, 1 ವರ್ಷದ ಮುದ್ದತ್ತಿಗೆ 4%,
2 ವರ್ಷ ಯಾ ಹೆಚ್ಚಿನ ಅವಧಿಗೆ 4½%

ಅಲ್ಪ ಮುದ್ದತ್ತಿನ ಠೇವುಗಳು (Short term deposits) ಸಹ ಅಂಗೀಕರಿಸಲ್ಪಡುವವು.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಕುಂದಾಪುರ,
1—1—1939. } The Agricultural & Industrial Bank, Ltd.

ವಾರ್ತೆಗಳು.

— ಬಂಗಾಲ ಪ್ರಾಂತದ ಡಮಡಮ್ ಮತ್ತು ಅಲಿಪುರ ಸೆರೆಮನೆಗಳಲ್ಲಿ ಉಪವಾಸ ಮಾಡುತ್ತಿದ್ದ ರಾಜಬಂದಿಗಳು ಗುರುವಾರ ರಾತ್ರಿ ತಮ್ಮ ಉಪೋಷಣವ್ರತವನ್ನು ನಿಲ್ಲಿಸಿ ಪಾರಣ ಮಾಡಿದರು ಆಸಿರ್ಮದಿಂದಾಗಿ ತಮ್ಮ ಬಿಡುಗಡೆಯಾಗಬೇಕೆಂದೂ ನಾನಾರಿಕ ತನದ ಯಾವುದೂ ಹಕ್ಕುಗಳು ತವಗೆ ದೊರೆಯಬೇಕೆಂದೂ ರಾಜಬಂದಿಗಳು ಹೇಳಿ, ಆದಕ್ಕಾಗಿ ಅವರು ಜುಲ್ಯಾ ೭ನೇ ತಾರೀಖಿನಿಂದ ಉಪೋಷಣವನ್ನು ಕೈಕೊಂಡಿದ್ದರು ಉಪೋಷಣವ್ರತವನ್ನು ನಿಲ್ಲಿಸಿದನಂತರ ರಾಜಬಂದಿಗಳ ಬಿಡುಗಡೆಯಾಗಲಿಕ್ಕಿಷ್ಟವಾಗಿ ಬಂಗಾಲ ಸರಕಾರವು ಗಟ್ಟಿ ಕೂತಿತ ಬಿಡುಗಡೆಯ ಅವಧಿ ನಿಶ್ಚಿತವಾದನಂತರ ಉಪವಾಸ ನಿಲ್ಲಿಸಲಿಕ್ಕಿಲ್ಲವಾಗಿ ರಾಜಬಂದಿಗಳು ನಿಶ್ಚಯ ಹಿಡಿದಿದ್ದರು ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರು ಕಲಕತ್ತೆಗೆ ಹೋಗಿ ರಾಜಬಂದಿಗಳೊಡನೆ ವಿಚಾರವಿನಿಮಯ ಮಾಡಿದರು ಗೃಹಮಂತ್ರಿಗಳೂ ಸರ್ ನಾಯಿಮುದ್ದೀನ ರವರೂ ಅಲೀಪುರ ಸೆರೆಮನೆಗೆ ಹೋಗಿ ರಾಜಬಂದಿಗಳೊಡನೆ ಮಾತಾಡಿದರು ಸರಕಾರವು ಪ್ರತಿಯೊಂದು ಪ್ರಕರಣದ ಗುಣದೋಷಗಳನ್ನು ವಿಚಾರಿಸಿ ತಕ್ಕ ಹುಕುಮುಗಳನ್ನು ಹೊರಡಿಸುವದೂ ಅವರಿಗೆ ತಿಳಿಸಿತು ಇದಕ್ಕೆ ರಾಜಬಂದಿಗಳು ಒಪ್ಪಲಿಲ್ಲ ಆದರಿಂದ ಬಾಬು ರಾಜೇಂದ್ರ ಪ್ರಸಾದರವರೂ ಶ್ರೀ॥ ಮಹಾದೇವಭಾಯಿ ದೇಸಾಯಿ ಯವರೂ ನಿಂ ಶಂಕರ ಕಲಕತ್ತೆಯಿಂದ ಹಿಂತಿರುಗಿದರು ರಾಜಬಂದಿಗಳು ಶ್ರೀ॥ ಮಹಾದೇವಭಾಯಿ ಯವರ ಕಡೆಗೆ ವಹಿತ್ಮರ ವಿಚಾರಕ್ಕಾಗಿ ಕೆಲವು ಪ್ರಶ್ನೆಗಳನ್ನು ಕಳುಹಿದ್ದರು ವಿಚಾರಿಸಿ ಅವನ್ನು ಸಮಾಲೋಚಿಸಿ, ಉಪೋಷಣ ವ್ರತ ದಿಂದ ರಾಜಬಂದಿಗಳ ಬಿಡುಗಡೆಯ ಬಗ್ಗೆ ಸ್ವಯತ್ನ ಮಾಡುವದು ಕಠಿಣವಾಗಿರುವದೆಂಬುದೂ, ಬಿಡುಗಡೆಯಾಗುವ ನಿಶ್ಚಿತ ಅವಧಿ ಕೊಡುವದು ಶಕ್ಯವಿಲ್ಲವೆಂಬುದೂ, ಸಮಾಧಾನದಿಂದ ರಾಜಬಂದಿಗಳ ನ್ಯಾಯ್ಯವಾದ ಹಕ್ಕುಗಳನ್ನು ತಾವು ಪ್ರತಿಪಾದಿಸಿ ಬಿಡುಗಡೆಯ ಬಗ್ಗೆ ಪ್ರಯತ್ನ ಮಾಡಬೇಕೆಂಬುದೂ ತಿಳಿಸಿದರು ಆಮೇಲೆ ಶ್ರೀ॥ ಸುಭಾಸಚಂದ್ರ ಬೋಸರವರೂ ಶ್ರೀ॥ ಶರಚ್ಚಂದ್ರ ಬೋಸರವರೂ ರಾಜಬಂದಿಗಳ ಪರವಾಗಿ ಗೃಹಮಂತ್ರಿಗಳಾದ ಸರ್ ನಾಯಿಮುದ್ದೀನರವರ ಕಡೆಗೂ ಮಧ್ಯಸ್ಥಿಕೆ ನಡಿಸಿದರು ಸರಕಾರವು ರಾಜಬಂದಿಗಳ ಬಿಡುಗಡೆಯ ಕುರಿತು ಸಲಹೆ ಕೊಡಲೆಂದು ಸಮಿತಿಯ ಮಂಡಳವು ೨ ತಿಂಗಳೊಳಗೆ ಕೈಗಿಳಿಗಳ ಬಿಡುಗಡೆಯ ಒಳ್ಳೆ ಶಿಫಾರಸುಗಳನ್ನು ಮಾಡಿದ ಬಳಿಕ ಅವಧಿಯೊಳಗೆ ಸರಕಾರವು ಆಲೋಚನೆ ಮಾಡಿ ಬಿಡುಗಡೆಯ ಹುಕುಮುಗಳನ್ನು ಹೊರಡಿಸತಕ್ಕದ್ದೆಂದು ಇತ್ತಿಟ್ಟಿನಲ್ಲಿ ನಿಶ್ಚಿತವಾದಂತೆ, ರಾಜಬಂದಿಗಳು ಉಪೋಷಣವನ್ನು ನಿಲ್ಲಿಸಿ, ಗುರುವಾರ ರಾತ್ರೆ ಪಾರಣ ಮಾಡಿದರು ಎಂಬಿನ ಮಿ ಕೊಬ್ಬು ಶ್ರೀ॥ ಶರಚ್ಚಂದ್ರ ಬೋಸರೂ ಇನ್ನೊಬ್ಬರೂ ಸಲಹೆಗಾರ ಮಂಡಳದಲ್ಲಿ ಸಾರಿ ರಾಜಬಂದಿಗಳ ಪ್ರಕರಣಗಳನ್ನು ಸಮಾಲೋಚಿಸುವರು ಈ ಯಾವತ್ತೂ ಕೂಡಿಕಾರಿಕೆಯನ್ನು ಒಂಗಾಲ ಪ್ರಾಂತಿಕ ಕೊಂಗ್ರೆಸ ಕಮಿಟಿಯು ಮೆಚ್ಚತ್ತುಕೊಂಡಿದೆ ರಾಜಬಂದಿಗಳು ಉಪೋಷಣವನ್ನು ನಿಲ್ಲಿಸದಿದ್ದರೆ ಭಯಂಕರ ಪ್ರಕಾರ ಒದಗಿಬರುತ್ತಿತ್ತು ಕೊಂಗ್ರೆಸ ಮಂತ್ರಿಮಂಡಳಗಳು ರಾಜೀನಾಮೆ ಯನ್ನು ಸಹ ಕೊಡುವ ಪ್ರಸಂಗವಿತ್ತಾಗಿ ರಾಷ್ಟ್ರೀಯ ಸಭೆಯ ಕಾರ್ಯದರ್ಶಿ ಗಳಾದ ಆಚಾರ್ಯ ನೆರಿಮನ್ ಅವರು ಅಲಹಾಬಾದದಲ್ಲಿ ಮಾಡಿದ ಒಂದು ಭಾಷಣದಲ್ಲಿ ಹೀಗೆ ಹೇಳಿದ್ದರು ಸತ್ಯಾಗ್ರಹವನ್ನು ಸಹ ಕೂಡಿ ೧೦೨೦೦ಕ್ಕೆ ಮಿಕ್ಕಿ ಸತ್ಯಾಗ್ರಹಿಗಳನ್ನು ಸಹ ಸರೆಮನೆಗಟ್ಟುವ ಗಂಭೀರ ಪ್ರಸಂಗ ಬರಬಹುದಾಗಿಯೂ ಆಚಾರ್ಯರು ಜಾಗ್ರತೆಯನ್ನಿತ್ತಿದ್ದರು

— ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಈ ಹಿಂದೆ ಪ್ರಕಟವಾದಂತೆ, ಆಗಸ್ಟ ೧೯ನೇ ತಾರೀಖಿಗೆ ಸೇರಲ್ಲಿ ಆದರೆ ಕಾರ್ಯಕಾರಿ ಮಂಡಳದ ಸಭಾಸದರು ಆಗಸ್ಟ ೧೯ನೇ ತಾರೀಖಿಗೆ ಹಾಜರಾಗಲು ಅನ ಪುಕೂಲತೆಯನ್ನು ತಿಳಿಸಿದ್ದರಿಂದ, ಮೂಲ ಕಾರ್ಯಕ್ರಮಾಂತೆ ಆಗಸ್ಟ ೧೯ನೇ ತಾರೀಖಿಗಾಗಿ ಈ ಸಭೆ ನಿರುವದಿ ಪ್ರಕಟವಾಗಿದೆ ಈ ಸಭೆಯಲ್ಲಿ ಹಿಂದುಸ್ಥಾನ ಸರಕಾರವು ವಿದೇಶಕ್ಕೆ ರವಾನಿಸಿದ ವೈಸ್ರಾಯ ಪಥಕರಿಗೆ ವಿಷಯ ಗಂಭೀರ ಚರ್ಚೆಯಾಗಲಿದೆಯೆಂದೂ, ಹಿಂದುಸ್ಥಾನ ಸರಕಾರವು ಹಿಂದೆ ಲೆಕ್ಕವಿಕರನ್ನು ವಿಚಾರಿಸದೆ ವೈಸ್ರಾಯ ಸರ್ವಾಧಿಕಾರತ್ವಕ್ಕೆ ಅಂಕಿತವಾಗಿ ಹಿಂದುಸ್ಥಾನ ಸರಕಾರದ ಖರ್ಚಿನಿಂದ ಹಿಂದುಸ್ಥಾನದ ಸೈನ್ಯ ಪಥಕರನ್ನು ಸಾಮ್ರಾಜ್ಯ ಕಾರಣಕ್ಕಾಗಿ ವಿದೇಶಗಳಿಗೆ ರವಾನಿಸುವದು ಘೋರಣಾಯಸ್ಥವೆಂಬ ಹೇಗೆ? ಎಂಬ ವಿಚಾರವೂ ಚರ್ಚೆಯಾದು ಹಿಂದುಸ್ಥಾನದ ಸರಕಾರವು ಗಡಿನ ಪ್ರದೇಶದಲ್ಲಿ ಹಿಂದುಸ್ಥಾನದಲ್ಲಿಗಳ ಶಾಂತತೆಯನ್ನು ಪಾಲಿಸುವ ನವಿಂದ ಸರಕಾರಿಯ ಪಕ್ಷಪಾತರಿಗೆ ದಂಡಿಸುವ ದನ್ನೂ, ಪಕ್ಷಿಯ ಸದಸ್ಯರು ಪ್ರತಿಯಾಗಿ ಗಡಿನಾಡಿನಲ್ಲಿ ವಾಸಿಸುವ ಜನರ ಲೆಕ್ಕ ಮಾಡುವದನ್ನೂ ಕೊಂಗ್ರೆಸ ಕಾರ್ಯಕಾರಿ ಮಂಡಳದ ಪರ್ಯಾಲೋಚನೆ, ಆ ಪ್ರದೇಶದಲ್ಲಿ ಸುಖ ಸಮಾಧಾನಗಳು ನೆಲಸುವಂತೆ ಮಹಾತ್ಮರ ಸಲಹೆ ಪಡದು ಉಪಾಯ ಯೋಜನೆ ಮಾಡುವದು ಯಂಬೋಷ ಖಂಡದೊಳಗಿನ ಗಂಭೀರ ಪರಿಸ್ಥಿತಿಯನ್ನು ಸಮಾಲೋಚಿಸಿ ಯುದ್ಧವಾಗುವ ಪ್ರಸಕ್ತಿಯಲ್ಲಿ ಹಿಂದೀ ರಾಷ್ಟ್ರೀಯ ಸಭೆಯು ಕೈಕೊಳ್ಳಬೇಕಾದ ಧೋರಣವನ್ನು ನಿಶ್ಚಯಿಸುವದು ಮುಂಭಾಗ ಪಕ್ಷದ ಆಂದೋಲನವನ್ನೂ ಶ್ರೀ॥ ಸುಭಾಸಚಂದ್ರ ಬೋಸ ಪ್ರಭೃತಿ ಬೇರೆ ಬೇರೆ ಕೊಂಗ್ರೆಸ ಕಮಿಟಿಗಳ ಅಧಿಕಾರಿಗಳ ನಡಾವಳಿಯನ್ನೂ ಸಂಗೋಪಾಂಗ ಪರಾಂಬರಿಸಿ ರಾಷ್ಟ್ರೀಯ ಸಭೆಯ ಗೌರವವನ್ನು ರಕ್ಷಿಸಿಕೊಳ್ಳುವಂತೆ ಉಪಾಯಯೋಜನೆ ಮಾಡುವದು ಮುಂಭಾಗ ಪಕ್ಷದವರು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ತೀರ್ಮಾನಗಳ ವಿರುದ್ಧ ವಿಘಾಸಿಸಿದ ವಿಷೇಧಕ್ಕುದರ್ಶಕ ಸಭೆಗಳಿಂದ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಅಧಿಕಾರಿ ಮಂಡಳಗಳು ಕರ್ತವ್ಯಕರಾಮ್ಮುಖವಾಗಿರುವಂತೆಯೂ ಸ್ವಾಮಿಭಕ್ತಿಯೂ ಆಗಿರುವಂತೆಯೂ ಪಂ॥ ಜವಾಹರಲಾಲರು ಅಭಿಪ್ರಾಯಪಟ್ಟ ಈ ಪ್ರಸ್ತಪ್ತಿಯನ್ನು ಮೋಗಲಾಡಿಸಿದವರ ರಾಷ್ಟ್ರೀಯ ಸಭೆಯು ಉಳಿಗಾಲವಿಲ್ಲವೆಂದು ಸಂಯುಕ್ತ ನ್ಯಾಂತಿಕ ಕೊಂಗ್ರೆಸ ಕಮಿಟಿಯು ಸಭಾಸದರಿಗೆ ಸವಿಸ್ತರ ಪತ್ರ ಬರೆದಿರುತ್ತಾರೆ ಪ್ರಾಮುಖ್ಯವಾಗಿ ಪಂ॥ ಜವಾಹರಲಾಲರ ವಿಚಾರಸರಣಿಯೇ ಕೊಂಗ್ರೆಸ ಕಾರ್ಯಕಾರಿ ಮಂಡಳದಲ್ಲಿ ಮಾನ್ಯವಾಗಬಹುದಂತೆ

— ಮುಂಬಯಿಯಲ್ಲಿ ಮಧ್ಯಪಾನೋಚ್ಚಾಟಣ ಕಾರ್ಯಕ್ರಮಕ್ಕೆ ಸೋಮವಾರ ರಾತ್ರೆ ೧೨ ಗಂಟೆಗೆ ಪ್ರಾರಂಭವಾಯಿತು ಮಹಾತ್ಮರೂ ರಾಷ್ಟ್ರಪತಿ ರಾಜೇಂದ್ರ ಪ್ರಸಾದರವರೂ, ಅನೇಕ ಮಧ್ಯಪ್ರಾಂತದ ಮುಖ್ಯ ಮಂತ್ರಿಗಳೂ, ಸರ್ ಅಲಿ

ಚಕ್ರಬಿಂದು

ಮಕ್ಕಳ ಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ್) (ಲಿವರ ಕ್ಯೂರ್

ಏಜನ್ಸಿ ಕಲಕತ್ತಾ, ಮುಂಬಯಿ, ಮದರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋವೆರೋಗ, ನೈ ಕೈ ಬಾವುಗಳಿಗೆ ದಿವ್ಯೌಷಧ!

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ ೨

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವಕಿಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ವರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ॥ ವಿ ಎನ್ ಶ್ರೀನಿವಾಸರಾವ್, ಲಿವ್ವರ್ ಸ್ಪೆಶಲಿಸ್ಟ್,
ಎಂ ವಿ ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

ಇವರಲ್ಲಿ ವಿಚಾರಿಸಿರಿ

ಶರ್ಮ ವಿಜಯ

ಸುಬ್ಬಾಯ ಸೀತಾರಾಮ ಹೆಗಡೆ
ಕುಮಟೆಯ ನಿವಾಸಿ

ದೇವಪ್ಪಾ ಅಯ್ಯಾ, ನಾಯ್ಕ

ಮಹಮ್ಮದಪೈಗಂ ದೆಹಲಿಯವರೂ, ಕರಾಚಿ ಮ್ಯುನಿಸಿಪಲಿಟಿಯ ಅಧ್ಯಕ್ಷರಾದ ರಾ|| ಸಿಧ್ವಾ ರೆವರೂ, ಮೆಧ್ಯವರ್ತಿ ಕಾಯಿದೆ ಕೌನ್ಸಿಲಿನ ಸ್ವತಂತ್ರ ಸಭಾಸದರಾದ ಶ್ರೀ|| ನಾರಾಯಣರಾವ ಜೋತಿಯವರೂ, ಡಾ|| ಸಟ್ಯಭಿಷೇತಕರಾಮಯ್ಯಾ, ಶ್ರೀ|| ಶಂಕರರಾವ ದೇವ, ಶ್ರೀ|| ಸತ್ಯಮೂರ್ತಿ, ಬಿ|| ಸರೋಜಿನಿ ನಾಯಿಡು ಪ್ರಭೃತಿ ಲೋಕ ನಾಯಕರೂ, ಪಂ|| ಜವಾಹಿರಲಾಲ ನೆಹರೂ ರವರೂ ಮುಂಬಯಿ ಸರಕಾರಕ್ಕೆ ಹರಿಸಿದ್ದಾರೆ ಮುಂಬಯಿ ಸರಕಾರವು ಸಾಹಸದಿಂದ ಕೈಕೊಂಡ ಮಧ್ಯಪಾನೋಜ್ಜಾಟನ ಕಾರ್ಯ ನೆರವೇರಲೆಂದು ಆಶೀರ್ವದಿಸಿದ್ದಾರೆ ಜುಲೈ ತಿಂಗಳ ಕಡೇ ವಾರದಲ್ಲಿ ಕುಡುಕರ ಗದ್ದಲ ೬ ತಿಂಗಳ ಸಂಪಾಯಿತಿ ದಿನಗಳಲ್ಲಿ ಖರ್ಚಾಯಿತಾಗಿ ಪ್ರಕಟವಾಗಿದೆ !! ಕಸಿ ರವಿವಾರ ವಂತು ವ ದ್ಯದಂಗಡಿಗಳು ಕುಡುಕರಿಂದ ಮುತ್ತಲ್ಪಟ್ಟಿದ್ದವು ರವಿವಾರ ರಾತ್ರೆ ೧೧ ಘಂಟೆಗೆ ಅಂಗಡಿಗಳಲ್ಲಿದ್ದ ಚಲೋ ಸರಾಯಿಯೆಲ್ಲ ಖರ್ಚಾಯಿತು ಜಪಾನಿ ಸರಾಯಿ ಯಾರೂ ಕುಡಿಯುತ್ತಿದ್ದಿಲ್ಲ, ಅದು ಅಗ್ಗವಾದರೂ ಅದಕ್ಕೆ ಗಿರಾಕಿ ಕಡಿಮೆ ಆದೂ ಸಜೆ ೮ ದಿನ ಖರ್ಚಾಯಿತಾ ! "ಆ ದಿನಗಳಾದವು, ನನ್ನ ಗಂಡ ಇನ್ನೂ ಮನೆಗೆ ಬರಲಿಲ್ಲ!" ಹೀಗ ಒಬ್ಬ ಹೆಂಗಸು ಪತ್ರಿಕಾ-ಪ್ರತಿನಿಧಿಗಳ ಒಳ ಹೇಳ ಬಿಕ್ಕಿ ಬಿಕ್ಕಿ ಅತ್ತಳು "ಈಗ ಅಂಗಡಿಗಳು ಮಚ್ಚುತ್ತಿವೆ ಇನ್ನಾ ದರೂ ನಮಗೆ ಸುಖವಾಗುವದು !" ಎಂದು ಬಯ ಸಿದಳು ಮುಂಬಯಿಯೊಳಗ ಚಾಲ್ತ ಸರಾಯಿ ಅಂಗಡಿ ಗಳದ್ದವು. ಅವುಗಳಲ್ಲಿ ವರ್ಷಕ್ಕೆ ೫೫ ಲಕ್ಷ ಗೆಲನ್ನು (೬ ಬಾಟ್ಲಿ) ಸರಾಯಿ ಖರ್ಚಾಗುತ್ತಿತ್ತು ! ಮಂಗಳ ವಾರ ಮುಂಬಯಿಯಲ್ಲಿ ಪ್ರಚಂಡ ಪಾರಣೆಗೆ-ಸಭೆ ಗಳಾದವು ಅಂದು ಲೋಕಮಾನ್ಯರ ಪುಣ್ಯತಿಥಿ ಆದರಿಂದ ಈ ಸಭೆಗೆ ಉತ್ಸಾಹ ಉಕ್ಕಿ೯ರಿತ್ತು. ಸರದಾರ ವಲ್ಲಭಭಾಯಿ ಪಟೇಲರವರ ಅಧ್ಯಕ್ಷತೆಯ ಲ್ಲಿ ಸಭೆಯಾಯಿತು ಮದ್ಯಪಾನೋಜ್ಜಾಟನಕ್ಕಾಗಿ ತಗ ಲುವ ವೆಚ್ಚವನ್ನು ಹಿಂದುಸ್ಥಾನ ಸರಕಾರವು ಪೂರೈಸ ಬೇಕೆಂದು ಸರದಾರರು ನುಡಿದರು ವಿಷ್ಯ ಮಂತ್ರ ಗಳಾದ ನಾ|| ಖೇರರವರು ಒಳ್ಳೇ ಆವೇಶದಿಂದಲೂ ಅಭಿಮಾನದಿಂದಲೂ, ಸಾತ್ವಿಕ ಸಂತಾಪದಿಂದಲೂ ಮದ್ಯದಿಂದುಂಟಾಬಾದ ಅನರ್ಥಗಳನ್ನೂ, ಅವನ್ನು ನಿವಾರಿಸಲೋಸುಗ ಅವಶ್ಯವೆಳ್ಳ ತ್ಯಾಗಸಿದ್ಧತೆಯ ಹೇಳ, ತಾವು ಜನತೆಗೆ ಕೊಟ್ಟ ವಚನವನ್ನು ಪಾಲಿ ರುವೆವಾಗಿ ನೆ ಡಿದರು ಮುಂಬಯಿಯ ತೀಹಾ ಸ ದಲ್ಲಿ ಇಂದಿನ ಪ್ರಸಂಗ ಮುಂದೆಂದೂ ಬರಲಿಕ್ಕಿಲ್ಲ ವಾಗಿ ಹೇಳ್ದ, ಅದನ್ನು ಸಾರ್ಥಕಗೊಳಿಸಲು ಜನರ ಕಡೆ ಪ್ರಾರ್ಥಿಸಿಕೊಂಡರು ಸಂಜ ಚೌಪಾಟಿಯಲ್ಲಿ ಸಭೆಯಾಗಿ ಲೋಕಮಾನ್ಯರ ಗಣರ್ಪಣೆಯಾಯಿ ತು ಲೋಕಮಾನ್ಯರು ಮದ್ಯಪಾನೋಜ್ಜಾಟನಕ್ಕಾಗಿ ನಡಿಸಿದ ಸೆನೆ, ಅದಕ್ಕಾಗಿ ಅವರು ಪಟ್ಟ ಸಂಕಟಗಳು, ಇನೇ ಮೊದಲಾದವುಗಳ ಉಲ್ಲೇಖ ಪ್ರಮುಖ್ಯವಾಗಿ ಮಾತಾಲ್ಪಟ್ಟಿತು ಮುಂಬಯಿಯ ಎಂಟರ ಕಡಲ ಸ್ಥಾನದಲ್ಲಿ ಮುಸಲ್ಮಾನರು ಆಸ್ತಿ-ತೆರಿಗೆಯ ವಿರುದ್ಧ ಸಭೆಸೇರಿಸಿ ನಿಸೇಧ ಮಾಡಿದರು ಮದ್ಯಪಾನೋಜ್ಜಾಟನದಿಂದಮಂಬೈದ ನೆಸ್ಸವನ್ನು ತುಂಬಿಕೊಳ್ಳುವದಕ್ಕಾಗಿ ಸರಕಾರವು ಆಸ್ತಿ ತೆರಿಗೆಯ ನ್ನು ಕಾರಣವಪ್ಪಸೇ ! ಈ ಪಭೆಗಿಂತ ಮುಂಚೆ ಹೊರಟ ಮೆರವಣಿಗೆಯಲ್ಲಿ ದೊಂಬಯಾಯಿತು ಪುಂಡರು ಕಲ್ಲುಗಳನ್ನೂ ಸೋಡಾ ಬಾಟ್ಲಿಗಳನ್ನೂ ಎಸೆದು ಪೋಲೀಸರಿಗೂ ಫಾಯಗೊಳಿಸಿದರು ಪ್ರತಿ ಯಾಗಿ ಪೋಲೀಸರು ೧೪ ಸರತಿ ಗುಂಡು ಹಾರಿಸ ಬೇಕಾಯಿತು ೧೩ ಜನರಿಗೆ ಶಾಂತಿ ನೆಲೆಗೊಂಡಿತು ಸುಮಾರು ೫೩ ಜನರಿಗೆ ಗಾಯುಗಳಾಗಿವೆ ಅಬಕಾರಿ ಇಲಾಖೆಯವರು ಅಂಗಡಿಕಾರರ ಕಡೆ ಇರುವ ತಿಲ್ಲ ಮ್ಲಾದಿನ ಯಾದಿಯನ್ನು ತಯಾರಿಸುತ್ತಿದ್ದಾರೆ ಸರಾಯಿಯ ತಿಲ್ಲು ಇದ್ದ ವ್ಯಕ್ತಿಗಳು ಅದನ್ನು ಇದೇ ತಾ ೧೦ರೊಳಗೆ ಸರಕಾರಕ್ಕೆ ತಿಳಿಸಬೇಕು ಈಗ ಸದ್ಯಕ್ಕೆ ೨೪೯೦ ಮಂದಿ ವಿದೇತಿಯರಿಗೆ ಮದ್ಯ ಕೊಂಡುಕೊಳ್ಳಲು ಅಪ್ಪಣೆ ಕೊರತಿದೆ ಆರೋಗ್ಯ ಕ್ಕಾಗಿ ಮದ್ಯಪಡೆಯಲು ೧೫೮ ಜೀಶೀಯರಿಗೆ ಅಪ್ಪಣೆ ದೊರತಿದೆ ವ್ಯಸನ ಪತ್ರಗಳನ್ನೂ, ಅಪ್ಪಣೆ ಪತ್ರ ಗಳನ್ನೂ ದೊರಕಿಸಿಕೊಳ್ಳುವದಕ್ಕಾಗಿ ಜನರು ಅಬ ಕಾರಿ ಕಚೇರಿಯಲ್ಲಿ ಮುತ್ತುತ್ತಿದ್ದಾರೆ ಧೀಪಾವಿದೇತಿ ಕಡುಕುರಿಗೆ ಮದ್ಯ ಮಾರಾಟ ಮಾಡುವದಕ್ಕಾಗಿ ೪೦ ಜನ ಅಂಗಡಿಕಾರರಿಗೆ ಅಂಗಡಿಗಳನ್ನಿಡಲು ಅಪ್ಪಣೆ ದೊರತಿದೆ ಒಭವಾರ ವಂಬಯಿಯೊಳಗೆ ಹಿಂದೀ ವರ್ತಕ ಸಂಘದ ಸಭೆಯಾಗಿ ಮುಂಬಯಿ ಸರಕಾರವು ಕೈಕೊಂಡ ಕಾರ್ಯದಲ್ಲಿ ವರ್ತಕ ಸಂಘ ವು ಮನಮುಟ್ಟಿ ನೆರವಾಗಬೇಕೆಂದು ಗೊತ್ತಾಗಿದೆ ಮುಂಬಯಿಯೊಳಗಿನ ಮದ್ಯಪಾನೋಜ್ಜಾಟಿಣ ಪ್ರಯೋಗದ ಕಡೆಗೆ ಎಲ್ಲರೂ ಎವೆಯಿಕ್ಕದೆ ನೋಡು ತ್ತಿದ್ದಾರೆ ನ ದ್ಯಪಾನೋಜ್ಜಾಟನದ ದಿನ ರಾಕರು ದ್ವಾರದೊಳಗಿನ "ಯೂನ್ಯಿಟೆಡ್ ಕಿಪ್ಸ್ ಫ್ಲೇಟರ್ಸ್ ಕಂಪ್ಗಿ ಹೋಮ ದವರು ಸುಮಾರು ೪೦೦೦ ಜನರಿಗೆ ಒಂದೊಂದು ಕಪ್ಪು ಉತ್ತಮ ಚಾಹಿಯನ್ನು ಕೊಟ್ಟು ಮದ್ಯಪಾನೋಜ್ಜಾಟನ ದಿನವನ್ನು ಸಮಾಜರಿಯ ದರು ಈ ಸಮಾರಂಭಕ್ಕೆ ಮುಂಬಯಿ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಆಧ್ಯಕ್ಷರಾದ ಶ್ರೀ|| ಭುಲಾ ಭಾಯಿ ದೇಸಾಯಿಯವರು ಚೆಚ್ಚಿಸಿದ್ದರು ಈ ಪ್ರಕಾರ ಮದ್ಯಪಾನೋಜ್ಜಾಟನಕ್ಕೆ ಪ್ರೋತ್ಸಾಹ ಕೊಟ್ಟ ಬಗ್ಗ ಅಂಗಡಿಯ ಒಡೆಯರಾದ ರಂ|| ಎಸ್ ಎಸ್ ಭಟ್ಟ ಕಾಗಲ ಇವರಿಗ ಜನರು ಹರುಷ್ಕಾರ ಈಗ ಪ್ರಸ್ತಿ ಕೌನ್ಸಿಲಿಗೆ ರಜೆ ಪ್ರಿನ್ಸಿ ಕೌನ್ಸಿಲಿನ ನ್ಯಾಯಾ ಧೀಶರಂದ ವಂಬಯಿಯ ರಂ|| ಮುಕಂದರಾವ ಜಯಕರವರು ಏಮಾನ ಮಾರ್ಗವಾಗಿ ರಜಾದಿನ ಗಳನ್ನು ಕಳೆಯಲು ಹಿಂದುಸ್ಥಾನಕ್ಕೆ ಬಂದಿದ್ದಾರೆ ಸೋಮವಾರ ಅವರು ಕಂ.ಬಿಯಲ್ಲಿ ಬಂದಿಳಿದಾಗಿನಿ ಶಾವು ರಾಜಕೀಯ ಪರಿಸ್ಥಿತಿಯನ್ನು ಅಭ್ಯಾಸಮಾಡು ವೆವಾಗಿಯೂ, ವ್ಯಾಸಂಖ್ಯಾನಾಗಿ ಮುಂಬಯಿ ಸರಕಾರ ವು ಕೈಕೊಂಡ ಮದ್ಯಪಾನೋಜ್ಜಾಟನ ಕಾರ್ಯಕ್ರಮವನ್ನು ಪರಿಶೀಲಿಸುವೆವಾಗಿಯೂ, ಮದ್ಯಪಾನೋಜ್ಜಾ ಟನ ಕಾರ್ಯದಲ್ಲಿ ತಮಗೆಳ್ಳೇ ಆಸಕ್ತಿಯುವೆವೆ ದಾಗಿಯೂ ಅವರು ಉದ್ಗರಿಸಿದರು !

— ಮಿರಜದೊಳಗಿನ ಮ್ಯುನಿಸಿಪಾಲಿಟಿಯವರು ತಮ್ಮ ಸೀಮೆಯೊಳಗೆ ಯಾರೂ ಬಿಕ್ಕೆ ಬೇಡಬಾರದಾಗಿ ವಿಧಿ ಸಿದ್ದಾರೆ ಬಿಕ್ಕೆ ಬೇಡುವವರು ಮ್ಯುನಿಸಿಪಾಲಿಟಿಯ ಡಾಕ್ಟರರ ಕಡೆಯಿಂದ ಲ್ಯಾಸನ್ನು ಪಡೆಯಬೇಕು ಬಿಕ್ಕೆ ಬೇಡುವವರು ತಮ್ಮ ಮೈಮೇಲಿನ ಅಂಗ ಊ ನತೆಗಳನ್ನು ಜನರಿಗೆ ತೋರಿಸಬಾರದು ಪ್ರಯಾಣ ಕರ ಸಹ ನ ಭೂತಿಯನ್ನು ಸಳಕೊಳ್ಳುವದಕ್ಕಾಗಿ ಯಾವದೇ ಅಂಗವನ್ನು ವಿದ್ರೂಪಗೊಳಿಸಿಕೊಳ್ಳು ವಂತೆ ಜೀವನ ಸಾಗಿಸಲು ಅಪೇಕ್ಷವಿದ್ದವರಿಗೆ ಮಾತ್ರ್ ಲೈಸೆನ್ಸುಗಳು ಕೊಡಲಾಗುವವು. ಬಿಕ್ಕೆ ಮಕ್ಕಳಿಗೆ ಕರಕೊಂಡು ಬಿಕ್ಕೆ ಬೇಡಿಸಾದರು ಬಿಕ್ಕೆ ಬೇಡುವ ಬಿಕ್ಕು ಮಕ್ಕಳಿಗೆ ಆಸ್ಪತ್ರಾಲಯ ಕೈ ಕಳ-ಲ್ಲಡುವದು ಕುಷ್ಠ ಮೊದಲಾದ ಸಾಂಕ್ರಾಮಿಕ ರೋಗಗಳಿಂದ - ನರಳುವವರಿಗೆ ಬಿಕ್ಕೆ ಬೇಡಲಿಕ್ಕೆ ಅಪ್ಪಣೆ ಸಿಗದು ಈ ಆಜ್ಞೆಗೆಯನ್ನು ಲ್ಲಂಘಿಸುವವರಿಗೆ ದಂಡ ವಿಧಿಸಲ್ಪಡುವದು ಮ್ಯುನಿಸಿಪಾಲಿಟಿಯವರು ಒಡವರಿಗೆ ಜೀವನದ ವ್ಯವಸ್ಥೆಟು ಮಾಡುವದಕ್ಕಾಗಿ ಒಂದು ಒಡ ಭೃತ್ತ "Poor House"ವನ್ನು ಸ್ಥಾಪಿಸುವ ಆಲೋಚನೆ ಮಾಡಿದ್ದಾರೆ ಭೃತ್ತದ ಸ್ಥಾಪನೆಯಾದ ಬಳಕ, ಈ ನಿಯಮಗಳಂತೆ ಕೆಲಸ ನಡೆಯುವದು

— ಪಂ|| ಜವಾಹಿರಲಾಲ ನೆಹರೂರವರು ಸಿಂಹಲ ದ್ವೀಪದೊಳಗಿನ ರಾಯ ಭ್ಞಂದನ್ನು ಮುಗಿಸಿಕೊಂಡು ಹಿಂದುಸ್ಥಾನಕ್ಕೆ ಮರಳಿದ್ದಾರೆ ಸಿಂಹಲದ್ವೀಪದೊಳ ಗಿನ ಸರಕಾರವು ಬೇರೆ ಬೇರೆ ಕಾರಖಾನೆಯವರೂ ಸುಮಾರು ೧,೦೦೦ ಹಿಂದೀ ಕೆಲಸಗಾರರನ್ನು ಕೆಲಸ ಕಟ್ಟಿಸಿ ಸಿಂಹಲದ್ವೀಪದಿಂದ ಹಿಂದುಸ್ತಾನಕ್ಕೆ ಕಳು ಹಿದರು ಇನ್ನೂ ಕಲಸಗಾರರನ್ನು ಹಿಂದುಸ್ಥಾನಕ್ಕೆ ಕಳುಹುವ ಕ್ರಮ ನಡೆದಿದೆ ಹಿಂದೀಯರ ಅಂಗ ಡಿಗಳ ಮುಂದೆ ಉಂಡಾಡಿಗ ಲಂಕೆಯವರು ವಿಕೆಟಿಂಗ ಮಾಡಿ ವ್ಯಾಪಾರ ನಡೆಯಗೊ ಡುವದಿಲ್ಲ. ಪಂಡಿತ್ ಜವಾಹಿರಲಾಲ ನೆಹರೂ ರವರು ಅಲ್ಲಿಯ ಮಂತ್ರಿಗಳೊಡನೆ, ಬೇರೆ ಬೇರೆ ಅಧಿಕಾರಿಗಳೊಡನೆ ವಿಚಾರವಿನಿಮಯ ಮಾಡಿದರು ಹಾಗೆಯೇ ಲೋಕಪ್ರಕ್ಷದ ಹಿಂದೀ ಸಂಘದವರೊಡನೆ, ಕೊಂಗ್ರೆಸ ಸಂಘದವರೊಡನೆ ಪ್ರತ್ಯಪ್ರತ್ಯೇಕವಾಗಿ ವಿಚಾರ ಮಾಡಿ ಅವರವರ ಅಂಜೂಣಗಳನ್ನು ಕೇಳಕೊಂಡರು. ಕಾಫಿ ತೋಟ ಪ್ರದೇಶಕ್ಕೆ ಹೋಗಿ ಕೂಲಿಕಾರರು ಸಂಘಗಳನ್ನು ಸ್ಥಾಪಿಸಿಕೊಂಡು ತಮ್ಮ ವಿಳ್ಳೆಯನ್ನು ಸಾಧಿಸಿಕೊಳ್ಳ ತಕ್ಕದ್ದಾಗಿ ನುಡಿದರು ಮದ್ರಾಸದಲ್ಲಿಯೂ ಮುಂಬ ಯಿ-ಪುಣೆಗಳಲ್ಲಿಯೂ ಪಂ|| ಜವಾಹಿರಲಾಲರ ಭಾಷ ಣಗಳಾದವು ಸಿಂಹಲದ್ವೀಪದೊಳಗಿನ ತಮ್ಮ ರಾಯ ಭ್ಞರ ಯಶಸ್ವಿಯಾಗಿರಲ್ಲವಾಗಿಯೂ ಹಲ ಕೆಲವು ವ್ಯಕ್ತಿಗಳಿಗೆ ಸಿಂಹಲದ್ವೀಪದ ಸರಕಾರದಿಂದ ಪುರ ಹುರಿ ದೊರೆಯಬಹುದಾಗಿಯೂ ಪಂ|| ಜವಾಹಿರ ಲಾಲರು ನುಡಿದು, ತಾವು ಕೊಂಗ್ರೆಸ ಕಾರ್ಯ ಕಾರಿ ಮಂಡಳಕ್ಕೆ ರೈರ್ಯಾನೆ ಸಾಧ್ಯಂತ ವರದಿ ಯನ್ನೊಪ್ಪಿಸುವೆವಾಗಿಯೂ ತಿಳಿಸಿದರು ಪಂ|| ಜವಾ ಹಿರಲಾಲರ ರಾಯಭಾರದ ಮೂಲಕ ಭಾರತ ಮಂತ್ರಿ ಗಳು ಎಚ್ಚರಾಗಿದ್ದಾರೆ ವಸಾಹತು ಮಂತ್ರಿಗಳೊಡನೆ ಸಿಂಹಲದ್ವೀಪದೊಳಗಿನ ಅಂದೋಲನದ ವಿಚಾರ ಮಾತುತ್ತಿದ್ದಾರೆ ನಾಡದು ಒಭವಾರ ತಾ ೧೯ನೇಗೆ ವರ್ಧಾದಲ್ಲಿ ಸೇರಲಿಕ್ಕಿದ್ದ ಕೊಂಗ್ರೆಸ ಕಾರ್ಯಕಾರಿ ಮಂಡಳದಲ್ಲಿ ಈ ವಿಷಯ ವಿಚಾರ ನಡೆದು ರಂ|| ಸ್ವೀ ಯ ಸಭೆಯ ಧೋರಣ ನಿಶ್ಚಯವಾಗುವದು ಹಿಂದಿ ಯರನ್ನು ಹೊರಹಾಕಾನ ಸಿಂಹಲದ್ವೀಪ ಸರಕಾರದ ದೋರಣ ಸಿಂಹಲದ್ವೀಪದೊಳಗಿನ ಜನರ ಸಾಂಪತ್ತಿಕ ಸ್ಥಿಂಯನ್ನು ಸುಧಾರಿಸುವದಕ್ಕಾಗಿ ಕೈಕೊಳ್ಳಲ್ಪಡತ್ತ ದೆಂದು ಹೇಳೋಣಗುತ್ತದೆ ಹಿಂದೀಯರು ಸಿಂಹಲ ದ್ವೀಪಕ್ಕೆ ಒಂದೆಂದಿನಿಂದ ಸಿಂಹಲದ್ವೀಪದಲ್ಲಿ ವಾಸಿ ಸುವ ಜನರಿಗೆ ಕೆಲಸ ಸಿಗದೆ ಕೊಂದರೆಯಾಗುತ್ತ

(ಗಂಸೆ ಪುಸ್ತಕ ಮೀಲೆ ಮುಂದರಿಸಿದೆ)

ಪತ್ರಕರ್ತರ ನುಡಿಗನ್ನಡಿ.

—ಸಂಪಾದಕೀಯ—

೧. ಮುಂಬಯಿಯೊಳಗೆ ಸ್ವಾನಿಕೆ ಸ್ವರಾಜ್ಯ ಇಲಾಖೆಯ ಪರಿಷತ್ತು ಗುರುವಾರ, ಶುಕ್ರವಾರ ಸೇರಿ, ಸ್ವಾನಿಕ ಸ್ವರಾಜ್ಯ ಸಂಸ್ಥೆಗಳ ವಿಚಾರ ನಡೆಯಿಸಿತು. ಸ್ವಾನಿಕ ಸ್ವರಾಜ್ಯ ಸಂಸ್ಥೆಗಳ ಸ್ಥಿತಿ ಈವಾಗ ಬಲು ಗಡಚಾಗಿದೆ. ಪ್ರತಿಯೊಂದು ಸಂಸ್ಥೆಗೆ ದ್ರವ್ಯಾಭಾವ. ದೊಡ್ಡ ಮ್ಯುನಿಸಿಪಾಲಿಟಿ ಇರಲಿ, ಚಿಕ್ಕ ಬೋರ್ಡ್ ಇರಲಿ, ಎಲ್ಲಕ್ಕೂ ಸಮಾನವಾದ ಸಂಕಟವೆಂದರೆ ಹಣದ ಅಡಚಣಿಯೇ. ತೆರಿಗೆಗಳನ್ನೇರಿಸಿಕೊಂಡು ಉತ್ಪತ್ತಿ ಮಾಡಲಿಕ್ಕೆ ಈಗೇನೂ ಇಂಬಿಲ್ಲ. ಬೇರೆ ಬೇರೆ ತೆರಿಗೆಗಳು ಬೇರೆ ಬೇರೆ ರೂಪದಿಂದ ಈ ಹಿಂದೆಯೇ ಹೇರಲ್ಪಟ್ಟಿವೆ. ಅವುಗಳನ್ನು ತೆರಲಿಕ್ಕೆ ಜನರಿಗೆ ಸಾಮರ್ಥ್ಯವಿಲ್ಲದೆ ಜನರು ಗೋಳಾಡುತ್ತಿರುವ ಸಂಗತಿ ಈವಾಗ ಎಲ್ಲರಿಗೂ ತಿಳಿದ ಮಾತು. ಸ್ವಾ. ಸ್ವ. ಇಲಾಖೆಗೆ ಮಂತ್ರಿಗಳೂ ಈ ಮಾತಿಗೊಪ್ಪುತ್ತಾರೆ. ಪ್ರಾಂತಿಕ ಸರಕಾರಗಳಿಂದ ಸಹಾಯವನ್ನಪೇಕ್ಷಿಸಲಿಕ್ಕೂ ಬೋರ್ಡ್-ಮುನಿಸಿಪಾಲಿಟಿಗಳಿಗೆ ಸಾಧ್ಯವಿಲ್ಲ. ಯಾಕಂದರೆ ನೂತನ ಮನ್ವಂತರದಲ್ಲೇ ಪ್ರಾಂತಿಕ ಆಡಳತೆಯನ್ನು ನಡಸಲಿಕ್ಕೆ ತಕ್ಕಷ್ಟು ದ್ರವ್ಯಾನುಕೂಲತೆ ಪ್ರಾಂತಿಕ ಸರಕಾರಗಳಲ್ಲಿಲ್ಲ. ಮೇಲಾಗಿ ಮದ್ಯವಾನೋದ್ಯಾಪಣ, ಶಿಕ್ಷಣ ಪ್ರಸಾರ, ಭೂಕಂದಾಯದ ಪುನರ್ವಿಚಾರ, ಉದ್ಯೋಗಾಧಿಷ್ಠೆಯ್ದಿ, ಮೊದಲಾದವುಗಳ ಮೂಲಕ ಪ್ರಾಂತಿಕ ಸರಕಾರಗಳ ಖರ್ಚಿನ ಬಾಬುಗಳೂ, ದಿನ ಹೋದ ಹಾಗೆ ಮಿಗಿಲಾಗುತ್ತಿವೆ. ಇಂಥ ಪ್ರಸಕ್ತಿಯಲ್ಲಿ ಬೋರ್ಡ್ ಮ್ಯುನಿಸಿಪಾಲಿಟಿಗಳಿಗೆ ಹಣದ ಅಡಚಣಿಯೆಂದು ಗೊತ್ತಾದಾಗ್ಯೂ, ಪ್ರಾಂತಿಕ ಸರಕಾರಗಳು ಅದನ್ನು ನಿವಾರಿಸುವ ಬಗೆಯೆಂತು ? ಮಂತ್ರಿಗಳೆಲ್ಲರೂ ಆಲೋಚಿಸಿ ಹಿಂದುಸ್ಥಾನ ಸರಕಾರದ ಕಡೆ ದೂರಕೊಳ್ಳಬೇಕೆಂದು ನಿರ್ಣಯವಾಗಿದೆ. ಹಿಂದುಸ್ಥಾನ ಸರಕಾರವು ಸ್ವಾ. ಸ್ವ. ಇಲಾಖೆಯ ಮಂತ್ರಿಗಳ ನಿರ್ಣಯವನ್ನು ಮನ್ನಿಸಿ, ಆವಶ್ಯವುಳ್ಳ ದ್ರವ್ಯಸಹಾಯವನ್ನು ನೀಡುವದಾಗಿ ನಾವು ಕೋರುತ್ತೇವೆ.

---

೨. ಬೋರ್ಡ್-ಮ್ಯುನಿಸಿಪಾಲಿಟಿಯ ಅಡಳತೆಯ ಕುರಿತು ನಡೆದ ಇನ್ನೊಂದು ವಿಚಾರ ಎಲ್ಲರಿಗೂ ಮಾನ್ಯವಾಗುವಂತಹದು. ಬೋರ್ಡ್-ಮ್ಯುನಿಸಿಪಾಲಿಟಿಗಳಲ್ಲಿ ಕಾರ್ಯದರ್ಶಿ-ಕಾರಕೂನರಾಗಿ ಕೆಲಸಮಾಡುವವರು ಬಹುತರವಾಗಿ ಆಯಾ ಕೆಲಸಗಳಿಗೆ ಅಪಾತ್ರರಿದ್ದವರು. ಬೋರ್ಡ್-ಮ್ಯುನಿಸಿಪಾಲಿಟಿಗಳಲ್ಲಿ ಬಹು ವರ್ಷವಿದ್ದ ಸಭಾಸದರ ಮರ್ಜಿಯನ್ನು ಸಂಪಾದಿಸಿ, ಅಧಿಕಾರ ಪಡೆದ ಇಸಮುಗಳೇ ಪ್ರಾಮುಖ್ಯವಾಗಿರುವರೆಂದು ನಾವು ಹೇಳಿದರೆ ಅಯಥಾರ್ಥವಾಗದು. ಬೋರ್ಡ್-ಮ್ಯುಗಳ ನಿಯಮಗಳಲ್ಲಿ ಶಿಬಂದಿಯ ಪಾತ್ರತೆಯ ನಿರ್ದೇಶವಾಗಾಗ್ಯೂ ಅದನ್ನು ಉಲ್ಲಂಘಿಸಿ ನೇಮಣೂಕಿಗಳಾಗಿವೆ. ಮೇಲ್ಮಿಚಾರಕ್ಕಾಗಿ ನೇಮಿಸಿದ ಕಲೆಕ್ಟರರೂ, ಕಮಿಶನರೂ ಪ್ರತಿ ವರ್ಷ ತವಾಸಿಗೆ ಬರುವ ಆಡಿಟರರೂ ಈ ಕುರಿತು ತಕ್ಕ ಆಕ್ಷೇಪ ಮಾಡಿದ್ದು ಕಾಣುವದಿಲ್ಲ. ಹೀಗೆ ಇವರೆಲ್ಲರೂ ವಿಕ-ಅಜಾಗ್ರತೆಮಾಡಿದರೆಂದು ನಮಗೆ ತಿಳಿಯದ ಮಾತು! ಕಲೆಕ್ಟರ-ಕಮಿಶನರರು ಶಿಬಂದಿ ನೇಮಿಸಲ್ಪಡುವಾಗ ಆವಾತ್ರರಿದ್ದವರು ನೇಮಿಸಲ್ಪಡುವಂತೆಯೂ ಜಾಗ್ರತೆ ಕೊಂಡಿದ್ದರೆ ಬೋರ್ಡ್-ಮ್ಯುನಿಸಿಪಾಲಿಟಿಯ ಅಡಳತೆಯು ಈವಾಗ ಇಷ್ಟು ಗೊಂದಲದಲ್ಲಿ ಸಿಲುಕಿ ಬೀಳುತ್ತಿರಲಿಲ್ಲ. ಅಪಾತ್ರ, ಅಯೋಗ್ಯ ಸ್ತುತಿಪಾಠಕ ಇಸಮುಗಳು ಬೋರ್ಡ್-ಮ್ಯುನಿಸಿಪಾಲಿಟಿಗಳಲ್ಲಿ ಸೇರಿಕೊಂಡಿದ್ದರಿಂದ ಇಂದಿಗೆ ಈ ದುರವಸ್ಥೆಯಾಗಿದೆ. ಕಲೆಕ್ಟರ-ಕಮಿಶನರರು ಈಗಲೂ ವಿಚಾರ ಮಾಡಿ, ಈಗ ಬೋರ್ಡ್-ಮ್ಯುನಿಸಿಪಾಲಿಟಿಗಳಲ್ಲಿರುವ, ನಿಯಮಗಳಂತೆ ಪಾತ್ರತೆಯಿಲ್ಲದ ಇಸಮುಗಳಿಗೆ ಒಮ್ಮೆಲೇ ಪದಚ್ಯುತಿಯಾಗುವಂತೆ ಹುಕುಮುಗಳನ್ನು ಹೊರಡಿಸಬೇಕು. ಸರ್ವಾನಿ ಮಾನದಿಂದ ಗೈರ್ಹಾಯಿತಿ ಕೊಟ್ಟು ರವಾನಿಸುವಂತೆ ಹುಕುಮುಗಳಾಗಬೇಕು. ಬಯಸುವವರು ಇಲ್ಲವೆ ಸವಾಗುಮತವು ಆಪಾತ್ರ ಇಸಮನ್ನು ಪುರಸ್ಕರಿಸುತ್ತದೆಂದರೆ ಮೇಲೆ ಅಂಥ ಇಸಮುಗಳನ್ನು ಇಟ್ಟುಕೊಳ್ಳಲಿಕ್ಕೆ ಎಂದಿಗೂ ಅಪ್ಪಣೆ ಕೊಡಲಾಗದು. ನಿಯಮಗಳನ್ನು ಅಕ್ಷರಶಃ ಪಾಲಿಸಲು ಬೋರ್ಡ್-ಮ್ಯುನಿಸಿಪಾಲಿಟಿಗಳಿಗೆ ವಿಧಿಸಬೇಕು. ಇದರಿಂದ ಬೋರ್ಡ್-ಮ್ಯುನಿಸಿಪಾಲಿಟಿಗಳಲ್ಲಿ ಸೇರಿಕೊಂಡ ಭ್ರಷ್ಟಾಚಾರವೂ ಪಕ್ಷಪಾತವೂ ತಾನಾಗಿ ಬಯಲಾಗುವದು. ಯೋಗ್ಯತಾವಂತರು ಯಾವಾಗಲೂ, ತಮ್ಮ ಶೀಲ ಬಿಟ್ಟು ಸಭಾಸದರ ಸ್ತುತಿಪಾಠಕ್ಕಾಗಲಿ, ಮರ್ಜಿ ಸಂಪಾದನೆಗಾಗಲಿ, ಹೋಗಲಿಯುವದಿಲ್ಲವಷ್ಟೇ ! ಬೋರ್ಡ್-ಮ್ಯುನಿಸಿಪಾಲಿಟಿಗಳೆಂದರೆ ಆಪಾತ್ರರಿಗೆ ಆಶ್ರಯ ಕೊಟ್ಟು ಸಲಹುವ ಅನ್ನಪೂರ್ಣ ಪತ್ರಗಳಲ್ಲೆಂದು ನಾವು ಹೇಳುವದು ಬೇಡ. ಅವು ವೈವಹಾರ ಸಂಸ್ಥೆಗಳಿದ್ದು ಸಂಕಲ್ಪಿತ ವ್ಯವಹಾರಕ್ಕೆ ತಕ್ಕ ದ್ದಾಗಿ ಇಸಮುಗಳಿದ್ದರೆ ಮಾತ್ರ ಸಂಕಲ್ಪಿತ ಕಾರ್ಯ ಸಂಕಲ್ಪದಂತೆ ನೆರವೇರಬಲ್ಲವು.

---

೩. ಮಂತ್ರಿಗಳ ಪರಿಷತ್ತಿನಲ್ಲಿ ಬೋ ಮ್ಯುನಿಸಿಪಾಲಿಟಿಗಳ ಮೇಲೆ ಇರತಕ್ಕ ಸರಕಾರಿ ಮೇಲ್ವಿಚಾರದ ವ್ಯಾಪ್ತಿಯು ಚರ್ಚೆಯಾಯಿತು. ಕಲೆಕ್ಟರರಿಗಾಗಲಿ, ಕಮಿಶನರರಿಗಾಗಲಿ, ಬೋರ್ಡ್-ಮ್ಯುನಿಸಿಪಾಲಿಟಿಗಳ ಮೇಲೆ ಅಂಕೆ ಇರಬಾರದೆಂದು ನಾವು ಹೇಳುವದಿಲ್ಲ. ಬೋರ್ಡ್-ಮ್ಯುನಿಸಿಪಾಲಿಟಿಗಳಲ್ಲಿ ಇನ್ನೂ ನಿಸ್ಪೃಹ ಲೋಕಸೇವೆಯ ಸದಿಚ್ಛೆಯಿಂದ ಸೇರುವ ಜನರು ವಿರಳ. ಆತ್ಮಗೌರವಕ್ಕಾಗಿ ಬೋರ್ಡ್-ಮ್ಯುನಿಸಿಪಾಲಿಟಿಗಳಲ್ಲಿ ಸೇರಿ ಗೊಂದಲವನ್ನೆಬ್ಬಿಸುವವರ ವ್ಯಾಪಲ್ಯವೇ ಹೆಚ್ಚು ! ಆದರಿಂದ ಬೋರ್ಡ್-ಮ್ಯುನಿಸಿಪಾಲಿಟಿ ಸಭಾಸದರ ಸಾಮಾನ್ಯ ಶೀಲ ಸುಧಾರಿಸುವ ತನಕ ಕಲೆಕ್ಟರ-ಕಮಿಶನರರ ಅಂಕೆ ಇರುವದು ಪ್ರಶಸ್ತವಾದುದು. ಈಗಿನ ಬೋರ್ಡ್-ಮ್ಯುನಿಸಿಪಾಲಿಟಿ ಕಾನೂನುಗಳಲ್ಲಿ ಕಲೆಕ್ಟರ-ಕಮಿಶನರರಿಗೆ ವಿಶಾಲ ಅಧಿಕಾರಗಳುಂಟು. ಕಲೆಕ್ಟರ-ಕಮಿಶನರರು ಏನೂ ಮಾಡಬಹುದು; ಏನೂ ಮಾಡದೆ ಉಳಿಯಬಹುದು ! ಬೋರ್ಡ್-ಮ್ಯುನಿಸಿಪಾಲಿಟಿಗಳ ಸಾರ್ವಭೌಮ ಅಧಿಕಾರಿಗಳೇ ಕಲೆಕ್ಟರ-ಕಮಿಶನರರೆಂದು ಹೇಳಿದರೆ ಅಯಥಾರ್ಥವಾಗದು. ಆದರೆ ಬಹುಶಕರವಾಗಿ ಕಲೆಕ್ಟರ-ಕಮಿಶನರರು ರಾಜಕಾರಣವನ್ನು ಹೊರ್ಕುಪಡಿಸಿ, ಇತರ ಕ್ಷೇಮ-ವಿಚಾರದಿಂದ ಬೋರ್ಡ್-ಮ್ಯುನಿಸಿಪಾಲಿಟಿಗಳ ಮೇಲೆ ಜಾಗ್ರತೆಯನ್ನಿಡುವದಿಲ್ಲೆಂದು ಹೇಳಿದರೆ ವಸ್ತುಸ್ಥಿತಿಯ ವಿಪರ್ಯಾಸವಾಗದೆಂದು ನಾವಡೆಯುತ್ತೇವೆ. ಬೋರ್ಡ್-ಮ್ಯುನಿಸಿಪಾಲಿಟಿಯ ಅಂತಃಕಾರಭಾರದಲ್ಲಿ ಕಲೆಕ್ಟರು ಕೈ ಹಾಕಲಬೇಕೆಂದು ನಮ್ಮ ಅಂಬೋಣವಿಲ್ಲ. ಆದಾಗ್ಯೂ ಸಾಮಾನ್ಯವಾಗಿ ಅಡಳತೆಯನ್ನೂ, ಅದಕ್ಕಾಗಿ ನೇಮಿಸಿಕೊಂಡ ಶಿಬಂದಿಯನ್ನೂ, ಅಡಳತೆಯ ಘೋರಣವನ್ನೂ, ಶಿಬಂದಿಯ ಯೋಗ್ಯತೆಯನ್ನೂ, ಅವರು ವರ್ಷಕ್ಕೊಮ್ಮೆ ಸಮಾಲೋಚಿಸಿ, ಮ್ಯುನಿಸಿಪಾಲಿಟಿಯ ಸಭಾಸದರಿಗೆ ನಲಿಪೆ-ಸೂಚನೆಗಳನ್ನು ಕೊಡುವ ವಿಚಾರಟು ಮಾಡಬಹುದು. ಪ್ರತಿ ಬೋರ್ಡ್-ಮ್ಯುನಿಸಿಪಾಲಿಟಿಗಳಲ್ಲಿ ಪಕ್ಷ-ಖಂಗಡಗಳವೆ. ವರ್ಷಕ್ಕೊಮ್ಮೆ ಮುಕ್ತಾಮನು ಮಾಡಿದಾಗ ಸಭಾಸದರನ್ನು ಒಂದೆಡೆಗೆ ಸೇರಿಸಿ ಕೊಂಡು ಅವರಿಗೆ ಅಂಬೋಣ ಕೇಳಿಕೊಂಡು ಯಥಾರ್ಥವಾದ ಘೋರಣವನ್ನು ಸಭಾಸದರಿಗೆ ಸೂಚಿಸಬಹುದು. ಇದರಿಂದ ಮ್ಯುನಿಸಿಪಾಲಿಟಿಗಳಲ್ಲಿ ವ್ಯಕ್ತಿದ್ವೇಷ, ವ್ಯಕ್ತಿಸ್ವಾರ್ಥ, ವ್ಯಕ್ತಿಗೌರವ ಹಿಡಿಯುನಿಷ್ಕಾರಣವಾಗಿ ಕಲಹಮಾಡುವ ಪ್ರವೃತ್ತಿಗೆಪ್ರತಿಬಂಧ ಬೀಳುವಂತಿದೆ. ಅಧಿಕಾರದರ್ಪವನ್ನು ಮೆರಿಸಿ, ಜನರಿಗೂ ಶಿಬಂದಿಗೂ ನಿಷ್ಕಾರಣವಾಗಿ ದಣಿಸುವ ಅಧಿಕಾರರೂಢ ಜನರಿಗೂ ಬಹುಮಟ್ಟಿಗೆ ನಿರ್ಬಂದವಾಗಿ ಪಕ್ಷ-ಖಂಗಡಗಳೊಳಗಿನ ತೀವ್ರತ್ವತೆ ಕ್ರಮವಾಗಿ ಕಳೆಗುಂದುವಂತಿದೆ. ಬೋರ್ಡ್-ಮ್ಯುನಿಸಿಪಾಲಿಟಿಗಳೊಳಗೆ ಆಯಾ ಸಂಸ್ಥೆಗಳ ಹಿತದ ಕಡೆಗೆ ದೃಷ್ಟಿಯನ್ನಿಟ್ಟು ಕೆಲಸ ಮಾಡುವ ಪ್ರವೃತ್ತಿ ಸಭಾಸದರೊಳಗೆ ತಲೆದೋರುವದು. ಸಭಾಸದರ್ಹತೆ ಹೊಣೆಗಾರಿಕೆಯು ಸಭಾಸದರಲ್ಲಿ ಹುಟ್ಟಿ ಒಂದು ಪ್ರಕಾರದ ಲೋಕಸೇವಾ-ಶೀಲವು ಬೋರ್ಡ್-ಮ್ಯುನಿಸಿಪಾಲಿಟಿಗಳಲ್ಲಿ ಹುಟ್ಟುವದೆಂದು ನಾವು ತಿಳಿಯುತ್ತೇವೆ. ಬೋರ್ಡ್-ಮ್ಯುಗಳಲ್ಲಿ ಸೇರಿಕೊಂಡ ಸಂಭಾವಿತ ಕಾರ್ಕ-ಪೋಕರು ತಾವಾಗಿಯೇ ಬೋರ್ಡ್-ಮ್ಯುಗಳೊಳಗಿಂದ ಹೊರ ಬೀಳುವರು. ಈ ಉಪಾಯದಿಂದ ಬೋರ್ಡ್-ಮ್ಯುಗಳಲ್ಲಿ ಶೀಲ-ಸಂವರ್ಧನವಾಗುವಂತಿದೆ. ಸ್ವಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಹೊಣೆಗಾರಿಕೆಯನ್ನೂ ನೀತಿ ಮತ್ತೆಯನ್ನೂ ಉಂಟು ಮಾಡುವ ಸಮಸ್ಯೆಯನ್ನು ಕಾಳೇ ಕವಿಸಾಟಿಯವರು ವಿಚಾರಿಸುತ್ತಿದ್ದಾರೆ. ಅವರು ನಮ್ಮಿಂ ಸೂಚನೆಯ ಯಃಕಾಶ್ಚಿಯನ್ನು ಪರಾಂಬರಿಸುವರೆಂಗಿ ನಾವು ಕೋರುತ್ತೇವೆ.

---

೪. ನಮ್ಮಿಂ ಜಿಲ್ಲೆಯೊಳಗಿನ ವೈದಿಕರು ಧರ್ಮಗ್ಲಾನಿಯನ್ನು ಹೋಗಲಾಡಿಸಲೋಸುಗ ಸಮ್ಮೇಲನವನ್ನು ಸೇರಿಸಿ ಆಲೋಚನೆ ಮಾಡಬಯಸಿದ್ದು ಅಭಿನಂದನೀಯವಾದುದು. ಧರ್ಮೋದ್ಧಾರ ಕಾರ್ಯದಲ್ಲಿ ಸಕಲೂ ವೈದಿಕರಿಗೆ ನೆರವಾಗುವಂಗಿ ನಾವು ಕೋರುತ್ತೇವೆ. ಮುಖ್ಯವಾಗಿ ಧರ್ಮವಿದ್ಯಾಶ್ರಯಸಾರದ ಮೇಲೆಯೇ ವಿಶೇಷ ಕಟುಶ್ರದ್ಧೆಯಿರಬೇಕೆಂದು ನಮ್ಮ ಅಭಿಪ್ರಾಯ. ಪುರಾತನ ಕಾಲದಲ್ಲಿ ಗುರುಕುಲಗಳು ನಮ್ಮ ವಿದ್ಯಾಮಂದಿರಗಳಾಗಿದ್ದವು. ಆಡಮಯಲ್ಲಿ, ಜನಸಮ್ಮರ್ದವಿಲ್ಲದ ಪ್ರಕೃತಿಯ ಪ್ರದೇಶಗಳಲ್ಲಿ ತಪೋಸ್ಥಿಗಳು ಆಶ್ರಮ ಕಟ್ಟಿಕೊಂಡು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದರು. ಗುರುಕುಲಗಳಿಂದ ತಾಯಿ-ತಂದೆಗಳ ಮೇಲಾಗಲಿ, ಪಾಲಕರ ಮೇಲಾಗಲಿ ವಿದ್ಯಾರ್ಥಿಯು ಖರ್ಚಿನ ಭಾರ ಬೀಳುತ್ತಿರಲಿಲ್ಲ. ಗುರುಕುಲದಲ್ಲಿ ವಿದ್ಯಾರ್ಥಿಯು ತನ್ನ ಶಕ್ತಿಯ ಮಟ್ಟಿಗೆ, ಬುದ್ಧಿಯ ಮಟ್ಟಿಗೆ ಸೇವೆ ಮಾಡಿ ವಿದ್ಯಾದಾನ ಮಾಡುತ್ತಿದ್ದನು. ಶ್ರೀ ರಾಮ ದೇವರು ಧನುರ್ವಿದ್ಯೆಯನ್ನು ಸಂಪಾದಿಸಿದ್ದು ವಿಶ್ವಾಮಿತ್ರ

ಮುಷಿಯ ಆಶ್ರಮದಲ್ಲಿ ! ಶ್ರೀ ಕೃಷ್ಣ ಪರಮಾತ್ಮನು ಸಂದೀಪ ಶಿಷ್ಯನಾಗಿ ಉರುವಲು ಹೊರಿ ಹೊತ್ತುತಂದು ವಿದ್ಯಾರ್ಜನೆ ಮಾಡಿದ ಕಥೆಯುಂಟು. ಗುರುಕುಲ ದೋಗಿನ ವಿದ್ಯಾಭ್ಯಾಸ ಕ್ರಮದಿಂದಲೂ, ಜೀವನ ಕ್ರಮದಿಂದಲೂ ವಿದ್ಯಾರ್ಥಿಯು ಕುಟುಂಬಕ್ಕೆ ಭಾರ ವಾಗದೆ ಪ್ರಪಂಚ ನಡಿಸಲು ಅವಶ್ಯವುಳ್ಳ ಯಾವತ್ತೂ ಪಾತ್ರತೆಯನ್ನು ಪಡೆಯುತ್ತಾನೆ. ನಿವಾಂತ ಸ್ಥಳದಲ್ಲಿ ವಿದ್ಯಾಮಂದಿರಗಳನ್ನು ಸ್ಥಾಪಿಸಿ ವಿದ್ಯಾದಾನ ಮಾಡು ವ ಪದ್ಧತಿಯನ್ನು ನಾವು ಕೊಂಡಾಡಿದಷ್ಟು ಕಡಿಮೆ. ನಮ್ಮಲ್ಲಿಯ ವೈದಿಕರು ಈ ಪದ್ಧತಿಯನ್ನು ಉದ್ಧರಿ ಸಬೇಕಾಗಿ ನಾವು ಏನಂತಿ ಮಾಡಿಕೊಳ್ಳುತ್ತೇವೆ. ಗುರುಕುಲ ಹೊರಡಿಸುವಷ್ಟು ಯೋಗ್ಯತಾವಂತ ವೈದಿ ಕರು ನಮ್ಮಲ್ಲಿದ್ದಾರೆ; ಗುರುಕುಲ ಹೊರಡಿಸಬೇಕೆಂಬ ಉತ್ಸಾಹವೂ ಅವರಲ್ಲುಂಟು. ಪರಮೆತ್ತಿನ ಜಾಲಿಕರು ಪ್ರೊತ್ಸಾಹ ಕೊಟ್ಟು ಕಾರ್ಯಾರಂಭ ಮಾಡಬೇಕಾಗಿ ನಮ್ಮ ಸೂಚನೆಯಿದೆ. ಯೋಗ್ಯತಾ ಸಂಪನ್ನ ರು ಗುರುಕುಲವನ್ನು ಹೊರಡಿಸಿದ್ದಲ್ಲಿ ರಾಜಾಶ್ರಯ ಸಿಗಬಹುದಾಗಿಯೂ ನಮಗೆ ತೋರುತ್ತದೆ. ಗುರು ಕುಲ ಸ್ಥಾಪನೆಯಿಂದ ಸರ್ವಾ-ಕ್ಕೂಂದು ಭೂಷಣ ವಾಗುವದೆಂದು ನಾವು ಹೇಳುವದತ್ತವಶ್ಯಕ.

ಸ್ಥಾನಿಕ ವೃತ್ತಾಂತ.

(ಇನೇ ಪಾಷ್ಠಾಂಶ ಮುಂದುರಿಸಿದ್ದು)

ಭಟ್ಕಳ— ಬಲ್ಲವರೊಬ್ಬರು ಬರೆಯುವದೇನಂದರೆ:- ರಾಜ್ ಕಲಭಾಗ ರೇಂಜರರ ವರ್ಗಾವರ್ಗಿಯ ಫರ್ಮಾಸರ ಒಳ್ಳೇ ಚಮತ್ಕಾರಿಕವುಂಟು! ರಾಜ್ ಫರ್ನಾಂಡೀಸರು ತಮ್ಮ ಕೆಲಸವನ್ನು ಸರಿಯಾಗಿ ನಡಿಸುವದಿಲ್ಲವೆಂದು ಮೇಲಧಿಕಾರಿಗಳ ಅಭಿಪ್ರಾಯವಾಗಿ ಅವರಿಗೆ ಹೊಟ್ಟುಸೊದಲು ಇಲ್ಲಿ ಕೈ ವರ್ಗಾಯಸಲ್ಪಟ್ಟಿತು. ಮತ್ತು ರಾಜ್ ಕಲಭಾಗ ರೇಂಜರರಿಗೆ ಕಾರವಾರಕ್ಕೆ ವರ್ಗಾಯಿಸಲ್ಪಟ್ಟಿತು. ಆ ಮೇಲೆ ಗಂಧದ ಮರಗಳ ಪ್ರಕರಣವೊಂದು ರಾ ಫರ್ನಾಂಡೀಸರ ಮೇಲುಬಂದಾಯಿತು. ಉಂಟಾಗಿ ಅವರಿಗೆ ಸಸ್ಪೆಂಡ ಮಾಡಲ್ಪಟ್ಟಿತು. ಮತ್ತು ಆ ಊರಿತು ವಿಚಾರ ಮುಗಿದಾಯಿತು. ಈ ಪ್ರಕರಣದಲ್ಲಿ ರಾ ಫರ್ನಾಂಡೀಸರು ಭಯಂಕರ ಅಜಾಗ್ರತೆ ಮಾಡಿರುವಾಗಿಯೂ, ಆ ಬಗ್ಗೆ ಅವರಿಗೆ ಕಠಿಣ ಶಾಸನ ವಾಗಬೇಕಾಗಿಯೂ ಮೇಲಧಿಕಾರಿಗಳು ಅಭಿಪ್ರಾಯಪಟ್ಟು ಅವರ ಸಂಬಳಕ್ಕೆ ಸ್ವಲ್ಪ ಕತ್ತರಿ ಹಾಕಿದರು. ಮತ್ತು ಅವರಿಗೆ ಪುನಃ ಭಟ್ಕಳಕ್ಕೆ ವರ್ಗಾಯಿಸದರು; ರಾಜ್ ಕಲಭಾಗ ರೇಂಜರರಿಗೆ ಸರ್ವೇಯರರಾಗಿ ಕಾರವಾರದಲ್ಲಿ ನೇಮಿಸಿದರು. ರೇಂಜರರಿಗೆ ಸರ್ವೇಯರರಾಗಿ ನೇಮಿಸುವದೆಂದರೆ ತಮಿ ತನವೇ ! ರೇಂಜರ ಕೆಲಸಕ್ಕೆ ಅಪ್ರಾಕ್ತರಾದವರಿಗೆ ಸರ್ವೇ ಯರಾಗಿ ನೇಮಿಸುವ ವ್ಯಪ್ರಾತವುಂಟು. ಆದರೆ ರಾ ಫರ್ನಾಂಡೀಸರಿಗೆ ಅಂದರೆ ರೇಂಜರಿಯಲ್ಲಿ ಗೊಂದಲ ಮಾ ಡಿದವರಿಗೆ ರೇಂಜರಾ ಕಾಯಂ ! ಮತ್ತು ಹೆಸ್ಸಾಗಿ ಕೆಲಸ ಮಾಡುವ ರಾಜ್ ಕಲಭಾಗರಿಗೆ ಸರ್ವೇಯಿ !! ರಾ ಫರ್ನಾಂಡೀಸರಿಗೆ ಇಲ್ಲಿ ವರ್ಗ ಮಾಡಬಾರದಾಗಿ ದೊರೆಯ ರು, ಕುಮಟೆಯ ರಾ ನಾಯ್ಕರಿಗೆ ಇಲ್ಲಿ ವರ್ಗಮಾಡ ಲ್ಪಟ್ಟಿತು. ರಾ ನಾಯ್ಕರು ಕುಮಟೆಗೆ ಹೋಗಿ ೨ ತಿಂಗ ಳು ಪೂರ್ತಿಯಾಗಲಿಲ್ಲ; ಅಷ್ಟರಲ್ಲಿ ಭಟಕಳಕ್ಕೆ ವರ್ಗ ! ಅದೂ ಸಹ ಈ ಮಳೆಗಾಲದಲ್ಲಿ ! ಒಬ್ಬ ರಾಗಿ ಫರ್ನಾಂಡೀ ಸರಿಗೆ ಅನುಕೂಲತೆ ಮಾಡಿಕೊಡುವದಕ್ಕಾಗಿ ಎಷ್ಟು ಜನ ರಿಗೆ ಅನಾನುಕೂಲತೆಯಾಗಬೇಕು ? ಮತ್ತು ಸರಕಾರಕ್ಕೆ ಎಷ್ಟು ಖರ್ಚು ತಗಲಬೇಕು ? ರಾ ಫರ್ನಾಂಡೀಸರ ಪ್ರಕರಣದಿಂದುಂಟಾದ ಶಿಕ್ಷೆ ರಾ ಫರ್ನಾಂಡೀಸರಿಗೋ ? ರಾ ಕಲಭಾಗ-ನಾಯ್ಕರಿಗೋ ? ಇತ್ಯಾದಿ.

ಶಿರ್ಸಿ— ಕಳೆದ ಭಿಬ್ರುವರಿ ತಿಂಗಳಲ್ಲಾದ ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣ-ಪತ್ರಗಳನ್ನು ಹಂಚುವ ಸಮಾರಂಭವು ಕಳೆದ ೩೦ನೇ ತಾರೀಖಿನ ದಿವಸ ಶ್ರೀ ಮಾಂಕಾಂಬಾ ಹೈಸ್ಕೂಲಿನ ಆವ್ಹರಣದ ಮೇಲೆ ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಅಧ್ಯಕ್ಷಸ್ಥಾನವನ್ನು ಹೈಸ್ಕೂಲ ಶಿಕ್ಷಕರಾದ ರಾ ತಿರೇಗಾಂವಕರ ಬಿ.ಎ.,ಬಿ.ಟಿ. ರವರು ಭೂಷಣಪಡಿಸಿದರು ಇವರು ಅಲಂಕರಿಸಿದ್ದರು. ಮಹಿಳಾ ಸಮಾಜದವರು ಈ ಸಮಾರಂಭದಲ್ಲಿ ಸ್ವಯಮುಮ್ಮುವಾಗಿ ಭಾಗವಹಿಸಿದ್ದರಿಂದ, ಸಭಾಸ್ಥಾನದಲ್ಲಿ ವಿಶೇಷವಾಗಿ ಸ್ತ್ರೀಯರು ರಿಂದಲೇ ತುಂಬಹೋಗಿತ್ತು. ನಿಂತು ಹೋಗಲು ಸಹ ಜಾಗ ಸಿಗದೆ ಎಷ್ಟೋ ಜನರು ನಿರಾಶರಾಗಿ ತಿರುಗಿ ಹೋಗ ಬೇಕಾಯಿತು. ಪ್ರತಾಪಕಿ ಪ್ರತಿಜ್ಞಾ, ಖಾಗಲಿಕ ಮತ್ತು ಅಮಲಿಕರ ಎಂಬ ಚಿತ್ರ ಹಿಂದೀ ನಾಟಿಕಗಳು ಅಭಿನಯಿಸ ಲ್ಪಟ್ಟಿವು. ಚಿತ್ರ ಪಾಠಿಕೆಯರ ನರ್ತನಗಳು ಒಳ್ಳೇ ಮನೋ ರಂಜಕವಾಗಿದ್ದವು. ಅಧ್ಯಕ್ಷರೂ, ಹಿಂದೀ ಪ್ರಚಾರಕರಾದ ಶ್ರೀ ನಾಮನೆರವ ಹೊದಕಳಿಯವರೂ ಹಿಂದೀ ಭಾಷೆಯ ಮಹತ್ವವನ್ನು ವರ್ಣಿಸುವ ಉಪನ್ಯಾಸಗಳನ್ನು ಹಿಂದಿಯಲ್ಲಿ ಯೇ ಮಾಡಿದರು. ಪ್ರಾಥಮಿಕ ಪರೀಕ್ಷೆಯಲ್ಲಿ ಇಬ್ಬರು ಹೈಸ್ಕೂಲ ವಿದ್ಯಾರ್ಥಿನಿಯರೂ ಶ್ರೀ ಲಕ್ಷ್ಮಿಬಾ ವೈ ರವರು ಕರ್ನಾಟಕದಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುವರು. ಇದಲ್ಲದೆ, ಇಬ್ಬಿಂದ ಉತ್ತೀರ್ಣರಾದವರಲ್ಲಿ ಸ್ತ್ರೀಯರೇ ಮೇಲಿನ ನಂಬರುಗಳನ್ನು ಪಡೆದಿರುವರು. ಇಂಥವರಿಗೆ ಮಹಿಳಾ ಸಮಾಜದವರು ಪಾರಿತೋಷಕಗಳನ್ನು ಅರ್ಪಿಸಿ ದರು ಇದ್ದಿಯ ಹೈಸ್ಕೂಲಿನಿಂದ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಇದೇ ಮೊದಲನೇ ಸಾರಿ ಉತ್ತೀರ್ಣರಾದ ಶ್ರೀ ರೀಲಾವ ತಿ ಇವಳಿಗೆ ಸಹ ಮಹಿಳಾ ಸಮಾಜದವರು ಪಾರಿತೋಷಕ ವನ್ನರ್ಪಿಸಿದರು. ಹೋದ ಸಾರಿ ಹಿಂದೀ ಪರೀಕ್ಷೆಗಳಿಗೆ ಇದ್ದಿಂದ ೪೫ ಉಮೇದವಾರರಿದ್ದರು. ಈ ಸಾರಿ ಆ ಸಂಖ್ಯೆ ಯು ೭೫ಕ್ಕೆ ಮುಟ್ಟಿದೆ.

ಕಾರವಾರ— ಮುಂಬಯಿ ಸರಕಾರವು ಇನಿತಾ ಚಿಲ್ಲೆಯ ಗ್ರಾಮೋದ್ಧಾರ ಮಂಡಳಿಯನ್ನು ನೇಮಿಸಿದೆ. ಆ ಮಂಡಳಿಯ ಸಭಾಸದರು:— ಕಲೆಕ್ಟರ (ಸಭಾಧ್ಯಕ್ಷರು), ಪ್ರಾಂತ ಆಫೀಸರರು, ಪಶ್ಚಿಮ ಭಾಗದ ಡಿ.ಜಿ.ಪಿ ಪೊಲೀ ಸ್ ಆಫೀಸರರು, ಬೆಳಗಾಂವ ವಿಭಾಗದ ಆ. ರಜಿಸ್ಟ್ರಾರರು, ಮಾಕೇಟಿಂಗ್ ಆಫೀಸರರು, ಜಿಲ್ಲಾ ಲೋ ಬೋ. ಅಧ್ಯ ಕ್ಷರು, ಜಿಲ್ಲಾ ಸ್ಕೂಲ ಬೋರ್ಡ ಅಧ್ಯಕ್ಷರು, ಡಿಸ್ಟ್ರಿಕ್ಟ ಸರ್ಜಿಲ್ ಕೋ. ಬೇಂಕಿನ ಚೆಅರಮನ್ನರು, ರಾ ಶಿ. ಶ್ರೀ. ನಾಯಕ ಸಿವ್ಹಾಪುರ, ಸುಪ್ರಾಯ ರಾಮಚಂದ್ರ ಹಳದೀಪುರ ಎಸ್. ಎಲ್. ಸಿ. (ಕಾರವಾರ), ಸಂ. ಕೃ. ಕಲ್ಲಾಪುರ ಎಲ್ಎಲ್. ಬಿ. ಹೊನ್ನಾವರ, ಭಾ. ಮಂ. ಬಸ್ತಾರ ಹೊನ್ನಾ ವರ, ರಾ. ವೀ. ನಾಯ್ಕ, ಎಲ್ಎಲ್.ಬಿ. ಕುಮಟಾ, ಗ. ಶಾ. ಹೆಗಡೆ, ಹೆಗಡೆ, ಸಾ. ಮಂ. ಶಾನಭಾಗ ಎಲ್ಎಲ್. ಬಿ. ಕಾರವಾರ, ಶಿ. ಶಿ. ಶಾಸ್ತ್ರಿ ಎಲ್ಎಲ್. ಬಿ. ಹೊನ್ನಾವರ, ಗೋ. ವಾ. ಮಯಗಾವಕರ ಬಿಳಗಿ, ವಾ. ಆ. ಹೊಸ್ಕೆ ಶಿರೀ, ಗ. ಕೃ. ಗಾಂವಕಾರ ಯಲ್ಲಾಪುರ ರ. ಪು. ಶೇಣ್ವಿ ಬೆಂಡಿಯೆ, ಗ. ಸಾ. ಕಾಮತ ಅಂಕೋಲಾ, ಲ. ಲ. ಸಿಳ್ಳೆ ಅಂಕೋಲಾ ಹೀಗೆ ಅಂತು ೨೪ ಜನ ಸಭಾಸದರಿದ್ದಾರೆ. ಇವರ ಕೈಕೆಳಗೆ ಕಾರ್ಯದರ್ಶಿಗಳಾಗಿ ಕೆಲಸ ನಾಮವದ ಕ್ಕಾಗಿ ಗ್ರಾಮೋದ್ಧಾರ ಇನ್ಸಪೆಕ್ಟರರನ್ನು ನೇಮಿಸುವದು. ಮಂಡಳವು ಉಪ-ಸಭಾಪತಿಗಳನ್ನು ನೇಮಿಸಿಕೊ ಳ್ಳಕ್ಕಷ್ಟು. ಇನ್ನೊಬ್ಬ ಕಾರ್ಯದರ್ಶಿಯನ್ನೂ ಕಾರ್ಯ ಕಾರಿ ಮಂಡಳವನ್ನೂ ನೇಮಿಸಿಕೊಳ್ಳಬಹುದು.

ಈ ತಾಲೂಕಿನ ಶಿಕ್ಷಕರು ರಾ ಕಶಬೇಕರರ ಕುಟುಂ ಬಕ್ಕೆ ತಮ್ಮ ಸಹಾಯದ ಮೊದಲನೇ ಕಂತಿಂದು ರೂ. ೨೫೦೦ನ್ನು ಕಳುಹಿಸಿದ್ದಾರೆ.

ಈಗ ಸ್ಕೂಲ ಬೋರ್ಡ ಚೆಅರಮನ್ನಿಯ ಆರುತಿ ಚಳ ವಳಿ ನಡೆದಿದೆ. ಬಹುತರವಾಗಿ ರಾ ರಾಮ ದೊಡ್ಡತಮ್ಮ ನಾಯ್ಕ ಇವರೇ ಚೆಅರಮನ್ನರಾಗುವ ಸಂಭವವುಂಟು. ಇವರು ವಿದ್ಯಾ ಇಲಾಖೆಯಲ್ಲಿ ಶಿಕ್ಷಕ-ಕಾರಕೂನರಾಗಿಯೂ ಕೆಲಸ ಮಾಡಿ, ಆಸಿ ಎಸ್ಟೆಬ್ಲಿಷ್ಮರರ ತನಕ ಸ್ವಂತ ಸಾಹ ಸದಿಂದ ಏರಿಹೋದವರಿದ್ದಾರೆ. ವಿದ್ಯಾ-ಇಲಾಖೆಯ ಶಿಸ್ತು ಇವರಿಗೆ ಗೊತ್ತುಂಟು. ರಾ ಬಾಸ್ಕೋಡ ರಾಮ ನಾಯ್ಕ, ಬಾವಿಕೇರಾ ರಾಮನಾಯ್ಕ ಮೊದಲಾದವರ ಬೆಂಬ ಲ ಇವರಿಗಿದೆ. ಹಳದೀಪುರದ ರಾ ಸಭಾಸ್ಥರೂ, ಹೆಗಡೆಯ ರಾ ಮಾಬಾದೇವ ರಾಮ ಹಗಡೆಕಟ್ಟೆಯವರೂ ಹೊನ್ನಾ ವರದ ರಾ ಈಶ್ವರ ಭಟ್ಟರೂ, ಕುಮಟೆಯ ರಾ ಕೃಷ್ಣ ಸ್ವಭಾವೂ ಚೆಅರಮನ್ನಿಗೆ ಉಮೇದ್ವಾರರಾಗಿ ನಿಲ್ಲಬಹುದಂ ತೆ ! ಇವರಲ್ಲಿ ರಾ ಕೃಷ್ಣ ಪ್ರಭುರಿಗೆ ಕುಮಟ್ಟೆಗೆ ಬೆಂಬಲ ವುಂಟು. ರಾ ಮಹಾದೇವ ಹೆಗಡೆಕಟ್ಟೆ ಇವರು ಕೊಂಗ್ರೆಸ ಪಕ್ಷದ ಸಭಾಸದರಿದ್ದರೆಂದ ಚೆಅರಮನ ರಾಗಬಹುದಾಗಿ ಎಣಿಕೆ.

(ತಾ. ೪-೮-೪೬) ಬೆಳಗಾಂವ-ಕಾರವಾರ ವಿಭಾಗದ ಸಹಕಾರಿ ಸಂಸ್ಥೆಗಳ ಆಸಿಸ್ಟಂಟ ರಜಿಸ್ಟ್ರಾರರೂ ಗ್ರಾಮೋ ದ್ಧಾರ ಆಧಿಕಾರಿಗಳೂ ಆದ ರಾ ಆರ್. ಬಿ. ಶಾಲೇಗರವರು ಬೆ ಸಹಕಾರ ಸಂಘಗಳ ತಾಪಸಣೆ ಮತ್ತು ಗ್ರಾಮೋ ದ್ಧಾರ ಕಾರ್ಯದ ನೀರೀಕ್ಷಣೆ ಮಾಡುವದೋಸ್ಕರ ಇವೇ ಅಗೋಸ್ತ ತಿಂಗಳ ತಾ. ೨೪ರಿಂದ ತಾ. ೩೦ ವರೆ ಗೆ ಈ ಜಿಲ್ಲೆಯಲ್ಲಿ ಸಂಚಾರಕ್ಕೆ ಬರುವವರಿದ್ದಾರೆ. ಅವರು ತಮ್ಮ ಮುಕ್ಕಾಮು ಕಾರವಾರದಲ್ಲೇ ಇರುವಂಥಾ ತೀ ಯುತ್ತದೆ.

ಸಹ್ಯಾದ್ರಿ ಫಾರ್ಮಸಿ, ಕುಮಟಾ.



ಈ ಫಾರ್ಮಸಿಯಲ್ಲಿ ಎಲ್ಲ ತರದ ಆಯುರ್ವೇದ ಔಷಧಗಳು ವೈದ್ಯಶಾಸ್ತ್ರಕ್ರಮದಂತೆ ತಯಾರಿಸಲ್ಪಡುತ್ತವೆ.

ಇವುಗಳ ಸೇವನೆಯಿಂದ ರೋಗಿಗಳಿಗೆ ಒಳ್ಳೇ ಪ್ರಯೋಜನ ದೊರೆಯುತ್ತದೆ.

ಡಾ॥ ಎಸ್. ಕೇ. ಭಟ್ಟ ಹಳಕಾರ,

ಎಲ್. ಐ. ಎಮ್. ಎಸ್. ಎಂ(ಕ್ಲೆಪಿ. ಸಿ. (ಮೈಸೂರು)

ಕುಮಟಾ. ಉ. ಕನ್ನಡ.

ಕಾನಡಾವೃತ್ತ.

ಮತಿ ಪ್ರಮಥಿ ಸಂವತ್ಸರ ಆಧಿಕ ಶ್ರಾವಣ ಕೃ|| ೭ನು, ಸೋಮವಾರ.

ಪುಣ್ಯಭೂಮಿಯು ಸದ್ಗುಣಭೂಮಿಯಾಗಲಿ!

ಸಚಿವೋತ್ತಮರಾದ, ಮಂತ್ರಿಶ್ರೇಷ್ಠರಾದ, ಗುಣಸಂಪನ್ನರಾದ ನಮ್ಮ ಬಾಳಾಸಾಹೆಬ ನಾ|| ಖೇರರು ಮುಂಬಯಿಯೊಳಗೆ ಮದ್ಯಪಾನೋಚ್ಚಾಟನದ ಪ್ರಾರಂಭೋತ್ಸವದ ಪಬೆಯಲ್ಲಿ ನುಡಿದಂತೆ, ನಮ್ಮಾ ಪುಣ್ಯಭೂಮಿ ಸದ್ಗುಣಭೂಮಿಯಾಗಲೆಂದು ನಾವು ಹಾರೈಸುತ್ತೇನೆ. ಸದ್ಗುಣವೇ ಪುಣ್ಯದ ಮೂಲ; ಧರ್ಮದ ಮೂಲ. ಸಕಲ ಪುರುಷಾರ್ಥಗಳ ಸಾಧನಕ್ಕೂ ಸದ್ಗುಣಗಳೇ ಬೇಕು. ಸದ್ಗುಣಗಳೇ ಸಕಲ ಐಹಿಕ, ಪಾರಮಾರ್ಥಿಕ, ಪಾರಲೌಕಿಕ ಇಷ್ಟಾರ್ಥಗಳ ಸಾಧಕವೆಂದು ಶ್ರೀಶೈರು, ವಿಚಾರವಂತರು, ಶಾಸ್ತ್ರಕಾರರು, ಋಷಿವರ್ಯರು ಹೇಳುತ್ತಾರೆ. ಮದ್ಯಪಾನದಿಂದ ಮಾನವನು ಮನುಷ್ಯತ್ವಕ್ಕೆ ವಿಮುಖನಾಗುತ್ತಾನೆ. ಪಶು-ಮನುಷ್ಯರೊಳಗಿರುವ ಭೇದವನ್ನೇ ಆತನು ಗ್ರಹಿಸಲೊಲ್ಲನು. ಮದ್ಯ ಕುಡಿ ಕುಡಿದು ಹೊಟ್ಟೆ ತುಂಬಿ ತೇಗುತ್ತಿದ್ದಾಗ್ಯೂ, ಆತನ ತೃಷೆ ಅಥವಾ ತೃಷ್ಣೆ ಶಾಂತಿಯಾಗಲೊಲ್ಲದು. ಇನ್ನೂ ಕುಡಿಯಬೇಕು, ಮತ್ತೂ ಕುಡಿಯಬೇಕು, ಕುಡಿದು, ಕುಡಿಕುಡಿದು ಸಾಯಬೇಕು; ಅದೇ ಸ್ವರ್ಗ; ಅದೇ ಸದ್ಗತಿ; ಅದೇ ಪರಮ ಗತಿ; ಎಂದು ಆತನು ಎಣಿಸಿ ಕುಡಿಕುಡಿದು ಪತಿತನಾಗುತ್ತಾನೆ. ಆತನಲ್ಲಿ ಯಾವದೇ ಗುಣವಿಶೇಷಗಳದ್ದಾಗ್ಯೂ ಅವ್ಯಾವೈದರ ಪ್ರಯೋಜನ ಆತನಿಗಾಗಲಿ, ಆತನ ಹೆಂಡರು—ಮಕ್ಕಳಿಗಾಗಲಿ, ಇತ್ಯ-ಮಿತ್ರ-ಬಂಧು-ಬಾಂಧವರಿಗಾಗಲಿ ದೊರಕದೆ, ಆತನು ನಿರರ್ಥಕನಾಗುತ್ತಾನೆ. ಗುಣಗಳು ಊರ್ಜಿತಾವಸ್ಥೆಯನ್ನು ಹೊಂದಬೇಕಾದರೆ, ಅವುಗಳಿಂದ ಸ್ವಂತಕ್ಕಾಗಲಿ, ಲೋಕಕ್ಕಾಗಲಿ ಪ್ರಯೋಜನ ದೊರಯುಬೇಕಾದರೆ, ಮದ್ಯಪಾನದ ದುರ್ಗುಣ ನೋಂಕಲಾಗದು. ಈಗ ದೇಶದಲ್ಲಿ ಹುಟ್ಟಿದ ದಾರಿದ್ರ್ಯಕ್ಕೆ ಮದ್ಯಪಾನದ ಪ್ರಚಾರವೇ ಮುಖ್ಯ ಕಾರಣವೆಂದು ಅಭ್ಯಾಸಿ ಅರ್ಥಶಾಸ್ತ್ರಜ್ಞರು ತಿಳಿಯುತ್ತಾರೆ. ಪೂಜ್ಯ ದಾದಾಭಾಯಿ ನವರೋಜಿಯವರು ಪ್ರಸಿದ್ಧ ಕಾವಾ ಕಂಪನಿಗಿದ್ದ ತಮ್ಮ ಸಂಬಂಧವನ್ನು ತುಂಡರಿಸಿಕೊಳ್ಳಲು ಕಂಪನಿಯವರು ನಡಿಸಲೆಳಸಿದ ಮದ್ಯ-ವ್ಯಾಪಾರವೇ ಕಾರಣ ವೆಂದು ಈಗಾಗ ಇತಿಹಾಸಪ್ರಸಿದ್ಧವಾದ ಸಂಗತಿ. ಪ್ರತ್ಯಕ್ಷ ಮದ್ಯಪಾನದಿಂದಾಗುವಂತೆಯೇ ಮದ್ಯ-ವ್ಯಾಪಾರದಿಂದ ಪಾಪಸಂಗ್ರಹವಾಗುತ್ತದೆ. ಲೋಕದೊಳಗೆ ಸದ್ಗುಣಲೋಪ ಮಾಡುವ ಪಾಪಕರ್ಮವು ಅದರಿಂದ ಒದಗಿಬರುತ್ತದೆ. ಹಿಂದುಸ್ಥಾನವು ಪುಣ್ಯಭೂಮಿ, ಧರ್ಮಭೂಮಿ ಎಂದು ಲೋಕಪ್ರಸಿದ್ಧವಾಗಿದೆ. ಅಂತೆಯೇ ಸುವರ್ಣಭೂಮಿ ಎಂದು ದಿಗಂತ ಕೀರ್ತಿ ಪಡೆದಿತ್ತು. ಧರ್ಮ-ಪುಣ್ಯ ಇವುಗಳ ಜೊತೆಗೆ ಸದ್ಗುಣಗಳ ಸಮೃದ್ಧಿಯಾಗುತ್ತದಾದ್ದರಿಂದ ಸುವರ್ಣವು ಸಹಜವಾಗಿ ನಮ್ಮಾ ಭೂಮಿಯೊಳಗೆ ಅಡಕವಾಗಿತ್ತು; ವಿದೇಶಿಯರು ಸುವರ್ಣಭೂಮಿಯ ಸೌಭವಕ್ಕೆ ಮನಸೋತು ಭರತಭೂಮಿಯ ವರ್ಣನೆಯನ್ನು ಚಿತ್ರವೇಧಕವಾಗಿ ಮಾಡಿರುತ್ತಾರೆ. ಆದೇ ಭೂಮಿ ಇಂದಿಗೆ ದಾರಿದ್ರ್ಯ ಭೂಮಿಯೆಂದು ಅಪಕೀರ್ತಿ ಹೊಂದಿದೆ. ಮಹಾತ್ಮರು ದರಿದ್ರನಾರಾಯಣನ ಸೇವೆ ಮಾಡಿ, ಹಿಂದುಸ್ಥಾನದ ಉದ್ಧಾರ ಮಾಡುವದೇ ತಮ್ಮ ಜೀವನಕಾರ್ಯವೆಂದು ಎಣಿಸುವ ಪ್ರಸಂಗ ಬಂದಿದೆ. ಪಾಶ್ಚಾತ್ಯರ ಸಹವಾಸದಿಂದ ನಮ್ಮೊಳಗೆ ಹುಟ್ಟಿಕೊಂಡ ಅನೈತಾನದ ದುಷ್ಟಟನೆ ಲೋಕದಾರಿದ್ರ್ಯಕ್ಕೆ ಒಂದು ಅಂದಿದಿಂದ ಕಾರಣವಾಯಿ ಸಕಲರೂ ಒಪ್ಪುತ್ತಾರೆ. ಸ್ವಾತಂತ್ರ್ಯಸಂಪಾದನೆಯ ಮದ್ಯದಂಗಡಿಗಳನ್ನು ಮುಚ್ಚಿದರೆ, ಮದ್ಯ-ವ್ಯಾಪಾರದಿಂದ ಸರಕಾರಕ್ಕೆ ಸಿಗುವ ಉಪ್ಪತ್ತಿ ಶತಪಿಸಿಯಾಗಿ ಸರಕಾರಕ್ಕೆ ಅಡಚಣೆ ನಡಿಸಲಿಕ್ಕೂ ಶಿಕ್ಷಣಪ್ರಸಾರ ಮಾಡಲಿಕ್ಕೂ ತೊಂದರೆಯಾಗುವದಾಗಿ ಹೇಳೋದಾಗತ್ತಿತ್ತು. ಮಹಾತ್ಮರು ನುಡಿದಂತೆ, ಮುಂಬಯಿ ಸರಕಾರವು ಒಳ್ಳೇ ಸೈರ್ಯ ಹಿಡಿದು ಮುಂಬಯಿ ಪಟ್ಟಣದೊಳಗಿಂದ ಸುರಾಠಕ್ಕಸನನ್ನು ಹೊಡೆದೋಡಿಸುವ ಮಹಾಕಾರ್ಯವನ್ನು ಕೈಕೊಂಡಿದೆ. ಮುಂಬಯಿ-ಯಂಥ ಬೇರೆ ಬೇರೆ ಸಮಾಜಗಳ, ಬೇರೆ ಬೇರೆ ಸಂಸ್ಥೆಯ ಬೇರೆ ಬೇರೆ ವಿಚಾರಗಳ, ಬೇರೆ ಬೇರೆ ತರಗತಿಯ ಜನಸಮುದಾಯವಿರುವ ಪ್ರದೇಶದಲ್ಲಿ ಮದ್ಯಪಾನವನ್ನು ಒಮ್ಮೆಲೇ ನಿಲ್ಲಿಸುವ ಸಾಹಸವನ್ನು ಮುಂಬಯಿ ಸರಕಾರವು ಕೈಕೊಂಡಿದ್ದು ನಿಜವಾಗಿ ಅದ್ಭುತವೇ ಸೈ! ಮದ್ಯವ್ಯಾಪಾರಿ ಮುಂಬಯಿಯೊಳಗೆ ಪಾರ್ಸಿಗಳ ಪ್ರಾಬಲ್ಯವೇ ಮಿಗಿಲಾದುದು. ಮದ್ಯ-ವ್ಯಾಪಾರದಲ್ಲಿ ಈ ಸಮಾಜದ ಪ್ರಧಾನ ಅಂಗವೆಂಬು, ವರ್ತಮಾನದ ಮದ್ಯ-ವ್ಯಾಪಾರದಿಂದ ಇವರಿಗೆ ಲಕ್ಷಾವಧಿ ರೂಪಾಯಿಗಳ ಪ್ರಾಪ್ತಿಯುಂಟು. ಇಂಥವರ ವಿರೋಧವನ್ನು ಲೆಕ್ಕಿಸದೆ ಮದ್ಯಪಾನೋಚ್ಚಾಟನ ಕಾರ್ಯಕ್ರಮವನ್ನು ಕೈಕೊಂಡಿದ್ದು ನಿಜವಾಗಿ ಸಾಹಸವೇ ಸೈ! ಮೇಲಾಗಿ, ಅಸ್ಪೃಯ ಮೇಲೆ ತೆರಿಗೆ ಜೋರಿ ಮದ್ಯಪಾನೋಚ್ಚಾಟನದಿಂದುಂಟಾದ ನಷ್ಟವನ್ನು ತುಂಬಿಕೊಳ್ಳುವ ಸರಕಾರಿ ಕ್ರಮದ ಭಾರವೂ ಪಾರ್ಸಿ ಸಮಾಜದ ಹಕ್ಕೇ ಬಾಧಿಸುತ್ತದೆ. ಅಷ್ಟೇಕೆ? ಸನುಕ್ಷ ಸಾವಕಾರರಿಗೂ ಇದರಿಂದ ಬಾಧೆಯುಂಟು. ಮುಂಬಯಿಯೊಳಗೆ ಸಾವಕಾರರದೇ ಪ್ರಶ್ನ. ಸಾವಕಾರರಿಗೆ ವಿರೋಧಿಸಿ ಮುಂಬಯಿಯೊಳಗೆ ಮದ್ಯಪಾನವನ್ನು ನಿರ್ಮೂಲಿಸಲು ಮುಂಬಯಿ ಸರಕಾರವು ಮುಂದಾದದ್ದು ಆಶ್ಚರ್ಯವಾದ ಸಂಗತಿಯೆಂದು ಯಾರೂ ಒಕ್ಕಲೇ ಬೇಕು! ನಾ|| ಖೇರರು ನುಡಿದಂತೆ, ಲೋಕೋಪಕಾರ ಮಾಡುವ ತೀಕ್ಷ್ಣ ವಾಸನೆಯಿಂದಲೂ, ಇಲೆಕ್ಶನ್ ಕಾಲದಲ್ಲಿ ಲೋಕಕ್ಕೆ — ಹಾನ-ಬೀನ ಲೋಕಕ್ಕೆ — ಕೊಟ್ಟ ಉದ್ಧಾರ ವಚನಗಳನ್ನು ಪಾಲಿಸುವ ಆಕಾಂಕ್ಷೆಯಿಂದಲೂ ಮದ್ಯಪಾನೋಚ್ಚಾಟನದ ಕಾರ್ಯಕ್ರಮವನ್ನು ಮುಂಬಯಿಯೊಳಗೆ ಪುರಸ್ಕರಿಸಲು ಮುಂಬಯಿ ಸರಕಾರವು ಸಾಹಸ ಮಾಡಿರಿ. ಮಹಾತ್ಮರೂ, ಪೂ|| ಜವಾಹರರಾಯರೂ ಹಿಂದುಸ್ಥಾನದೊಳಗಿನ ಇತರ ಮಹನೀಯರೂ ಈ ಉಪಕ್ರಮವನ್ನು ಆಶೀರ್ವದಿಸಿದ್ದಾರೆಂದು ತಿಳಿಸಲು ನಾವು ಸಂತೋಷಪಡುತ್ತೇವೆ. ಸ್ವಿಸ್ಟಿ ಲೌನ್ಸಿಲಿನ ನ್ಯಾಯಾಧೀಶರಾದ ಬೆ|| ಮುಕುಂದರಾವ ಜಯಕರ ರವರೂ ಮುಸ್ಲಿಮ್‌ಲೀಗ ಪಕ್ಷದ ನೆರ ದೆಹಲಿಯವರೂ ಮುಂಬಯಿ ಸರಕಾರವು ಮುಂಬಯಿಪಟ್ಟಣದಲ್ಲಿ ಪ್ರಾರಂಭಿಸಿದ ಮದ್ಯಪಾನೋಚ್ಚಾಟನದ ಕಾರ್ಯಕ್ರಮಕ್ಕೆ ಯಶಸ್ಸನ್ನು ಕೋರಿದ್ದಾರೆ. ಹಿಂದುಸ್ಥಾನದಂಥ ಧರ್ಮಪ್ರಧಾನ ಜನಾಕಾಂಗದಲ್ಲಿ, ಮದ್ಯಪಾನವನ್ನು ಸಂಪೂರ್ಣವಾಗಿ ತಿರಸ್ಕರಿಸುವ ಪರಂಪರೆಯವರಲ್ಲಿ ಮದ್ಯಪಾನವು ಈ ತನಕ ಬೇರೂರಿಕೊಂಡಿದ್ದೇ ಪರ ಮಾಶ್ಚರ್ಯದ ಸಂಗತಿಯೆಂದು ಕೊಂಚ ವಿಚಾರ ಮಾಡಿದರೆ ತಿಳಿಯುವಂತಿದೆ.

ಮುಂಬಯಿ ಸರಕಾರವು ಮದ್ಯಪಾನದ ವ್ಯಾಪಾರದಲ್ಲಿ ಸೇರಿಕೊಂಡ ಜನರ ನಿರುದ್ಯೋಗವನ್ನು ಹೋಗಲಾಡಿಸಲಿಕ್ಕೆ ಪ್ರಯತ್ನ ಪಡುತ್ತದೆಂದು ನಾವು ಈ ಮುಂಚೆಯೇ ತಿಳಿಸಿದ್ದೇವೆ. ಮದ್ಯದಂಗಡಿಗಳನ್ನು ಮುಚ್ಚಿದ್ದರಿಂದ ಉಪಜೀವನಗೈಯಗಳ ಗಿರಾಕಿ ಹೆಚ್ಚುವದು ಸಹಜ. ಆದರೆ ಮದ್ಯದ ಅಂಗಡಿಗಳು ವರ್ಷವರ್ಷ ಸನ್ನ ೫೫ ಲಕ್ಷ ಗಿಲಾಸು ಅಂದರೆ ಸರಾಸರಿ ೧೫ ಕೋಟಿ ಬಾಟ್ಲಿ ಮದ್ಯವನ್ನು ಜನರಿಗೆ ಕುಡಿಸುತ್ತಿದ್ದವು. ಈ ಗಿರಾಕಿಗಳೆಲ್ಲ ಈವರಿಗೆ ಉಪಹಾರಗೃಹಗಳಿಗೆ ದೊರ ಕವೆ. ಚಹ, ಕಾಫಿ ಅಂಗಡಿಗಳಲ್ಲಿ ಹೆಚ್ಚೆಚ್ಚು

ಡಾ|| ಗಿಲ್ಡರರ ಮೇಲೆ ಬಹುಮ್ಮಾರ ಹಾಕಿದಾಗ್ಯೂ ಡಾ|| ಗಿಲ್ಡರವರು ಕಾರ್ಯದ ಮೇಲೆ ಲಕ್ಷವನ್ನಿಟ್ಟು ಅದನ್ನೆಲ್ಲ ಸಹಿಸಿ, ಮಧ್ಯಪಾನೋಚ್ಚಾಟನ ಕಾರ್ಯ ಶ್ರಮದಲ್ಲಿ ಗಾಂಭೀರ್ಯದಿಂದಲೂ, ಸ್ಥೈರ್ಯದಿಂದಲೂ ಮದ್ಯಪಾನವನ್ನು ನಿರ್ಮೂಲಿಸುವ ಕ್ರಮವನ್ನು ಪುರಸ್ಕರಿಸುತ್ತಿದ್ದಾರೆ. ಇಂಥ ಧೈರ್ಯಶಾಲಿಗಳೂ, ಸಾಹಸಿಗಳೂ, ತತ್ವನಿಷ್ಠರೂ, ಲೋಕೋಪಕಾರನಿರತರೂ, ನಿಃಸ್ವಾರ್ಥಿಗಳೂ, ಕೈಕೊಂಡ ಮಹಾಕಾರ್ಯದಿಂದ ಲೋಕಕ್ಷೇಮವಾಗಲೇಬೇಕೆಂದು ನವುಗಳಿಸುತ್ತಿದೆ. ಕೆಲವು ದುರಭಿಮಾನಿಗಳು ವಿಕಾರವಶರಾಗಿ ಡಾ|| ಗಿಲ್ಡರರ ಮೇಲೆ ಹೂಡಿದ ವಿರೋಧವಾದರೂ ಕಾಲಕ್ರಮದಿಂದ ಬಯಲಾಗುವದಾಗಿಯೂ ನಾವು ಕೋರುತ್ತೇವೆ.

ಇದಲ್ಲದೆ ಕುಡುಕರ ಮನೋರಂಜನಕ್ಕಾಗಿ ಮುಂಬಯಿ ಸರಕಾರವು ಅಲ್ಲಲ್ಲಿ ಮನೋರಂಜನೆ ಸ್ಥಳಗಳನ್ನೇರ್ಪಡಿಸಲುದ್ಯುಕ್ತವಾಗಿದೆ. ಚಲಚ್ಚಿತ್ರಪಟ, ಆಕಾಶವಾಣಿ, ಉಪವನ, ಫಲಪನ್ನೆ, ಕೇರ್ತನೆ, ಆಟ-ಓಟಮೊದಲಾದವುಗಳೂ, ವಾಚನಾಲಯಗಳೂ, ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿವೆ. ಕುಡುಕರು ಬಹುತರವಾಗಿ ಕಾಯಕಶ್ರಮ ಮಾಡಿ ದಣಿಯುತ್ತಿರುವ ಜನಸಾಮಾನ್ಯರು. ಶ್ರಮ ಪರಿಹಾರಕ್ಕಾಗಿ, ಜನ್ಮದಾರಿದ್ರ್ಯದಿಂದೊದಗುವ ಯಮಯಾತನೆಗಳನ್ನು ಮರೆಯುವದಕ್ಕಾಗಿ ಕುಡುಕರಾದವರೇ ಹೆಚ್ಚು! ಅಂಥವರಿಗೆ ಮನೋರಂಜನದ ವ್ಯವಸ್ಥಾಪನೆ ಮಾಡುವದು ಆತ್ಯವಶ್ಯ! ಅವರು ಶ್ರಮ ಪರಿಹಾರವನ್ನು ಮಾಡಿಕೊಂಡು ಚಿತ್ತಸ್ವಾಸ್ಥ್ಯವನ್ನು ಮಾಡಿಕೊಂಡನಕ ಆತನಿಂದ ಮುಂದೆ ಪ್ರಕಂಡ ಸಾಗಿಸಬಹುದು. ಪ್ರಕಂಡದಲ್ಲಿ ನಾವಾದರೂ ಸುಖವಿದೆಯೆಂದು ಆತನು ಎಣಿಸಲಾರನು. ಇಡೀದಿನ ಗಿರಣಿಯಂತ್ರಗಳೊಡನೆ ತಾವೂ ಒಂದು ಯಂತ್ರವೆಂದುಮಿದು ಮತಿಭ್ರಮೆ ಹೊಂದುತ್ತಾರೆ. ಪುನಃ ಮನುಷ್ಯವಸ್ಥೆಯಲ್ಲಿ ಆತನು ದಕ್ಕುವಾರಿಸಿಕೊಳ್ಳಬೇಕು. ಮುಂಬಯಿ ಸರಕಾರವು ಸಂಕಲ್ಪಿಸಿದ ವಿಷಾಲು ತೀರ ಉಚಿತವಿದೆ. ಕುಡುಕರು ಮನೋರಂಜನದಿಂದ ಮದ್ಯದ ರುಚಿಯನ್ನು ಕಳಕೊಂಡರೆ ಮದ್ಯ-ವ್ಯಾಪಾರಿಗಳ ಕಳ್ಳತನಕ್ಕೆ ಸ್ವಾಭಾವಿಕವಾಗಿ ನಿರ್ಬಂಧವಾಗುವದೆಂದೆ. ಮೇಲಾಗಿ ಕುಡುಕರೇ ಮದ್ಯ ನಿರೋಧನ ಕಾರ್ಯದಲ್ಲಿ ಸರಕಾರಕ್ಕೆ ನೆರವಾಗುವರು ಅತ್ತ ಮದ್ಯ-ವ್ಯಾಪಾರಿಗಳಿಗೂ ತಕ್ಕ ಮದ್ಯಸಿಗಲಿಗಾಗಿ ಬೇರೆ ಬೇರೆ ವ್ಯವಸ್ಥೆ ಮಾಡಿಕೊಟ್ಟಿದ್ದರಿಂದ ಈರ್ರೆರೋಗಿಗೆ ಉಂಟಾದ ಪುಣ್ಯಾನುಬಂಧ ತಾನಾಗಿಯೇ ತುಂಡಾಗಿ ಹೋಗುವದು. ಈರ್ರೆರಿಗೂ ತನ್ನ ತಮ್ಮ ಕರ್ಮಗಳಿಂದ ಉಂಟಾಗುತ್ತಿರುವ ಅನರ್ಥವನ್ನು ಸರಿಂಬರಿಸಿ, ಸನ್ಮಾರ್ಗ ಹಿಡಿದು ವರ್ತಿಸಲಿಕ್ಕೆ ಅನುಕೂಲವಾಗುವದು. ಮುಂಬಯಿ ಸರಕಾರವು, ಮದ್ಯಪಾನದ ವಿಘಾತದೊಡನೆ ಜೀವನೋಪಾಯದ ವಿಧಾಯಕ ಕಾರ್ಯಕ್ರಮವನ್ನು ಪುರಸ್ಕರಿಸಿದ ಬಗ್ಗೆ ನಾವು ಮುಂಬಯಿ ಸರಕಾರಕ್ಕೆ ಅಂತಃಕರಣಪೂರ್ವಕವಾಗಿ ಅಭಿನಂದಿಸುತ್ತೇವೆ. ಮತ್ತು ಮುಂಬಯಿ ಸರಕಾರವು ಕೈಕೊಂಡ ಕಾರ್ಯ ಯಶಸ್ವಿಯಾಗಲೆಂದೂ ಹರಸುತ್ತೇವೆ. ಮದ್ಯವಾಪದಿಂದುಂಟಾದ ಸದ್ಯಃಪ್ರಣಹೋಪ ಬಯಲಾಗಿ ನಾ| ಬೇರಾರು ಆಪೇಕ್ಷಿಸುವಂತೆ, ಹಾರೈಸುವಂತೆ ನವುಗಳ ಪುಣ್ಯ ಭೂಮಿ ಸದ್ಯಃಪ್ರಣಭೂಮಿಯಾಗಲೆಂದೂ ಬಡಬಗ್ಗರಿಗೆ, ಹಿನ್ನದೀನರಿಗೆ ಜೀವನಸ್ಥಾರಸ್ಯದ ಗೃಹಕೈಯಾಗಿ, ಏಹಕ ಬಾಳ್ವೆಯ ಆಸೇಕ್ಷೆಯಾಗಿ ಅವರೆಲ್ಲರೂ ಉದ್ಧಾರ ಹೊಂದಲೆಂದೂ, ಅಂತೆಯೇ ನವುಗಳ ಪುಣ್ಯಭೂಮಿ, ನವುಗಳ ಧರ್ಮಭೂಮಿ, ನವುಗಳ ಭರತಭೂಮಿ, ಸುವರ್ಣಭೂಮಿಯಾಗಿ ಇಡೀ ಲೋಕಕ್ಕೆಗಳ ಪೂರ್ವಕಾಲಕ್ಕೂ ಮಿಗಿಲಾಗಿ ಕೀರ್ತಿಪಡೆಯಲೆಂದೂ, ಇಡೀ ಲೋಕಕ್ಕೇ ಸನ್ಮಾರ್ಗದರ್ಶಕವಾಗಲೆಂದೂ ನಾವು ಹೃದ್ಗೂರ್ವಕವಾಗಿ ಬಯಸುತ್ತಿ, ಹೊಸ ಮನ್ವಂತರಕ್ಕೆ ಕಾರಣರಾದ ಸಚಿವೋತ್ತಮರಾದ ನಾ| ಬೇರಿರಿಗೂ, ಅಬಕಾರಿ ಇಲಾಖೆಯ ಮಂತ್ರಿಗಳಾದ ನಾ| ಡಾ| ಗಿಲ್ಡರರಿಗೂ ಪ್ರೀತಿಯಿಂದಲೂ, ಆದರದಿಂದಲೂ ವಂದನೆಗಳನ್ನರ್ಪಿಸುತ್ತೇವೆ.

ಯುದ್ಧಯೋಗ ಹೇಗೆ?

[ನಿರೀಕ್ಷಕನು ಬರೆದುದು.]

ಸುಮ್ಮನೆ ನನಗೇಕೆ ದಣಿಯುತ್ತೀರಿ? ನಾನು ಜ್ಯೋತಿಷಿ ಅಲ್ಲ; ಭವಿಷ್ಯವಾದಿಯೂ ಅಲ್ಲ. ರಾಷ್ಟ್ರ-ರಾಷ್ಟ್ರಗಳಲ್ಲಿ ಕಾಲ-ಕಾಲಕ್ಕೆ ನಡೆಯುವ ಬೇರೆ ಬೇರೆ ಸೂತ್ರಗಳ ಪ್ರತ್ಯಕ್ಷ ಪರಿಜ್ಞಾನವೂ ನನಗೇನಿಲ್ಲ. ಬ್ರಿಟಿಶ ಪ್ರಧಾನರ ವಚನಗಳನ್ನು ಆಲಿಸಿದರೆ ಯುದ್ಧ ಯೋಗವಿರುವದಾಗಿ ಒನ್ನೆ ಅನಿಸುತ್ತಿದೆ. ಯುದ್ಧ ಯೋಗವಿಲ್ಲವಾಗಿ ಮತ್ತೊನ್ನೆ ಅನಿಸುತ್ತಿದೆ; ಗುರುವಾರ ಬ್ರಿಟಿಶ್ ಸೈನ್ಯ ಇಲಾಖೆಯ ಮಂತ್ರಿಗಳಾದ ಸರ್ ಜೇಮ್ಸ್ ಇರ್ಸ್ಕಿನ್‌ರವರು ಒಬಾಸಭದಲ್ಲಿ ಭಾಷಣ ಮಾಡಿದರು. ಯುರೋಪಖಂಡದಲ್ಲಿ ಯುದ್ಧವಾಗುವದು ಅಕಂಭವೆಂದೂ ಅವರು ಹೇಳಿದರು. ಈ ಪ್ರಕಾರ ಹೇಳಲಿಕ್ಕೆ ತಮಗೊಳ್ಳೇ ಕಾರಣವಿರುವದಾಗಿಯೂ ಅವರು ಒತ್ತಿ ಹೇಳಿದರು. ಸೋಮವಾರ ಪಾರ್ಲಿಮೆಂಟಸಲ್ಲಿ ಮುಖ್ಯಪ್ರಧಾನರಾದ ಮಿ| ಚೆಂಬರಲೆನರ ಭಾಷಣವಾಯಿತು. ಶಸ್ತ್ರಾಸ್ತ್ರಗಳನ್ನೂ, ಯುದ್ಧ ಸಾಹಿತ್ಯಗಳನ್ನೂ ರಾತ್ರಿ ಹಾಕುತ್ತಿರುವ ರಭಸ ನಡೆದಾಗ, ಯುದ್ಧದ ಹೊರಕು ಈ ಪರಿಸ್ಥಿತಿಯೇ ಸರಿಹಾರ ಹೊಂದಲಿಕ್ಕಿಲ್ಲೆಂದು ಮುಖ್ಯ ಪ್ರಧಾನರು ಅಭಿಪ್ರಾಯಪಟ್ಟರು; ಬೇರೆ ಉಪಾಯವೇ ಕಾಣುವದಿಲ್ಲವಾಗಿಯೂ ಮೇಲ್ಬೆಲ್ಲಹಾಕೆ ಮುದುಕರು ಹೇಳುತ್ತಿರಿ ಯ-ದ್ಧವಾದರೆ ಜರ್ಮಾಜಯಗಳು ಯಾರ ಪಾಲಿಗೆ ಹೋದಾಗ್ಯೂ ಗೆದ್ದವರೂ, ಸೋತವರೂ ಎಲ್ಲರೂ ಕಪ್ಪಕ್ಕೈಕಾಸುವರೆಂದು ಅವರು ಒತ್ತಿ ಹೇಳಿ, ಆ ವಿಚಾರದಿಂದೇನಾದರೂ ಯುದ್ಧ ತಡೆದು ನಿಂತರೆ ನಿಲ್ಲಬಹುದೆಂದಾಗಿ ಸಂದೇಹವಾಚಕ ಶಬ್ದಗಳಂದ ತಮ್ಮ ಅಭಿಪ್ರಾಯ ಹೇಳಿದರು. ವಿರೋಧ ಪಕ್ಷದ ಪ್ರಮುಖರಾದ ಮಿ| ಆರ್ಥರ್‌ಗ್ರೀನವುಡ್, ಸರ್ ಆರ್ಚಿಬೊಲ್ಡ್ ಸಿಂಕ್ಲೇರ್, ಮಿ| ಚರ್ಚಿಲ್ಲರವರು ಯುದ್ಧವಾಗಲಿಕ್ಕೆ ವಿಳಂಬವಾಗಲಿಕ್ಕಿಲ್ಲವಾಗಿಯೂ, ಇಳ ತಾಪುಗಳಲ್ಲಿ ಯುದ್ಧಯೋಗ ಜಿದರಿಬರಬಹುದಾಗಿಯೂ, ಅದರಿಂದ[ಪಾರ್ಲಿಮೆಂಟಿನ ಸಭೆಯನ್ನು ವಾಡಿಕೆಯಂತೆ ಅಕ್ಟೋಬರಿಒ ತನಕ ಮುಂದಿಸಬಾರದಾಗಿಯೂ, ಇದೇ ಒರವ ಆಗಸ್ಟಿನಿನೇ ತಾರೀಖಿಗೆ ಪಾರ್ಲಿಮೆಂಟಿನ ಸಭೆಯನ್ನು ಪುನಃ ಸೇರಿಸಬೇಗಿಯೂ ವಾದಿಸಿ, ಚೆಂಬರಲೆನರ ಸೂಚನೆಯನ್ನು ವಿರೋಧಿಸಿದರು. ಅಗಕ್ಕವಿದ್ದಲ್ಲಿ ಸಭಾಪತಿಗಳಿಗೆ ಪಾರ್ಲಿಮೆಂಟಿನ ಸಭೆಯನ್ನು ಸೇರಿಸುವ ಅಧಿಕಾರ ತಮ್ಮ ಸೂಚನೆಯಲ್ಲಿ ಕೊಟ್ಟರುವದಾಗಿ ಚೆಂಬರಲೆನರು ಸೂಚಿಸಿದ್ದರಿಂದ ಉಭಸೂಚನೆಗೆ ಬೆಂಬಲ ದೊರೆಯಲಿಲ್ಲ. ಅದೇನಿದ್ದಾಗ್ಯೂ, ಯುದ್ಧಯೋಗದ ಕುರಿತು ಬ್ರಿಟಿಶ ರಾಜಕಾರಣಿಗಳಲ್ಲಿ ಮತಭೇದವಿರುವದೆಂದು ನಾನು ಹೇಳಿದೆ. ಇಂಥ ಪ್ರಸಕ್ತಿಯಲ್ಲಿಯುದ್ಧಯೋಗದಸಮಸ್ಯೆಯನ್ನು ನಾನು ನಿಮಗೆ ಏಂಡಿಕವಾಗಿ ಕೇಗೆ ಹೇಳಲಿ? ಜರ್ಮನ್ ಸೇನಾಪತಿ ಗೋರಿಂಗರವರೂಕೂಡ ಯುದ್ಧವಾದರೆ ದಕ್ಷಿಣ ಆಫ್ರಿಕೆಯು ತಟಸ್ಥ ಉಳಿಯುವದಾಗಿಯೂ ಉದ್ಗರಿಸುತ್ತಿರೆ. ಒಟ್ಟಿನಲ್ಲಿ, ರಿಬೆನ್‌ಟ್ರೊಪರೂ, ವಿಶ್ರಾಂತಿಯನ್ನು ಫಲ್ಗುಣ ಅಂತ್ಯಗೊಳಿಸಿ ಬರ್ಲಿನ್‌ಕ್ಕೆ ಬಂದು, ಗೌಪ್ಯದಿಂದ ಯಾವತ್ತೂ ವಿಷಯಗಳನ್ನು ಸಮಾಲೋಚಿಸಿದರು. ಬ್ರಿಟಿಶ-ಫ್ರೆಂಚರಿಗೂ, ರುಸ್ಸಿರಿಗೂ ಒಡಂಬಡಿಕೆಯಾಗಿ ಪೋಲಂಡ ಮೊದಲಾದ ದೇಶಗಳಿಗೆಚಿರಂಗಬಲದಸಹಾಯಕೊಡಬೇಕೆಂದು ನಿಶ್ಚಯವಾದರೆ, ಬೃಹಜ್ಜರ್ಮನಿಯೋಜನೆಗೆ ಬಾಧೆ ಬಂತೆಂದು ಹಿಟ್ಲರ್-ರಿಬೆನ್‌ಟ್ರೊಪರವರು ಎಣಿಸಿ, ಆ ಕುರಿತು ಕೈಕೊಳ್ಳಬೇಕಾದ ಉಪಾಯ ಆಲೋಚಿಸಿದರಾಗಿ ಸುದ್ದಿಗಾರರು ತರ್ಕಿಸುತ್ತಾರೆ. ಜರ್ಮನಿಯಲ್ಲಿ ಸದ್ಯಕ್ಕೆ ಸೈನ್ಯ ಇಲಾಖೆಯ ತಾಲೀಮು ನಡೆಯಲಿಕ್ಕಿದೆ. ೧೫೦೦೦ ಚಿಚ್ಚಾಕು ವೈಲು ಪ್ರದೇಶದಲ್ಲಿ ಈ ತಾಲೀಮು ನಡೆಯುವದು ಇನ್ನು ದೊಡ್ಡ ಪುನರಾಣದ ಮೇಲೆ ಯುದ್ಧ ತಾಲೀಮು ಈ ತನಕ ನಡೆಯಲಿಲ್ಲೆಂದು 'ಡೈಟರ್' ಸಜ್ಜಿಗಾರರು ತಿಳಿಸುತ್ತಿರೆ. ಈ ತಾಲೀಮು ಪೋಲಂಡದ ಗಡಿಪ್ರಾಂತಿನ ವರೆಗೆ ವ್ಯಾಪಿಸುವದೆಂದು ಹೇಳುತ್ತಾರೆ. ತಾಲೀಯೆದ್ದೆಯೂ ಇದೇ ಸಮಯ ೧೦೦೦೦ ಚಚ್ಚಾಕು ವೈಲು ಪ್ರದೇಶದ ಮೇಲೆ ೫೦೦೦೦ ಸೈನಿಕರು ಯುದ್ಧ ತಾಲೀಮು ಮಾಡಲಿದ್ದಾರಾಗಿ ಪ್ರಕಟವಾಗಿದೆ. ಇತಾಲಿಯೆಗಣ್ಣ ಯುದ್ಧತಾಲೀಮಿಗಾಗಿ ಜರ್ಮನ್ ಸೈನ್ಯಾಧಿಕಾರಿ ಮಾಡಿಕಡದ ಮುಖ್ಯಾಧಿಕಾರಿಗಳಾದ ಸೇನಾಪತಿ ಹೆಲ್ಮರರವರು ಹೋಗುವವರಿದ್ದಾರೆ. ಫ್ರಾನ್ಸ ದೇಶದ ಮೇಲಿಂದ ಶತ್ರುದಾಳ ಮಾಡಬರುವ ಶ್ರದಿಂದು ಎಣಿಸಿ, ಅವರಿಗೆ ಇದಿರಾಗಲೋಸಲುಗಾ ಇತಾಲಿಯ ಸೈನಿಕರು ಥಾವಿಸಿವರು. ತಾಲೀಮಿನಲ್ಲಿಯೂ ಸ್ಪೈಂಚರಿದೇ ಶತ್ರುತ್ವವನ್ನು ಮುಸುಲಿಪಿಯುವರು ಎಣಿಸುತ್ತಾರೆಂದು ತಿಳಿದು, ನಾನು ತೀರ ಗಂಭೀರನಾಗಿದ್ದೇನೆ. ನಮ್ಮ ಬ್ರಿಟಿಶ ಸಾಮ್ರಾಜ್ಯ ಸರಕಾರದ ವರೂ ತಟಸ್ಥರಲ್ಲ. ಹಿಂದುಸ್ಥಾನದಿಂದ ೫೦೦೦ ಸೈನಿಕರು ಇನ್ನೊಂದೆರಡು ದಿನಗಳಲ್ಲಿ ಸುಯೇಜಗೆ ತಲ್ಪುತ್ತಾರೆ. ಇಜಿಪ್ತದೊಳಗೆ ಸೈನ್ಯಬಲ ಇಮ್ಮಡಿ ಮಾಡಲಿಗಾಗಿದೆ. ಹಾಗೆಯೇ ಮಲಯಾ ಕಡೆಗೂ ನಮ್ಮ ಹಿಂದುಸ್ಥಾನದಿಂದ ಸೈನಿಕರು ರವಾನಿಸಲ್ಪಟ್ಟಿದ್ದಾರೆ. ಭೂಮಧ್ಯ ಸಮುದ್ರದೊಳಗೆ ಜಲಸಾಮಗಳ ಕಾವಲಿದೋಗಾಗಿದೆ. ಹಿಂದುಸ್ಥಾನದೊಳಗೆ ವಿಮಾನಗಳ ಹಲ್ಲೆಯಾದರೆ ಆತ್ಮರಕ್ಷಣೆಗಾಗಿ ಕೈಕೊಳ್ಳಬಕ್ಕ ಉಪಾಯಗಳ ಚರ್ಚೆ ನೊನ್ನೆ ಗುರುವಾರ ಮುಂಬಯಿಯಲ್ಲಿ ಗೃಹಮಂತ್ರಿಗಳಾದ ನಾ| ಮಾಕಿಯವರು ಮುಂಬಯಿಗಾರಿನ ಮುಖ್ಯ ಮುಖ್ಯ ಅಧಿಕಾರಿಗಳೊಡನೆ ಚರ್ಚಿಸಿದರು. ಬೆಳಗಾವಿಯಲ್ಲಿ ವೈಮಾನಿಕ ಹಲ್ಲೆಗಳಂದ ಸಂರಕ್ಷಣ ಮಾಡಿಕೊಡಕ್ಕಾಗಿ ಶಿಕ್ಷಣ ಕೊಡುವ ಶಾಲೆ ತೆರೆಯೋಜನೆಗಿದೆ. ಇದೆಲ್ಲದರ ಗುರಿಯೇನೆಂದು ನೀವೇ ತಿಳಿದುಕೊಳ್ಳಿ.

ಸ್ಥಾನಿಕ ವೃತ್ತಾಂತ.

ಕುಮಟಾ— ಶುಕ್ಲಾ ನಕ್ಷತ್ರವು ಕೊನೆಯ ವರೆಗೂ ನೋಸ ಮಾಡಿತು ಅಷ್ಟೇಪಾ ನಕ್ಷತ್ರ ಪೂ ಹಾಗೆಯೇ ಮಾಯುತ್ತ ದೇನೆಂದು ಸಂಶಯ ಬರುತ್ತದೆ ಶನಿವಾರ ಮುಂಜಾನಿನಿಂದ ಮಾತ್ರ ಮೇಲಿಂದ ಮೇಲೆ ಸುರಿಯಹತ್ತಿದೆ ಆದರೂ ಈ ಮಳೆಯಲ್ಲಿ ವಿಶೇಷ ಜೀವನಶಕ್ತಿ ಶನಿವಾರ ಇಡೀ ದಿನ ಬಿದ್ದ ಮಳೆ ಬರೀ ೦ ೮೨ ಇಂಚು ಇರುತ್ತದೆ! ಮಳೆಯಿಲ್ಲದೆ ಭತ್ತದ ಪೈರಿಗಲು ಕೊಡಾಗಿವೆ ಗದ್ದೆಗಳಲ್ಲ ಒಣಗಿಹೋಗಿವೆ ಎಲ್ಲೋ ಗದ್ದೆಗಳಲ್ಲಿ ನೀರಿ ಲ್ಲದ್ದರಿಂದ ನೆಟ್ಟಿಯಾಗದೆ ಬಿದ್ದಿದೆ ಆಂತು ಈ ವರ್ಷದ ಮಳೆಯ ಲಕ್ಷಣಗಳನ್ನು ನೋಡಿದರೆ ಸಾಲ್ಕಾರು ಆಣೆ ಬೆಳೆ ಬಂದೀತೋ ಇಲ್ಲವೋ ಕಂದೇಹವಿದೆ ಮೇಲಾಜನು ಇನ್ನಾದರೂ ಕೃಪೆತೋರಿ, ಸಂಯಾಗಿ ಮಳೆ ಸುರಿದು ಒಕ್ಕಲಿ ಗರಿಗೆ ಕಾಪಾಡಬೆಂದು ಹಿಂದೆಗಳತ್ತೇವೆ ಈ ವರ್ಷ ಬರೀ ೨-೬೪ ಇಂಚು ಮಳೆಯಾಗಿದೆ ಈ ತನಕ ಬಿದ್ದ ಮಳೆ ೭೬-೦೩ ಇಂಚು ಆಗಿರುವದು!(೧೯೩೮ರಲ್ಲಿ ಈ ಮುತಿ ೧೩೬ ಇಂಚು ಮತ್ತು ೧೯೩೦ರಲ್ಲಿ ೯೦ ಇಂಚು ಮಳೆ ಯಾಗಿತ್ತು) ಊರಲ್ಲೂ ನೆರೆಪಿಸೆಯ ಹಳ್ಳಿಗಳಲ್ಲೂ ಜ್ವರ, ಬಟ್ಟೆಹೊರಕರದೆ ಮುಂತಾದ ಚಿಕ್ಕ ಪುಟ್ಟ ಬೇನೆಗಳು ಹಬ್ಬಿಕೊಂಡಿವೆ

ಇಜೇ ಅಗಸ್ಟ ತಾ ೧೬ಂದ ಎಲ್ಲ ಶಾಲಿಕ ಕಚೇರಿ ಗೆಳೂ ಮುಚ್ಚಿ ಇಂಗಲೆಯ ಕಚೇರಿಗಳೂ ಶನಿವಾರ ದಿನ ಮುಂಜಾನೆ ಆರಿಂದ ೧೧೧೪ ವರೆಗೆ ಕೆಲಸ ಮಾಡತಕ್ಕದ್ದೆಂ ಪ ಜಿಲ್ಲಾಧಿಕಾರಿಗಳು ಹೊರಡಿಸಿದ್ದಾರೆ ಶನಿವಾರ ಮಧ್ಯಾಹ್ನ ಕಚೇರಿಗಳಿಗೆ ಸೂಟಿ ಕೊಡಲಾಗಿದೆ

ರಾಜಾರಾಮ ಶ್ಯಾನಭೋಗ ಭಟ್ಟ M Sc (Tech) ಇವರು ತಾ ೧೨ ೧೯೩೯ನೇಗೆ ಮಂಬಯಿ ಯಿಂದ ಸತ್ಯ ಬರೆದು ತಿಳಿಸುವದೇನಂದರೆ — ನಾನು ಇಂಗ್ಲಂಡಿಗೆ ಹೋಗುವ ಮುಂಚೆ ನನ್ನನ್ನು ಅಭಿನಂದಿಸಲಿಕ್ಕಾಗಿ ಕುಮಟೆಯ ನ ೧೦೪ರ ಸಭೆಯನ್ನು ನಮಂತ್ರಿಸಿದ ರಾ! ನರಸಿಂಹ ಗೋವಿಂದ ಶಾನಭಾಗ ವಕೀಲ ಇವರಿಗೂ, ಆಧ್ಯಕ್ಷಸ್ಥಾನವನ್ನು ಅಲಂಕರಿಸಿ ಸಭೆಯ ಕೆಲಸವನ್ನು ಚೆಂದಗಾಣಿಸಿದ ರಾ! ಜನಾರ್ದನ ಶಿವ ಪಂಡಿತ ವಕೀಲ ಇವರಿಗೂ, ನನ್ನ ಬಗ್ಗೆ ವಾತ್ಸಲ್ಯದಿಂದಲೂ ಪ್ರೀತಿಯಿಂದಲೂ, ಆದರದಿಂದಲೂ ಭೂರಿ ಮಾಡಿದ ರಾ! ಶ್ರೀಪಾದರಾಜ ಕಲ್ಲಾಪುರಿ ವಕೀಲ, ರಾ! ಮಾಧವ ಮಂಜನಾಥ ಶಾನಭೋಗ ವಕೀಲ (ಕಾರವಾರ), ರಾ! ಕೇಶವ ಉಪೇಂದ್ರ ಭಟ್ಟ ವಕೀಲ, ವೇಳೆ ವಿದ್ದಲು ಯಾಕೆ ಸದ್ಭಾಷಿ ಭಟ್ಟ ಕಾಶಾಲ ಇವರಿಗೂ, ಸಭೆಗೆ ಬಂದು ಅಭಿನಂದಿಸಿದ ರಂ! ಕಾಗಾಲ ಗೋವಿಂದ ಅನಂತ ಪೈ, ಸಮಾಜಿವಾದ ವೀಕನಿ, ಬಸ್ತಿ ಮಹಮೂದ ಸಾಹೇಬ ನೊದವಾದ ಕುಮಟೆಯ ನಾಗರಿಕರಿಗೂ ನಾನು ಕುಂಬು ಅಭಾರಿಯಿದ್ದೇನೆ

ಶ್ರೀ ಕ್ಷೇತ್ರ ಯಾಣದ ಭೈರವೇಶ್ವರ ದೇವರ ಗುಡಿಯು ಮುಂದೆ ಇದೇ ಬರುವ ನಜ ಶ್ರಾವಣ ಪ! ಸಮಿಯಿಂದ ಪ್ರ ೧೩ರಿಯ ವರೆಗೆ ಶ್ರೀ ಸನ್ಮಧ್ವ ಶಾರ್ಯದರ್ಶಿ ಮಂಡಳಿಯು ವರಪಾಗಿ ಶ್ರೀರಾಮ ಸಶ್ರಾದ್ಧ ಉತ್ಸವ ಜರುಗಲಿದೆ ಯಷ್ಟೇ ಸದರಿ ಧರ್ಮಕಾರ್ಯಕ್ಕೆ ಸಾನುಸ್ತ ರಾಮಭಕ್ತ ರೂ ಧರ್ಮಾಭಿಮಾನಿಗಳೂ ತನು ಮನ-ಧನದಿಂದ ನೆರ ವಾಗಲೇಕಾಗಿ ಮಂಡಳಿಯವರು ವಿಜ್ಞಾಪಿಸುತ್ತಾರೆ ಮಂಡ ಳಿಯು ಕೈಕೊಂಡಿರುವ ಈ ಸತ್ಕಾರ್ಯಕ್ಕೆ ಧನಸಹಾಯ ಮಾಡಲಿಚ್ಛಿಸುವವರ ಅನುಕೂಲತೆಗಾಗಿ ಕುಮಟಾ ಆರ್ಯ ಸಮಾಜದ ಕಛೇರಿ ಒಂದು ರೀತಿ ಹಾಗೆ ತೆರೆಯಲ್ಪಾಗಿದೆ ಇಷ್ಟವಿರುವ ಈ ಜಿಲ್ಲೆಗೆ ತಮ್ಮ ತಮ್ಮ ಹಣ ತುಂಬಲಿಹುತ್ತದೆ ಇಷ್ಟವಿದೆ ಈ ಕೆಲಗೆ ಇಂಚಿನಿದರೆ ಬಳಿ ವಸೂಲ ಕೊಟ್ಟು ಪಾವತಿ ತಕ್ಕೊಳ್ಳಬಹುದು ಕುಮಟೆಯ ಉಡುಪಿ ಪಾಸಾ ವಳಿಯ ರಾ! ಶ್ರೀನಿವಾಸ ವೈದ್ಯ, ಕುಮಟಾ ಸುಬರಮ್ಯ ಭಿಂಗ ಯೂನಾಯನ್ನದ ೦ ಬಿ ಎಸ್ ಕಟ್ಟಿ, ಯಲವಳ್ಳಿ, ಕಬೇಲ, ರಾ! ವಿ ವಿ ಭಟ್ಟ ತೊಂಡಕೆರೆ ಮುಡೂರ, ಪಂಚಟ ಪಟೇಲ, ಸಾಲಕೋಡ ಸಹಕಾರಿ ಸಂಘದ ಕಾರ್ಯದರ್ಶಿ ರಾ ಸಿನಾಯಕ ಭಟ್ಟ ಬೋಳಗೆರೆ, ಮಗ್ಗೆಯ ರ ಸರಮೇಶ್ವರ ಹೆಗಡೆ ವರ್ಕರೆ, ಮುಗ್ತಾ ಸಹಕಾರಿ ಸಂಘದ ಕಾರ್ಯದರ್ಶಿ ರಾ! ಸುಬ್ರಾಯ ಹೆಗಡೆ, ಕರ್ಕಿಯ ರಾ ಬಾಳೆಹಿತ್ಲ ದೇವರು ಭಟ್ಟ, ಕರ್ಕಿಯ ರಾ! ವೆಂಕಟ್ರಮಣ ಪುರಿ ಭಟ್ಟ, ಮಾಗೈಯ ರಾ ಸುಬ್ರಹ್ಮಣ್ಯ ವೆಂಕಟ್ರಮಣ ಭಟ್ಟ ಮತ್ತು ಹೊಸ್ಕೇರಿ ಪಟೇಲ, ಈ ರೀತಿ ಶ್ರೀ ಸನುರ್ಥ ಕಾರ್ಯದರ್ಶಿ ಮುಂಡಳದವರು ತಿಳಿ ಸುತ್ತಾರೆ

ಸ್ಥಾನಿಕ ವರ್ತಕರೊಬ್ಬರು ಬರೆಯುವದೇನಂದರೆ — ಇಲ್ಲಿಯ ವರ್ತಕರೂ ಬಲಾಬರೂ ಪ್ರತಿಯೊಂದು ವೈವಹಾರ ದಲ್ಲಿ ಧರ್ಮಾದಾಯವೆಂಬ ಮಾದಾಟಕ್ಕೆ ಸರಕುಗಳನ್ನು ತರ್ಕಿಯಾಂದು ಬಂದವರ ಕಡಯಿಂದ ಕೆಲವೊಂದು ಪ್ರಮಾ ಣದಿಂದ ಹಣ ಮುರಕೊಳ್ಳುತ್ತಿದ್ದುದು ಜನರು ಬಲ್ಲಾದ ವಿಷಯ ಅಡಿಕೆ, ಉಳುವೆಣಸು, ಮೆಣಸಿನಕಾಯಿ, ಅಕ್ಕಿ ಮುಂತಾದ ಭಟ್ಟಿದ ಮೇಲಿಂದ ಮಾದಾಟಕ್ಕೆ ಬರುವ ಜೀನ ಸುಗಳಿಗೆ ಬಂಡಿ ೧ಕ್ಕೆ ೪ ಆಣೆಯಂತೆ, ಅಕ್ಕಿ ಪಗ್ಗೆರೆ ಆಳೆ ಯಾಯ ಜೀನಸಿಗೆ ಕ್ರಯದ ಮಾನದಿಂದ ೮೦ ೧೦೦ಕ್ಕೆ ೧೦ ಆಡಿಯಂತೆ ಧರ್ಮಾದಾಯ ಮುರಕೊಳ್ಳುತ್ತಾರೆ ವಲಾಬರು ಸದರಿಯಂತೆ ಗಿರಾಕಿಗಳಿಂದ ಧರ್ಮಾದಾಯ ಮುರಕೊಂಡು ಅಯಾ ಜೀನಸುಗಳನ್ನು ಕೊಂಡುಕೊಳ್ಳುವ ವ್ಯಾಪಾರಿಗಳಿಗೆ ಕೊಡುತ್ತಾರೆ ಆ ವ್ಯಾಪಾರಿಗಳು ಮುಂದೆ ಆ ಧರ್ಮಾದಾಯವನ್ನು ಅಯಾಯ ದೇವರಿಗೆ ಇಜ್ಜವೆ ದೇವರ ವರ್ಷಾಶದ ವಸೂಲಿಗೆ ಬರುವ ಜನರಿಗೆ ವಸೂಲ ಕೊಡತಕ್ಕದ್ದಾರಿರುತ್ತದೆ ಭಟ್ಟಿದ ಮೇಲಿನ ಸರಕುಗಳ ವರಾಬಿದ್ದಲ್ಲಿ ಮುರಕೊಳ್ಳುವಾಗಿನ ಧರ್ಮಾದಾಯಕ್ಕೆ ಪಾಡಿಕೆಯಲ್ಲಿ "ಖಂಡಿ ಧರ್ಮಾದ" ಎಂದು ಹೆಸರಿದೆ ಈ ಧರ್ಮಾದಿ ಯಿದೇಗಿಂದಿ ಗೋಕರ್ಣದ ಶ್ರೀ ಮಹಾಬ ಲೇಶ್ವರ, ಕುಮಟೆಯ ಶ್ರೀ ಕುಂಭೇಶ್ವರ, ಶ್ರೀ ವೆಂಕಟ ರಮಣ, ಶ್ರೀ ಶಾ ರಾಮ, ಗುಜರಾತಿಗಳ ಹನೇಲಿ, ಹೈನ ಬಸ್ತಿವೇಣ, ಶ್ಲೋಣದಲ್ಲಿರುವ ಜಂಗಮ ಮಕ, ದ್ವಾರಕೆಯ ಶ್ರೀ ಕೃಷ್ಣ, ಶ್ರೀನಾಥದಲ್ಲಿರುವ ಶ್ರೀನಾಥ ದೇವ ಈ ದೇವಾಲಯಗಳಿಗೆ ಮತ್ತು ಶಾಲೆ ಮತ್ತು ಸದಾ ವರ್ತ ಈ ಸಂಸ್ಥೆಗಳಿಗೆ ನಿರ್ದಿಷ್ಟ ಅಂಡಾವಾರಿಯಂತೆ ಹಣ ಸಲ್ಲತಕ್ಕದ್ದಾರಿರುತ್ತದೆ ವ್ಯಾಪಾರಿಗಲು ತಮ್ಮ ಕೆಜೆ ಜಮೆಯಾದ ಧರ್ಮಾದಾಯವನ್ನು ತಮ್ಮ ಲೆಕ್ಕಪಲ್ಲಿ ಆಯಾ ದೇವರ ಇಜ್ಜವೆ ಸಂಸ್ಥೆಗಳ ಖಾತೆಗಳನ್ನಿಟ್ಟು ಅಂಕಾವಾರಿಯಂತೆ ಆಯಾ ಖಾತೆಗೆ ಜಮೆ ಮಾಡಬೇಕು ಮತ್ತು ವರ್ಷದ ಕೊನೆಗಾಗಲಿ ಎರಡು ಮೂರು ವರುಷಕ್ಕೊಮ್ಮೆ ಯಾಗಲಿ ಆಯಾ ದೇವರಿಗೆ ಅದನ್ನು ಮುಟ್ಟಿಸಬೇಕು ಹೀಗೆ ಹಿರಿಯರ ಕಾಲದಿಂದ ನಡೆದು ಬಂದ ಪದ್ಧತಿಯಾಗಿರುತ್ತದೆ ಎಷ್ಟೋ ವರ್ಷಗಳ ಹಿಂದೆ ಹಿರಿಯರು ಶ್ರೀ ಮಹಾಬಲೇ ಶ್ವರ, ಶ್ರೀಕುಂಭೇಶ್ವರ ಶ್ರೀಜಂಗಮ ದೇವ ಮತ್ತು ಸದಾ ವರ್ತ ಈ ನಾಲ್ಕು ದೇವತಾ ಸಂಸ್ಥೆಗಳಿಗೆ ಸಲ್ಲತಕ್ಕ ದರ್ಮಾ ದಾಯವನ್ನು ವ್ಯಾಪಾರಿಗಳ ಕಡೆಯಿಂದ ವಸೂಲ ಮಾಡಿ ಅದರ ಯೋಗ್ಯ ವಿನಿಯೋಗ ಮಾಡುವ ದೆಸೆಯಿಂದ ಸ್ಥಾನಿಕ ಗ್ಯಾಪಾರಿ ಪ್ರಮುಖರದೊಂದು ಮಂಡಳವನ್ನು ನೇಮಿಸಿದ್ದರೂ ಇದಕ್ಕೆ ಜನರು "ಪಂಚ-ಧರ್ಮಾದಕಮಿ ಟಿ"ಯೆಂದು ಹೇಳುತ್ತಾರೆ ಹಾಲಿ ಈ ಕಮಿಟಿಯಲ್ಲಿ ರಾ! ಅಣ್ಣಾಜಿ ರಾಮಚಂದ್ರ ಪೈ, ಗಂಗಾಧರ ಗಣಪಯ್ಯ ಶಾನ ಭಾಗ, ಸೀತಾರಾಮ ಗಣಪತ ಭಾಗವತ, ಸುಂದರಾಪ ಹರಿಪಾಪ ಶೇಟ್ಟಿ, ಪುರುಷೋತ್ತಮ ಮಹಂಸಂಜ ಶೇಟ್ಟಿ ಈ ಜನ ರಿರುತ್ತಾರೆ ಈ ಕಮಿಟಿಯವರು ಮೇಲೆ ಹೇಳಿದ ನಾಲ್ಕೂ ಸಂಸ್ಥೆಗಳ ಧರ್ಮಾದಾಯ ಹಣವನ್ನು ವಸೂಲ ಮಾಡಿ ಅದ ನ್ನು ಬಡ್ಡಿಗೆ ಹಚ್ಚತಕ್ಕದ್ದು, ಸದಾವರ್ತಸಂಸ್ಥೆಯ ಬಡ್ಡಿಯಿಂದ ಸದಾವರ್ತ ಸಂಸ್ಥೆಗಳಿಗೆ ಅಯಾ ದೇವರ ಸೇವೆ ವಿನಿಯೋಗ ಗಳ ಬಗ್ಗೆ ವಿನಿಯೋಗಿಸಕ್ಕದ್ದು, ಎಂದು ಕಮಿಟಿ ಯ ನೇಮಣೂಕಿಯ ಕಾಲಕ್ಕೇ ಗೊತ್ತಾಗಿತ್ತು ಇತ್ತೆಗಾಗಿ ೧೫ ೨೦ ವರ್ಷಗಳಿಂದ ಈ ಕಮಿಟಿಯವರು ಮನಸ್ಸೀ ಕಾರಕಾರ ನಡಿಸುತ್ತಾರೆ, ಹಿಂದೆ ಕಮಿಟಿಯ ತಾಬೆಯ ಲ್ಲಿದ್ದ ಧರ್ಮಾದಾಯ ಹಣವು ಕೈ! ಹಂ ದಯಾಳ ಕೆಟ್ಟ ಇವರ ಹತ್ತರ ಇರುತ್ತಿತ್ತು ಕೈ! ಹಂ ಕೆಟ್ಟರು ಕೊಂಡ ತರುವಾಯ ಅವರ ಮನೆಯ ರಾ! ಜಮುದಾರ ಕೆಟ್ಟರು ತಮ್ಮ ಕೆಡೆಗಿದ್ದ ಕಮಿಟಿಯ ಹಣವನ್ನೂ ಲೆಕ್ಕದ ಪುಸ್ತಕ ಗಳನ್ನೂ ರಾ! ಅಣ್ಣಾಪ್ಪ ಪೈರ ವಶಕ್ಕೆ ಒಪ್ಪಿಸಿದ್ದಾರೆಂದು ತಿಳಿಯುವದಕ್ಕೆ ಕಮಿಟಿಯವರು ಶ್ರೀ ಮಹಾಬಲೇಶ್ವರ ದೇವಸ್ಥಾನಕ್ಕೆ ಸಜ್ಜತಕ್ಕೆ ಹಣ ಸಲ್ಲಿಸಿದೆ, ಶ್ರೀ ದೇವಸ್ಥಾನದ ಮೊಕ್ತೇಸರರಿಗೆ ಕಾರವಾರ ಕೋರ್ಟಿನಲ್ಲಿ ದಾವೆ ಮಾಡಲು ಹಬ್ಬಿಸಿದ ಸಂಗತಿ ಜನರಿಗೆ ಗೊತ್ತಿದ್ದ ವಿಷಯವೇ ಸರಿ ಈ ದಾವೆಯಲ್ಲಿ ಕೆಳ ಕೋರ್ಟಿನ ವರು ಶ್ರೀ ದೇವರ ಪರವಾಗಿ ಕೊಟ್ಟ ತೀರ್ಪನ್ನು ಹೈಕೋರ್ಟಿನವರು ಯಾವದೋ ಒಂದು ಕಾಯಿದೆಯ ದೋಷ ವಿರುವಲ್ಲಿ ಕಂಡುಬಂದ ಮೂಲಕ ತಿರಸ್ಕರಿಸಿದ ಸಂಗತಿ ವೃತ್ತ'ದ ವಾಚಕರು ಅಂತಿರಬಹುದು ಆ ಕೋರ್ಟಿನ ಮೇಲಾದರೂ ಕಮಿಟಿಯವರು, ಶ್ರೀ ಮಹಾಬಲೇಶ್ವರ ದೇವರಿಗೆ ಸಲ್ಲತಕ್ಕ ಹಣ ಸಲ್ಲಿಸಿದ್ದಾರೋ ಇಲ್ಲವೋ ಶ್ರೀ ಮಹಾಬಲೇಶ್ವರನೇ ಬಲ್ಲನು' ಶ್ರೀ ಕುಂಭೇಶ್ವರ ದೇವರಿಗೆ ಸಲ್ಲತಕ್ಕ ಹಣ ಸಲ್ಲಿಸಿದ್ದಾರೋ ಇಲ್ಲವೋ ಶ್ರೀ ಕುಂಭೇಶ್ವರನೇ ಬಲ್ಲನು' ಶ್ರೀ ಕುಂಭೇಶ್ವರ ದೇವರಿಗೆ ಸಲ್ಲತಕ್ಕ ಹಣ ಕಮಿಟಿಯು ಹತ್ತರನೇ ಇದೆ ಕಮಿಟಿಯು ಪರು ಸದರಿ ದೇವಸ್ಥಾನದಲ್ಲಿ ಏನೊಂದೂ ವಿನಿಯೋಗ ಮಾಡಿಸಿದ್ದು ತೋರಿಬರುವದಿಲ್ಲ ಶ್ರೀ ಜಂಗಮ ಮಠದ ಹಾಡೂ ಅದೇ! ಹಿಂದೆ ಕುಮಟೆಯ ವ್ಯಾಪಾರಿ ಉತ್ಕರ್ಷಾ ವಸ್ಥೆಯಲ್ಲಿ ನಡೆಯುತ್ತಿದ್ದಾಗ ಕಮಿಟಿಯು ಬಲಿ ಸಶಕ್ತಾ ಧರ್ಮಾದಾಯಗಳ ಬಾಬತು ಸಾವಿರಗಟ್ಟಲೆ ರೂಪಾಯಿ ಕೂಡಿತ್ತು ಬಡ್ಡಿಸಹಿತ ಅದು ಈಗ ರೂ ೫೦ ಸಾವಿರಕ್ಕೆ ಮಿಕ್ಕಿರಬೇಕಾಗಿ ಬಲ್ಲವರು ಹೇಳುತ್ತಾರೆ ಅದರಿ ಈ ಹಣ ಈಗ ಎಲ್ಲಿದೆ, ಯಾವ ಬೇಂಕಿನಲ್ಲಿ ಅಥವಾ ಸೊನ್ನಾಬಿ ಯಲ್ಲಿದೆ, ಅಥವಾ ಯಾವ ಸಾಲಗಾರರಿಗಿಗೆ ಎಂಥ ಭದ್ರತೆ ಗಳನ್ನು ಕೊಂಡು ಸಾಲಾಗಿ ಕೊಟ್ಟಿದೆ? ಎಂಬ ವಾಸಿಕತೆ ಸಿಗುವದು ಕಷ್ಟವಾಗಿದೆ ಕಮಿಟಿಯ ಸದಸ್ಯರ ಹತ್ತರ ಕೇಳಿದರೆ ಒಬ್ಬರಿಗೊಬ್ಬರು ಬೊಟ್ಟು ತೋರಿಸುತ್ತಾರೆ! 'ಲೆಕ್ಕ ಕೇಳಿದರೆ, ಕಾರವಾರ ಕೋರ್ಟಿನವ್ವದೆಯೆಂದು ಹೇಳುತ್ತಾರೆ! ಹಣ ಕೊಟ್ಟು ವರ್ಷ ಕರಗಾಗಲಿ, ದಲಾಲರಿಗಾಗಲಿ ಏನೊಂದೂ ಪತ್ರೆ ಹತ್ತು ಪದಿ ಸ್ಲಿ ತಮ್ಮ ಬಳಿ ಇದ್ದ ಧರ್ಮಾದಾಯ ಹಣವು ತಮ್ಮ ಸ್ವಂತ ಸೊತ್ತು ಎಂಬಂತೆ ಸದಸ್ಯರು ನಡೆಯುತ್ತಾರೆ ಸಾರ್ವ ಜನರ ಹಣದ ವ್ಯವಸ್ಥೆ ಮಾಡುವಗೋಸ್ಕರ ನೇಮಿಸಲ್ಪಟ್ಟ ವಿಶ್ವಾಸನಿಧಿ (Trustee) ಗಳ ಕರ್ತವ್ಯವು ಬಹಿರಂಗ ವಾಗಿ ನಡೆಸು ಸಂಬಂಧಪಟ್ಟ ಯಾವನ್ನೂ ಜನರಿಗೆ ನೋಡ ಸಿಗುವಂತೆ ಇರತಕ್ಕದ್ದು ಅವಶ್ಯವಿರುತ್ತದೆ. ಆದರೆ ನಮ್ಮ ಕಮಿಟಿಯ ಸದಸ್ಯರಿಗೆ ಈ ವ್ಯವಹಾರ ನೀತ ಗೊತ್ತೇ ಇಲ್ಲ' ಆದ್ದರಿಂದ ಕಮಿಟಿಯ ಸಮಸ್ತ ವರ್ತಕರೂ, ದಲಾ ಲರೂ ಒಬ್ಬಾಗಿ ತಾವು ಕಮಿಟಿಯು ಕಟ್ಟಿ ಒಪ್ಪಿಸಿದ ಯಾವ ತ್ತೂ ಹಣಗಳ ಯೋಗ್ಯ ವ್ಯವಸ್ಥೆಯಾಗುವಂತೆ ಪ್ರಯತ್ನಿಸ ಬೇಕಾಗಿ ಇನ್ನವಸುತ್ತೇನೆ ದರ್ಮಾದಾಯದ ಹಣವು ಭದ್ರವಾದ ಬೇಂಕುಗಳಲ್ಲಾಗಲಿ, ಸಂಘಗಳಲ್ಲಾಗಲಿ ವಿನಿ ಯೋಗಿಸಲ್ಪಡುವಂತೆ, ಆಯಾಯ ದೇವರ ಹಣವು ಆಯಾ ದೇವರ ವಿನಿಯೋಗಕ್ಕಾಗಲಿ, ಜೀರ್ಣೋದ್ಧಾರಕ್ಕಾಗಲಿ ವೆಚ್ಚವಾಗುವಂತೆ ವ್ಯವಸ್ಥೆ ಮಾಡಬೇಕು, ಕಮಿಟಿಯು ಲೆಕ್ಕಪತ್ರವು ವರ್ಷಕ್ಕೊಮ್ಮೆಯಾದರೂ ಜನರಿಗೆ ನೋಡ ಸಿಗುವಂತೆ ವ್ಯವಸ್ಥೆಯನ್ನಿಡಬೇಕು, ಹಾಗು ಕಮಿಟಿಯಲ್ಲಿ ಧರ್ಮಾದ ಯನವು ತೆರುವ ಜನರ ಪ್ರತಿನಿಧಿಗಳು ಸೇರಬೇಕೆ ಯಾಗುವಂತೆ ಪ್ರಯತ್ನಿಸಬೇಕು ಈ ರೀತಿ ಪ್ರಯತ್ನ ಮಾಡ ಬಿದ್ದರೆ ಸಾವಿರಾರು ಜನರಿಂದ ಒಟ್ಟುಗೂಡಿಸಿದ ಧರ್ಮಾ ದಾಯ ಹಣವು ಧರ್ಮಕ್ಕೆ ವಿಚ್ಛಿನ್ನವಾಗದೆ, ಇಷ್ಟೆಲ್ಲೇ

ವಣಯನಾಗಿ ಹೋಗುವದು ದಲಾಲರಿಗೂ ಒಂದು ವಿನಂತಿ ಮಾಡಬಯಸುತ್ತೇನೆ ವ್ಯಾಪಾರದ ಹಿಂದಿನ ಉತ್ಕರ್ಷವು ಈಗ ಇರುವದಿಲ್ಲಿ ವ್ಯಾಪಾರಿಗಳು ಈಗ ಆರ್ಥಿಕ ದುಸ್ಥಿತಿಗೆ ತಂದಾಗಿದ್ದಾರೆ ಕಾರಣ ಹೊಸ ಪರಿಸ್ಥಿತಿಗನುಸಾರವಾಗಿ ಧರ್ಮಾದಾಯದ ದರವನ್ನು ಹಿಂದಿನ ದರಗಳ ಅರ್ಧಕ್ಕೆ ಇಳಿಸಬೇಕು ಇತ್ಯಾದಿ

ಹೊನ್ನಾವರ— (ತಾ ೫ ಜ ೪೯) ಮಳೆ ಬಹಳ ಮಂದವಾಗಿದೆ ಒಕ್ಕಲಿಗರು ಮೇಘರಾಜನ ಕಡೆಗೆ ದೀನ ಮುದ್ರೆಯಿಂದ ನೋಡುತ್ತಿದ್ದಾರೆ

ಇಲ್ಲಿಯ ಅರ್ಬನ್ ಸಹಕಾರಿ ಬೇಂಕಿನ ಅಧ್ಯಕ್ಷಸ್ಥಾನಕ್ಕೆ ೭ ಮತ್ತು ಕಾರ್ಯವಾಹಕ ಮಂಡಳಿಯ ೬ ಸದಸ್ಯಸ್ಥಾನಗಳಿಗಾಗಿ ೧೯ ಹೀಗೆ ೨೬ ಹುರಿಯಾಳು-ಪತ್ರಗಳು ಹಾಜರಾಗಿದ್ದುವು ಅವುಗಳಲ್ಲಿ ಅನುಕ್ರಮವಾಗಿ ೪ ಮತ್ತು ೧೦ ಅರ್ಜಿಗಳು ಮಂಜೂರು ಆಗಿವೆ ಇನ್ನುಳಿದ ೧೨ ಅರ್ಜಿಗಳು ತಿರಸ್ಕರಿಸಲ್ಪಟ್ಟವೆ. ಇಲ್ಲ ಹುರಿಯಾಳುಗಳು ಕಾಮರಾವ ವಿರ್ದಲ ಬೇಂಕಿನ ಕಾರ್ಯವಾಹಕರಿದ್ದಾರೆಂದು ಅವರ ಅರ್ಜಿಗಳು ತಿರಸ್ಕರಿಸೋಣಾಗಿನೆ ! ಇವರು ಕಳೆದ ವರ್ಷ ಕಾಮರಾವ ಬೇಂಕಿನ ಕಾರ್ಯವಾಹಕರಿದ್ದರು, ಈ ವರ್ಷ ಇವರಷ್ಟೆ ಅಲ್ಲ ಇತರೂ ಅರ್ಬನ್ ಬೇಂಕಿನ ಕಾರ್ಯವಾಹಕ ರಾಗಲು ಅತ್ಯಾತುರರಾಗಿದ್ದಾರೆ! ಇನ್ನುಳಿದ ೧೦ ಜನರು ಡಿಫೊಲ್ಟರೆಂದೂ. (ಸಾಲ ತೆರತಕ್ಕ ಅವಧಿ ಮೀರಿರಾಗಿನ್ನೂ ಸಾಲ ತೆರದೆ ಬಾಕಿ ಇಟ್ಟುಕೊಂಡವರೆಂದು) ಶಠ ಹೊಸಬರು ಕಾರ್ಯವಾಹಕರಾಗಲು ಅರ್ಹೋಗ್ಯರೆಂದು ನಿರ್ಣಯಿಸಲ್ಪಟ್ಟವ್ಯಾರೆ ರಾ॥ ಶಿವರಾವ ಶಾಸ್ತ್ರಿಯವರೂ ಈ ಡಿಫೊಲ್ಟರ ರೊಳಗಿದ್ದಾರೆ "ಡಿಫೊಲ್ಟರ" ಶಬ್ದದ ವ್ಯಾಖ್ಯೆ ಬೇಂಕಿನ ನಿಯಮಗಳಲ್ಲಿ ಕಂಡುಬರುವಲ್ಲಿ ಸ್ವತಃ ಸಾಲ ತಕ್ಕೊಂಡವರು ಅವಧಿಯಲ್ಲಿ ಸಾಲ ತೀರಿಸದಿದ್ದರೆ ಡಿಫೊಲ್ಟರಾಗುವದು ಸಹಜ ಆದರೆ ಅವರಿಗೆ ಬರೇ ಜಾಮೀನು ನಿಂತವರು ಕೂಡ ಡಿಫೊಲ್ಟರ ಸದರನಲ್ಲಿ ಬರುತ್ತಾರೋ ಹೇಗೆಂಬ ಬಗ್ಗೆ ವಾದವುಂಟಾಗಿದೆ ಬೇಂಕಿನ ಸ್ಪಷ್ಟಕ ಚಾಲಕ ರಿಂದ ಡಿಫೊಲ್ಟರೆಂದು ಶಠ ಹೊಡೆಯಲ್ಪಟ್ಟವರಲ್ಲಿ ಬಹುತೇಕ ಜನರು ಡಿಫೊಲ್ಟರ ಸಾಲಗಾರರಿಗೆ ಜಾಮೀನ ಆದವರು ಹೊರತು ಸ್ವತಃ ಸಾಲಗಾರರಿರುವದಿಲ್ಲ ವರ್ಷಗಟ್ಟಲೆ ಸಾಲ ಗಾರರ ಸಾಲದ ವಸೂಲಿಯ ವ್ಯವಸ್ಥೆ ಮಾಡಿದ ಅವರ ಜಾಮೀನದಾರರಿಗೆ ಡಿಫೊಲ್ಟರ ಎಂದು ಕಲಂಕ ಹಚ್ಚಲೆಳಸುವ ಚಾಲಕರಿಗೆ ಏನೆನ್ನಬೇಕೋ ತಿಳಿಯದು! ಚಾಲಕರು ತಿರಸ್ಕರಿಸಿದ ಹುರಿಯಾಳುಗಳು ಆ ರಜಿಸ್ಟರರ ಕಡೆ ಅಪೀಲು ಮಾಡುವವರಿದ್ದಾರೆ ಅಲ್ಲೇನು ನಿರ್ಣಯಿಸಲಾಗ ತ್ತದೋ ನೋಡಬೇಕು ಬೇಂಕಿನ ಅಧ್ಯಕ್ಷಸ್ಥಾನಕ್ಕೆ ಅಬೇವಿಸಾರರಾಗಿ ನಿಂತವರು ರಾ॥ ಸುಧಾಕ ಅನಂತ ಕಿನೆ ವಕೀಲ, ರಾ॥ ಲಕ್ಷ್ಮಣ ಶ್ರೀಧರ ವಕೀಲ, ರಿಂ॥ ವೈಕುಂಠ ಹಗುಮಂತ ಶಾನಭಾಗ ಮತ್ತು ರಾ॥ ವಾಸುದೇವ ಬಾಬುರಾವ ಶಾಮಕ, ಕಾರ್ಯವಾಹಕ ಸ್ಥಳಗಳಿಗೂ ಅಧ್ಯ ಕ್ಷಸ್ಥಾನಕ್ಕೂ ಚುನಾವಣೆಗೆ ನಿಲ್ಲಲುಮಾನ್ಯತೆ ಸಿಕ್ಕ ೧೧ ಹುರಿ ಯಾಳುಗಳಲ್ಲಿ ನಾಲ್ವರು ಹಳಬರು ಮತ್ತು ೭ ಮಂದಿ ಹೊಸಬರು ಇರುತ್ತಾರೆ

ಇಲ್ಲಿಯ ನ್ಯೂ ಇಂಗ್ಲಿಷ ಸ್ಕೂಲಿನ ಜಾಲಕರೂ ಮುಖ್ಯಾ ಧ್ಯಾಪಕರೂ ಆಗಿದ್ದ ರಾ॥ ರಂಗರಾವ ಎಸ್ ಕಾಸರಗೋಡ ಇವರು ಕಳೆದ ಬುಧವಾರ ಮುಂಜಾನೆ ೧॥ ಘಂಟೆಗೆ ಶಾಲೆ ಯ ವ್ಯವಸ್ಥಾ ಮಂಡಳದ ಸಭೆಗೆ ಹೋಗಲೆಂದು ಹೊರಾ ತ್ತಿರುವಾಗ, ಹಾದಿಯಲ್ಲೇ ಆಕಸ್ಮಾತ್ ಹೃದಯಕ್ರಿಯೆ ನಿಂತು ವೈಕುಂಠವಾಸಿಗಳಾದರೆಂದು ತಿಳಿಸಲು ಬಹಳ ವ್ಯಸ ನವಾಗುತ್ತದೆ. ವೈಕುಂಠವಾಸಿಗಳು ಹಿಂದೆ ಈ ಜಿಲ್ಲೆಯ ಮುಲ್ಕಿ ಮಾತೆಯಲ್ಲಿ ನೌಕರಿಗಿದ್ದು ಕುಮಟೆಯಲ್ಲೂ ಹೊನ್ನಾ ವರದಲ್ಲೂ ಕೆಲ ಕಾಲ ತಿರಕ್ತೀವಾರರಾಗಿದ್ದರು ಮುಂತೆ ಯಾವುದೋ ಪ್ರಕರಣದಲ್ಲಿ ಸರಕಾರದ ಮೇಲೆ ಸಿಟ್ಟಿಗೆದ್ದು ೦ ಜಿನಾಮೆ ಕೊಟ್ಟಿದ್ದರು ಆ ಮೇಲೆ ಕೆಲ ಕಾಲ ಅವರು ದೈ-ದಂಗಾರ-ರತ್ನಾದಿಗಳ ವ್ಯಾಪಾರ ಮಾಡುತ್ತಿದ್ದರು ಈ ವ್ಯಾಪಾರದಲ್ಲಿ ಅವರಿಗೆ ಬಹಳ ಹಾನಿಯೊದಗಿತು ಕೆಲ ಕಾಲ ಅವರು ಅಜ್ಞಾತವಾಸದಲ್ಲಿದ್ದಂತೆ ಇದ್ದರು ೮ ವರ್ಷಗಳ ಹಿಂದೆ ಅವರು ಈ ಊರಿಗೆ ಬಂದು ಊರ ಪ್ರಮುಖರ ಸಹಾಯದಿಂದ ನ್ಯೂ ಇಂಗ್ಲಿಷ ಶಾಲೆಯನ್ನು ತೆರೆದರು ಆ ಶಾಲೆಯು ಹೊನ್ನೆ ಹೊನ್ನೆ ವಿದ್ಯಾವಿದ್ಯಾಲಯ ದಿಂದಲೂ ಕಾಲಾ ಇಲಾಬಿಯವರಿಂದಲೂ ಹ್ಯಾಸ್ಕೂಲೆಂದು ಮಂಜೂರ ಮಾಡಲಾಗಿದೆ ಶಾಲೆಯು ಇಷ್ಟೊಂದು ಮುಂದೆ ಬರಲಿಕ್ಕೆ ಶ್ರೀ॥ ಕಾಸರಗೋಡರವರ ದೀರ್ಘೋದ್ಯೋಗ-ಸಾಹಸಗಳೇ ಕಾರಣವೆಂದು ಹೇಳಿದರೆ ತಪ್ಪಾಗು ವಂತಿಲ್ಲ ಮೈತರು ತಮ್ಮ ಬಹುತೇಕ ವೇಳೆಯನ್ನೂ ಕಕ್ಕಿ ಯನ್ನೂ ಶಾಲೆಯ ಕೆಲಸದಲ್ಲೇ ವೆಚ್ಚ ಮಾಡುತ್ತಿದ್ದರು. ಅವರ ಸ್ಮಶಾನಯಾತ್ರೆಗೆ ಇಲ್ಲಿಯ ಬಹಳ ಮಂದಿ ಸಜ್ಜನ ರೂ, ವರ್ತಕರೂ, ಉದ್ಯೋಪ್ತರುಮೂರೂ ಹೋಗಿದ್ದರು ಮೈತರ್ಕಾರ್ಯಗಳಿಗೆ ಪರಮೋತ್ಸಾಹ ತೋರಿಸಿದಂತಿಯೂ ಸಹಾಯ ಮಾಡಿದ್ದಲೂ, ಅವರ ಪಶ್ಚಾತ್ ನ್ಯೂ ಇಂಗ್ಲಿಷ ಶಾಲೆಯನ್ನು ಅವರ ಪ್ತೇ ಉತ್ಸಾಹದಿಂದ ಸಾಕಿ ಸಲಹಿ ನಡಿಸಿಕೊಂಡು ಹೋಗಲು ಅವರ ಸಹಪ್ಯೋಗಿಗಳಿಗೂ ಹೊನ್ನಾವರದ ನಾಗರಿಕ ರಿಗೂ ಶಕ್ತಿ-ಬುದ್ಧಿಗಳನ್ನೀಯಲೆಂದೂ ಪ್ರಾರ್ಥಿಸುತ್ತೇನೆ

ಕಳೆದ ಸೆಂಟಕೆಯಲ್ಲಿ ಹೊನ್ನಾವರ ಹೆಣ್ಣು ಹುಡುಗಿ ಯರ ಶಾಲೆಯ ಮುಖ್ಯಾಧ್ಯಾಪಕೆಯರು ತಮ್ಮ ಸೇವೆ ಬಂದ ಅಧಿಕಾರಗಳನ್ನು ಆಕ್ಷಗಳಿದಿರುವರೆಪ್ಪೇ ! ಆದರೆ, ಅವರೆ ಮೇಲೆ ಮಾಡಲಾದ್ದ ಆರೋಪಗಳು ಪೂರ್ಣ ನಿಜ ವಿರುತ್ತವೆಂದು ಹೊನ್ನಾವರದ ಇಬ್ಬ ಸ್ಥಾನ್ಯ ನಾಗರಿಕರು ಬರೆಯುತ್ತಾರೆ ಶಾಲಾ-ಶಿಕ್ಷಕ ರು ॥ ಕೇಸರಿರಿ ಶಾನಭಾಗ ಇವರ ಹುಡುಗಿ ಸುಪ್ರಿಯಾಯಿಗೆ ತಲೆಗೂದಲು ಹಿಡಿದು ಎಳೆದದ್ದರಿಂದ ಆಕೆಯ ಕುತ್ತಿಗೆ ಬೀಗಿತ್ತಾಗಿಯೂ, ಹಲ ವು ದಿನಗಳ ವರೆಗೆ ಅವಳು ಶಾಲೆಗೆ ಹೋಗದೆ ಮನೆಯಲ್ಲೇ ಉಳಿಯಬೇಕಾಯಿತಾಗಿಯೂ, ಈ ಸಂ॥ ಶಾಲೆಯ ಹಾಜರಿ-ಪುಸ್ತಕವನ್ನು ನೋಡಿದಲ್ಲಿ ಯಾರಿಗೂ ಮನವರಿಕೆಯಾಗುವಂತಿದೆಯಂತ ಲೂ ಓದುವರು ಬರೆಯುತ್ತಾರೆ ಮುಖ್ಯಾಧ್ಯಾಪಿಕೆಯರು ಬರೆ ಯುವಂತೆ, ಬರೇ ೪-೫ ನಿಮಿಷ ಮಾತ್ರ ಹುಡುಗಿಯಿಂಗಿ ಹೊರಸಿಲ್ಲಿಸಿದ್ದಿಲ್ಲ, ಶಾಸುಗಟ್ಟಿ ಹೊರಸಿಲ್ಲಿಸಿದ ಅನೇಕ ಉದಾಹರಣೆಗಳಿವೆ! ಈ ಬಗ್ಗೆ ಬೇಸತ್ತು ಅನೇಕ ಹುಡುಗಿ ಯರೂ ತಮ್ಮ ಶಾಲೆಗ ಹತ್ತರ ಹೂರಿಕೊಂಡ ಉದಾಹರ ಣೆಗಳಿವೆ ಮೇಲಧಿಕಾರಿಗಳಾದ, ಶಾಲಾ ಪಂಡಿತಗಳು ಪಾಲಕರಿಗೆ ಭೆಟ್ಟಿಯಾಗಿ ಕೇಳಿಕೊಂಡಲ್ಲಿ "ವೃತ್ತಿ"ದಲ್ಲಿ ಪ್ರಕ ವಾಗುವ ಬೇಕೆ ಪೂರ್ಣ ನಿರಾಶೆಯಾಗುವದೆಂದು ಅವರೂ ಪ್ರಾಮಾಯಾದೀತು, ಹೀಗಾಗದಿರಲಿ ಮುಖ್ಯಾಧ್ಯಾ ಪಿಕೆಯರು ಪೋಷ್ಯ ಮಾತೃರ ಮೇಲೆ ಹೊರಿಸಿದ ಆರೋಪ ಗಳು ಕೀರ್ತಿ ಸುಳ್ಳುಯೆಪ್ಪಾಗಿ ಇನ್ನೊಬ್ಬರು ಬರೆಯುತ್ತಾರೆ ಪೋಷ್ಯ ಮಾತೃರ ಹುಡುಗಿಗೆ ಮುಖ್ಯಾಧ್ಯಾ ಕೆಯರು ಶಾಲೆಗೆ ತಡಮಾಡಿ ಬಂದ ಬಗ್ಗೆ ೫ ೬ ಸಲ ೧! ರೂ ಫೈಟಿ ತನಕ ಹೊರಸಿಲ್ಲಿಸಿದ್ದರೆಂತಲೂ, ಒಂದು ದಿನವಂತು ಇಡೀ ಒಪ್ಪತ್ತು ಆ ಹುಡುಗಿ ಶಾಲೆಯಲಿಗೆ ಬರಗೊಡಲಿಲ್ಲವೆಂತ ಲೂ ಆವರು ತಿಳಿಸುತ್ತಾರೆ ಈ ಸಂಗತಿಯನ್ನು ತಂದೆಯು ಬಳಿ ಹೇಳಿಕೊಂಡು, ಇನ್ನುಮುಂದೆ ತಾನು ಶಾಲೆಗೆ ಹೋಗುವದಿಲ್ಲವೆಂದು ಹೇಳಿ ಅವಳು ಬಿಕ್ಕಿಬಿಕ್ಕಿ ಅತ್ತಳಂತೆ ಒಂದು ದಿನ ಆ ಹುಡುಗಿಯ ದ್ವೇಷ ಶಿಕ್ಷೆಯೆಯ ಸೇವಿಂಗ್ಸ ಬೇಂಕ ವ್ಯವಹಾರದ ಬಗ್ಗೆ ಆಂಚೆ ಕಟ್ಟೆಗೆ ಹೋಗದ್ದೆಳು ಆಕೆಯ ಕೆಲಸ ಮಾಡಿಕೊಟ್ಟು ಮೇಲೆ ಪೋಷ್ಯ ಮಾತೃರು ತಮ್ಮ ಹುಡುಗಿ ಹೇಳಿದ ಮಾತನ್ನ ವರೆಗೆ ತಿಳಿ, ಹೀಗೇಕೆ ಚಿಕ್ಕ ಹುಡುಗಿಯರಿಗೆ ಶಾಸನ ಮಾಡುತ್ತ ರೆಂದು ಅವರು ಸೌ ಮ್ಯತನದಿಂದ ಆಕೆಗೆ ಕೇಳಿದ್ದರು ಅವರೆ ಅಪ್ರಿಕೆಯು ಮಾತ್ತ ಸ್ತ್ರೀ-ಸಹಜವಾದ ನಿಲುವನ್ನು ತೊರೆದು,"ಇದೆಲ್ಲ ಕೇಳಿದಕ್ಕೆ ನೀನು ಇಲ್ಲಿ ಬಂದಿಲ್ಲ ಬೇಕಾದರೆ ಶಾಲೆಗೆ ಬಂದು ಮುಖ್ಯಾ ಧ್ಯಾಪಿಕೆಯರಿಗೆ ಕೇಳಿರಿ ಹುಡುಗಿಯರಿಗೆ ಹೊರಗೆ ನಿಲ್ಲಿಸುವ ವರೆ ಅವರು ನಿಮ್ಮ ಹುಡುಗಿಗೊಲ್ಲಬಹುದೆಗೇ ನಿಲ್ಲಿಸಲಿಲ್ಲ! ದಿನಾ ೩೦-೪೦ ಹುಡುಗಿಯರು ಹೊರಗೆ ನಿಲ್ಲುತ್ತಾರೆ" ಎಂದು ಅವರು ನುಡಿದಳು, ಆಗ ಅಂಚೆಕಟ್ಟೆಯಲ್ಲಿ ಬಹಳ ಮಂದಿ ಹಾಜರಿದ್ದರು ಪೋಷ್ಯ ಮಾತೃರು ಈ ಶಾಲೆಯ ವಿರುದ್ಧ ದುರ್ಗ್ರಹ ಮಾಡಿಕೊಂಡಿದ್ದು ಯಾರಿಗೂ ಅರಿವಿರಲಿಲ್ಲ, ಎಂದು ಅವರು ಬರೆಯುತ್ತಾರೆ [ಈ ವಾದ ಇಲ್ಲಿಗೇ ನಿಲ್ಲಿಸ ತಕ್ಕದ್ದು ಅದನ್ನು ವಿಲಿಸಗೊಡಲು "ವೃತ್ತಿ"ಕ್ಕೆ ಅನುಕೂಲ ವಿಲ್ಲ — ಸಂ]

ಈ ತಾಲೂಕಿನ ಮಲ್ಲಾಪುರದಲ್ಲೊಂದು ಅಂಚೆಕಟ್ಟೆ ಯಿದೆ ಟಪಾಲ-ಬಟವಡೆಯ ಬಗ್ಗೆ ಅಲ್ಲಿ ಒಬ್ಬ ವಿಧವೆರಿ ನಿಷಂಚಿನಿಗೆ ನೌಮಿತ್ತಾರೆ ಮಾಳಿಷರ್ದರ-ಬಟವಡೆ ಬಗ್ಗೆ ಈ ವಿಜಂಟನ ಹಕ್ಕದ ರೂ ೨೦ಕ್ಕಿಂತ ಹೆಚ್ಚು ಹಣ ಕೊಡುವದಿಲ್ಲ ರೂ ೫೦-೧೦೦ ಮೂಲಧನವಿಟ್ಟಾಗಲು ಬಂದಲ್ಲಿ ತಿಂಗಲು ೮-೦೦ ದಿನ ತಗುಲುತ್ತವೆ ಈ ಊರಲ್ಲಿ ದಿನಾಲು ಮನಿಆರ್ಡರುಗಳು ಬರುತ್ತವೆ ಆದರೆ ಹಣ ಕಾಲ-ಕಾಲಕ್ಕೆ ಸಿಗುವದು ಕಷ್ಟವಾಗುತ್ತದೆ ಪೋಸ್ಟ ಇಲಾಬಿಯ ವರು ಈ ತೊಂದರೆಗಳನ್ನು ಗಮನಿಸಿ ಅವನ್ನು ಹೋಗಲಾ ಡಿಸುವ ವ್ಯವಸ್ಥೆ ಮಾಡಬೇಕಾಗಿ ಮಲ್ಲಾಪುರದವರೊಬ್ಬರು ವಿನ್ನವಿಸುತ್ತಾರೆ

ಜಿಲ್ಲಾ ಮಧ್ಯ ಮಾದಕ ಪ್ರತಿಬಂಧಕ ಸಮಿತಿಯ ಕಾರ್ಯದರ್ಶಿಗಳಾದ ರಾ॥ ತಿಮ್ಮಪ್ಪ ನಾಯಕ ಇವರು ರಾ॥ ಎಸ್ ಏ ನಾಡಕರ್ಣಿ ಮತ್ತು ಗೋಪಾಲ ಹೆಗಡೆ ಇವರೊಂದಿಗೆ ಕಳೆದ ತಾ ೨೯ನೇ ತಂಜಿಗೆ ಗೇರಸಪ್ಪೆಗೆ ಮುಟ್ಟಿದರು ಅಲ್ಲ ಸಾರ್ವಜನಿಕ ಸಭೆಯಾಗಿ, ರಾ॥ ನಾಡ ಕರ್ಣಿ-ನಾಯಕರವರ ಭಾಷಣಗಳಾದವು ಅವರು ಚಿತ್ರಪಟ ಗಳ ಸಹಾಯದಿಂದ ಮದ್ಯಸಾನದಿಂದೊದಗುವ ಅನರ್ಥ ಗಳನ್ನು ಕಿಸಿಹೇಳಿ ಮದ್ಯಸಾನದ ದುಷ್ಪಟಿವನ್ನು ಅಳಿಯೊ ಗೆಯಲು ಜನರು ಸರಕಾರಕ್ಕೂ ಕೊಂಗ್ರೆಸಿಗೂ ನೆರವಾಗ ಬೇಕೆಂದು ಬೋಧಿಸಿದರು

ಕಳೆದ ತಾ ೩೦ನೇಗೆ ಶಾಸನಕೋಡ ಕೇಂದ್ರ ಕೊಂಗ್ರೆ ಸ ಕಮಿಟಿಯ ಮಹಾಸಭೆಯಾಗಿ ಈ ಕೆಳಗಿನಂತೆ ಗೊತ್ತು ವಳಿಗಳಾದವು — (೧) ಹೊಸಪಟ್ಟಣ ಗ್ರಾಮದವರು ತಮ್ಮ ಸಂಕಲ್ಪಗಳನ್ನು ಈ ಕಮಿಟಿಯ ವಿದ್ಯಮಾನ ಮೇಲಧಿಕಾರಿಗಳಿಗೆ ಆರುಟಿಕೊಳ್ಳಬೇಕು (೨) ಹೊಸ ಹುಲ್ಲಾಬನ್ನಿ ನಿಯಮಗಳನ್ನು ಸರಕಾರದವರು ಆಪಲಿಸಿದ್ದಲ್ಲಿ ತರಕೊಡು (೩) ಈ ಕೇಂದ್ರವಲ್ಲಿ ಪಲಿಹಾಪಲೆಯೂ, ಮಂಗಳ ಹಾವಳಿಯೂ ಬಹಳವಾಗಿ ಜನರಿಗೆ ಹೆರಳ ಹಾನಿಯಾಗುವದರಿಂದ ಸರಕಾರದವರು ಈ ಹಾನಿ ಗಳನ್ನು ನಿಲ್ಲಿಸಲು ತಕ್ಕ ಉಪಾಯಯೋಜನೆ ಮಾಡಬೇಕು (೪) ಈ ಉತ್ತರಭಾಗಿನ ಇಂಜನಿಯರ್ ಸಾಹಯ ಮಾರ್ಗ ಬಹಳ ಹಾಳಾಗಿದೆ, ಅಲ್ಲಲ್ಲಿ ಕಲ್ಲುಬಾಕಿಗಳು ಬಿದ್ದಿವೆ, ಕೆಲವು ಕಡೆ ನೀರು ತುಂಬಿ ನಿಲ್ಲುತ್ತಿವೆ, ರೆಹದಾರಿಗೆ ಬಹಳ ತೊಂದರೆಯಾಗುತ್ತಿದೆ, ಕಾರಣ ಅಧಿಕಾರಿಳು ಈ ತೊಂದರೆಗಳನ್ನು ಬೇಗನೆ ಪರಿಹರಿಸಬೇಕು (೫) ಶಾಸನಕೋಡ ರಸ್ತೆಯ ಮೇಲೆ ಕಾಲ್ವಡಿಗೆಯವರ ರಸದಾ ರಿ ವಿಪರೀತವಾಗುವದರಿಂದ ಆ ಮಾರ್ಗದ ಮೇಲೆ ವೋಟಾ ರ ಲಂಡಿಗಳ ವೇಗವನ್ನು ತಾಸಿಗೆ ೧೦ ಮೈಲುಗಳಿಗೆ ಮಿಕ್ಕಿರ ದಂತೆ ಹುಕುಮು ಹೊರಡಿಸಲು ಪೋಲೀಸ ಅಧಿಕಾರಿಗಳಿಗೆ ವಿನ್ನಪೆ (೬) ಬಂಗಾಲ ೦ ಜಕಾಯ ಕೈದಿಗಳ ಬಿಡುಗಡೆ ಯ ಬಗ್ಗೆ ಶ್ಲಾಘನೆಗೆ ಮತ್ತು ಬಂಗಾಲ ಸರಕಾರದ ಘೋರ ತಯ ನಿಲುವಿ (ಮುಂದೆ ೨ನೇ ಪಾನು ನೋಡಿರಿ)

ವಾರ್ತೆಗಳು.

(ಸ್ವತೇ ಶಾನ್ಗಾಂದ ಮಂಡಿಸಿದ್ದು)

ದಾನಿ ಒಂದು ಸಾಧನೆಯಂಬು ಅದರೆ ಇದು ಸಟ್ಟೆಯೆಂತಲೂ, ರಾಜಕಾರಣಕ್ಕಾಗಿ ಹಿಂದಿಯನ್ನು ಹೊರಹಾಕುವ ಕ್ರಮ ಕೈಕೊಳ್ಳಬೆಟ್ಟಿರುವದಾಗಿಯೂ ಆಲ್ಲಿಯ ಪರಿಸ್ಥಿತಿಯನ್ನು ಅರಿತ 'ಮಂಬಯಿ ಕ್ರೆನಿಕಲ್' ಪತ್ರಿಕೆಯ ಕೋಲಂಬೋದ ಸುದ್ದಿಗಾರರು ಬರೆಯುತ್ತಾರೆ ಪಂ|| ಜವಾಹರಲಾಲರ ಆಭಿಪ್ರಾಯವು ಇದೇ ಪ್ರಕಾರ ಆಗಿರುವದೆಂದು ಎಣಿಸಲ್ಪಡುತ್ತದೆ ಬ್ರಿಟಿಶ ಸಾಮ್ರಾಜ್ಯ ಸರಕಾರದ ಮಧ್ಯಸ್ಥಿಕೆಯಿಂದ ಅಲ್ಲಿಯ ಸರಕಾರದ ಧೋರಣ ಬದಲಬಹುದಾಗಿ ಒಪ್ಪಿದರ ತರ್ಕ. ಸಿಂಹಲದ್ವೀಪದ ದೊಳಗೆ ಹಿಂದುಸ್ಥಾನ ಸರಕಾರದ ಪರವಾಗಿ ವಿಂಗ ಳೂರಿನ ರಾ|| ಆನ್ಮೆಂಬಳ ವಿಠ್ಠಲ ಪೈಯವರು ವಿಜಯಂಟಿಂಗಿದ್ದಾರೆ ಮಂತ್ರಿಗಳೂ, ಮುಖ್ಯ ಮುಖ್ಯ ಅಧಿಕಾರಿಗಳೂ ಪಂ|| ಜವಾಹರಲಾಲರಿಗೆ ಮೇಜವಾನಿಯನ್ನಿತ್ತು ಸತ್ಕರಿಸಿದರು

— ಸಂಯುಕ್ತ ಪ್ರಾಂತಿಕ ಸರಕಾರವು ವಿದ್ಯಾರ್ಥಿಗಳ ಆರೋಗ್ಯವನ್ನು ಸುಧಾರಿಸುವದಕ್ಕಾಗಿ ಪ್ರತಿ ಯೊಬ್ಬ ವಿದ್ಯಾರ್ಥಿಗೆ ಒಂದೊಂದು ರತ್ತಲು ಕಾಸಿದ ಹಾಲನ್ನು ದಿನನಿಂಪ್ರತಿ ಕೊಡಬೇಕಾಗಿ ನಿರ್ಧಾರ ಮಾಡಿ ಸದ್ಯಕ್ಕೆ ಆಗ್ರಾ ಜಲ್ಲಾ ಬೋರ್ಡು ೫ ಶಾಲೆಗಳಲ್ಲಿ ಕೂಡಿ ೫೦೦ ವಿದ್ಯಾರ್ಥಿಗಳಿಗೆ ಹಾಲು ಕೊಡುವ ವ್ಯವಸ್ಥೆ ಮಾಡಿದೆ ಆ ವಿದ್ಯಾರ್ಥಿಗಳ ಆರೋಗ್ಯ ಸುಧಾರಿಸಿದರೆ ಸರಕಾರವು ಇಡೀ ಪ್ರಾಂತದೊಳಗಿನ ಯಾವತ್ತೂ ಶಾಲೆಗಳಲ್ಲಿ ಈ ಉಪಕ್ರಮವನ್ನು ಕೈಕೊಳ್ಳವದು ಕರಾಚಿ ಮ್ಯುನಿಸಿಪಾಲಿಟಿಯು ವಿದ್ಯಾರ್ಥಿಗಳಿಗೆ ಹಾಲು ಹಂಚುವದಕ್ಕಾಗಿ ೩೫ ಸಾವಿರ ರೂ.ಗಳನ್ನು ವ್ಯಯಿಸಿದ ಸಂಯುಕ್ತ ಪ್ರಾಂತದೊಳಗಿನ ಪ್ರಯೋಗವು ಯಶಸ್ವಿಯಾದರೆ ಎಲ್ಲ ಕೊಂಗ್ರೆಸ ಸರಕಾರಗಳು ಈ ಉಪಕ್ರಮವನ್ನು ತಮ್ಮ ತಮ್ಮ ಪ್ರಾಂತಗಳಲ್ಲಿ ಪ್ರಾರಂಭಿಸುವೆವೆಂದು ತಿಳಿಯಲ್ಪಟ್ಟಿದೆ

— ಕಾನಪುರದ ಶ್ರೀ|| ಪದಂಪತ್ ಸಿಂಘಾನಿಯಾರವರು ಆಲಹಾಬಾದದೊಳಗಿನ ಹಂದಿನ ಆಶ್ರಮವಿದ್ದಲ್ಲಿ ಉದ್ಯೋಗ ಮಂದಿರವನ್ನು ಸ್ಥಾಪಿಸಲು ರೂ ೧೦ ಸಾವಿರ ಕೊಟ್ಟಿದ್ದಾರೆ, ಹುಡುಗಿಯರ ವಸತಿಗೃಹಕ್ಕಾಗಿ ಇನ್ನು ರೂ ೧೦ ಸಾವಿರ ಕೊಟ್ಟಿದ್ದಾರೆ. ತಾ ತಂದೆಯವರ ಸ್ಮಾರಕವೆಂದು ಶ್ರೀ|| ಸಿಂಘಾನಿಯಾರವರು ಈ ನಿಧಿಯನ್ನರ್ಪಿಸಿದ್ದಾರೆ

— ಮುಂಬಯಿಯೊಳಗೆ ಬಿಹಾರದ ಶ್ರೀಮಂತ ನಿರ್ಮಲಕುಮಾರ ಜೈನರವರು ಎಲ್ಯುಮಿನಿಯಮ್ಮಿನ ಕಾರಖಾನೆಯೊಂದನ್ನು ಕಟ್ಟಿಸಕೊಡಗಿದ್ದಾರೆ ಇದಕ್ಕೆ ರೂ ೫೦ ಲಕ್ಷ ಭಂಡವಲು ಹಾಕಬಯಸಿದ್ದಾರೆ. ಈ ವರೆಗೆ ಹಿಂದುಸ್ಥಾನದಲ್ಲಿ ಎಲ್ಯುಮಿನಿಯಮ್ಮಿನ ಕಾರಖಾನೆಯ ದ್ವಿಲ್ಲ ಇದೇ ಮೊದಲು ಪ್ರತಿವರ್ಷ ಹಿಂದುಸ್ಥಾನಕ್ಕೆ ರೂ ೪೦ ಲಕ್ಷಗಳ ಎಲ್ಯುಮಿನಿಯಮ್ ಆಮದಾಗುತ್ತದೆ ಮುಂದಿನ ವರ್ಷದಿಂದ ಈ ಕಾರಖಾನೆಯಲ್ಲಿ ತಯಾರಾದ ಎಲ್ಯುಮಿನಿಯಮ್ ನಮ್ಮಲ್ಲಿ ಮಾರಾಟಕ್ಕೆ ಸಿಗವದು

— ರಾಣೆಯ ಸಬ್ಜಿ ಕೋರ್ಟಿನಲ್ಲಿ ಬುಧವಾರ ದಿಂದ ಯುರೋಪಿಯನ್ ಜ್ಯೂರರ ಮೇಲೆ ಒಂದು ಖಟ್ಲೆ ನಡೆಯತ್ತದೆ ಅಬ್ಬುಲ್ಲಾ ಕಾದರ ಎಂಬ ತರುಣ ಪ್ರಾಯದ ಟೋರಸ ಜಾತಿಯ ಹುಡುಗನಿಗೆ ಶಿಕ್ಷೆಯಾಗಿತ್ತು ಅತನು ಜೈಲಿನಲ್ಲಿ ಮಾಡಿದ ಒಂದು ಅಕ್ರಮದ ಬಗ್ಗೆ ಆತನಿಗೆ ಬೇಡಿ ಹಾಕಬೇಕೆಂದು ಜೈಲರರು ವಿಧಿಸಿದ್ದರು ನಮಾಜ ಮಾಡಿದ ಬಳಿಕ ಬೇಡಿ ತಾಕಬಹುದಾಗಿ ಆತನು ಹೇಳಿಕೊಂಡಿದ್ದಕ್ಕೆ ಜೈಲರರಿಗೆ ಸಿಟ್ಟು ಬಂದ. ಆವನಿಗೆ ಒದೆದರು, ಭಡಿಯಿಂದ ಹೊಡೆದರು, ಬಾಯ್ತುಂಬ ಬೈದರು. ಅದರಿಂದ ಅವನ ಒಂದು ಎಲುಬು ಮುರಿಯಿತು ಇಷ್ಟರಿಂದಲೂ ಅವರಿಗೆ ಸಮಾಧಾನವಾಗದೆ ಭಂಗಿ ಕೆಲಸ ಮಾಡುವ ಇನ್ನೊಬ್ಬ ಕೈದಿಯ ಕಡೆಯಿಂದ ಮಲವನ್ನು ಆತನ ತಲೆಯ ಮೇಲೆ ಎಸೆಯಹಚ್ಚಿದರು. ಅಬ್ದುಲ್ಲಾ ಕಾದರನು ೧೫ ತಿಂಗಳ ತನಕ ಆಸ್ಪತ್ರೆಯಲ್ಲಿ ಉಪಚಾರ ಹೊಂದಬೇಕಾಯಿತು. ಈ ಕುರಿತು ಪೂರ್ಣ ವಿಚಾರ ನಡೆದು ಜೈಲರರಿಗೆ ಪದಚ್ಯುತಿಯಾಗಿ ಈಗ ಖಟ್ಲೆ ನಡೆದಿದೆ ಜೈಲರರು ಕೈದಿಯಾಗುವ ಪ್ರಸಂಗ ಬಂದಿದೆ! ರಾಣೆಯಲ್ಲಿ ಇದೊಂದೇ ಮುಖ್ಯ ಸುದ್ದಿ! ದಿನಾಲು ಕೋರ್ಟಿನ ಪ್ರೇಕ್ಷಕ ಸಮುದಾಯದಿಂದ ತುಂಬಿಹೋಗುತ್ತದೆ.

ಅಂತು ಹಿಟ್ಲರನು ಯುದ್ಧ ಹೂಡಿದನು; ಬಿಡಲಿಲ್ಲ! ಜೆಂಬರಲೇನ ಮುದುಕನ ನಿರ್ಧಾರ ನೋಡಿ ಹಿಟ್ಲರನು ಕೈತಡೆಯುವನೆಂದು ನನ್ನ ಭಾವನೆಯಿತ್ತು. ಹಿಟ್ಲರನ ಸಲಹೆಗಾರರಲ್ಲಿ ಎರಡು ಪಕ್ಷಗಳಂತೆ; ಬ್ರಿಟಶರು ಯುದ್ಧ ಹೂಡುವರೆಂದು ಒಂದು ಪಕ್ಷ; ಅದರಂದ ಜೋಕ! ಜೋಕ! ಎಂದು ಆ ಪಕ್ಷ ಹಿಟ್ಲರನಿಗೆ ಆಗಿಂದಾಗ ಹೇಳುತ್ತಿತ್ತಂತೆ!! ಬ್ರಿಟಶ ಸಾಮ್ರಾಜ್ಯ ವಿಶ್ವವ್ಯಾಪಿ; ಬ್ರಿಟಶರು ಯುದ್ಧಕ್ಕೆ ಸಿದ್ಧರೆಂದು ಘೋಷಿಸಿದಾಗ್ಯೂ ಅವರು ಯುದ್ಧ ಪ್ರಸ್ತಕ್ತಣಾಗುವದಿಲ್ಲ, ಯುದ್ಧವೆಂದೂಹಿಸಿ ಅವರು ಹೆದರಿಹೋಗುತ್ತಾರೆ; ಪೋಲಂಡದ ಮೇಲೆ ನಾಗಿ ಹೋಗುವ ನಿರ್ಧಾರ ಮಾಡಿದರೆ ಅವರು ಪೋಲಂಡ ಸರಕಾರಕ್ಕೆ ಬುದ್ಧಿ ಹೇಳ ನಮಗೆ ಬೇಕಾದ್ದನ್ನು ಕೊಡಿಸಿ ಬಿಡುವರು, ನೀವು ಚಿಂತಿಸಬೇಡಿ! ಎಂದು ಇನ್ನೊಂದು ಪಕ್ಷದ ಸಲಹೆ. ಹಿಟ್ಲರನು ಈ ಪಕ್ಷದ ಸಲಹೆಗೆ ಕಿವಿಗೊಡುತ್ತಿದ್ದನು. ಸುಡೆಟನ್-ಪ್ರಾಂತವನ್ನು ನುಂಗಿಸಿಕ್ಕಿದ್ದರಿಂದ ಹಿಟ್ಲರನಿಗೂ ಈ ಸಲಹೆಗಾರರಿಗೂ ಒಳ್ಳೇ ಪ್ರೋತ್ಸಾಹ ದೊರೆತಿತ್ತು. (೧) ಡೆಂಝಿಗನ್ನು ಕೂಡಲೆ ಜರ್ಮನ್ ಸರಕಾರಕ್ಕೆ ಒಪ್ಪಿಸಬೇಕು; (೨) ಕೊರಿಡರ ಪ್ರಾಂತದಲ್ಲಿ ಪೋಲಂಡ ಸರಕಾರವು ತನ್ನ ಸ್ವಾಮಿತ್ವವನ್ನು ಬಿಟ್ಟು ಕೊಟ್ಟು ಅದನ್ನು ಅಂತರ್ರಾಷ್ಟ್ರೀಯ ಪಂಚರ ಸ್ವಾಧೀನಕ್ಕೊಪ್ಪಿಸಿ, ೧೦ ವರ್ಷದ ಮೇಲೆ ಜನಮತವನ್ನು ಕೊಂಡು ಆದರಂತೆ ಪ್ರಭುತ್ವವನ್ನು ನಿರ್ಣಯಿಸಬೇಕು. (೩) ಜರ್ಮನಿಯಿಂದ ಪೂರ್ವ ಪ್ರಶಿಯಾಕ್ಕೆ ಹೋಗಲು ಕೊರಿಡರ ಪ್ರದೇಶದಲ್ಲಿ ಒಂದು ದಾರಿ ಕೊಡಬೇಕು ಈ ಶರ್ತಗಳನ್ನು ಹಿಟ್ಲರನು ಹಾಕಿ, ಇವತ್ತೆ ಕೂಡಲೆ ಒಪ್ಪಿಗ ಕೊಡಬೇಕೆಂದು ಪೋಲಂಡಕ್ಕೆ ನಿಷ್ಕುರತನದಿಂದ ವಿಧಿಸಿದನು. ಈ ಶರ್ತಗಳಿಗೆ ಪೋಲಂಡ ಸರಕಾರವು ಒಪ್ಪಲಿಲ್ಲ; ಸಾಹಜಕವದೆ! ತನ್ನ ಕೊರಳನ್ನು ತನ್ನ ಕೈಯಿಂದ ಯಾರಾದರೂ ಕಡತಿಕೊಳ್ಳಲೊಪ್ಪುವದುಂಟೇ? ಆದರಂದ ಹಿಟ್ಲರನು ದೀಗಿಗೆದ್ದು ಶುಕ್ರವಾರ ಬೆಳಿಗ್ಗೆ ೫॥ ಘಂಟೆಗೆ ಆಕಾಶವಾಣಿಯಮೂಲಕ ಪೋಲಂಡಿಗೆ ಹುಚ್ಚುಸಿಂಡಿದುರುವದಾಗಿಯೂ, ಕೊರಿಡೋರದೊಳಗಿನ ಜರ್ಮನ್‌ರಿಗೆ ಆವರು ಪರಿಪರಿಯಿಂದ ದಬೆಸುತ್ತಾರೆಂದಿಯೂ, ಇನ್ನು ಮುಂದೆ ತಾನು ಇವನ್ನು ಸಹಿಸಲಾರೆನೆಂದಿಯೂ, ಜರ್ಮನಿಯ ಮಾನರಕ್ಷಣೆಗಾಗಿ ಜರ್ಮನ್‌ರು ಹೋರಾಡುವರೆಂತಲೂ ಸಾರಿದನು ಅದೇ ದಿವ ಲೋಕಸಭೆಯನ್ನು ಸೇರಿಸಿ, "ಡೆಂಝಿಗು ಜರ್ಮನ್‌ರದು, ಕೊರಿಡರು ಜರ್ಮನ್‌ರದು! ಜರ್ಮನ್‌ರ ಅಭಾವದಲ್ಲಿ ಇವೆರೂ ಕಾಡು ಪ್ರದೇಶಗಳಾಗುತ್ತಿದ್ದವು; ಈ ವಿವಾದವನ್ನು ಬಗೆಹರಿಸಿಕೊಳ್ಳಲು ಶಾಂತಿಯಿಂದ ಪ್ರಯತ್ನ ಮಾಡಿದೆ, ಪೋಲಂಡವು ಒಪ್ಪಲಿಲ್ಲ, ಆದರಿಂದ ಯುದ್ಧ ಹೂಡಬೇಕೆಂದು ನಾನು ನಿರ್ಧರಿಸಿದ್ದೇನೆ. ಬಾಂಬುಗಳನ್ನು ಬಾಂಬಿನಿಂದಲೂ, ವಿಷವಾಯುವನ್ನು ವಿಷವಾಯುವಿನಿಂದಲೂ ನಾವು ಪ್ರತಿಭಟಿಸುವೆವು. ನನಗೇನಾದರೂ ಆದರೆ, ಸೇನಾಪತಿ ಗೋರಿಂಗರವರು ನನ್ನ ಉತ್ತರಾಧಿಕಾರಿಯಾಗಿ ಮುಂದಿನ ಕಾರ್ಯವನ್ನು ನಡಿಸುವರು!" ಹೀಗೆ ಹಿಟ್ಲರನು ಘೋಷಿಸಿದನು. ಪೂರ್ವಸೂಚನೆ ಕೊಡದೆ ಸೈನ್ಯಗಳು ಕೊರಿಡರ ಪ್ರದೇಶವನ್ನು ನೆಗ್ಗಿದವು, ಬಾಂಬು ತುಂಬಿ ಕೊಂಡು ವಿಮಾನುಗಳು ಹಾರಿದವು. ಜರ್ಮನ್‌ರ ಆಕ್ರಮಣವನ್ನು ತಾವು ಸರ್ವಶಕ್ತಿಯಿಂದ ವಿರೋಧಿಸುವೆವಾಗಿ ಬರ್ಲಿನ್‌ದೊಳಗಿದ್ದ ಪೋಲಂಡದ ರಾಯಭಾರಿಗಳು ಜರ್ಮನ್ ಸರಕಾರಕ್ಕೆ ತಿಳಿಸಿದ್ದಾರೆ. ೧೬ ಜರ್ಮನ್ ವಿಮಾನುಗಳನ್ನು ಪೋಲರು ನೆಲಕ್ಕಿಳ್ಳುರುಳಿಸಿದರಂತೆ! ಒಂದು ಸಶಸ್ತ್ರತೋಪುಖಾನೆಯನ್ನು ಕೈವಶ ಮಾಡಿಕೊಂಡರಂತೆ! ಜರ್ಮನ್ ವಿಮಾನುಗಳು ಪೋಲಂಡದೊಳಗಿನ ಮುಖ್ಯ ಮುಖ್ಯ ಪಟ್ಟಣಗಳ ಮೇಲೆಯೂ, ರೈಲ್ವೆ ಬಂದರದ ಮೇಲೆಯೂ ಬಾಂಬಿನ ಮಳೆಗರೆದು ಡೆಂಝಿಗ ಪಟ್ಟಣದ ಆಗಿನ ಮುಖ್ಯಸ್ಥರು ಹಿಟ್ಲರನ ಪಕ್ಷದವರು. ಅವರು ಪಟ್ಟಣಿಗರ ಸಭೆಯೇರ್ಪಸಿ ಡೆಂಝಿಗು ಜರ್ಮನ್ ಜನಾಂಗದಲ್ಲಿ ಕೂಡಿಹೋಯಿತೆಂಬ ಕಾನೂನನ್ನು ವಿರ್ಪಡಿಸಿ ಡೆಂಝಿಗನ್ನು ಜರ್ಮನಿಯಲ್ಲಿ ಸೇರಿಸಿ ಬಿಟ್ಟಿದ್ದಾರೆ. ಡೆಂಝಿಗದ ಬಳಿಯಲ್ಲಿರುವ ಪೋಲ್ಸ್ ವಾರ್ತ್ಯದಲ್ಲಿ ತಪ್ಪಲು ಪ್ರದೇಶವುಂಟು. ಅಲ್ಲಿ ಜರ್ಮನ್‌ರು ಮೂರು ಸಾರೆ ನಾಗಿಹೋದರು. ನಮೂರೂ ಸಾರೆ ಪೋಲರು ಜರ್ಮನ್‌ರನ್ನು ಹಿಂದಕ್ಕಟ್ಟಿದರು. ಪೋಲರು ದೃಢಕಾಯದವರು. ಇವರ್ಲ್ಲಮುಖ್ಯ ವೃತ್ತಿಯಾವುದು ಬೇಸಾಯ! ಗಟ್ಟಿ ಆಳು!! ಸಹಜಶಕ್ತಿಯಲ್ಲಿ ಇವರಿಗೆ ಸರಿಗಟ್ಟುವವರು ಯಾರೋ ಮುಂಡಲದಲ್ಲಿ ಯಾವದೇ ಜನಾಂಗದಲ್ಲಿಲ್ಲವಾಗಿ ಹೇಳುತ್ತಾರೆ. ಜರ್ಮನ್‌ರು ವಿಮಾನದಿಂದ ೧೪ ಸಾರೆ ಬಾಂಬಿನ ಮಳೆಗರೆದರು. ಇದರಿಂದ ೧೩೦ ಜನರು ಮರಣ ಹೊಂದಿದರು ಇವರಲ್ಲಿ ೧೨ ಜನರು ಮಾತ್ರ ವೀರ ಭಟರು! ಉಳದವರೆಲ್ಲರೂ ನಿರಪರಾಧಿ ಹೆಂಗಸರು! ಮಕ್ಕಳು!! ಅರಕ್ಷಿತ ಪಟ್ಟಣಗಳ ಮೇಲೆ, ಸಂಗ್ರಾಮದಲ್ಲಿ ಸೆರೆದ ನಿರಪರಾಧಿ ಪ್ರಜೆಗಳ ಮೇಲೆ ಬಾಂಬುಗಳನ್ನು ಒಗೆಯಬಾರದೆಂದು ಅಮೇರಿಕೆಯ ಕೂಡು ನೆಲ್ಕರವರು ಹಿಟ್ಲರನ ಕಡೆ ಮಾಡಿಕೊಂಡ ವಿನಂತಿಗೆ ನಾಗರಿಕರ ಮೇಲೆ ಬಾಂಬುಗಳನ್ನು ಒಗೆಯುವದಿಲ್ಲವಾಗಿ ಹಿಟ್ಲರನು ಉತ್ತರವನ್ನು ಕಳುಹಿದ್ದಾನೆ. ಶತ್ರುಪಕ್ಷದವರೂ ಸಹ ಇದರಂತೆಯೇ ನಡಕೊಳ್ಳದಿದ್ದರೆ ತಾನು ಈ ನಿಯಮವನ್ನು ಪಾಲಿಸಲಿಕ್ಕಿಲ್ಲವಾಗಿಯೂ ಆತನು ತಿಳಿಸಿದ್ದಾನೆ. ಹಿಟ್ಲರನ ಮಾತನ್ನು ನಾನೇನು ನಂಬಲಾರೆ; ನನಗೆ ನಂಬಿಗೆಯೇ ಹುಟ್ಟದು. ಪ್ಲೇಗಿನ ಕ್ರಿಮಿಗಳನ್ನು ಒಗೆದು ನಾಗರಿಕರಲ್ಲಿ ಪ್ಲೇಗನ್ನು ಹುಟ್ಟಿಸಿ, ಅದರಿಂದ ಇಡೀ ಭೂಪ್ರದೇಶವನ್ನು ಹಾಳುಗೆಡಿಪ ಶಪ್ತಗಳನ್ನು ಸೋಲಿಸುವ ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ಆತನು ಹಿಡಿದಿದ್ದಾನಾಗಿ ಜರ್ಮನ ಸೈನ್ಯ ಇಲಾಖೆಯಿಂದ ಹೊರಡುವ "ಡಾಚೆವೇರ ಮಾಸಪತ್ರಿಕೆಯಲ್ಲಿ ಜರ್ಮನ ಯುದ್ಧ-ತಜ್ಞರು ಸಮಾಧಾನದಿಂದ ಬರೆದ ಲೇಖದ ಮೇಲಿಂದ ಎಣಿಸಬೇಕಾಗಿದೆ. ಇದರ ಮೇಲಿಂದ ಹಿಟ್ಲರನು ಗುಡಿದಂತೆ ನಡೆಯುವವನಲ್ಲವಾಗಿ ನಾ ಹೇಳಬಲ್ಲೆ. ಶತ್ರುಪಕ್ಷದವರು ನಿಯಮಗಳನ್ನು ಪಾಲಿಸಲಿಲ್ಲವೆಂದು ಚಿಕ್ಕ ಮಕ್ಕಳಂತೆ ದೂರ ತನ್ನ ರಾಕ್ಷಸೀ-ವ್ಯಾಪಾರಗಳನ್ನು ನಡಿಸಿ ಆಕ ಅನರ್ಥವನ್ನುಂಟುಮಾಡುವನು. ಬ್ರಿಟಶ ಪ್ರಧಾನರು ಶುಕ್ರವಾರ ಬೆಳಿಗ್ಗೆ ೧೯॥ ಘಂಟೆಗೆ ಸಭೆಸೇರಿ ಪರಿಸ್ಥಿತಿಯನ್ನು ಸಮಾಲೋಚಿಸಿದರು. ರಾತ್ರೆ ಪಾರ್ಲಿಮೆಂಟಿನ ಸಭೆ ಸೇರಿತು. "ಮಾತು ಸಾಕು! ಕೃತಿ ಬೇಕು." ಎಂದು ಚೆಂಬರಲೇನ ಮುದುಕರು ಸೊಂಟಗಟ್ಟಿ ಮಾಡಿ ಕೊಂಡು ಒಳ್ಳೇ ಆವೇಕದಿಂದ ನುಡಿದನು. ಇದನ್ನು ಕೇಳಿ ನವಗೊಳ್ಳೇ ಹರುಷವಾಗುತ್ತದೆ. ಮುದುಕನು ಕಳೆದ ಸಪ್ತಂಬರ ತಿಂಗಳಲ್ಲಿ ಇದೇ ಪ್ರಕಾರ ಗಟ್ಟಿ ನಿಂತು ಝಾಕೊಸೆಲ್ಲ್ಲವಾಕಿಯಾದ ಡಾ|| ಬೀನ್ಸ್‌ರವರಿಗೆ ಅಶ್ರಯ ಕೊಟ್ಟಿದ್ದರೆ, ಸುಡೆಟನ್ ಪ್ರದೇಶವನ್ನು ಹಿಟ್ಲರನಿಗೆ ನುಂಗಗೊಡದಿದ್ದರೆ ಇಂದಿಗೆ ಪೋಲಂಡದ ಬಾರಿ ಬರುತ್ತಿರಲಿಲ್ಲ. ಇರಲಿ! ಆಗಾದರೂ ಮುದುಕನಿಗೆ ಬುದ್ಧಿ ಬಂದದ್ದು ಒಂದು ಭಾಗ್ಯವೇ!! ಚೆಂಬರಲೇನರು ಹಿಟ್ಲರನಿಗೆ ಕೊನೆಯ ಎಚ್ಚರಿಕೆಯನ್ನು ಕೊಟ್ಟಿದ್ದಾರೆ: "ಪೋಲಂಡನಿಂದ ಒಬ್ಬೊಬ್ಬ ಹಿಂತಿರುಗಿ ಬೇಕು; ಸೈನ್ಯಗಳನ್ನು ಹಿಂಗಲೆಯಬೇಕು, ವಿಮಾನುಗಳನ್ನು ಸ್ವಸ್ಥಾನಗಳಿಗೆ ಕಳುಹಬೇಕು. ಹೀಗೆ ಮಾಡ

(ಇದೇ ಜನನ ಸುಲಿ ಮುಂದರಿಸಿದೆ.)

ಸ್ಥಾನಿಕ ವೃತ್ತಾಂತ.

ಕುಮಟಾ— ಈಚೆಯ ವಾರ ಮಳೆಯು ಅಬ್ಬರಿಕಡಿಮೆಯಾಯಿತು ಮಂಗಳವಾರ ಮಾತ್ರ ೧ ಇಂಚಿಗೂ ಹೆಚ್ಚು ಮಳೆಯಾಯಿತು ಇನ್ನಿತರ ದಿನಗಳಲ್ಲಿ ಸರಾಸರಿ ೨ ಇಂಚಿನಷ್ಟು ಮಳೆಯಾಗಿದ್ದಿತು. ಈ ವಾರದಲ್ಲಿ ಅಂತು ಮಳೆಯು ೪೨೨ ಇಂಚು ಆಗಿರುತ್ತದೆ. ಅಂತು ಈ ತನಕ ಬಿದ್ದ ಮಳೆಯು ೪೮-೧೦ ಇಂಚು ಆಗಿರುವದು ಊರಲ್ಲಿ ಬಕ್ಕೆ ಪುಟ್ಟಿ ರೋಗದಜೋರು ಹಬ್ಬಿಸಿ

ಈಚೆ ವಾರ ಈ ಊರಲ್ಲಿ ಎರಡು ದುರಂತ ಮರಣಗಳು ಸಂಭವಿಸಿದವು ಮಂಗಳವಾರ ಸಂಜೆ ರಾಗಿ ಅಣ್ಣಾರಾಯ ಭಟ್ಟಕಳಕರ ಇವರ ಸೀತಾರಾಮನೆಂಬ ಹುಡುಗನು (ಡಾಕ್ಟರ ಬಿಳ್ಳಕಾನನ ಇವರ ಕಂಪೌಂಡರನ.) ಸಮುದ್ರ ಬೀಳಿಯ ಮೇಲೆ ಕಿರುಗಾಡುತ್ತಿದ್ದನು ಆತನ್ತ ಅಜ್ಜಾರುತ್ತ ಆತನು ಬ್ರಹ್ಮದೇವರ ಗುಡ್ಡಕ್ಕೆ ಮುಟ್ಟಿದನು ಆವನ ಜೊತೆಗೆ ಇದ್ದ ಹುಡುಗರು ಅಲ್ಲೇ ಬೇರೊಂದು ಕಡೆಗೆ ತಿರುಗಾಡುತ್ತ ಉಳಿದಿದ್ದರು ಸೀತಾರಾಮನು ಆಳ ಸ್ಥಾರ್ತ ಸಮುದ್ರದ ತೆರೆಗಳಲ್ಲಿ ಮುಳುಗುತ್ತಿದ್ದುದು ಕಂಡು ಬಂತು ಸಮುದ್ರ ಬೀಳಿಯ ಮೇಲಿರುವ ಕಟ್ಟೆಗಳ ಸೋದೆ ಕೊತುಕೊಂಡಿದ್ದ ಕೆಲವು ಗೃಹಸ್ಥರು ಅದನ್ನು ನೋಡಿ ಮುಳುಗುವವನನ್ನು ಮೇಲಕ್ಕೆ ತರುವ ಬಗ್ಗೆ ೨-೩ ಆಂದಿಗರಿಗೆ ಕಳಿಸಿದರು ಆದರೆ ಸೀತಾರಾಮನು ಮುಳುಗಿದ ಸ್ಥಳವು ತೀರ ಗಭ್ರಾಂತರಪ್ರದವಿದ್ದು ದಂಡಾಲು ಸೀತಾರಾಮನ ಸುಳುವು ಸಹ ಕಾಣದೆ ಹೋದ್ದರಿಂದಲೂ ಆಂದಿಗರಿಗೆ ಅಲ್ಲಿಗೆ ಹೋಗಲು ಧೈರ್ಯವಾಗಿಲ್ಲ ಇತ್ತ ರಾಮನ ಕವನು ಗುರುವಾರ ಮಧ್ಯಾಹ್ನ ದೊರೆಯಿತು ಸೀತಾರಾಮನು ಕಾಲು ಜಾರಿ ಸಮುದ್ರದಲ್ಲಿ ಬಿದ್ದನೋ ಆಥವಾ ಬುದ್ಧಾಪೂರ್ವಕ ಹಾರಿಕೊಂಡು ಆತ್ಮಹತ್ಯೆ ಮಾಡಿಕೊಂಡನೋ ತಿಳಿಯುವಾಗಿಲ್ಲ ಸೀತಾರಾಮನು ಒಳ್ಳೇ ಸುಧಾ ಸ್ಥಿತಿಯವನಾಗಿದ್ದನು ಆವನ ಈ ಅಕಲ್ಪಿತ ನಿಧನದಿಂದ ಸಂಸಾರವೃದ್ಧ ತಾಯಿ-ತಂದೆಗಳ ಮೇಲೆ ಬಂದೊದಗಿರುವ ಕಷ್ಟ ಅಷ್ಟಿಷ್ಟಲ್ಲ ಈ ಪ್ರಸಂಗದಲ್ಲಿ ಪರಮಾತ್ಮನೇ ಅವರಿಗೆ ಸಲಹಬೇಕು ಇನ್ನೊಂದು ದುರಂತ ಘಟನೆ ಶನಿವಾರ ನಸುಕು ಹರಿಯುವಾಗ ನಡುಪೇಟೆಯಲ್ಲಿ ಸಂಭವಿಸಿತು ಇಲ್ಲಿಯ ನಯೇವೃದ್ಧ ವರ್ತಕರಾದ ರಾ। ಅಣ್ಣಪ್ಪ ತಿಪಪ್ಪ ನಾಯಕರ ಸೌಭಾಗ್ಯವತಿಯು ಯಾರಿಗೂ ಸುಳುವು ತಿಳಿಯಿಸದೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂಬಗಡೆಯಿರುವ ಶ್ರೀ ಹನುಮದೇವರ ಬಾವಿಯಲ್ಲಿ ಹಾರಿ ಪ್ರಾಣ ಬಿಟ್ಟಳು! ನೀರಲ್ಲಿ ಹಾರಿದ್ದರಿಂದ ಒಂದು ವೇಳೆ ಪ್ರಾಣ ಹೋಗದೆ ಉಳಿದಿತೆಂಬ ಸಂಶಯದಿಂದಲೋ ಏನೋ ಆಕೆಯು ಬಾವಿಯ ಮೇಲಿನ ಗಡಗಡಿಯ ಜಂತೆಗೆ ಹಗ್ಗ ಕಟ್ಟಿ ಕೊರಳಿಗೆ ಒಂದು ಪಾಶವನ್ನೂ ಕಟ್ಟಿಕೊಂಡಿದ್ದಳು! ಆತ್ಮಹತ್ಯೆ ಮಾಡಿಕೊಳ್ಳುವಂತಹ ಪ್ರಸಂಗ ಆವಳ ಬೀಳಿ ಏನು ಬಂದಿತ್ತೆಂಬ ಶ್ರೀ ವೆಂಕಟರಮಣಪ್ಪನಿಗೇ ಗೊತ್ತಿಲ್ಲ!

ಪೂರ್ವಸಂಕಲ್ಪದಂತೆ ಹೋದ ಶುಕ್ರವಾರ ಮಧ್ಯಾಹ್ನ ಬಂಧನ ದಿನ ಇಲ್ಲಿ ವಿಶ್ವಂಭರೆಯಿಂದ ಆಚರಿಸಲ್ಪಟ್ಟಿತು ಮುಂಜಾನೆ ಪ್ರಭಾತ ಫೇರಿ ಧ್ವಜವಂದನೆಗಳಾದವು ಮಧ್ಯಾಹ್ನ ೩ ಘಂಟೆ ಮೆರವಣಿಗೆಯಾಯಿತು ಸ್ವಯಂಸೇವಕರು ಸುಂದರ್ಯಪೂರ್ಣ ದೊಡ್ಡ ಗೊಂಬೆಯೊಂದನ್ನು ರಥದಾಕಾರದಲ್ಲಿದ್ದರು ಮೆರವಣಿಗೆಯು ತಿರುಗಿ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂದಿನ ಪಟಿಂಗಣಕ್ಕೆ ಬರುತ್ತಲಿ ಅಲ್ಲಿ ಧ್ವಜಕ್ಕುಂಭದಿ ತಾಲೂಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷೆ ರಾ। ಲಕ್ಷ್ಮಿ ಕಾಮುಕರವರ ಅಧ್ಯಕ್ಷತೆಯಲ್ಲಿ ಬಾಹೀರ ಸಭೆಯಾಗಿ, ಸುರಾಜನದ ಅನಿವ್ಯಶರಣಾಗುಳು ಶುಂಗು ಕಾಲಾ ವಿದ್ಯಾರ್ಥಿ ಮೊದಲಾದವರು, ಮತ್ತು ಅಧ್ಯಕ್ಷರ ಭಾಷಣಗಳುದವು ಆ ಮೇಲೆ ಅಧ್ಯಕ್ಷರ ಹಸ್ತದಿಂದ ಸುಂದರ್ಯಪೂರ್ಣ ಹೋಳಿಯಾಯಿತು ಕೊನೆಗೆ ರಾಷ್ಟ್ರೀಗೀತೆಯನ್ನು ಸಭೆಯ ಮುಕ್ತಾಯವಾಯಿತು

ಮೇಲಿನಂತೆ ಧಾರೇಶ್ವರ, ಬಂಕಿಕೋಡ್ಲ ಗ್ರಾಮಗಳಲ್ಲೂ ನಿರ್ಮಾದಕ ಹುಲ್ಲು ಆಚರಿಸಲ್ಪಟ್ಟಿತು ಧಾರೇಶ್ವರದಲ್ಲಿ ಶ್ರೀ ಸ್ಥಾನಾಪತಿ ದೇವಸ್ಥಾನದ ಚಂದ್ರಶಾಲೆಯ ಮೇಲೆ ರಾ ಪರಮೇಶ್ವರ ಭಟ್ಟ ಗೋಪಿ ಇವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ನಮ್ಮ ಇಡೀ ಬಿಲ್ಲಾಯನ್ನು ನಿರ್ಮಾದಕಗೊಳಿಸಿದ ಬಗ್ಗೆ ಮುಂಬಯಿ ಸರಕಾರವನ್ನು ಅಭಿನಂದಿಸಲಾಯಿತು ಬಂಕಿಕೋಡ್ಲದಲ್ಲಿ ಮೆರವಣಿಗೆಯಾಯಿತು ಇಂಗ್ಲಿಸಶಾಲೆಯ ಮುಖ್ಯೋಪಾಧ್ಯಾಕರ ಅಧ್ಯಕ್ಷತೆಯ ಕೆಳಗೆ ಶ್ರೀ ದೇವೀ ದೇವಸ್ಥಾನದಲ್ಲಿ ಸಭೆಯೂ ಆಯಿತು ಎಲ್ಲ ಶಾಲೆಗಳ ವಿದ್ಯಾರ್ಥಿಗಳೂ ಹಾಜರಿದ್ದರು ಈ ತುರವನೇಗೆ ಸಭೆಗಳಲ್ಲಿ ವಿಶೇಷವಾಗಿ ನೇರಿದ್ದರು

"ಕಾಂಗ್ರೆಸ ಸಚಿವರನ್ನು ಮಾಡುವ ಅವಧಿಯು ಇದೇ ಬರುವ ಸಪ್ಟಂಬರ ೩೦ ರಂಕ್ಕೆ ಮುಗಿಯುತ್ತದೆ ಕಾರಣ ತಾಲೂಕಿನೊಳಗಿನ ಎಲ್ಲ ಕೊಂಗ್ರೆಸ-ಅಭಿಮಾನಿ ಶ್ರೀ ಪುರುಷರು ತಮ್ಮ ತಮ್ಮ ಕೇಂದ್ರ ಗಳಾ ಸೀಮೆಯೊಳಗಿನ ಸಕಲ ಚಟುವಟಿಯ ಕಚೇರಿಗೆ ಹೋಗಿ ತಮ್ಮ ಹೆಸರನ್ನು ನೋಂದಿಸಿ ಕೊಳ್ಳಬೇಕಾಗಿ ವಿನಂತಿಯಿದೆ ಈ ಮಟಿಟಯೊಳಗಿನ ಪ್ರಾದಿಭಾಂತರವಲ್ಲಾ ಸದಸ್ಯರನ್ನು ಕೋಂಗಿಸಿಯೊಳ್ಳುವ ವೈಕ್ತಿಸ್ಥ ಮಾಡಲಾಗಿದೆ " ಎಂದು ಕುಮಟಾ ತಾಲೂಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರು ತಿಳಿಸುತ್ತಾರೆ

ಕಾಂಗಲ ವೈಕ ಹೊನೆಮೊಗಿನ ನಾಸಿಪಾ (ಡಾರ್ಜ) ಮುಸಲ್ಮಾನರು ತಮ್ಮ ಮಕ್ಕಳಿಗೆ ಕಾಂಗಲ ಗ್ರಾಮಪ್ರದೇಶದ ಶಾಲಾ ಬೋರ್ಡಿನ ಉರ್ದೂ ಶಾಲೆಗೆ ಹೋಗಲಿಕ್ಕೆ ಬಲ ಪ್ರಯೋಸವಾಗುತ್ತಿರುವದೆಂದಿ ತಮ್ಮ ಕೇರಿಯಲ್ಲೇ ಒಂದು ಏಸಗಿ ಉರ್ದೂ ಶಾಲೆಯನ್ನು ಕೆರೆದಿರುತ್ತಾರೆ ಶಾಲೆಗೆ ಅವಶ್ಯವಿರುವ ಸ್ಥಳವನ್ನು ಸಾರಾಪಾಸಿ ಅಲ್ಲೊಂದು ಶಾಲೆಗೆ ಸಾಂಕ್ಷನ್ ಇನಾಯತನ್ನು ಕಟ್ಟಿಸಿರುತ್ತಾರೆ ಆದರೆ ಶಿಕ್ಷಕರಿಗೆ ಸಂಬಳ ಕೊಟ್ಟು ಶಾಲೆಯನ್ನು ನಡಿಸುವಷ್ಟು ಶಕ್ತಿ ಈ ಜನ ತಾನು ಸವನೆ ಬಾಯಿಯಲ್ಲಿ ಬಿದ್ದಿದ್ದಂತಾಯಿತು!

ಅಘನಾಶಿಂ ತಾಲೂಕಿಲ್ಲಿ ಹೊಳೆ ದಾಟಿಸುವ ವ್ಯವಸ್ಥೆ ಸಂಘಾಗಿನ್ನಿನೆಂದು ಈ ಹಿಂದೊಂ ೬ 'ವೃತ್ತ'ದಲ್ಲಿ ದೊರು ಪ್ರಕಟವಾಗಿದೆ ಈ ವಾರದಲ್ಲಿ ಇನ್ನೊಂದು ದುರು ಬರಿದು ಬಂದಿದೆ ಒಬ್ಬ ಪ್ರಯಾಣಕನು ಮಹತ್ವದ ಕೆಲಸಕ್ಕಾಗಿ ಗೋಕರ್ಣ ಬದಿಯಿಂದ ಅಘನಾಶಿನಿಗೆ ಹೋಗುತ್ತಿದ್ದನು ತಾರಿಯ ಸಮಿತಾಕ ಬಂಯ ನೋಡಲಾಗಿ ಎರಡೂ ದೋಣಿಗಳು ವಿರುದ್ಧ ಬದಿಯ ದಂಡೆಯಲ್ಲಿ ನಿಂತಿದ್ದವು! ತಾರಿ ದಾಟಬೇಕಾದರೆ ಪ್ರಯಾಣಕನಿಗೆ ೨ ೩ ತಾಸುಗಳು ಕಾಗಲಿದವು! ಪ್ರಯಾಣಕನು ತನ್ನ ಕೆಲಸ ತೀರಿಸಿ ತಿರುಗಿ ತಾರಿ ದಾಟಲು ಹೋದಾಗ ಸಂಜೆ ೫ -೩೫ ಘಂಟೆಯಾಗಿತ್ತು. ದಂಡೆಯ ಮೇಲೆ ದೋಣಿಯಿದ್ದಿಲ್ಲ! (ನಡುನೀರಿನಲ್ಲಿಂದು ಪು ಕಡೆ ಅವು ತೇಲಾಡುತ್ತಿದ್ದಾವು!) ದೋಣಿಯನ್ನ ಅಂಬಿಗರೂ ಇದ್ದಿಲ್ಲ! ಗುತ್ತಿಗೆದಂರನೂ ಇದ್ದಿಕ್ಕಿ! ೧ -೩೫ ತಾಸು ಕಳೆದ ಮೇಲೆ ಅಂದಿಗನೊಬ್ಬನು ಬಂದು, "ಬಾಬ್ರಿ, ಹೋಗುವಾ" ಎಂದು ಹೇಳಿ ಪ್ರಯಾಣಕನಿಗೆ ದೋಣಿಯ ಬಳಿ ಕರೆದೊಯ್ದನು ದೋಣಿಯೊಳ್ಳಿದ್ದ ನೀರು ದಪ್ಪು ನೀರು ಇತ್ತು! ದೋಣಿ ಹತ್ತಿದೀಕಾದರೆ ಪ್ರಯಾಣಕನಿಗೆ ಸಾಕು ಸಾಕಾಯಿತು! ಹೆಂಗಸರು-ಮಕ್ಕಳು ಇಂಥ ದೋಣಿಯನ್ನು ಹತ್ತುವದೆಂತೆಂದು ಪ್ರಯಾಣಕನು ವಿಚಾರ ದಲ್ಲಿ ಬಿದ್ದನಂತೆ! ಪ್ರಯಾಣಕನು ಹತ್ತಿದ ದೋಣಿಯು (ನಂಬರ ಒಳಿಲ್ಲ) ತೀರ ಹಳತಾಗಿದ್ದು, ಹಿಂದಿದಿಗೆ ಅದು ಭಾರವಾಗಿವ ಬಗ್ಗೆ ೪ ೫ ಕಲ್ಲುಗಳನ್ನು ಹೇರಿದ್ದರಂತೆ! ನಡುಹೊಳೆಯಲ್ಲಿ ೩-೪ ತೆರಿಗಳು ದೋಣಿಯಲ್ಲಿ ಬಂದು ಮುಂದಿ ಬಿದ್ದ ಸಮಯ ಪ್ರಯಾಣಕನಿಗೆ ಆಗ ತಾನು ಸವನೆ ಬಾಯಿಯಲ್ಲಿ ಬಿದ್ದಿದ್ದಂತಾಯಿತು!

— ಶ್ರೀ ರಘುನಾಥ ಸಮರ್ಥ —

ದತ್ತಾತ್ರೇಯ ಕೃಷ್ಣ ಸಾಂಡ್ಯಂ ಬ್ರದರ್ಸ

ಬೆಂಬೂರು] ಆರ್ಯೌಷಧಿ ಕಾರಖಾನೆ, [ಮುಂಬಯಿ

ಈ ಕಾರಖಾನೆಯಲ್ಲಿ ಯಂತ್ರಸಹಾಯವಿಲ್ಲದೆ ಶಾಸ್ತ್ರೋಕ್ತ ಪದ್ಧತಿಯಿಂದ
ತಯಾರಾದ ೬೦೦ಕ್ಕಿಂತ ಹೆಚ್ಚು ಔಷಧಗಳು ತಯಾರಾ ಇರುವವು

ಎಲ್ಲ ತರದ ಮಿದುಳಿನ ವಿಕಾರ, ತಲೆಶೂಲಿ ಇವುಗಳಿಗೆ

ಓರಿಜಿನಲ್ ಬ್ರಾಹ್ಮೀ ತೈಲ

* ಉಪಯೋಗಿಸಿರಿ *

ಕಾರವಾರ ಜಿಲ್ಲೆಯೊಳಗಿನ ವಿಜಂಟರು—

ಕಾರವಾರ— ಮೆಸರ್ಸ ಗೋವಿಂದ ಕೇಶವರಿ ಕಾಮತ ಎಂಡ್ ಸನ್ಸ
ಅಂಕೋಲಾ— ದಿ ಪೊಪ್ಯುಲರ್ ಸ್ಟೋರ್ಸ
ಗೋಕರ್ಣ - ಶ್ರೀ ವಾಸುದೇವ ಕೇಶವರಿ ಕಾಮತ
ಕುಮಟಾ— ಮೆಸರ್ಸ ಪುರುಷೋತ್ತಮ ಲಕ್ಷ್ಮಯ್ಯ ಶ್ಯಾನಭಾಗ ಎಂಡ್ ಬದರ್ಸ
ಶಿರಸಿ— ದಿ ವಾಸಿನ್ಸ ಫಾರ್ಮಸಿ ಸಿದ್ದಾಪುರ— ಮೆಸರ್ಸ ಆರ್ ಎನ್. ಬಟಕಳಕರ ಎಂಡ್ ಸನ್ಸ
ಸ್ವಾತಂತ್ರ್ಯವು— [೧] ಶ್ರೀ. ರಘುನಾಥ ಸಗುಣ ಶಾಣ್ಣೆ ಸಾವಕಾರ ಜೆಂರಿಯೆ, [೨] ನಾರಾಯಣ ಗೋವಿಂದ ಶೆಟಿಯಾ ಅವರು ಕ, [೩] ಗಣಪ ಸಾವ್ಯಳೋ ಜೋಶಿ ನಂಎನಗಳ್ತ ಪೋಲ್ಟ ಬಾಡ

ಸೂಚನೆ— ಎಜನ್ಸಿಯ ಬಗ್ಗೆ ಕೆಳಗಿನ ವಿಳಾಸಕ್ಕೆ ಒರೆಯಿರಿ

ಹುಬ್ಬಳ್ಳಿ ಶಾಖೆ, ಮರಾಠಾಗಲ್ಲಿ—ಹುಬ್ಬಳ್ಳಿ.

ಇವತ್ತಿಗಿ ನೋಣ ತೆಗೆಯಲಿಕ್ಕೆ ಒಬ್ಬನೇ ಆಂಬಗನಿದ್ದಾನು! ದೋಣಿಯು ಆಯೆ ದಂಡೆ ಮುಟ್ಟುವಾಗ ಕತ್ತಲೆ ಕವಿದಿತ್ತು. ಆದರೂ ಅಲ್ಲೊಂದು ದೀಪವಿದ್ದಿಲ್ಲ! ಪ್ರಯಾಣಕರು ಗಾಬರಿಯಾಗಿ ಹೀಗೂ ಮಾರ್ಗ ಕಾಣಬೇಕಾದರೆ ಠಕಠಕ್ಕವಾಯಿತು! ಅಧಿಕಾರಿಗಳು ಈ ದುರವ್ಯವಸ್ಥೆಯನ್ನು ಎಷ್ಟು ದಿನ ಹಾಗೆಯೇ ನಡಿಸಗೊಡುವರೆಂದು ಪ್ರಯಾಣಕರು ಪ್ರಶ್ನೆ ಮಾಡುತ್ತಾರೆ

ಸಂತೆಗೋಳಿಯ ವೈತರೊಬ್ಬರು ಬರೆಯುತ್ತಾರೆ -"ಸಂತೆಗೋಳಿಯಲ್ಲಿ ಸುಮಾರು ೧೦೦ ವರ್ಷಗಳ ಹಿಂದೆ ಸಂತೆ ಯಾಗುತ್ತಿತ್ತಂತ ಆದರಿಂದಲೇ ಈ ಊರಿಗೆ ಸಂತೆಗೋಳಿ ಯೆಂಬ ಹೆಸರು ಬಿದ್ದಿದೆ ಸಂತೆಗೋಳಿ ಊರಿನ ಸುತ್ತು ಮ್ಮಾಲ್ಲು ಈಗ ೨೩ ಹಳ್ಳಿಗಳಿದೆ ಹಿಂದೆ ಈ ಹಳ್ಳಿಗಳಲ್ಲಿ ಹೇರಳ ಭತ್ತ, ರಾಗಿ ಮುಂತಾದ ಧಾನ್ಯ-ದವಸಗಳು ಬೆಳೆಯುತ್ತಿದ್ದವು. ಈಗ ಈ ಹಳ್ಳಿಗಳ ಸುತ್ತ ಒಂದೆ ಬೆಟ್ಟ ಬೆಳೆದು ಒಂದೊಂದೇ ಊರು ನಿರ್ಜನವಾಗಹತ್ತಿದೆ ಪ್ರತಿಯೊಂದು ಹಳ್ಳಿಯು ಚಳಿಜ್ವರ ಮೊದಲಾದ ರೋಗಗಳ ತವರುಮನೆಯಾಗಿದೆ. ನಿಗರವಾಸಿಗಳ್ಯಾರಾದರೂ ಈ ಊರುಗಳನ್ನೂ, ಊರ ಜನರ ಜೀವನವನ್ನೂ, ಅವರು ಅನುಭವಿಸುತ್ತಿರುವ ಸುಖ-ದುಃಖಗಳನ್ನೂ ನೋಡಿದರೆ ಮರುಮರೆಗೆ ಮರೆಗುತ್ತಾರೆ ಆವರಿಗೆ ಔಷಧೋಪಚಾರ ಏನೂ ವ್ಯವಸ್ಥೆಯಿರುವದಿಲ್ಲ ಬೇನೆಬಿದ್ದವರಾರಾದರೂ ಬದುಕಿ ಉಳಿದರೆ ಅದೊಂದು ಯಮನ ಕೃಪೆಯೇ ಎಂದು ತಿಳಿಯಬೇಕು ರಸ್ತೆ-ಸಂಕಗಳ ಕಥೆಯಾದರೂ ಅಷ್ಟೇ. ಕೋಡಾಣಯವಿದೆ ಊರುಗಳಿಗೆ ಸಂತೆಗೋಳಿಯ ಸುತ್ತಲೂ ಇಂಚಿನಿಯರ ಆಫಾಸಕ್ಕವರ ಆಫಾಸಕ್ಕದಲ್ಲಿ ದ್ದಾಗ ಚಲೋ ಸ್ಥಿತಿಯಲ್ಲಿದ್ದವು ಲೋಕಲ್ ಬೋರ್ಡಿನವರ ಆಧಿಪತ್ಯದಲ್ಲಿ ಬಂದಂದಿನಿಂದ ಅವು ತೀರ ಕೆಟ್ಟು ಹೋಗಿವೆ ಈ ಮಾರ್ಗಗಳ ಮೇಲಿಂದ ನಡೆದಾಡುವವರಿಗಿ ಗಾಡಿ-ದಂಡಿಗಳನ್ನು ನಡಿಸುವದಾಗಲಿ ಒಂದು ತರದ ಶಿಕ್ಷೆಯನ್ನನುಭವಿಸಿದಂತೆಯೇ ಆಗುತ್ತದೆಂದು ನಮೂದಿಸಿದರೆ ಅದೆಂಥ ಆತಿಶಯೋಕ್ತಿಯಾಗಲಿಕ್ಕಿಲ್ಲ. ಕುಮಟೆಯಿಂದ ಸಂತೆಗೋಳಿಗೆ ಬರಬೇಕಾದರೆ ೪-೫ ಹಳ್ಳಗಳು ತಗಲುತ್ತವೆ, ಅವುಗಳ ಮೇಲೆ ಸಂಕಗಳಿಲ್ಲ! ಮಳೆಗಾಲದಲ್ಲಿ ಕಟ್ಟಿಸುವ ಹಂಗಾಮಿ ಸಂಕಗಳ ಮೇಲಿಂದ ತಿರುಗಾಡುವದೆಂದರೆ ಸರ್ಕಸದಲ್ಲೊಂದು ಚಮತ್ಕಾರ ಮಾಡಿ ತೋರಿಸಿದಂತೆಯೇ ಸರಿ! ಇಂದೆಲ್ಲ ನಾಳೆ ತಮ್ಮ ಕಷ್ಟಗಳು ಪರಿಹಾರ ಹೊಂದುವೆವೆಂದು ನಂಬಿ ನಂಬಿ ಈ ಹಳ್ಳಿಗಳ ಜನರು ಈ ತನಕ ಜೀವ ಹಿಡಿದುಕೊಂಡಿದ್ದಾರೆ ಇನ್ನೂ ಅವರಿಗೆ ಹಾಗೆಯೇ ಸುವಿನಯಕ್ಕ ಹಾಡಿ ಕಾಯುತ್ತ ಸಿದ್ದರಿರಲು ಹೇಳುವದು ಕ್ರೂರ ನಿರ್ದಯತನವಾಗುವದು. ಸರಕಾರದವರು ಅವರೇ ತಮ್ಮ ಅಭಿಪ್ರಾಯವನ್ನು ಸ್ಪಷ್ಟಗೊಳಿಸಬೇಕಾಗಿ ವೈಸ್ಯದಿಂದ ಬೇಡಿಕೊಳ್ಳುತ್ತಿದ್ದಕ್ಕೆ ಮೇಲೆ ಹೇಳಿದ ೨೩ರೂ ಹಳ್ಳಿಗಳನ್ನು ಬೆಟ್ಟದಲ್ಲಿ ಸೇರಿಸಬೇಕೆಂದು ಸರಕಾರಕ್ಕೆ ಆಸಿಸುತ್ತಿದ್ದರೆ ಅವರು ಹಾಗೆ ಸ್ಪಷ್ಟವಾಗಿ ಹೇಳಿ, ಈ ಎಲ್ಲ ಹಳ್ಳಿಗಳ ಜನರಿಗೆ ಬೇರೊಂದು ಕಡೆಯಲ್ಲಿ ಮನೆ ಮಾರು ಮಾಡಿಕೊಂಡುಕೊಳಿಯಲು ವ್ಯವಸ್ಥೆ ಮಾಡಿಕೊಡಬಹುದು ಹಾಗೆ ಮಾಡಲು ನಮ್ಮ ಜನರ ತಯಾರಿದ್ದಿದೆ ಅವಲ್ಲಿನ ಈ ಹಳ್ಳಿಗಳ ಜನರು ತಮ್ಮ ಹಳ್ಳಿಗಳಲ್ಲೇ ಉಳಿಯಬೇಕೆಂದು ಹಳ್ಳಿಗಳಿಗೆ ಹೊಂದಿಕೊಂಡಿರುವ ಹೊಲ ಭೂಮಿಗಳನ್ನು ರೂಪಿತ ಮಾಡಿ ಸಾಗುವಳಿ ಮಾಡಿ ಬದುಕಬೇಕು, ಹಳ್ಳಿಗಳ ಸಂಪತ್ತು ಬೆಳಸಿ ಸುವಿಗಳಿಗಾಗಿ ಜೀವಿಸಬೇಕು ಎಂದು ಸರಕಾರದ ಇಚ್ಛೆಯಿರುತ್ತಿದ್ದಾದರೆ, ಸರಕಾರವು ಎಳಂಬ ಮಾಡದೆ ಅವರಿಗೆ ತಳ್ಳ ಮಾರ್ಗ-ಸಂಕಗಳ ಸೌಕರ್ಯ, ಔಷಧೋಪಚಾರದ ಸೌಕರ್ಯ, ಸಾಗುವಳಿಯ ಸೌಕರ್ಯ ಮೊದಲಾದವುಗಳನ್ನು ಪೂರೈಸಿಕೊಡಬೇಕು. ಸರಕಾರದ ಬಳಿ ಹಣವಿಲ್ಲೆಂಬ ಸೂತ್ರ ನಾವು ಮಂಡಿತ ಒಪ್ಪಲಾರೆವು ಶಾರೆಮಾರೆ ಮುಂತಾದ ನಗರಗಳಲ್ಲಿ ಡಾಂಬರ ರಸ್ತೆ, ಹರವಾದ ಮಾರ್ಗಗಳು, ಭವ್ಯವಾದ ಪೂಲುಗಳು ಮುಂತಾದ ತರತರದ ಸೌಕರ್ಯಗಳನ್ನು ಪೂರೈಸಲಿಕ್ಕೆ ಸರಕಾರದ ಬಳಿ ದುಡ್ಡಿದೆ, ಮತ್ತು ನಮ್ಮಂತಹ ಹಳ್ಳಿಯ ಜನರ ಬಗ್ಗೆ ಬಡತನದ ಕೆಲವು ಅನುಕೂಲತೆಗಳನ್ನು ಒದಗಿಸಿ ಕೊಡಲಿಕ್ಕೆ ಮಾತ್ರ ದುಡ್ಡಿಲ್ಲ, ಎಂದು ಹೇಳಿದರೆ ಆ ಮಾತು ನಂಬುವವರು ನಿರ್ಬುದ್ಧರು ನಾವಿನ್ನೂ ಅಗಿದ್ದಾಗಿ ಸರಕಾರಕ್ಕೆ ನಮ್ಮ ಜನರ ಒಗ್ಗೆ ವಿಷವರೂಪ ಕಠಿಕರವೆನಿಸುತ್ತಿದ್ದರೆ ಅವರು ಕೂಡಲೆ ನಮ್ಮ ಉದ್ಧಾರದ ವ್ಯವಸ್ಥೆ ನೂಡಬೇಕು ನಮಗೆ ಒಂದೆರಡು ಚಿಕಿತ್ಸಾಲಯಗಳನ್ನು ತೆರೆದು ಕೊಡಬೇಕು, ಮಾರ್ಗ-ಸೌಕರ್ಯ ಮಾಡಿಕೊಡಬೇಕು, ಜಂಗಲ-ಜಿಳನದಗೆಯ ಉದ್ಯವದಿಂದ ನಮ್ಮನ್ನು ಕಾಯಬೇಕು, ಬಂಜರ ಬಿದ್ದ ಭೂಮಿಗಳ ಸಾಗುವಳ್ಯಯ ಅನುಕೂಲತೆಗಳನ್ನು ಶೂರ್ತಿಪಡಿಸಬೇಕು ಈಗಾಗಲಿದ್ದರೂ ಕಾಲಾಂತರದಲ್ಲಿ ಈ ಹಳ್ಳಿಯ ಜನರು ಆದರ ಯೋಗ್ಯ ಪ್ರತಿಫಲವನ್ನು ಸರಕಾರಕ್ಕೂ ಸಮಾಜಕ್ಕೂ ಕೊಡದೆ ಇರಲಾರರು" ಇತ್ಯಾದಿ

ಕವಡಿಯ ರಾ। ಮಂಧವ ಮುಕುಂದ ಶಾನಭಾಗ ಇವರು ಅಧ್ಯಾಪಕರು, ಉಚ್ಚ ಅಧ್ಯಾಪಕ್ಕಾಗಿ ನಿಲ್ಲುವಿಗೆ ಹೋಗಿದ್ದ ನಂಗಿತ ಈ ಹಿಂದೆ "ವೃತ್ತ"ದಲ್ಲಿ ಪ್ರಕಟವಾಗಿದೆ ಯಷ್ಟೇ. ರಾ। ಶಾನಭಾಗರು ತಮ್ಮ ಅಭ್ಯಾಸ ಮುಗಿಸಿ, ಕೆಲವು ದಿನಗಳ ಹಿಂದೆ "ಕೊಂಟಿವಿಯಾಂಕಾಮೆಸೇ" ಎಂಬ ಇಟಾಲಿಯನ್ ಉಗಿಸಡಿಗದ ಮೇಲಿಂದ ಸ್ವದೇಶಕ್ಕೆ ಮರಳಿ ಬರಲು ಹೊರಟಿದ್ದರು ಈಗಿ ನೋಮವಾರವೇ ಈ ಹಡಗ ಮುಂಬಯಿಗೆ ತಲ್ಪಬೇಕಿತ್ತು. ಆದರೆ ಅದು ಇನ್ನೂ ಬಂದೆ ತಲ್ಪಿರುವದಿಲ್ಲ ಉಗಿಸಡಿಗವೂ ಆದರಿಂಗಿನ ಎಲ್ಲ ಪ್ರಯಾಣಕರೂ ಸುಖರೂಪ ಇದ್ದಾರೆಂದು ಅಲ್ಯಂಬೆಯ ವಾರ್ತೆ ಬಂದಿದೆ ಹಡಗವಿರುವ ನಿಶ್ಚಿತ ಸ್ಥಾನ ಮಾತ್ರ ಇನ್ನೂ ತಿಳಿಯ ಬಂದಿಲ್ಲ ಈ ಹಡಗವು ತಿಯಿನಿಸುವಾ. ಬಂದರಕ್ಕೆ ಹೋಗಿರಬಹುದಾಗಿ ಕೆಲವರ ತರ್ಕವಿದೆ, ಜಾನಾ, ಸಿಂಗಾಪುರ ಬದಿಗೆ ಹೋಗಿರಬಹುದಾಗಿ ಬೇರೆ ಕೆಲವರು ಅಮ್ಮುತ್ತಾರೆ.

ಪೊನ್ನಾವರ— ತಾ ೧೨ನೇಗೆ ಇಲ್ಲಿ ಮದ್ಯಸೂಚನೆ ಬಂಧ ದಿನವು ಒಳ್ಳೇ ಉತ್ಸಾಹದಿಂದ ಪಾಲಿಸಲ್ಪಟ್ಟತು ಮುಂಜಾನೆ ಪ್ರಭಾತಫೇರಿಯಾಯಿತು ಊರ ಪ್ರಮುಖರೂ ಎಲ್ಲ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಫೇರಿಗೆ ಬಂದಿದ್ದರು. ಮಧ್ಯಾಹ್ನದಲ್ಲಿ ಆಂಗಡಿಗಳೆಲ್ಲ ಮುಚ್ಚಲ್ಪಟ್ಟಿದ್ದವು ಸಂಜೆಯಲ್ಲಿ ೪ ಘಂಟೆಗೆ ಸುರಾರಾಕ್ಷಸನ ಮೆರವಣಿಗೆಯಾಯಿತು ಮೆರವಣಿಗೆಯು ಊರನ್ನೆಲ್ಲ ಸುತ್ತಿ ಟ್ಟಿಸ್ಸರ ಸಭಾಗ್ರಹಕ್ಕೆ ಬಂದು ಮುಟ್ಟುತ್ತಲೇ ಅಲ್ಲಿ ಸಭೆ ಯಾಯಿತು. ಜಿಲ್ಲಾಧ್ಯಕ್ಷ ರಾ। ಶಿವರಾವ ಶಾಸ್ತ್ರಿಯವರು ಕುಡುಕನಿನದ ದುಷ್ಪರಿಣಾಮಗಳನ್ನು ತಿಳಿಸಿ ಹೇಳಿ ನಮ್ಮ ಇದೀ ನಿತ್ಯಜೀವಿಗಿಂದ ಮಾದಕ ವಸ್ತುಗಳನ್ನು ಹೊರ ಗಟ್ಟಿದರ ಬಗ್ಗೆ ಸರಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಭಂಗಿ ಸೇದುವ ದುಶ್ಚಟಕ್ಕೆ ಬಲಿಬಿದ್ದು ಮನೆಗಾರು ಹಾಳು ಮಾಡಿಕೊಂಡವನೊಬ್ಬನು ಸಭೆಯಲ್ಲೇ ಇನ್ನು ಮುಂದೆ ತಾನು ಭಂಗಿ ಸೇದುವದಿಲ್ಲೆಂದು ಹೇಳಿದು ತನ್ನ ಗುಡಗುಡಿಯನ್ನು ಸುರಾರಾಕ್ಷಸನ ಹೋಳಿಯಲ್ಲಿ ಬಗೆಬನು.

ಇಲ್ಲಿಯ ಶ್ರೀಮಂತ ಜಮಾನದಾರರಾದ ರಾ। ನಿಸಾಯಕ ಭಟ್ಟ ಕಾಶಿ ಇವರು ಮೊನ್ನೆ ಶಕ್ರವಾರ ಮುಂಜಾನೆ ಬಟ್ಟೀ ಹೊರಕಡೆಯ ಬೇನೆಯಿಂದ ಕೈಲಾಸವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ ಇವರು ಜಿಲ್ಲಾ ಲೋಕಲ್ ಬೋರ್ಡಿನ ಸಭಾಸದರಾಗಿಯೂ ಭೂಭದ್ರ ಬೇಂಕಿನ ಡೈರೆಕ್ಟರರಾಗಿಯೂ ಸಾರ್ವಜನಿಕ ಸೇವೆ ಮಾಡಿದ್ದಾರೆ

ಕೊಂಗ್ರೆಸ ಸನಸ್ಕರನ್ನು ಮಾಡುವ ಕೆಲಸ ನಡೆದಿದೆ. ಅವರೆ ಈ ತನಕ ಆದ ಸದಸ್ಯರೆ ಸಂಖ್ಯೆ ೧೦೦೬ ಮುಟ್ಟಿಸುವದಿಲ್ಲವಂತೆ! ಜನರು ಹೀಗೆ ತಾತ್ಸಾರ ಮಾಡಲಾಗದು. ತಾವಾಗಿ ಮುಂದೆ ಬಂದು ಸದಸ್ಯರಾಗಬೇಕು.

ಕಳೆದ ವಾರ ಪ್ರಕಟವಾದ ಆರ್ಡರ್ ಬೇಂಕಿನ ಅಧ್ಯಕ್ಷೆ ರಾ। ಮಾಧವನಾಯ ಕಿನೆಯವರ ಮೇಲಿನ "ಶ್ರೇಷ್ಠರ್ನ ಟೀಕೆಗೆ ಪ್ರತ್ಯುತ್ತರವೆಂದು ಇನ್ನೊಬ್ಬ ಪ್ರೇಕ್ಷಕರು ಬರೆಯುವದೇನಂದರೆ – "ರಾ। ಕಿನೆಯವರ ಕುರಿತು ಪ್ರೇಕ್ಷಕನು ಬರೆದಿದ್ದು ನಿಜವಿರುವದಿಲ್ಲ ರಾ। ಕಿನೆಯವರ ಕಾನೂನು ಬದ್ಧ ದಕ್ಷ ಆಡಳಿತೆಯಿಂದ ಹಾನಗೊಗಾದ ಹಾಗೂ ಬೇಂಕಿನ ನೇತೃತ್ವವನ್ನು ತಮ್ಮ ಕಡೆಗೆ ಎಳಕೊಂಬು ತಮ್ಮ ಗೌರವ-ಪ್ರತಿಷ್ಠೆಗಳನ್ನು ಬೆಳಿಸಲೆಳಸುವ ಹಲವು ಜನರಲ್ಲೇ ಈಗಿನ ಆಡಳತೆವಾರ ವಿರುದ್ಧ ಇಲ್ಲದ-ಸಲ್ಲದ ಟೀಕೆಗಳನ್ನು ಮಾಡುತ್ತಾ, ನಿರಾಧಾರ ಸುದ್ದಿಗಳನ್ನು ಹರಡುತ್ತಾ ತಿರುಗುತ್ತಿದ್ದಾರೆ ಪ್ರೇಕ್ಷಕನೂ ಸತ ಆವರೆಲ್ಲೂಬ್ಬನಾಗಿರಬೇಕು ಹತ್ಯಕ ಬೇಕಿನಲ್ಲಿ ರಾ। ಆರ್ ಬಿ ನಾಯ್ಕರು ವಿಚಾರಣೆ ಕಡಿಸಿ ದಾಗ ರಾ। ಕಿನೆಯವರು ಆವೇದರಿಂದ ಮಾತಾಡಿದರೆಂದು ಹೇಳುವದಕ್ಕಿಂತ ರಾ। ಕಿನೆಯವರ ವಿಮೋಧಿಗಳ ಮುಂದಾಳುಗಳಾದ ರಾ। ಶಿವರಾವ ಶಾಸ್ತ್ರಿಯವರು ಅತಿಶ್ಯಸಂಗ ನುಡಿ ನಡುನುಡಿಯ ಆವೇದದ ಮಾತುಗಳನ್ನಾಡಿದರೆಂದು ಹೇಳುವದೇ ಸರಿಯಾದೀತು ರಾ। ಶಾಸ್ತ್ರಿಯವರು ಸ್ವತಃ ಅಪಿಲಂಬಿರುವದಿಲ್ಲ; ಯಾವ ಅಪಿಲಂಬನೆಯೂ ಅವರಿಗೆ ಬಕಾಲಕು ಕೊಟ್ಟಿರುವದಿಲ್ಲ, ಅಲ್ಲಿ ಅವರಿಗೆ ಬರುವ ಕಾರಣವೇ ಇದ್ದಿಲ್ಲ, ನಡುವೆ ಒಳಯಾಕೆ ಮಾತಾಡುವ ಅಧಿಕಾರ ವಂತೂ ಎಳ್ಳಷ್ಟೂ ಇದ್ದಿಲ್ಲ ರಾ। ನಾಯ್ಕರ ಮುಂದೆ ರಾ।

(ಇನೇ ಶಾನಾ ಮೇಲೆ ಮುಂದರಿಸಿದೆ)

ಸಹ್ಯಾದ್ರಿ ಫಾರ್ಮಸಿ, ಕುಮಟಾ.



ಈ ಫಾರ್ಮಸಿಯಲ್ಲಿ ಎಲ್ಲ ತರದ ಆಯುರ್ವೇದ ಔಷಧಗಳು ವೈದ್ಯಶಾಸ್ತ್ರಕ್ರಮದಂತೆ ತಯಾರಿಸಲ್ಪಡುತ್ತವೆ.

ಇವುಗಳ ಸೇವನೆಯಿಂದ ರೋಗಿಗಳಿಗೆ ಒಳ್ಳೇ ಪ್ರಯೋಜನ ದೊರೆಯುತ್ತದೆ

ಡಾ॥ ಎಸ್. ಕೇ. ಭಟ್ಟ ಹಳಕಾರ,

ಎಲ್ ಏ ಎಮ್. ಎಸ್. ಎಂಡ್ ಏ ವಿ (ಮೈಸೂರು)

ಕುಮಟಾ. ಉ ಕನ್ನಡ

ಯುದ್ಧ-ಪೂರ್ವರಂಗ!

(೩ನೇ ಪಾನಿಂದ ಮುಂದುವರಿದ್ದು)

ರನ್ನು ಹೆಂಡರಸನ್‌ರಿಗೆ ಮಂಗಳವಾರ ಸಂಜೆ ೬ ಘಂಟೆಗೆ ತನ್ನ ಉತ್ತರವನ್ನ ಕಳುಹಿಸಲು ಅದು ಲಂಡನ್ನಿಗೆ ರಾತ್ರೆ ತಲ್ಪಕು ಕೂಡಲೆ ಮುಖ್ಯ ಪ್ರಧಾನರಾದ ಮಿ|| ಚೆಂಬರಲೇನರವರೂ, ವಿದೇಶ ಸಚಿವರಾದ ಹೆಲಿಫ್ಯಕ್ಸ ದೊರೆಗಳೂ ಅದನ್ನು ವಿಚಾರಿಸಿದರು ಹಿಟ್ಲರನ ಉತ್ತರ ಜರ್ಮನ್ ಭಾಷೆಯಲ್ಲಿ ಬರಿದಿತ್ತು. ಅದನ್ನು ಸರಿಯಾಗಿ ಭಾಷಾಂತರಿಸಲಿಕ್ಕೆ ಕೆಲ ಹೊತ್ತು ತಗಲಿತು. ಹೆಂಡರಸನ್‌ರವರಿಗೆ ಹಿಟ್ಲರನು ಬಾಯಿಯಿಂದ ಕೆಲ ವಿವರ ತಿಳಿಸಿದ್ದನು, ಅದನ್ನು ಹೆಂಡರಸನ್‌ರು ಬರೆದು ಕೊಳುಹಿದ್ದರು. ಮರಿದಿನ ಬೆಳಿಗ್ಗೆನಗ|| ಘಂಟೆಗೆ ಪ್ರೆನು ಪ್ರಧಾನ ಮಂತ್ರಿಯ ಸಭೆ ಸೇರಿ ೧|| ತಾಸಿನ ತನಕ ಹಿಟ್ಲರನ ಉತ್ತರ ಸಂಪೂರ್ಣವಾಗಿ ಸಮಾಲೋಚಿಸಲ್ಪಟ್ಟಿತು ಪೋಲಂಡ ಸರಕಾರದೊಡನೆ ಆಲೋಚನೆ ಮಾಡಬೇಕೆಂದು ಗೊತ್ತಾಯಿತು. ಜರ್ಮನ್ ಸರಕಾರವು ಕಳುಹಿದ ಉತ್ತರ ೩|| ಪುಟಿಗಳಿದಿತ್ತು. ಪ್ರಧಾನ ಮಂತ್ರಿವು ಹಿಟ್ಲರನ ಉತ್ತರಕ್ಕೆ ಪ್ರತ್ಯುತ್ತರವನ್ನು ತಯಾರಿಸಿತು ಆ ಕಾಲದಲ್ಲಿ ಪ್ರಧಾನ ಮಂತ್ರಿಯವು ತಜ್ಞರ ಸಲಹೆಯನ್ನೂ ಪಡಿಕೊಂಡಿತು. ಆ ಮೇಲೆ ಹಿಟ್ಲರನಿಗೆ ಬುಧವಾರ ಅಪರಾಹ್ನ ತಂತಿಯಿಂದ ಪ್ರತ್ಯುತ್ತರವನ್ನು ಸೇನೆಯಾಗಿ ಅದೇ ಸಂದೇಶ ವಿಮಾನ ಮಾರ್ಗವಾಗಿ ದೂತರ ಕಡೆ ಪತ್ರ ಬರೆದುಕೊಟ್ಟು ತಮ್ಮ ರಾಯಭಾರಿಗಳಾದ ಹೆಂಡರಸನ್‌ರವರ ಕಡೆ ಬ್ರಿಟಿಶ ಪ್ರಧಾನ ಮಂತ್ರಿಯವು ರವಾನಿಸಿತು ಆಗ ಮಧ್ಯರಾತ್ರೆ ಯಾಗಿತ್ತು. ಹೆಂಡರಸನ್‌ರು ವಿಳಂಬ ಮಾತಾಡೆ ಜರ್ಮನಿಯ ವಿದೇಶ ಸಚಿವರಾದ ರಿಬೆನ್‌ಟ್ರೊಪ್‌ರ ಕಡೆ ಹೋಗಿ ಉತ್ತರ ಕೊಟ್ಟು ತಾವು ನಿಮಿಷಗಳ ತನಕ ಮಾತನಾಡಿ ತಮ್ಮ ರಜೇರಿಗಿ ಹಿಂತಿರಿಗಿದರು ರಿಬೆನ್‌ಟ್ರೊಪ್‌ರು ಹಾಗೆಯೇ ಹಿಟ್ಲರನ ನಿವಾಸಸ್ಥಾನಕ್ಕೆ ಹೋಗಿ ಬ್ರಿಟಿಶರು ಕಳುಹಿದ ಉತ್ತರವನ್ನೂ ಹೆಂಡರಸನ್‌ರು ತಮ್ಮ ಕಡೆ ತಿಳಿಸಿದ ವಿವರಗಳನ್ನೂ ಹಿಟ್ಲರನಿಗೆ ಅರುಹಿಕೊಂಡರು. ಆತ್ತ ಹಿಟ್ಲರನು ಈ ವಿವಾದದ ಕುರಿತು ರುಶ್ಯ ಸರಕಾರದೊಡನೆ ವಿಚಾರವಿನಿಮಯ ಮಾಡುತ್ತಿದ್ದನಾಗಿಯೂ, ಪೋಲಂಡದ ಉತ್ಕೃರ್ಷ ಜರ್ಮನಿಯಂತೆ ರುಶ್ಯರೂಗ ಬಹುಶ್ರತ್ಪದಿಂದು ತಿಳಿಸುತ್ತಿದ್ದನಾಗಿಯೂ ಹೇಳುತ್ತಿರೆ ಮುನ್ನಾಣ ದಿನ ರಾತ್ರೆ ಹಿಟ್ಲರನು ಪ್ರಧಾನ ಮಂತ್ರಿಯವನ್ನು ಸೇರಿಸಿ ಯುದ್ಧಾಧಿಕಾರಿಗಳನ್ನು ನೇಮಿಸಿದ್ದನು. ತಮ್ಮ ತರುವಾಯ ಸೇನಾಪತಿ ಗೋರಿಂಗರವರು ಜರ್ಮನಿಯ ಪ್ರಜೆಗಳೆಂತಲೂ ಇವರಿಗೇ ಎಲ್ಲರೂ ಅಂಕಿತರಾಗಿ ನಡೆಯಬೇಕೆಂತಲೂ ನಿಶ್ಚಯಿಸಿಕೊಂಡಿದ್ದನು. ಇದಲ್ಲದೆ ದೊಡ್ಡ ದೊಡ್ಡ ಯುದ್ಧಕಲಾಕೋವಿದರಿದೊಂದು ಯುದ್ಧ ಸಲಹಗಾರ ಮಂಡಳವನ್ನು ನೇಮಿಸಿದ್ದನು ರಿಬೆನ್‌ಟ್ರೊಪ್‌ರವರು ಬ್ರಿಟಿಶರ ಪ್ರತ್ಯುತ್ತರಕ್ಕೆ ಉತ್ತರ ಕೊಡಿಲಿಲ್ಲ, ಬಾಯಿಯ ಂದಲೇ ತಮ್ಮ ಅಂಬೋಣವನ್ನು ತಿಳಿಸಿದರ ಎರುವಾಲ ಲಂಡನ್ನಿಲ್ಲಿ ಮಿ|| ಚೆಂಬರಲೇನರು ಸಸಕುಹರಿಯುವ ಮುಂಚೆ ತಮ್ಮ ನಿವಾಸಸ್ಥಾನಕ್ಕೆ ವಿದೇಶ ಇಲಾಖೆಯ ಕಾರ್ಯದರ್ಶಿಗಳನ್ನು ಕರಕೊಂಡು ಮುಂತಾಲು ತಾನಿನ ತನಕ ಆಲೋಚನೆ ಮಾಡಿದರು ಆ ಮೇಲೆ ತಮ್ಮ ಕಚೇರಿಗೆ ಹೋಗಿ ಗೃಹಮಂತ್ರಿಗಳೊಡನೆ, ಸಂರಕ್ಷಕ ಇಲಾಖೆಯ ಅಧಿಪತಿಗಳೊಡನೆ ಆಲೋಚನೆ ಮಾಡಿದರು ಆಮೇಲೆ ಮುಖ್ಯವಮ್ಯ ಸೈನ್ಯಾಧಿಕಾರಿಗಳ ಸಭೆ ಸೇರಿ ವಿಜಯೋವಿನಿಮಯವಾಯಿತು ರಾಜ್ಯತ್ಯಾಗ ಮಾಡಿದ ಎಡ್ವರ್ಡರವರು ಈಗ ಸ್ಪೆನ್ಸ್ ದೇಶದ ಕೌಸ್ಟದಲ್ಲಿದ್ದಾರೆ, ಅವರು ಇತಾಲಿಯ ಅರಸರಂದ ಇಮಾನ್ಯುಅಲ್‌ರವರಿಗೆ ಮಧ್ಯಸ್ಥರಾಗಿ ಯುದ್ಧನಿವಾರಣ ಮಾಡಲು ಕಳವಳಗೊಂಡು ವಿನಂತಿ ಮಾಡಿಕೊಂಡರು ಶಾಂತಿಕಾರ್ಯಕ್ಕಾಗಿ ಇಮಾನ್ಯುಅಲ್ ಅರಸರು ಮಧ್ಯಸ್ಥಂಗಬೇಕಾಗಿಯೂ, ಜೂಲೋಕದ ನಾಗರಿಕ ನಾತೆಯಿಂದ ತಾವು ಈ ವಿನಂತಿ ಮಾಡಿಕೊಳ್ಳುತ್ತೇವಾಗಿಯೂ ಎಡ್ವರ್ಡರವರು ಇಮಾನ್ಯುಅಲ್‌ರವರಿಗೆ ತಂತಿಯಿಂದ ತಿಳಿಸಿದರು ಮಹಾಯುದ್ಧದಲ್ಲಿ ಇತಾಲಿಯ ಸೈನಿಕರೊಡನೆ ತಾವು ಕೋಂಡಿದ್ದವಾಗಿಯೂ, ಆ ಬಂಧುಭಾವದಿಂದ ತಾವು ಈ ವಿನಂತಿಯನ್ನು ಮಾಡುತ್ತೀವಾಗಿಯೂ ಎಡ್ವರ್ಡರವರು ತಿಳಿಸಿದರು.

***

ಮಂಗಳವಾರ ಲಂಡನ್ನಿನಲ್ಲಿ ಬ್ರಿಟಿಶ ಪಾರ್ಲಿಮೆಂಟಿನ ಸಭೆ ಸೇರಿತು ಮುಖ್ಯ ಪ್ರಧಾನರಾದ ಮಿ|| ಚೆಂಬರಲೇನರವರಿಗೆ ಎಲ್ಲರೂ ಮುದದಿಂದ ಸ್ವಾಗತ ಒಯ್ದಿಸಿದರು ಮುದುಕನು ಉಲ್ಲಾಸಭರಿತನಾಗಿದ್ದನು ಸರಿಯಾಗಿ ಮಧ್ಯಾಹ್ನ ೩ ೫೦ ಸೆಂಟೆಗೆ ಮಿ|| ಚೆಂಬರಲೇನರು ಭಾಷಣ ಮಾಡ ಎದ್ದನಿಂತ ಕೂಡಲೆ ಪಾರ್ಲಿಮೆಂಟಿನಲ್ಲಿ ಜಿವ್ವಾಳಿಗಳು ಸೋಜವಾಯಿತ.! ಪತ್ರಕರ್ತರು ತಾಳ್ಮೆಯಿಂದ ನಡಕೊಳ್ಳಬೇಕಾಗಿ ಮಿ ಚೆಂಬರಲೇನರು ಮೆಟ್ಟುಮೊದಲು ಬಿನ್ನೈಸಿಕೊಂಡರು. ಹಿಟ್ಲರನು ನಡಿಸಿದ ಪತ್ರವ್ಯವಹಾರವನ್ನು ಪ್ರಕಟಿಸಲು ಇದೀಗ ಸಾಧ್ಯವಲ್ಲವೆಂದು ಮಿ|| ಚೆಂಬರಲೇನರು ನುಡಿದು, ಪೋಲಂಡದ ಸಮಸ್ಯೆಯ ಮೇಲೆ ಯೇ ಎಲ್ಲವೂ ಹೊಂದಿಕೊಂಡಿ ಗಿ ಪೋಲಂಡಕ್ಕೆ ಬ್ರಿಟಿಶ ಸರಕಾರವು ಕೊಟ್ಟ ಒಪ್ಪಗಳನ್ನೆಲ್ಲ ಪಾಲಿಸಿಲ ಹೊಸಗಾರಿಕೆಯನ್ನು ತಾವು ಹಿಟ್ಲರನಿಗೆ ಸ್ಪಷ್ಟವಾಗಿ ತಿಳಿಸಿರುವೆನೆಂದರು ಕರ್ಮಧರ್ಮ ಸಂಯೋಗದಿಂದ ಯುದ್ಧವಾದ್ದಲ್ಲಿ ಅನರ್ಧಪ್ರಯೋಗದಿದ್ದಲ್ಲಿ ಅದನ್ನು ಎದುರಿಸಲಿಕ್ಕೆ ತಾವು ಸಿದ್ಧರಿರುವೆವಾಗಿಯೂ, ಹಿಟ್ಲರನ ಉತ್ತರವನ್ನೇ ತಾವು ಹಾಧ್ಯಸುತ್ತಿರುವೆವಾಗಿಯೂ, ಕ್ಷಣಾರ್ಧದಲ್ಲಿ ರಣರಂಗಕ್ಕೆ ಕೂಡು ಪೂಡಲು ಸೈನ್ಯಸಿದ್ಧತೆಗಳಾಗಿರುವವಾಗಿಯೂ ಮಿ|| ಚೆಂಬರಲೇನರು ಸ್ಥಿರ ಚಿತ್ತದಿಂದ ನುಡಿದರು ಯುದ್ಧಕಾಲದಲ್ಲಿ ಕ್ರಮಿಸತಕ್ಕ ದಾರಿಯನ್ನು ಹಡಗಗಳಿಗೆ ತಿಳಿಸಿರುವೆವಾಗಿಯೂ ಅವರು ನುಡಿದರು "ನಾಗರಿಕರ ರಕ್ಷಣೆಯ ವ್ಯವಸ್ಥ ಇಟ್ಟಿದೆ ಶಾಲೆಗೆ ಹೋಗುವ ವಿದ್ಯಾರ್ಥಿಗಳಿಗೆ ಸುರಕ್ಷಿತ ಸ್ಥಳಕ್ಕೆ ಒಯ್ಯಲ್ಪಡುವದು ಚಿಕ್ಕ ಚಿಕ್ಕ ಕೂಸುಗಳು ಳೆ ತಾಯಂದಿರಿಗೂ ಗರ್ಭಣಿಯರಿಗೂ ಕುರುಡರಿಗೂ ರಕ್ಷಿಸಲೋಸುಗ ಸಕಲ ತಯಾರಿ ಇದೋಣಾಗಿದೆ. ಸೂಚಿನೆಯೂಮೊದಿಸಿ ಶಿಕ್ಷಕರು ಕೈಕೊಳ್ಳಬೇಕಾದ ಉಪಾಯಗಳ ತಾಲೀಮು ಮಾಡೋಣಾಗಿದೆ ಶತ್ರು-ವಿಮಾನಗಳ ಹಲ್ಲೆಯಾದರೆ ದೀಪ ನಂದಿಸಿ ಇರೀ ಭೂ-ಪ್ರದೇಶದೊಳಗೆ ಕಗ್ಗತ್ತಲೆ ಹುಟ್ಟುವಂತೆ ಅಲ್ಲಲ್ಲಿ ವಿಮಾನ-ತಾಲಾಯ ವಿದ್ಯಮಾನ ಕಾವಲು ನಾರರು ನೇಮಿಸಲ್ಪಟ್ಟಿದ್ದಾರೆ; ಎಲ ಕಾಸೂ ಇವರು ಕಾವಲು ಮಾಡುತ್ತಿರುವರು. ಸ್ಥಾಯಗೊಂಡವರು ಶುಶ್ರೂಷೆಗಾಗಿ ಹೊಸ ಚಿಕಿತ್ಸಾಲಯಗಳು ಸ್ಥಾಪಿಸೋಣಾಗಿವೆ." ಹೀಗೆ ಮಿ|| ಚೆಂಬರಲೇನರವರು ವಿವರಿಸಿ, "ಬ್ರಿಟಿಶರು ಮನೋನಿಶ್ಚಯ ಮಾಡುವದೇ ತಡ, ಒಮ್ಮೆ ಮನೋನಿಶ್ಚಯವಾದೊಡನೆ ಆವರು ಅದನ್ನು ತೊರೆಯುವವರಲ್ಲ!" ಎಂದು ನುಡಿದು ಮುದುಕರು ತಮ್ಮ ಬೆನ್ನನ್ನು ತಟ್ಟಿಕೊಂಡರು ವಿರೋಧ ಪಕ್ಷದ ಪ್ರಮುಖರಾದ ಮಿ|| ಲ್ಲಿಯ ವುರ್ಡ್‌ರವರೂ, ಸರ್ ಆರ್ಚಿಬಾಲ್ಡ ಸಿಂಕ್ಲೈರರವರೂ ಮಿ|| ಚೆಂಬರಲೇನರವರ ಧಿರ್ಧಾರವನ್ನು ಸ್ವಾಗತಿಸಿ, ತಮ್ಮ ಪಕ್ಷವು ಸ್ವಾತಂತ್ರ್ಯರಕ್ಷಣೆಗಾಗಿ ಚೆಂಬರಲೇನರು ನಡಿಸುವೆ ಯಾವತ್ತೂ ಪ್ರಯತ್ನಗಳಲ್ಲಿ ಸಹಕರಿಸುವದಾಗಿ ಅಭಿವಚನ ಕೊಟ್ಟು ಬಳಿಕ ಸಭೆ ವಿಸರ್ಜನ ಹೊಂದಿತು. ಇದೇ ಪ್ರಕಾರ ದೊರೆಗಳ ಸಭೆಯಾಗಿ ವಿದೇಶ ಸಚಿವರಾದ ಹೆಲಿಫ್ಯಕ್ಸ-ದೊರೆಗಳು ಮಿ|| ಚೆಂಬರಲೇನರವರಂತೆಯೇ ಸರಕಾರದ ಧೋರಣವನ್ನು ನಿವರಿಸಿದರು ಮುಂದಿನ ಸಭೆ ಪುನಃ ನಾಳೆ ನೇರುವದಿದೆ.

***

ಡೆಂಬಿಗ ಸಟ್ಟಣ ಮತ್ತು ಪೋಲಂಡದ ಕೊರಿಡರ ಈ ಎರಡು ಪ್ರದೇಶಗಳು ಜರ್ಮನಿ ಮತ್ತು ಜರ್ಮನಿಯ ಪೂರ್ವ ಪ್ರತಿಯ ಇವುಗಳ ನಡುವೆ ಇದ್ದು ಪೋಲಂಡದ ಸಮುದ್ರ-ದಾರಿ ಇದೇ ಪ್ರದೇಶದಿಂದ ಹಾದುಹೋಗುತ್ತದೆ. ಜರ್ಮನಿ ಮತ್ತು ಜರ್ಮನಿಯ ಪೂರ್ವ-ಪ್ರತಿಯ ಒಟ್ಟುಗೂಡಿಸೆ ಬೇಕಾದರೆ ಪೋಲಿಶ್ ಕೊರಿಡರ ಅತ್ಯವಶ್ಯ. ನಡು ಮಧ್ಯದಲ್ಲಿ ಈ ಸೀಮೆ ಇರುವದರಿಂದ ಜರ್ಮನಿ-ಪೂರ್ವ-ಪ್ರತಿಯಾ ದೇಶಗಳು ಪ್ರತ್ಯೇಕವಾಗಿವೆ ಈ ಸೀಮೆ ಜರ್ಮನಿಯ ವಶವಾದರೆ, ಡೆಂಬಿಗು ಪಟ್ಟಣವನ್ನು ಅಂಕಿತವಾದರೆ ಪೋಲಂಡಕ್ಕೆ 'ಸಮು

ಲಿವ್ಹರ್ ಮತ್ತು ಪ್ಲೀಹಗೆಗಳ ವಿಕಾರ, ಮಲಬದ್ಧತೆ, ಅತಿಸಾರ, ಕೆಸರು-ಮಣ್ಣಿನ ಬಣ್ಣದ ಮಲೋತ್ಸರ್ಗ, ಅಗ್ನಿಮಾಂದ್ಯ, ನಿರುತ್ಸಾಹ ಮುಖಚರ್ಯೆ, ಕೃಶ ಶರೀರ, ಜ್ವರ ಮೊದಲಾದ ಬೇನೆಗಳು ಬಾಧಿಸುತ್ತಿದ್ದರೆ—

ಲಿವ್ಹರ್-ಕ್ಯೂರ್

ಉಪಯೋಗಿಸಿರಿ !
ಆದರಿಂದ ಖಂಡಿತ ಗುಣವಾಗುತ್ತದೆ.
ಸಾದಾ ಮತ್ತು ಕಮ್ಮಿಶ್ರ
ಹೀಗೆ ಎರಡು ಬಗೆಯ ಲಿವ್ಹರ್ ಕ್ಯೂರ್ ಔಷಧಗಳ!
ಜಮ್ಮಿ ವೆಂಕಟರಮಣಯ್ಯ ಎಂಡ್ ಸನ್ಸ
ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ್ಸ,
೮, ಸಲಾಯ ಸ್ಟ್ರೀಟ, ನ್ಯೂ ಬಲಾಪುರ-ಮದ್ರಾಸ

ಬಟಲಿಳಲದ್ದಿ ಬಂದಾಗ ಎಲ್ಲಿ ಉಳಿಯುವಿರಿ ?
ಶ್ರೀ ಲಕ್ಷ್ಮೀನಿವಾಸ
ಹಿಂದು ಹೊಟೆಲ್,
ಪೋಸ್ಟ ಆಫೀಸಿನ ಬಳಿ, ಭಟ್ಕಳೆಳಿ.
ಪ್ರಯಾಣಿಕರಿಗೆ ಊಟ-ಉಳಕೊಳ್ಳಲು ಉತ್ತಮ ವ್ಯವಸ್ಥೆ !
ಒಮ್ಮೆ ಬಂದು ಸಂದರ್ಶಿಸಿರಿ!

ದ್ರ ದಾರಿ ಕಟ್ಟುಗುತ್ತದೆ ಪೋಲಂಡಕ್ಕೆ ಇದ್ದ ಏಕ ಮಾತ್ರ ದಾರಿ ಇದೊಂದೇ! ಈ ಪ್ರದೇಶದ ಪೂರ್ವ ಪರ ಹಿಗ್ಗಿ:- ೧೧೨೮ನೇ ಶತಮಾನದಿಂದ ಇಲ್ಲಿಯ ನಿವಾಸಿಗಳು ಸ್ಲಾವರು. ೧೪೦೦ನೇ ಇಸ್ವಿಯ ತನಕ ಈ ಜಾಗದೇ ವಸತಿ ಇತ್ತು! ಆ ಇಸ್ವಿಯ ನವಂಬರ ೧೪ನೇ ತಾರೀಖಿಗೆ ಪೋಲಂಡದ ಲಡಿಸ್ಲಾಸ ಅರಸರ ಪರವಾಗಿ ಕೆಲವು ಸರದಾರರು ಈ ಪ್ರದೇಶವನ್ನು ಕೈವಶ ಮಾಡಿಕೊಂಡರು ಮತ್ತು ಸ್ಲಾವ ನಿವಾಸಿಗಳಲ್ಲಾ ನಿರ್ದಯದಿಂದ ಕೊಲೆ ಮಾಡಿದರು ಆ ಮೇಲೆ ಇಲ್ಲಿ ಸರದಾರರದೇ ರಾಜ್ಯವಾಯಿತು, ಈ ಪ್ರದೇಶಕ್ಕೆ ಪೋಲರು ಪೊಮೆರ್ಯೆ ಪ್ರಾಂತವೆಂದು ಹೆಸರಿಟ್ಟರು. ಆ ಮೇಲೆ ಇಲ್ಲಿ ಪೋಲರ ವಸಹತಯಾಯಿತು ಕಳೆದ ಖಾನೇಸುಮಾರಿಯಲ್ಲಿ ೯ ಲಕ್ಷ ೭೦ ಸಾವಿರ ಜನ ವಸತಿಯಾಗಿದೆ ಇವರಲ್ಲಿ ೬ ಲಕ್ಷ ೬೦ ಸಾವಿರ ಜನರು ಪೋಲರು; ಉಳಿದವರು ಜರ್ಮನ್ನರು. ಜರ್ಮನ್ನರು ಈ ಪ್ರದೇಶದಲ್ಲಿ ನೇರವ್ಯಾರಂಭಿಸಿದ್ದು ೧೬೬೯ ನೇ ಇಸ್ವಿಯ ನಂತರ. ಆ ವರ್ಷದಲ್ಲಿ ಪ್ರದೇಶ ಜರ್ಮನ್ನರ ವಶವಾಯಿತು. ಜರ್ಮನ್ನರು ಇಲ್ಲಿ ತಮ್ಮ ಪ್ರಾಬಲ್ಯವನ್ನು ಬೆಳಸುವದಕ್ಕಾಗಿ ಹೆಚ್ಚೆಚ್ಚು ವಸತಿ ಮಾಡಬೇಕೆಂದು ಜರ್ಮನ್ ಸರಕಾರವು ಕೊಟ್ಟ ಪ್ರೋತ್ಸಾಹದ ಮೇರೆಗೆ ಕೆಲವು ವಸತಿಯಾಯಿತು. ಒಂದು ಬದಿಯಿಂದ ಜರ್ಮನ್ನರೂ, ಮತ್ತೊಂದು ಬದಿಯಿಂದ ಪೋಲರೂ ಈ ನಿವೆಯಲ್ಲಿ ಪ್ರವೇಶ ಮಾಡತೊಡಗಿದರು. ಆ ಮೇಲೆ ಬಡಿದಾಟ ವಾಗಿ ಈವರೆಗೂ ಒಂದು ಒಡಂಬಡಿಕೆಯಾಯಿಲ್ಲ. ಮತ್ತು ಜರ್ಮನ್ನರ ವಸತಿ-ಪ್ರಮಾಣ ಕುಗ್ಗಿಸ್ಪಲ್ಪಟ್ಟಿತು. ಇತ್ತೀಚಗ್ಯೂ ಜರ್ಮನ್ನರು ಕೊಂಡರ ನಿವೇಸಯಲ್ಲಿ ಹೆಚ್ಚೆಚ್ಚಾಗಿ ವಸತಿ ಮಾಡಲೊಪ್ಪಲಿಲ್ಲ ದೂಡ್ಡ ದೊಡ್ಡ ಅಧಿಕಾರಿಗಳಿಸ್ಟೇ ಈ ವಸತಿ ಮಾಡಿದರು. ಅವರು ಈ ಗಡಿಬಿಡಿಯಲ್ಲಿ ಸ್ವದೇಶಕ್ಕೆ ಹಿಂತೆರಳಿದ್ದಾರೆ. ಡೆಂಯಿಗ ಪಟ್ಟಣ ಸರದಾರರಿಗೆ ಕೊಡಲ್ಪಟ್ಟಿತು. ಸರದಾರರು ಜರ್ಮನ್ನರು. ಅವರು ಜಲ್ಲಿ ವಸತಿ ಮಾಡಿ ಅಡಸ್ಸು ಅಭ್ಯುದಯಕ್ಕೆ ತಂದರು. ಡೆಂಯಿಗು ಜರ್ಮನ್ ಸರದಾರರ ವರವಾದಾಗ್ಯೂ ಅದೊಂದು ಸ್ವತಂತ್ರಪಟ್ಟಣವಾಗಿದ್ದಿತು. ಜರ್ಮನಿಗೂ ಅಧೀನವಿರಲಿಲ್ಲ, ಪೋಲಂಡಕ್ಕೂ ಅಧೀನನಿರಲಿಲ್ಲ! ಆದರ ಎಲ್ಲ ಕಾರಭಾರ ಸ್ವತಂತ್ರವಾಗಿಯೇ ನಡೆದಿತ್ತು. ೧೪೫೪ನೇ ಇಸ್ವಿಯಲ್ಲಿ ಡೆಂಯಿಗ-ಪೋಲಂಡಿಗಳೊಳಗೆ ಒಡಂಬಡಿಕೆಯಾಗಿ ಇವೆರಡೂ ಒಂದಾದವು. ೧೬೨೨ನೇ ಇಸ್ವಿಯ ತನಕ ಹೀಗೆಯೇ ಒಕ್ಕಟ್ಟಾಗಿ ಉಳಿಯಿತು ಆ ಮೇಲೆ ಈ ಪಟ್ಟಣ ಜರ್ಮನಿಯ ಪ್ರಶಿಯಾ ವ್ಯಾಂಕದ ಸ್ವಾಧೀನವಾಯಿತು. ೧೯೧೦ನೇ ಇಸ್ವಿಯಲ್ಲಿ ಮಹಾಯುದ್ಧ ಮುಗಿದ ಒಳಕ ಕಮೀಶರೆಯ ಅಧ್ಯಕ್ಷತೆಯಿಂದ ವಿಲ್ಸನ್‌ರವರು ಸೂಚಿಸಿದ ೧೪ನೇ ತರ್ತಿನ ಪ್ರಕಾರ ಪೋಲಂಡಕ್ಕೆ ಸ್ವತಂತ್ರ ಸಮುದ್ರ-ದಾರಿ ಇರಬೇಕೆಂದು ಗೊತ್ತಾದಂತೆ, ಡಂಯಿಗದ ಆಡಳತೆಯನ್ನು ಸ್ವತಂತ್ರವಾ ಗಿಟ್ಟು ಆ ಪ್ರದೇಶದಲ್ಲಿ ಪೋಲಂಡ ಸರಕಾರಕ್ಕೆ ಸವಂದ್ರ-ದಾರಿಯ ಉಪಭೋಗಕ್ಕೆ ಅವಶ್ಯವುಳ್ಳ ಹಕ್ಕುಗಳು ಇಡಲ್ಪಟ್ಟವು ಡೆಂಯಿಗ ಮತ್ತು ಕೊಂಡರ ಪ್ರದೇಶಗಳು ಜರ್ಮನಿಯ ವಶವಾದರೆ ಬಾಲ್ಟಿಕ್ ಸಮುದ್ರಕ್ಕೆ ಹೋಗಲು ಪೋಲಂಡಕ್ಕೆ ದಾರಿ ಇಲ್ಲ,ಕೊಂಡರ ಇದ್ದರೂ ದಾರಿ ತೀರ ಸಂಕುಚಿತವಾದದ್ದು ಕೂರಿತು ಪ್ರದೇಶ ಸಮುದ್ರ-ವಾರ್ಫ್‌ಗೆ ಕೆರದಾಗಿ ಹೋಗಿದೆ. ಸಮುದ್ರದ ಒಡಿಗೆ ೫೫ ಮೈಲು ಸಹ ವಿಸ್ತಾರವಾಗಿಲ್ಲ. ಈ ಸಮುದ್ರದ ಬಾಯಿಕಟ್ಟಿದರೆ ಪೋಲಂಡಕ್ಕೆ ಹೆಡವರಿಗೆ ಕಟ್ಟಿದಂತೆಯೇ! ಪೋಲಂಡವು ಆ ಮೇಲೆ ಹಿಟ್ಲರನ ಮಾಂಡಲಿಕ ರಾಜ್ಯವಾದರಾಯಿತು! ಇದನ್ನೆಲ್ಲ ವಿಚಾರ ಮಾಡಿ ವರ್ಸಲಿಸ ತಹನಾಮೆಯ ಕಾಲಕ್ಕೆ ಡೆಂಯಿಗಿನ ಸ್ವಾತಂತ್ರ್ಯವನ್ನು ಕಾಪಾಡಿ ಪೋಲಂಡಕ್ಕೆ ಹಕ್ಕು ಗಳು ಕೊಡ್ಸಲ್ಪಟ್ಟವು ಡೆಂಯಿಗ ಪಟ್ಟಣದ ರಾಜ್ಯ ಭಾರ ಡೆಂಯಿಗು-ನಿವಾಸಿ ಜರ್ಮನ್ನರ ಕೈಯಲ್ಲಿರುವ ದರಿಂದ ಜರ್ಮನ್ನರಿಗೆ ಪೋಲರು ದಣಿಸುತ್ತಾರೆಂಬ ಹಿಟ್ಲರನ ದೂರಿನಲ್ಲಿ ಅರ್ಥವಿಲ್ಲ.

***

ಯುದ್ಧದಿಂದ ಯುರೋಪ ಖಂಡಕ್ಕೆ ಮಂಜೆ ನಷ್ಟವಾಗುತ್ತದೆ, ಆ ಮೇಲೆ ಲಾಭವಾಗುತ್ತದೆ! ಆದರೆ ನಮ್ಮ ಹಿಂದುಸ್ಥಾನಕ್ಕೆ ಮಾತ್ರ ಲಾಭವಿಲ್ಲ, ತುಂಬಾ ನಷ್ಟ! ಕಳದ ಮಹಾಯುದ್ಧದಲ್ಲಿ ಹಿಂದುಸ್ಥಾನಕ್ಕಾದ ನಷ್ಟದ ವಿವರ ನಮೂದಿಸತಕ್ಕಂಥಾದ್ದಿದ ಮಹಾಯುದ್ಧ ಪ್ರಾರಂಭ ಕಾಲದಲ್ಲಿ ಹಿಂದುಸ್ಥಾನದಿಂದ ಸೈನ್ಯಬಲ ೩ ಲಕ್ಷ ೩೯ ಸಾವಿರವಿತ್ತು, ಮಹಾಯುದ್ಧದ ಅವಧಿಯಲ್ಲಿ ಈ ಸಂಖ್ಯೆ ೧೫ ಲಕ್ಷಕ್ಕೇರಿತು ಇವರಲ್ಲಿ ೧೧ ಲಕ್ಷ ೪೪ ಸಾವಿರ ಸೈನಿಕರು ಪರವಾದವರೂ ವಿದೇಶಗಳಿಗೆ ಕಳುಹಲ್ಪಟ್ಟರು, ಇವರಲ್ಲಿ ೩೬೬೯೬ ಜನರು ಮಡಿದರು ೧೧೦೬೯೪ ಜನರು ಪಾಯಪಟ್ಟರು. ಇದು ಮನುಷ್ಯ-ಹಾನಿ ಮಹಾಯುದ್ಧ ಪೂರ್ವದಲ್ಲಿ ಹಿಂದುಸ್ಥಾನ ಸರಕಾರದ ಸೈನ್ಯ ಖರ್ಚು ರೂಪಾಯಿ ೨೧ ಕೋಟಿ ಇದ್ದಿತು ಮಹಾಯುದ್ಧದ ೫ ವರ್ಷಗಳಲ್ಲಿ ಅದು ರೂಪಾಯಿ ೨ ಆ೯ ೭೦ ಕೋಟಿಗೆ ತಲ್ಪಿತು. ಯುದ್ಧ ಮುಗಿದರೂ ಖರ್ಚು ತಡೆಯಲಿಲ್ಲ ೨ ವರ್ಷಗಳ ತನಕ ರೂ. ೧೫೭ ಕೋಟಿ ಖರ್ಚಾಯಿತು ಅಂತು ೭ ವರ್ಷಗಳಲ್ಲಿ ಕೂಡಿ ರೂ. ೨೧೦ ಕೋಟಿ ಹೆಚ್ಚು ಖರ್ಚಾಯಿತು. ಇದಲ್ಲದೆ ಹಿಂದುಸ್ಥಾನ ಸರಕಾರವು ಸಾಮ್ರಾಜ್ಯ ಚಕ್ತಿಯಿಂದ ೧ ಅಬ್ಜ ೮೯ ಕೋಟಿ ರೂಪಾಯಿಗಳನ್ನು ಕೃಷ್ಣಾರ್ಪಣ ಮಾಡಿ ಸಾಮ್ರಾಜ್ಯ ಸರಕಾರಕ್ಕೆ ಧರ್ಮ ಮಾಡಿತು. ಇದೂ ಸಾಲಲಿಲ್ಲ ೩ ಅಬ್ಜ ೯೦ ಕೋಟಿ ರೂಪಾಯಿ ಗಳನ್ನು ನಿಬ್ಬಡ್ಡಿಯಿಂದ ಸಾಲ ಕೊಟ್ಟಿತು ಈ ಅವಧಿಯಲ್ಲಿ ಹೆಚ್ಚೆಚ್ಚಿನ ತೆರಿಗೆ ಹೇರಿದಾಗ್ಯೂ ನಮ್ಮ ಸರಕಾರದ ಜಮಾ-ಖರ್ಚಿನ ಬಾಯಿಗೂಡದೆ ಹಿಂದುಸ್ಥಾನ ಸರಕಾರಕ್ಕೆ ಈಗ-ಳ ಅಬ್ಜ ರೂಪಾಯಿ ಗಳ ಸಾಲವಾಗಿದೆ. ಅದಕ್ಕೆ ಬಡ್ಡಿ ಕೆತ್ತು ಕೆತ್ತು ಹಿಂದುಸ್ಥಾನವು ಹೆಣ್ಣಾಯಿತು. ಹಿಂದುಸ್ಥಾನ ಸರಕಾರದ ಜನಬಲ-ದ್ರವ್ಯಬಲ ಇವುಗಳಲ್ಲದೆ, ಸಂಸ್ಥಾನಿಕರು ತಮ್ಮ ತಮ್ಮ ರಾಜಸಿನ್ಯೆಯ ಪ್ರದರ್ಶನಕ್ಕಾಗಿ ಹೇರಳ ಹಣ ವೆಚ್ಚ ಮಾಡಿದ್ದಾರೆ. ರಣಭೂಮಿಗೂ ಕಳುಹಿಸಿ ಮಾಡಿದ್ದಾರೆ. ಇದೆಲ್ಲ ತ್ಯಾಗದ ಫಲವಾಗಿ ಹಿಂದುಸ್ಥಾನಕ್ಕೆ ಬ್ರಿಟಿಶ ಸಾಮ್ರಾಜ್ಯದಿಂದ ಏನು ಸಿಕ್ಕಿತೆಂದು ಪ್ರತಿಯೊಬ್ಬರು ವಿಚಾರಿಸತಕ್ಕ ವಿಷಯ. ಈಗಿನ ಮಹಾಯುದ್ಧದಲ್ಲಿ ಹಿಂದುಸ್ಥಾನದ ಭೂಮಿಕೆ ಹೇಗಿರಬೇಕೆಂದು ಮಾ॥ ಅಬುಲ ಕಲಾಮ ಆಝಾದರವರು ಆಸೇಜ್ಞೆಯ ಮೇರೆಗೆ ಕೊಂಗ್ರೆಸ ಕಾರ್ಯಕಾರಿ ಮಂಡಳವು ಸಭೆಸೇರಿ ವಿಚಾರ ಮಾಡುವದಿದೆ ॥ ಜವಾಹಿರಲಾಲರಿಗೆ ಜೇಲಿದ ಪ್ರವಾಸವನ್ನು ಕಡಿಸಿ ಕೊಡಲೆ ವಿಮಾನು ಹತ್ತಿ ಹೊರಟು ಬರಬೇಕೆಂದು ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ತಂತಿಯಿಂದ ತಿಳಿಸಿದ್ದಾರಾಯ್ತೂ, ಪಂ॥ ಜವಾಹಿರಲಾಲರು ಅಖಿಲ ಕಾರ್ಯಕ್ರಮಕ್ಕೆ ತಡೆಹಾಕಿ ಒಮ್ಮೆಲೇ ಸ್ವದೇಶಕ್ಕೆ ಹೊರಟರಂತಾಯಿತೂ ಸುದ್ದಿ ಬಂದಿದೆ. ಕಾರ್ಯಕಾರಿ ಮಂಡಳದ ಸಭೆ ರಾಂಚಿಯಲ್ಲಿ ನೇರುವದು. ಮಹಾತ್ಮರೂ ಈ ಸಭೆಗೆ ಅನುಗ್ರಹಿಸುವವರಿದ್ದಾರೆ. ಮಹಾತ್ಮರೂ ಶಾಂತತಾವಾದಿಗಳೆಂದೂ ಅವರೇ ಅಹಿಂಸೆಯ ತತ್ವದ ಮೇಲೆ ಯುದ್ಧವನ್ನು ಬಗೆಹರಿಸುವರಾಗಿಯೂ, ಬ್ರೋಲಂಡಿಂದ ಇಲ್ಲಿಗೆ ಬಂದು ಸ್ವದೇಶಕ್ಕೆ ಮರಳದ ಅಲೆಕ್ಸಾಂಡರ ಜಂಟ್ಸಾರವರು ಬರೆಯುತ್ತಾರೆ

***

ದಿಲ್ಲಿಯಲ್ಲಿ ಮುಸ್ಲಿಮ್ ಲೀಗಿನ ಕಾರ್ಯಕಾರಿ ಮಂಡಳವು ರವಿವಾರ ಸಭೆಸೇರಿ, ಯುದ್ಧವೊದಗಿದ್ದಲ್ಲಿ ಮುಸಲ್ಮಾನರು ಯಾವ ಧೋರಣ ಕೈಕೊಳ್ಳಬೇಕೆಂಬ ಒದರ ಕುರಿತು ೬ ತಾಸಿನ ತನಕ ಚರ್ಚೆ ನಡೆಯಿತು. ೫೦ ಮಂದಿ ಮಹಾನುಭಾವರು ತಮ್ಮ ವಿಚಾರಗಳನ್ನು ಪ್ರದರ್ಶಿಸಿದರು: ಈವಾಗ ಧೋರಣ ನಿಶ್ಚಯಿಸುವದು ಅಕಾಲಿಕವಾದುದೆಂದೂ, ಇತರ ಮುಸಲ್ಮಾನ ಜನಾಂಗಗಳೊಡನೆ ಆಲೋಚನೆ ಮಾಡಬೇಕಾಗಿಯೂ, ನೊಟ್ಟುಮೊದಲು ಬ್ರಿಟಿಶ ಸಾಮ್ರಾಜ್ಯ ಸರಕಾರವು ಮುಸಲ್ಮಾನರ ದೂರುಗಳನ್ನು ನಿವಾರಿಸಬೇಕಾಗಿ ಮುಸ್ಲಿಮ್ ಲೀಗಿನ ಅಜೇಸ್ಟೆಯಿರುವದಾಗಿಯೂ ನಿರ್ಧಾರವೊಮ್ಮೆ ನಿರ್ಣಯ ಕೈಕೊಂಡಿರುತ್ತಾರೆ.

ಭಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್. (ರಿಜಿಸ್ಟರ್ಡ)

ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದರಲ್ಲೂ ಜಗತ್ಪ್ರಸಿದ್ಧವಾಗಿದೆ

ಶ್ರೀಕರ ಕಸ್ತೂರೀ ಮಾತ್ರೆ. [ಪೊಟ್ಟಣಕ್ಕೆ 0-1-0

ಸುಖಾನನೆಯು, ಈ ಮಾತ್ರೆಗಳು ಮಕ್ಕಳ ಮೆತ್ತು ದೊಡ್ಡವರ ನೆಗಡಿ, ಕೆಮ್ಮು, ಅಜೀರ್ಣ, ಜ್ವರ ಮುಂತಾದವ್ಗೆಕ್ಕೆ ಸಿದ್ಧೌಷಧವಾಗಿದೆ. ಬೆಲೆ 0—4—0, 0—8—0

ಶ್ರೀಕರ ಬಾಲಸಂಜೀವಿನಿ.

ಚಿಕ್ಕ ಮಕ್ಕಳ ಮಂದಜ್ವರ, ಶೀತಜ್ವರ, ಎಳವು ಇತ್ಯಾದಿ ರೋಗಗಳಿಗೆ ಸಂಜೀವನ ಬೆಲೆ 0—4—0.

ದೊರೆಯುವ ಸ್ಥಳ ಹೊನ್ನಾವರ - ಕಲ್ಯಾಣಪುರ ಬ್ರದರ್ಸ ಕುಮಟಾ - ದೇವಸ್ಥಾನ

ಆಯುಷ್ಯ ನಾಯ್ತು, ದಿ ನ್ಯೂ ಸಪ್ಲಿಯ ಏಜನ್ಸಿ, ದಿ ಸ್ವಸ್ತಿಕ ಫಾರ್ಮಸಿ.

ನಂಜನಗೂಡು ಸದ್ವೈದ್ಯಶಾಲಾ, ಬೈಂಬ್ ರಥಬೀದಿ, ಮಂಗಳೂರು.

ಕಾನಡಾ ವೃತ್ತ

ಕನ್ನಡ ನಾಡಿನ ಪ್ರಮುಖ

ರಾಷ್ಟ್ರೀಯ ವಾರಪತ್ರಿಕೆ.

ಜಾಹೀರಾತುದಾರರಿಗೆ ಅನುಕೂಲ ಸಾಧನ,
ರಾಷ್ಟ್ರಪ್ರೇಮಿ ಕನ್ನಡಿಗರು ಚಂದಾದಾರರಾಗಿ
ಪ್ರೋತ್ಸಾಹಿಸಬೇಕು.

ಮುಂಬಯಿಯಲ್ಲಿ

ಉತ್ಕೃಷ್ಟ ನಿವಾಸ ವ್ಯವಸ್ಥೆ.

ಪ್ರವಾಸಿಗಳಿಗೂ ವಿದ್ಯಾರ್ಥಿಗಳಿಗೂ
ಬಹಳ ಅನುಕೂಲ!

ವೆಲ್‌ಕಮ್
ಹಿಂದೂ ಹೊಟೆಲ್

ತಾರಾ ಹೌಸ, ಗಿರಗಾಂವ

ಮುಂಬಯಿ.

ಮಧ್ಯವರ್ತಿ ಸ್ಥಳ ಉತ್ಕೃಷ್ಟ ಊಟ!
ಉತ್ತಮ ಹವೆಯ ಕೋಣೆಗಳು!
ಊಟ-ಉಳಕೊಳ್ಳುವ ಅನುಕೂಲತೆ!!

ವಿದ್ಯಾರ್ಥಿಗಳಿಗೆ
ಪ್ರತ್ಯೇಕ ರಿಯಾಯತಿ ದರಗಳಿವೆ.

"ಸ್ಟಾರ ಆಫ್ ಕೆನರಾ ಪ್ರೆಸ್",
ಕುಮಟಾ.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾತಿ ಭಾಷೆಯಿಂದ ಬೇಕಾದ ನಮೂನೆಯ ಕಲರ ಪ್ರಿಂಟಿಂಗ ವರ್ಕೆಗೆ ಸಣ್ಣ ದೊಡ್ಡ ಛಾವಾ ಕೆಲಸಗಳು, ಪುಸ್ತಕ ಮುದ್ರಣವೂ, ರೂಲಿಂಗ-ಬೈಂಡಿಂಗ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಿಸಿ ಕೊಡಲಾಗುವದು! ನಿಮ್ಮ ಕೆಲಸಗಳನ್ನು ನಮ್ಮಲ್ಲಿಗೇ ಕಳಿಸಿ ಒಮ್ಮೆ ಅನುಭವ ತೆಕ್ಕೊಂಡು ನೋಡಿರಿ!

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ,
ಮದ್ರಾಸ ಇವರ
ಹಿಂದೀ ಪುಸ್ತಕಗಳು
ಡಿ! ಸ್ಕೂಲ ಬೋರ್ಡಿನಿಂದ ಹೊಸದಾಗಿ ಮಂಜೂರಾದ
ಉರ್ದು ಪುಸ್ತಕಗಳು
ಎಲ್ಲ ತರದ ಶಾಲೋಪಯೋಗಿ
ಕನ್ನಡ ಪುಸ್ತಕಗಳು
ರಕಂ ಆಗಿಯೂ ಲಜ್ಜರ ಆಗಿಯೂ ನಮ್ಮಲ್ಲಿ ಸಿಗುತ್ತವೆ
ಬುಕ್ ಸೆಲ್ಲರ್‌ಗೂ ಶಿಕ್ಷಕರುಗೂ
೦ ೀರ್ಯ ಕಮಿಶನ ಕೊಡಲಾಗುವದು
ದಿ ನ್ಯೂ ಸರಸ್ವತಿ ಬುಕಡಿಪೊ, ಕುಮಟಾ

ಶ್ರೀಧೂತಪಾಪೇಶ್ವರ ಆಯುರ್ವೇದಿಕ ಔಷಧಾಲಯ
TRADE MARK
ಪಂಪಮೇಲ ಕುಲಾಬಾ
— ಈ ಸಂಸ್ಥೆಯ —
ಬಾಣಂತಿತನದಲ್ಲಿ ಹುಟ್ಟು ಅಶಕ್ತತೆಯಮೇಲೆ ಉಪಯುಕ್ತ
ಔಷಧವು
ಅಭ್ರಲೋಹ
SHRALOHA
ದೊರೆಯುವ ಸ್ಥಳ— ಕಾವಾರ ಮನೆಸಮುಚುಮದಾರ-ಕಸಬೇಕರಬ್ರದರ್ಸ
ಅಂಕೋಲಾ ದಿ ಸ್ಟೇಟರಿ ಡಿಪೋ ॥ಕುಮಟಾ- ವೇಣಾಬಾಯಿ
ಅಯ್ಯಾಸಾಮಿ ॥ ಶಿರಸಿ ಪಂಡಿತ- ಕಲ್ಯಾಣಪುರ ಬ್ರದರ್ಸ.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್
ಸ್ಥಾಪನೆ 1908.
ಈ ಕಂಪನಿಯು ಪೂರ್ಣ ಹಿಂದೀ ಆದ್ರೂ, ಇದರ ಕಂಠಿನ ಬರಗಳೂ, ಕಶ್ಯರಗಳೂ ಹಳ ಸೊಯಿಹುನ್ನ ಇವೆ. ಕಂಪೆನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಪ್ರತಿಕ್ಷನ ರಿಯಸಾಗಿರಂತೆ ಜನಾಜ್ಞರಿಯ ಸಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ
ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಗಣಿಕಾಯ ಲಾಭಕರವಾಗಿದೆ.
ಸವಿಸ್ತರ ವಾಹಿತಿ ಸ್ಥಳಿಕ ಏಜಂಟರ ಹತ್ತಿರ ಅಥವಾ ನಕ್ತದ್ವಾರದಿಂದ ಕಳಗಿನ ವಿಳಾಸಕ್ಕೆ ಬರೆದರೆ ತಿಳಿಸಲಾಗುವದು.
Kumta Agents-
D K. Nayak Bros
K. N Nayak
Honorar Agent
R V. Prabhu
K. PadmanabhaRao & Sons.
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೀ ಬೀ ಯವರ ಸುಗಂಧಿ ನಕ್ಷತ್ರದ ಪುಡಿ. ಸುಲಭ ಕ್ರಯ ಶೋಕರ್ತರಿಸಿದ್ಧವಾದ ಈ ಸುಗಂಧ ನಕ್ಷತ್ರದ ಪುಡಿಯು ಕಾಡು ಹಿಡಿಯಲ್ಲಪ್ಪ ಸಾಹಿತಿಕಾರು ಮುಂದಿಗಳು ಇದನ್ನು ಉಪಯೋಗಿಸಿ, ಸಾಹಿತಿಕಾರುಗಳಾಗಿ ಜೋಕ್ಯಕಾವತ್ರ ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಕ್ಷತ್ರದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ-- ಪಿತ್ತ, ಒಂಟಿಕಲೆನೋವ ಕಲೆಯಲ್ಲಿಯು ರೋಗಗಳು., ಕಣ್ಣುಗಳಲ್ಲಿ ಕಾಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವಲ್ಲದೆ ಕಂಠಕ್ಕೆ ಸೇರ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥ ಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚಿಸುವುದಕ್ಕೆ ಮೂರು ಬೆಟ್ಟಿನ ಸಾದಾರಣ ನಕ್ಷದ ಸ್ಥಗಿಡಿಗಳ ಸುಗಂಧ ನಕ್ಷತ್ರದ ಪುಡಿಯಲ್ಲಿ ಬಂದು ಬೆಟಿಕೆಯಿನ್ನು ನಿಶ್ಚಯಿಸಿದರೆ ಎಲ್ಲಪ್ಪು ಪರಿಮಳಕಾಗುವದು. ಇದನ್ನು ಅನೇಕ ಸ್ಥಳುಗಳು ಕನ.

(Regsistered Trade Mark.)

ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ನಮಾದರಿ ಸೀಸೆ ಪುಕ್ಕಟೆ ಕಳಿಸಲಾಗುವದು. ಒಡ್ಡಿ ಬಂದಕ್ಕೆ ಕ್ರಯರೂ. ೦ ೪ ೦. ವ್ಹಿ ಪಿ ಳಲಿ ಡಜನ್ ೧ಕ್ಕೆ ರೂ. ೨ ೮ ೦ ವಿ ಪಿ ೦-೪ ೦ ದುಬಾರಿ ನಿಮ್ಮ ಹೆಸರನ್ನೂ, ಆಪ್ತೇಸ್ಟನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ರ— ಗುರುಬಸವ ಆಂಡ್ ಕಂಪನಿ ಲಿಮಿಟೆಡ್, ಸ್ಟೋ ಬಾ ಖಂಂ, ಪೋರ್ಟಬ್ಲೇರ್ ಸಾ. ಮಾದರಾಸ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮ್ಟಾ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 11th September, 1939.

ವರ್ಷ ೨೨

ಪತ್ರದ ವರ್ಗಣೆ.

ಕುಮಟೆಯಲ್ಲಿ ಆಗಾವ
ರೂಪಾಯಿ ೨-೪-೦.
ಮುನಿಯಾರ್ಡರಿನಿಂಚ
ರೂ. ೩-೧-೦.
ಪ್ಲಿ ಪಿ. ಖರ್ಚಿನೆಮೆ ಸೇರಿ
ರೂಪಾಯಿ ೩-೪-೦.
ದಿವಿ ಸಂಚೆಗೆ ೦-೧-೦
ಹಳೇ ಸಂಚೆಗೆ ೦-೨-೦

ಕಾನಡಾವೃತ್ತ.

THE KANARA NEWS.

ಸರ್ವತಿಹಿತಕರೀ ವಿದ್ಯಾ ಯಾತಿ ಲೋಕೆ ಜನಪದಹಿತಕರೀ ರಾಜತೇ ಪಾರ್ಥಿವೇಂದ್ರೇ।
ಇತಿ ಸಹತಿ ವಿಚಾರೆ ವರ್ತಮಾನೇ ಸಮಾಜೇ ಪ್ರಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೧೧

ಜಾಹೀರಾತುಗಳ ದರ
ಸಾಮಾನ್ಯ, ಇಂಗ್ಲಿಷ ಮ್ಯಾಟರ್ (೧೫ ಎಮ್ ಲೈನ್)
೫ ಸಾಲುಗಳವರೆಗೆ ರೂ 1-0-0
ಆನಂತರ ಪ್ರತಿಸಾಲಿಗೆ 0-2-0.
ಹತ್ತಿಂಗಳ ಸಾಲು ಎಷ್ಟು ಹೊತ್ತಿದರೂ ೨ ಮಾಸ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹೀರಾತುಗಳ ಜಿಗ ಪತ್ರದ್ವಾರ ಯಾ ಸಮಕ್ಷ ತೀರ್ ಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೧ ಮಾಹೆ ಸಪ್ಟಂಬರ ಸನ್ ೧೯೩೯ನೇ ಇಸವಿ.)*-

ದಿ ವೆಸ್ಟರ್ನ ಫ್ರೊವ್ಹಿಡೆಂಟ

&

* ಜನರಲ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್. *

ಹೆಡ್ ಆಫೀಸು:— ರಹಿಮತುಲ್ಲಾ ಹೌಸ, ಹೋಮಜಿ ಸ್ಟ್ರೀಟ್,
ಸರ್ ಫೆರೋಜಶಹಾ ಮೇಥಾ ರೋಡ, ಫೋರ್ಟ, ಮುಂಬಯಿ.

ಸರ್ವ ವಿಧದ ವಿಮಾ-ಸೌಕರ್ಯಗಳುಳ್ಳ, ರೂ. ೧೦೦ ರಿಂದ ೫೦೦ ರವರೆಗಿನ ಜೀವವಿಮೆ ಇಳಿಸುವ

ಭದ್ರ ಆಡಳಿತದ ಪ್ರಗತಿಪರ ವಿಮಾ ಕಂಪನಿ.

ಏಜನ್ಸಿ ಆರ್ಗನೈಝರರು:— ಎಚ್. ಆರ್. ಪ್ರಭು, ಕುಮಟಾ.

ಕಾನಡಾ ಜಿಲ್ಲೆಯೊಳಗಿನ ಏಜಂಟರು:—

ಕುಮಟಾ:-	ಹೊನ್ನಾವರ:	ಅಂಕೋಲಾ.-	ಶಿರ್ಸಿ:-
ಎಮ್ ಆರ್ ಪ್ರಭು	ಹೊನ್ನಾವರ ಒಲ್ ಡಿಪೋ	ಪಿ ಎಸ್ ಶೇಲಂಗ	ಎಮ್. ವಿ ನಾಯಕ.
ಎಸ್. ಎಲ್. ವೆರ್ಣೇಕರ.	ಎಸ್ ಕೆ ಕಾಮತ.	ಟಿ ಎಮ್ ಶಿಕಳೇ	ಎಸ್. ಕೆ ಭಟ್ಟ.
ಎಸ್. ಎಲ್ ಶಾನಭಾಗ.	ಮುರ್ಡೇಶ್ವರ.-	ಬೆಣಗಿ:-	
	ಡಿ ಆರ್. ಕಾಮತ.	ಆರ್. ಪಿ ಕಾಮತ	

ಕರ್ನಾಟಕದ ಪ್ರಮುಖ ಸ್ಥಳಗಳಲ್ಲೆಲ್ಲ ಪ್ರತಿನಿಧಿಗಳಿದ್ದಾರೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ರಿಜಿಸ್ಟರ್ಡ ಆಫೀಸು:— "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ— ಕುಂದಾಪುರ. ದ. ಕ.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು.

ಕಾಯಂ ಠೇವಣಾತಿಗಳ ಬಡ್ಡಿ ದರಗಳು- 6 ತಿಂಗಳು ಮುದ್ದತ್ತಿಗೆ 3½%, 1 ವರ್ಷದ ಮುದ್ದತ್ತಿಗೆ 4%,
2 ವರ್ಷ ಯಾ ಹೆಚ್ಚಿನ ಅವಧಿಗೆ 4½%

ಅಲ್ಪ ಮುದ್ದತ್ತಿನ ಠೇವುಗಳು (Short term deposits) ಸಹ ಅಂಗೀಕರಿಸಲ್ಪಡುವವು.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಕುಂದಾಪುರ,
1—1—1939.

The Agricultural & Industrial Bank, Ltd.

ಯುದ್ಧ-ಜನ್ಮ ಪೇಗಾಯಿತು?

[ನಿರೀಕ್ಷಕನು ಬರೆದದ್ದು]

ಹಿಟ್ಲರನಿಗೂ, ಪೋಲಂಡಕ್ಕೂ ನಡದ ವ್ಯಾಜ್ಯ ಯುದ್ಧದಲ್ಲಿ ಪರಿಣಮಿಸಿದ ಕದ ತಿಳಕೆ ಬ್ರಿಟಿಷ ಸರಕಾರವು ಈ ಸ್ಥಿತಿ ನಡದ ಪತ್ರವ್ಯವಹಾರವನ್ನ ಪ್ರಕಟಿಸಿದೆ ಶಿಷ್ಟ ಬಿಳಿ ಪತ್ರಿಕೆ ಬ್ರಿಟಿಶ ಮುಖ್ಯ ಪ್ರಧಾನರಾದ ಮಿ. ಚೆಂಬರಲೇನರು ಹಿಟ್ಲರನಿಗೊಂದು ಪತ್ರ ಒದರಿ ಆದರ ತಾತ್ಪರ್ಯ ಹೇನಂದರೆ – ಜರ್ಮನ್‌ರಲು ಸೈನ್ಯ ತಯಾರಿ ನಡಿಸಿದ್ದರಿಂದ ಪ್ರತಿಯಾಗಿ ಬ್ರಿಟಿಶರು ಸೈನ್ಯೆ ತಯಾರಿ ನಡಿಸ ಬೇಕಾಯಿತು ಬ್ರಿಟಿಶರ ಪೋಲಂಡಕ್ಕೆ ನೆರವಾಗುವ ತನ್ನ ಧೋರಣವನ್ನು ಪ್ರಕಟಿಸ ಪದಕ್ಕಾಗಿ ಈ ತಯಾರಿ ಇಡೋಣಾಗಿದೆ ಎಂದೂ ಇಟ್ಲರ್ ಬ್ರಿಟಿಶರು ತಮ್ಮ ಧೋರಣವನ್ನು ಪ್ರಕಟಿಸಿದ್ದರೆ ಮಹಾ ಯುದ್ಧವಾಗುತ್ತಿರಲ್ಲಿಲ್ಲವೆಂದು ಪ್ರತಿವಾದಿಸಿ ಬ್ರಿಟಿಶರ ಮೇಲೆ ಆರೋಪ ಹೊರಿಸೋಣಾಗುತ್ತದೆ ಆದು ದಿಟವಿರಲಿ, ಸಟೆಯಿರಲಿ, ಈ ಬರಿ ಆ ಆರೋಪ ಬರಬಾರದೆಂದು ಈ ಮುಂಜಾಗ್ರತೆ ಕೊಳ್ಳೋಣಾಗಿದೆ ಒಮ್ಮೆ ಯುದ್ಧ ಪ್ರಾರಂಭವಾದ ಮೇಲೆ ಸಿಟ್ಟಿನ ಕಡೆ ಬಡಿದಾಟ ನಡೆದ ಒಳಕೆ ಯುದ್ಧ ಮುಗಿಯುವ ವರೆಗೂ ಬೇದು ತಿಳಿಯಲಾಗದು ಜರ್ಮನಿ ಪೋಲಂಡಗಳ ನಡುವಿನ ವಿವಾದ ಚರ್ಚೆಯಿಂದ ತೀರುವಂತಿದ್ದ ಆದಕ್ಕೆ ಅವಕಾಶವುಳ್ಳ ಪರಿಸ್ಥಿತಿಯನ್ನು ನಿರ್ಮಿಸಲಿಕ್ಕೆ ಬ್ರಿಟಿಶ ಸರಕಾರವು ಸಿದ್ಧವಿದೆ ಅಭಿಪ್ರಾಯ ಪತ್ರವರ ಮಾಡಿ ಸಿಂದಾಗಲಿ ಕೃತಿಯಿಂದ ಗಲಿ ಒಡಿದಾಡುವದನ್ನು ನಿಲ್ಲಿಸತಕ್ಕದ್ದು ಎಂಬ ಯಲ್ಲಿ ಆದ ನಿರ್ಣಯವನ್ನ ಪಾಲಿಸಿದ ಇತ್ಪಟ್ಟಿನವರೂ ಒಪ್ಪಿದರೆಬೇಕೆ, ಸರಿ ದಿಸ್ಪಗಳೂ ಈ ಕ್ರಿಯಾ ಹೊಣೆ ಹೊತ್ತಳ್ಳಬೇಕು ಬೇಳು ಯುದ್ಧಪ್ರೊಸಗಿದರೆ ಮಾನವಕೂಟ ಅನ್ಯಾಯವಾಗುವಂತಿದೆ

***

ಇದಕ್ಕೆ ಹಿಟ್ಲರನು ಮರ ದಿನವೇ ಉತ್ತರ ಕೊಟ್ಟಿನು - "ಇಂಗ್ಲಂಡಿಡನೆ ಜರ್ಮನಿಯ ಕಲಹವಿಲ್ಲ ಇಂಗ್ಲಂಡದ ಹಿತಸಂಬಂಧಗಳಲ್ಲಿ ಜರ್ಮನಿಯು ಕೈಹಾಕಲಿಲ್ಲ ಇಂಗ್ಲಂಡದೊಡನೆ ನಿಕಟತ ಸಂಬಂಧ ವಿಸುವದಕ್ಕಾಗಿ ಬಹು ವರ್ಷಗಳಿಂದ ಜರ್ಮನಿಯು ಪ್ರಯತ್ನ ನಡೆಸಿದೆ ಆದರೆ ದುರ್ದೈವದಿಂದ ಆ ಸಫಲವಾಗಲಿಲ್ಲ ಇಂಗ್ಲಂಡದ ಸಮರ್ಥನಕ್ಕಾಗಿ ಜರ್ಮನಿಯು ಯುರೋಪಿನ ಖಂಡದಲ್ಲಿ ಕಲಪು ನಿರ್ಮಿಸಿದಗಳನ್ನು ಹಾಕಿಕೊಂತು ನಡಕೊಳ್ಳುತ್ತದೆ ಈ ನಿರ್ಣಯಗಳಿಗಾದರೂ ಒಂದು ಸೀಮೆಯುಂಟು ಆ ಸೀಮೆಯನ್ನು ಉಲ್ಲಂಘಿಸಲಿಕ್ಕೆ ಜರ್ಮನಿ ಜನಂಗಕ್ಕೆ ಸಾಧ್ಯವಿಲ್ಲ ಜರ್ಮನಿಯ ಸರಂಧರೆ, ಇತಿಹಾಸ ಇವುಗಳಿಗನುಸಾರವಾಗಿ ಜರ್ಮನಿಗೆ (ಆ ರೋಪ ಖಂಡದಲ್ಲಿ) ಅಧಿಕಾರವಿರಬೇಕು ರಕ್ಷಣೆಗೆ ಸಂಸ್ಥತಿಗ ಅವಶ್ಯವುಳ್ಳ ಸಂಗತಿಗಳನ್ನು ಯಾವದೇ ಜರ್ಮನ್ ಸರಕಾರವು ಎಂದಿಗೂ ದುರ್ಲಕ್ಷ ಮಾಡಲಾರದು ಡಂಜಿಗ್ ಕೊರಿಡಾರಗಳ ಸಮಸ್ಯ ಈ ತರಗತಿಯದು ಇಂಗ್ಲಂಡದೊಳಗಿನ ಇತಿಹಾಸಜ್ಞರೂ ಇತರ ಪತ್ರಜ್ಞರೂ ಇದನ್ನೊಪ್ಪಿದ್ದಾರೆ ಈ ಪ್ರದೇಶಗಳ ಜಧ್ಯ ದಯ ಇಂಗ್ಲಂಡದಿಂದಂಗಲಿಲ್ಲ, ಜರ್ಮನಿಯಿಂದಲೂ ಇಧನೋಣ ಗಿಡಿ ಡೆಂಮಿಗ್-ಕೊರಿಡರಗಳ ಸಮಸ್ಯೆಯನ್ನು ಸಿಜವಾಗಿ ಉದಾರಧಿಗಳಾಗಿ ಒಗೆಹರಿಸಲಿಕ್ಕೆ ಜರ್ಮನ್‌ರು ಸಿದ್ಧರಿದ್ದರು ಆದರೆ, ಪೋಲಂಡದ ಶಾಸ್ತ್ರಗಳಿಗೆ ಜರ್ಮನ್‌ರು ಸೈನ್ಯ ತಯಾರಿಸಿದ್ದಾರೆಂದು ಬ್ರಿಟಿಶ ಸರ್ಕಾರಡಿ ಪೋಲಂಡಕ್ಕೆ ಆಶ್ವಾಸನೆಕೊಟ್ಟರು ಅವರಿಂದ ಸ್ವತಂತ್ರವಾಗಿ ಜರ್ಮನ್‌ರೂಡನೆ ಸಂಧಿ ಮಾಡಿಕೊಳ್ಳಲು ಉತ್ಸಾಹದಲ್ಲಿಲ್ಲ ಬ್ರಿಟಿಶರು, ಪೋಲಂಡಕ್ಕೆ ವಿನ ದಡೊಳಗಣ ಗಣ ಮೋಸಗಳ ವಿಚಾರಮಾಡದೆ ನಿರವಾಗಲು ಸಿದ್ಧರಾದರು ಇದರಿಂದ ಪೋಲ ಹವ ದಿಟ್ಟವಾಗಿ ಅಷ್ಟಲಾಸಿಸುವಷ್ಟು ಜರ್ಮನ್ ಸೈನ್ಯ ಏಗಲಿಕೆ ತರತರದಿಂದ ದಣಿಸಲು ಯತ್ನಿಸಿದ್ದರಿಂದ ಜರ್ಮನ್‌ರ ಮೇಲೆ ಭಯಂಕರ ಅತ್ಯಾಚಾರಗಳು ನಡಯುತ್ತವ ಬಲ ಪ್ರಯೋಗ ಜರ್ಮನ್ ಸರಕಾರವು ಇವನ್ನೆಲ್ಲ ಬಿಳಿಪತ್ರಿಕೆ ನೋಡಿ ತಣ್ಣಗುಳಿಯಲಾರದು ಪೋಲಂಡನ್ನು ಪೋಲಂಡ ಸರಕಾರವು ನಡಿಯಲು ಬಿಟ್ಟಿದ್ದರೆ ಈ ಸ್ಥಿತಿ ಇದೆಂದಿಗೂ ಜರ್ಮನ್ ಸರ್ಕಾರದ ವೈರಾಣ ಬದಲು ದಿರ್ಘ ಕಾಲದ ವರೆ ಎಂಬ್ಲೆನ್ ಎಂಬ ಸಂಗತಿಯನ್ನೆ ನಾನು ಒಲ್ಲೆ ಜಮು ನಿಮು ಇಂಗ್ಲಂಡದ ಎಂಳಿದಿರಿಗ ಸಿದ್ಧವಿದೆ ಸಿದ್ಧರಾದಿಂದ ಬಹು ಇದಿರುವುದು ಯಾವತ್ತೂ ಶತ್ರುಗಳನ್ನು ಆನ ಸಲಿಕ್ಕೆ ಜರ್ಮನ್ ಸರ್ಕಾರದ ವೈರಾಣ ಬದಲು ದಿರ್ಘ ಕಾಲದ ವರೆ ಎಂಬ್ಲೆನ್ ಎಂಬ ಸಂಗತಿಯನ್ನೆ ನಾನು ಒಲ್ಲೆ ಜಮು ನಿಮು ಇಂಗ್ಲಂಡದ ಎಂಳಿದಿರಿಗ ಸಿದ್ಧವಿದೆ ಸಿದ್ಧರಾದಿಂದ ಬಹು ಇದಿರುವುದು ಯಾವತ್ತೂ ಶತ್ರುಗಳನ್ನು ಆನ ಸಲಿಕ್ಕೆ ಜರ್ಮನ್ ಜನಾಂಗಕ್ಕೆ ವಿರೋಧ ಒಗೆದು ಸೈನ್ಯತಯಾರಿ ನಡಿಸುತ್ತಿದ್ದರೆಂಬ ಸಂಗತಿ ನೆನಗೆ ತಿಲು ಬಂದಿತ್ತು ನಿನ್ನೆ ಪತ್ರದ ಮೂಲಿಂದ ಆ ಸುದ್ದಿ ದೃಢವಾಗಿದೆ ಅದರಿಂದ ಬ್ರಿಟಿಶರು ಸೈನ್ಯತಯಾರಿ ನಡಿಸಿ ಜರ್ಮನಿಯ ಮೇಲೆ ಯುದ್ಧತಯಾರಿ ಮಾಡುವಲ್ಲಿ ನಾನು ಯುದ್ಧ ಕೂಡಲು ತಕ್ಷಣವೇ ಅಭ್ಯಂತರಗಳನ್ನು ಕೈಗೊಂಡಿಸುವನು ಯೂರೋಪಿಂಡೆಯಿಗಿನ ಸವ ಸ್ಯ ಗಳನ್ನು ಮನಸಾಲಿಕೆಯಿಂದ ಸರಿಹರಿಸಿಕೊಳ್ಳುವ ಕೆಲಸ ಜರ್ಮನಿಯದಲ್ಲಿ, ವಸಾಲಿಸ ಒಡಂಬಡಿಕೆಯನ್ನ ಒದಗಿಸಿಕಂದು ಜರ್ಮನಿಯ ನೆಲೆ ಸೋರಲು ಅನ್ಯಾಯ ಮಾಡಿ ಆದನ್ನು ತಪ್ಪಿಸಿಕೊಳ್ಳಲು ಸಂಧಿಯಿಂದ ಬಿಚ್ಚಿದ ಕಟುಮಾರಿ ಜನಾಂಗದಿಂದ ಅಂತ ಕರಣ ರೂಪಾಂತರ ಹೊಂದಿದರೆ ಮಾತ್ರ ಇಂಗ್ಲಂಡ ಜರ್ಮನ್ ದೇಶಗಳೊಳಗಿನ ಸಂಬಂಧಗಳಲ್ಲಿ ತಿದ್ದುಪಟ್ಟ ಒದಗಬಹುದು ಇಂಗ್ಲಂಡ ಜರ್ಮನಿ ದೇಶಗಳೊಳಗೆ ಸ್ನೇಹ ವಮಗಟ್ಟಿಕೆಂದ ನಾನು ಇತೀ ಆಯುಸ್ಯ ವಯಮಾಡಿದ್ದೇನೆ ಆದರೆ ಈ ಬ್ರಿಟಿಶ ಮುತ್ಸದ್ದಿಗಳು ನನ್ನ ಯತ್ನಗಳನ್ನೆಲ್ಲ ನಿರರ್ಥಕಗೊಳಿಸಿದ್ದಾರೆ ಏನ ದರೂ ಒದಲು ಕಾಡುಬಿಂದರೆ ನನಗೆ ಒಹು ಸುಖವೆನಿಸವದು

ಈ ಪತ್ರವ್ಯವಹಾರ ನಡೆದ ಬಳಕ, ಹಿಟ್ಲರನಿಗೂ ಬ್ರಿಟಿಶ ರಾಯಭಾರಿಗಳಾದ ಸರ್ ನೆವಿಲ್ಲ್ ಹೆಂಡರಸನ್‌ರವರಿಗೂ ಅನಸ್ಯ ಅನೇಕ ಖಾರಿಬಿಗೆ ಮಾತುಕತೆ ನಡೆಯಿತು ಆ ಪ್ರತ್ಯುತ್ತಾಪನೆಗಳಿಂದೇ – ಬ್ರಿಟಿಶರಿಗೆ ಜರ್ಮನಿಯೊಡನೆ ಒಡಂಬಡಿಕೆ ಮಾಡಿಕೊಳ್ಳಬೇಕೆಂಬ ಉತ್ಸಾಂರೆಯುಂಟು. ಅದರಿಂದ ಹಿಟ್ಲರನು ಈ ಕುರಿತು ಆಲೋಚನೆ ಮಾಡಿದನು ಮಧ್ಯಸ್ಥಿಕೆಯನ್ನು ಒದಗಿಸಿ ತರುವದಕ್ಕಾಗಿ ಇನ್ನೊಮ್ಮೆ ಯತ್ನ ಮಾಡಿದನು ಜಗತ್ತನ್ನು ಜಯಿಸ ವದಕ್ಕಾಗಿ ಜರ್ಮನಿಯು ಕಾಂಸ್ಟಿಟ್ಯುತಿಯೆ ಎಂಬ ವಿಧಾನ ತೀರ್ಮಾನ ಹುಸ್ಕುದದ್ದಾಯಿತು ಬ್ರಿಟಿಶ ಸಾಮ್ರಾಜ್ಯದ ಕಡೆಳ ಕೋಟಿ ಚಚ್ಚೌಕ ಕಿಲೋಮಿಟರ [–ಷ್ಟಿ ನೈಲು] ವಿಸ್ತೀರ್ಣ ಪ್ರದೇಶವಿದೆ, ರುಶ್ಯದ ಕಡೆಗೆ ಕೋಟಿ ೧೦ ಲಕ್ಷ, ಅಮೆರಿಕೆಯ ಕಡೆಗಿ ಲಕ್ಷ ಚಚ್ಚೌಕ ಕಿಲೋಮಿಟರ ಪ್ರದೇಶವಿದೆ, ಜರ್ಮನಿಯ ಕಡೆ ಪೂರ್ಣ ಲಕ್ಷ ಚಚ್ಚೌಕ ಕಿಲೋಮಿಟರ ವಿಸ್ತೀರ್ಣ ಪ್ರದೇಶ ಸಹ ಇಲ್ಲ, ಆಂದ ಒಳಕ ಜಗತ್ತನ್ನು ಆಳಬಯಸುವ ಮಹಾ ಕಾಂಕ್ಷೆ ಯಾರು ಹಿಡಿದಿರುತ್ತಾರೆಂಬದು ಸ್ಪಷ್ಟವಾಗುತ್ತದೆ ಪೋಲಂಡದ ಅತ್ಯಾಚಾರ ವೀತಿಮಿರಾತುರ್ಯ ಅಸಹ್ಯವಾಯಿತು ಪೋಲಂಡ ಸರಕಾರವು ಇದಕ್ಕೆ ಹೊಣಯಲ್ಲವಾದರೆ ರಾಜ್ಯರಂಡಳಿತೆ ನಡಿಸುವ ಸಾಮರ್ಥ್ಯ ಅದಕ್ಕಿಲ್ಲವೆಂದು ಸಿದ್ಧವಾಗುತ್ತದೆ ಪ್ರತಿಯಾಗಿ ಜರ್ಮನ್‌ರು ಅತ್ಯಾಚಾರಿಗಳಾಗಲಿಲ್ಲ, ಬಹಳ ಸಹನಶೀಲರಾಗಿದ್ದಾರೆ ಇವೆಲ್ಲ ಅತ್ಯಾಚಾರಗಳನ್ನು ಪೋಲಂಡನವೇ ನಡಿಸಿದ್ದಾರೆ ಪೂರ್ವ ಸಿಲೆಯಲ್ಲಿ ನಡೆಯುವ ಹಾಮಳಿಯನ್ನ ನಿರ್ಮೂಲಿಸುವದಕ್ಕಾಗಿ ಜರ್ಮನ್ ಸರಕಾರವು ನಿರ್ಧಾರ ಮಾಡಿದೆ ಯೂರೋಪ ಖಂಡ ದೊಳಗೆ ಶಾಂತತೆಯನ್ನು ಕಾಪಾಡಿಲೋಸುಗ ಪುಗಳ ಜಾರುಸತ್ಯವ ಗದು ಅತ್ಯವಶ್ಯ ಯಿರುವೆಂದು ಜರ್ಮನಿಯ ಸಮುಸ್ಥ ಜನಂಗಳು ಬೇಕು ಬ್ರಿಟಿಶ ಮುಖ್ಯ ಪ್ರಧಾನರ ಭಾಷಣದಿಂದ ಇಂಗ್ಲಂಡ ಜರ್ಮನಿ ದೇಶಗಳೊಳಗೆ ಸೋರಯುದ್ಧವಾಗುವ ಸಂಭವ! ಈ ಯುದ್ಧ ಮಹಾಯುದ್ಧಕ್ಕಿಂತ ಬಿಗಿಯಾಗುತ್ತದು ರುಶ್ಯರೊಡನೆ ಒಡಂಬಡಿಕೆಯಾದ್ದರಿಂದ ಆ ಪಾರ್ಶ್ವವರಕ್ಷಿತವಿದೆ ರುಶ್ಯರಿಂದ ಯುದ್ಧಾಂಗಲದಲ್ಲಿ ಜರ್ಮನಿಗೆ ಅವಶ್ಯವುಳ್ಳ ಸಾಹಿತ್ಯವೆಲ್ಲ ಸಾಹಿತ್ಯದೊರೆಯು ವಂಕಿದೆ ಇಂಗ್ಲಂಡ ಜರ್ಮನಿಗಳೊಳಗ ಸ್ನೇಹ ಸೌಹಾರ್ದಗಳಿರಬೇಕೆಂದು ಹಿಟ್ಲರನ ಆಸೆಸ್ಟೆ! ಯುದ್ಧದಿಂದ ಜರ್ಮನಿಗೆ ಕೆಲವು ಲಾಭಗಳು ದೊರೆಯಬಹುದು ಇಂಗ್ಲಂಡಕ್ಕೆನೂ ಪ್ರಾಪ್ತಿಯ ಲ್ಲೆಂಬುದು ಖಂಡಿತ ಜರ್ಮನಿ ಪೋಲಂಡಗಳೊಳಗಿನ ವಿವಾದ ಒಗೆ ಹರಿಯಲೇಬೇಕು ಈ ಪ್ರಶ್ನೆ ಇತ್ಯರ್ಥವಾದ ಬಳಕ ಇಂಗ್ಲಂಡ ಕಡ ಹಿಟ್ಲರನು ವಿಶಾಸ ಸೂಚನೆಗಳನ್ನು ಮಾಡುವವನಿದ್ದಾನೆ ಹಿಟ್ಲರನು ದೊಡ್ಡ ದೊಡ್ಡ ಪಿಜಾರರ ಕರ್ತೃತ್ವ ಲಿ ಪುರ ಪನು ಬ್ರಿಟಿಶ ಸಾಮ್ರಾಜ್ಯವನ್ನು ಹ್ಯಿಂದಿನು ಮುಸ್ಸಿಸತ್ತಾನೆ ಅದನ್ನು ಕಾಪಾಡಲಿಕ್ಕೆ ಆತನು ಸಿದ್ಧನಿದ್ದಾನೆ ಆ ರೀತಿಯಲ್ಲಿ ಕೆಯಿಂದ ಕಲವು ವಸಾಹತುಗಳನ್ನ ಆತನು ಕಾಲುವನು ಅವು ಆತನಿಗೆ ನಿಗದೇಕು ಪ್ರಾಂತರ ಗಳಿಕನ ವನ್ನು ನಿಡಬೇಕೆಂದು ಬ್ರಿಟಿಶರ ಸಲೆ ಆತನ ಒತ್ತಾಯವಿಲ್ಲ, ಇತ ಲಿಯ ಗೆಳತನವನ್ನ ಆತನು ಬಿಡಲಾರನು ರುಶ್ಯರೊಡನೆ ಆತನು ಎಂದಿಗೂ ಹಗೆ ಮಾಡವವನಲ್ಲ ಬ್ರಿಟಿಶರು ಹಿಟ್ಲರನ ಅಂಜೋಣವಂತೆ ನಡಕೊಂಡರೆ ಬ್ರಿಟಿಶರಿಗೆ ಸಕಲ ಪ್ರಕಾರ

ಬೇಕಾದ್ದನ್ನು ಕೊಟ್ಟರೆ, ಬ್ರಿಟಿಶ ಸಾಮ್ರಾಜ್ಯಕ್ಕೆ ಹಿಟ್ಲರನ ರಕ್ಷಣೆ!

ಗಳಲ್ಲಿ ನೆರವುಗಾರಿಕೆಗೆ ಆತ ನಿಷ್ಪಕ್ಷಪಾತಿಯಾದ ಸೈನ್ಯಬಲವನ್ನು ಪರಿಸ್ಥಿತಿಗೆ ತಕ್ಕಹಾಗೆ ಇಳಿಸಿಕೊಳ್ಳಲಿಕ್ಕೂ ಆತನು ಒಪ್ಪುತ್ತಾನೆ ಈಗ ಜರ್ಮನಿ-ಪ್ರಾನ್ಸಗಳೊಳಗಿರುವ ಗಡಿ ಇವೆರಡೂ ಜನಾಂಗಗಳ ಗಡಿಯೆಂದು ಎಣಿಸಲಿಕ್ಕೆ ಆತನ ಒಪ್ಪಿಗೆಯುಂಟು ಬ್ರಿಟಿಶ ಸರಕಾರವು ಈ ಯೋಜನೆಗಳನ್ನು ಆಲೋಚಿಸಿದರೆ ಬ್ರಿಟಿಶ ಸಾಮ್ರಾಜ್ಯಕ್ಕೂ ಜರ್ಮನಿಗೂ ಸ್ನೇಹವಾದೀತು, ಇಲ್ಲದಿದ್ದರೆ ಯುದ್ಧಪೊದಗುವದು ಯುದ್ಧದಲ್ಲಿ ಏನೇ ಆದರೂ ಬ್ರಿಟನ್‌ವು ಪ್ರಬಲವಾಗಿ ಹೊರಬರಲಾರದು ಇದೇ ಹಿಟ್ಲರನ ಕೊನೆಯ ಹಿತೋಕ್ತಿ.

***

ಆಗಸ್ಟ ತಾ ಅನೇ ಪತ್ರಕ್ಕೂ ತಾ ಅನೇಗೆ ಹಿಟ್ಲರ -ಹೆಂಡರಸನ್‌ರೊಳಗೆ ನಡೆದ ಸಂಭಾಷಣಕ್ಕೂ ಬ್ರಿಟಿಶ ಸರಕಾರವು ಆಗಸ್ಟ ೨೮ನೇ ತಾರೀಖಿಗೆ ಉತ್ತರ ಕೊಟ್ಟಿದ್ದೇನೆಂದರೆ ಜರ್ಮನಿ-ಪೋಲಂಡಗಳೊಳಗಿನ ವಿವಾದ ಮೊಟ್ಟ ಮೊದಲು ಬಗೆಹರಿಯಬೇಕೆಂಬ ಮಾತು ಬ್ರಿಟಿಶ ಸರಕಾರಕ್ಕೆ ಒಪ್ಪಿಗೆಯುಂಟು ಪೋಲಂಡ ಸರಕಾರಕ್ಕೂ ಬ್ರಿಟಿಶ ಸರಕಾರಕ್ಕೂ ಇರುವ ಕರಾರುಗಳನ್ವಯ ಜರ್ಮನ್ ಸರಕಾರವು ಒಪ್ಪದು ಬ್ರಿಟನ್ ದೇಶಕ್ಕೆ ಸಿಗಬೇಹುದಾದ ಪ್ರಯೋಜನದ ಆಸೆ ಂದ ಆ ಕರಾರುಗಳನ್ನು ಸಾವಾಸ್ಯ ಸರಕಾರವು ಕೊಯ್ಯಲಾರದು ಜರ್ಮನಿ-ಪೋಲಂಡ ಸರಕಾರಗಳು ಪೋಲಂಡದ ಹಿತಸಂಬಂಧಗಳನ್ನ ಒಪ್ಪಿಸಿ ತಮ್ಮೊಳಗಿನ ವಿವಾದವನ್ನು ಬಗಹರಿಸಿಕೊಳ್ಳಬೇಕು ಪೋಲಂಡದ ಹಿತಸಂಬಂಧಗಳನ್ನ ಮುಟ್ಟಲಾರೆನು ಎಬ್ಬಿಲ್ ಅನೇ ತಂಬಿಗೆ ಕೊಟ್ಟ ಧ ಪಣದಲ್ಲಿ ಮನ್ನಿಸಿದ್ದುಂಟು ಒಡಲಬಡಿಕೆಯ ಲ್ಲಿ ಆಗಬಹುದಾದ ನಿರ್ಣಯವನ್ನು ಸಕಲ ರಾಷ್ಟ್ರಗಳು ಜರ್ಮನಿ-ಪೋಲಂಡಗಳ ಕಡೆಯಿಂದ ಪಾಲಿಸಿಕೊಳ್ಳುವಹಾಗೆ ಜೋಪಾಸಿಯಿರತಕ್ಕದ್ದು ಈ ಮಾತು ಆಗಸ್ಟ ತಾರೀಖಿನ ತಲನೇ ಪತ್ರವನ್ನಿ ಸ್ವೀಕರಿಸಲಾಗಿದೆ ಪೋಲಂಡ ಸರಕಾರವು ತನ್ನ ಹಿತಸಂಬಂಧಗಳ ರಕ್ಷಣೆಗಾಗಿ ಜರ್ಮನ್ ಸರಕಾರದೊಡನೆ ಸಮಕ್ಷ ಮಾತನಾಡಲು ಒಪ್ಪುತ್ತಾರಾಗಿ ಬ್ರಿಟಿಶ ಸರಕಾರಕ್ಕೆ ತಿಳಿಸಿದೆ, ಆಂತೆಯೇ ಜರ್ಮನ್ ಸರಕಾರವೂ ಬ್ರಿಟಿಶ ಸರಕಾರಕ್ಕೆ ತಿಳಿಸಬೇಕು ಅತ್ಯಾಚಾರಗಳ ಕುರಿತು ಒಕ್ಕೆ ಸಿಕ್ಕ ಸುದ್ದಿಗಳನ್ನು ಪ್ರಸಾರ ಮಾಡಿಗೊಡಲಾಗದು ಉಭಯ ಸರಕಾರಗಳು ಜಾಗ್ರತೆ ಕೂಬೃತಕ್ಕದ್ದೆ ಜರ್ಮನಿ ಪೋಲಂಡಗಳೊಳಗೆ ಸಂಧಿಯಾದರೆ ಜಗತ್ತಿನಲ್ಲಿ ಶಾಂತತೆ ನಲಿಯುವದು, ಇಲ್ಲದಿದ್ದರೆ ಯುದ್ಧವು ಭಯಂಕರ ಅನರ್ಥಪೂರ್ಣವಾಗುವದು

***

ಈ ಪತ್ರಕ್ಕೆ ಹಿಟ್ಲರನು ಮರುದಿನ ಸಂಜೆ ಅಂದರೆ ಆಗಸ್ಟ ೩೧ನೇ ತಾರೀಖಿಗೆ ಉತ್ತರ ಕೊಟ್ಟಿನ ಹಿಟ್ಲರನಿಗೆ ಬ್ರಿಟಿಶರೊಡನೆ ಸಂಧಿ ಮಾಡಿಕೊಳ್ಳಬೇಕೆಂಬ ಹಂಬಲವುಂಟು, ಆದರೆ ಜರ್ಮನ್ ಜನರಿಂದ ಹಿತಸಂಬಂಧಗಳನ್ನು ಘಾತಪಡಿಸಿಕೊಂಡು ಸಂಧಿಮಾಡಿಕೊಳ್ಳುವ ವಿಚಾರವಿಲ್ಲ ಕಳೆದ ಮಳೆಗಾಲದಿಂದ ಕಳೆದ ಮಾರ್ಚ ತಿಂಗಳ ತನಕ ಪೋಲಂಡ ಸರಕಾರಕ್ಕೆ ವಿವಾದ ವಿಷಯಗಳನ್ನು ಬಗೆಹರಿಸುವದಕ್ಕಾಗಿ ಜರ್ಮನ್ ಸರಕಾರವು ಬೇರೆ ಬೇರೆ ಸೂಚನೆಗಳನ್ನು ಮಾಡಿತು ಆ ಕಾಲದಲ್ಲಿ ಜರ್ಮನಿ-ಪೋಲಂಡಗಳೂ ಸ್ನೇಹಭಾವವಿತ್ತು ಪೋಲಂಡ ಸರಕಾರವು ಈ ಸಲಹೆಗಳನ್ನು ಮಾರ್ಚ ತಿಂಗಳಲ್ಲಿ ಧಿಕ್ಕರಿಸಿ ಸೈನ್ಯ ಸಿದ್ಧತೆ ನಡಿಸಿತು, ಡೆಂಝಿಗನ್ನ ಆಕ್ರಮಣ ಮಾಡಿಕೊಳ್ಳಲೆತ್ನಿಸಿತು, ವ್ಯಾಪಾರ ವ್ಯವಹಾರಗಳಿಗೆ ಪ್ರತಿಬಂಧಗಳನ್ನೇರ್ಪಡಿಸಿತು, ಪೋಲಂಡದೊಳಗೆ ವಾಸಿಸುವ ಅನೇಕ ಜರ್ಮನ್‌ರಿಗೆ ಕ್ರೂರತನದಿಂದ ದೆಸಿಸಿತು, ನಿರ್ದಯತನದಿಂದ ಕೊಲೆ ಮಾಡಿತು ಜರ್ಮನ್ ಸರಕಾರವು ತನ್ನ ಸೂಚನೆಗಳನ್ನು ಈಗ ತಿರಸ್ಕರಿಸಿದೆ ಲೊಪ್ಪುತ್ತಿದೆ ಮತ್ತು ಪೋಲಂಡ ಸರಕಾರದ ಸರ್ವಾಧಿಕಾರಿ ಜರ್ಮನ್‌ನಿಗೆ ಬಂದಲ್ಲಿ ಆತನಿಗೆ ಅವನ್ನು ತಿಳಿಸುವದೂ, ಅದಕ್ಕೂ ಪೂರ್ವದಲ್ಲಿ ಅವನ್ನು ಬ್ರಿಟಿಶ ಸರಕಾರಕ್ಕೆ ಒಪ್ಪಿಸುವದೆ ಪೋಲಂಡ ಸರಕಾರದ ಪ್ರತಿನಿಧಿ ನಾಳೆ ಸಂಜೆ (ಆಗಸ್ಟ ತಾ. ಒಂಭತ್ತ ಸಂಜೆ) ಬಂದು ಕಲ್ಪಬೇಕು

***

ಇದಕ್ಕೆ ಬ್ರಿಟಿಶ ಸರಕಾರವು ಆಗಸ್ಟ ತಾ ಒಂಭತ್ತ ಬೆಳಿಗೆನೆ ೨ ಘಂಟೆಗೆ ತಮ್ಮ ರಾಯಭಾರಿಗಳಾದ ಸರ್ ನೆವಿಲ್ ಹೆಂಡರಸನ್‌ರವರಿಗೆ ತಂತಿಯಿಂದ ತಿಳಿಸಿದ್ದೇನೆಂದರೆ – "ಈ ಹೊತ್ತು ಪೋಲಂಡ ಸರಕಾರದ ಸರ್ವಾಧಿಕಾರಿಗಳನ್ನು ಬರ್ಲಿನ್ನಿಗೆ ಕಳಿಸಿ ವದು ಅಸಾಧ್ಯ ಮಾತು ನೀವು ಕೂಡಲೆ ಈ ಸಂಗತಿಯನ್ನು ಜರ್ಮನ್ ಸರಕಾರಕ್ಕೆ ತಿಳಿಸಿ" ನುತ್ತು ಅವೇ ದಿನ ಸಂಜೆಯಾನ್ನ ೨॥ ಘಂಟೆಗೆ ಮತ್ತೊಂದು ತಂತಿಯನ್ನು ಕಳಿಸಿತು. "ಜರ್ಮನ್ ಸರಕಾರದ ಪತ್ರವನ್ನು ನಾವು ವಿಚಾರಿಸುತ್ತಿದ್ದೇವೆ. ಪೋಲಂಡ ಸರಕಾರಕ್ಕೆ ತತ್ಕಾಲ ತಿರ ಮಾಡದಂತೆ ವಿನಂತಿ ಮಾಡಿಕೊಳ್ಳೋಣಾನಿದೆ ಜರ್ಮನ್ ಸರಕಾರವು ಇವೇ ಪ್ರಕಾರ ಕೈತಪೆಯ ಬೇಕು" ಸಂಜೆ ೨॥ ಘಂಟೆಗೆ ಮತ್ತೊಂದು ತಂತಿ ಕಳಿಸಲ್ಪಟ್ಟಿತು "ಪೋಲಂಡದೊಳಗಿನ ಜರ್ಮನ್ ನಿವಾಸಿಗಳು ಪೋಲಂಡ ಸರಕಾರಕ್ಕೆ ಕೆಣಕಿದ್ದಿದರೆ ಮಾತ್ರ ಪೋಲಂಡ ಸರಕಾರವು ಕೈತಪೆಯ ಬಲ್ಲದು ಜರ್ಮನ್‌ರು ಒಳ್ಳೆ ಅವರ್ಧ ಮಾಡುತ್ತಾರೆ. ಅವರ ಮೇಲೆ ಉಗ್ರ ಉಪಾಯ ಗಳನ್ನು ಕೈಕೊಳ್ಳುವ ಪ್ರಸಂಗವಿಲ್ಲ" ಸಂಜೆ ೫ ಘಂಟೆ ಮತ್ತೊಂದು ತಂತಿ ಕಳಿಸಲ್ಪಟ್ಟಿತ "ಜರ್ಮನಿಯ ಸಂಧಿ-ಸೂಚನೆಗಳನ್ನು ಪಡೆಯಲಿಕ್ಕೆ ಜೋಲಿಶ್ ಸರಕಾರದ ಸರ್ವಾಧಿಕಾರಿಗಳು ಸ್ವತಃ ಬರ್ಲಿನ್ನಿಗೆ ಬರಬೇಕಾಗಿ ಜರ್ಮನ್ ಸರಕಾರದ ನಿಗ್ರಹವಿದೆಯೆಂದಾಗಿ ನಮಗೆ ತಿಳಿಯಬಂದಿದೆ. ಈ ಕ್ರಮ ಸಂಪೂರ್ಣವಾಗಿ ಅಯೋಗ್ಯವಾದುದು ಇದನ್ನ ಮನ್ನಿಸಲು ಪೋಲಂಡ ಸರಕಾರಕ್ಕೆ ಬ್ರಿಟಿಶ ಸರಕಾರವು ಸಲಹೆ ಕೊಡಲಾರದು. ಪೋಲಂಡದ ರಾಯಭಾರಿಗೆ ಕರಿಸಿ ಸೂಚನೆಗಳನ್ನು ಆವರ ಕಡೆ ಒಪ್ಪಿಸಿ ಪೋಲಂಡ ಸರಕಾರದ ಅಭಿಪ್ರಾಯ ಕೇಳಿಕೊಳ್ಳುವಮು ರೀತಿ ಬ್ರಿಟಿಶ ಸರಕಾರದ ಕಡೆ ಆ ಸೂಚನೆಗಳು ತಿಳಿಸಲ್ಪಟ್ಟಿರಿ ಸಂಧಿ-ಕಾರ್ಯದಲ್ಲಿ ಬ್ರಿಟಿಶರು ನೆರವು ಗುವರು ಹಾಗೆಯೇ ಮುಖ್ಯಂತ್ರೆ ಬ್ರಿಟಿಶ ರಾಯಭಾರಿಗಳಾದ ಹೆಂಡರಸನ್‌ರವರು ರಿಬೆನ್‌ಟ್ರೊಪ್‌ರವರಿಗೆ ಭೆಟ್ಟಿಯಾಗಿ ಹಿಟ್ಲರನ ಪತ್ರಗಳಿಗೆ ಬ್ರಿಟಿಶ ಸರಕಾರದ ಉತ್ತರವನ್ನು ತಿಳಿಸಿದರು -" ಜರ್ಮನ್ ಸರಕಾರವು ಪ್ರದರ್ಶಿಸಿದ ಸೌವಿಚಾರಗಳನ್ನು ನೋಡಿ ಬ್ರಿಟಿಶ ಸರಕಾರಕ್ಕೆ ಸಮಾಧಾನವಾಗಿದೆ ಜರ್ಮನ್ ಜನಾಂಗದಂತೆಯೇ ಪೋಲಂಡ ಜನಾಂಗಕ್ಕೂ ಈ ಪ್ರದೇಶದಲ್ಲಿ ಜೀವದ ಹಿತಸಂಬಂಧಗಳವೆ ಇವೆರಡೂ ಸಂಬಂಧಗಳು ಪರಸ್ಪರ ಘಾತಕವಲ್ಲ. ಪೋಲಂಡದ ಹಿತಸಂಬಂಧಗಳ ಕುರಿತು ಬ್ರಿಟಿಶ ಸರಕಾರವು ಕೈಕೊಂಡ ಧೋರಣ ಜರ್ಮನ್ ಸರಕಾರಕ್ಕೆ ಮಾನ್ಯವಿರುತ್ತದೆಂದು ಬ್ರಿಟಿಶ ಸರಕಾರದ ಗ್ರಹಿಕೆ ಜರ್ಮನಿ-ಪೋಲಂಡಗಳೊಳಗಿನ ವಿವಾದದ ಕುರಿತು ಜರ್ಮನ್ ಸರಕಾರದ ಸೂಚನೆಗಳ ವಿಚಾರವಾಗಿ ವದು ಅವಶ್ಯ ಪೋಲಂಡ ಸರಕಾರಕ್ಕೆ ಜರ್ಮನಿಯ ಅಂಬೋಣ ತಿಳಿಸೂಣಾನಿದೆ ಈ ವಿಷಯ ವನ್ನು ತ್ವರ್ಯಪಡಿಸುವದು ಆಶ್ಯಕ್ಯ ಆದರೆ ಈ ಹೊತ್ತೇ ಪೋಲಂಡ ಸರಕಾರದ ಸರ್ವಾಧಿಕಾರಿಗಳನ್ನು ಬರ್ಲಿನ್ನಿಗೆ ಕಳಿಸುವದು ಆಪತ್ಕಾರಕ ಪೋಲಿಶ್ ಜರ್ಮನ್‌ಸೈನ್ಯಗಳು ಎದುರು-ಬದುರಾಗಿ ನಿಂತಿವೆ ಜರ್ಮನ್ ಸರಕಾರವು ಸ್ವರಕ್ಷೆ ಹಿಡಿದರೆ, ಪೋಲಂಡ ಸರಕಾರಕ್ಕೆ ಕೈ ತಪೆಯಲು ಸಾಮ್ರಾಜ್ಯ ಸರಕಾರವು ತಿಳಿಸುವದು. ಇದಕ್ಕೊಪ್ಪದಿದರೆ ಮಾತ್ರ ಜರ್ಮನ್ ಸರಕಾರವು ಆಂತರಿಕರಣಪೂರ್ಕ ಒಡಂಬಡಿಕೆ ಮಾಡಿಕೊಳ್ಳಲಿಯಸುತ್ತದೆಂದು ಎಣಿಸಲ್ಪಡುವ

(ಂಂಕೇ ೫ ನೆ ಮೇಲೆ ಮುಂದಿನಿದೆ)

NOTICE TO CONTRACTORS.

Sealed tenders in B-1 form (percentage) are invited for the work of "Reconstructing bridge No 320-A in mile 43/7 of Karwar Bellary Road" estimated cost Rs 19,432/— earnest money Rs 194/- Tender forms will be issued from the Office of the undersigned up to 3 P M on 15th September 1939 on payment of Re 1/— each form and the tenders will be received upto 3 P M on the 18th September 1939

Terms of contract and specifications may be ascertained by application to the undersigned in writing or in person during office hours on working days Earnest money should be paid into the nearest Government Treasury and the duplicate of the challan should be attached to the tender.

No A- 31

KARWAR, 6th September, 1939

K. M. BEDEKAR,
Executive Engineer,
Kanara Division

ಪತ್ರಕರ್ತರ ನುಡಿಗನ್ನಡಿ.

೧. ಈಗಿನ್ ಯುದ್ಧದಿಂದ ಏನೇ ಆಗಲಿ, ಒಂದು ಮಾತು ಸಿದ್ಧವಾದಂತಾಗಿದೆ ಹಿಂದುಸ್ಥಾನ ಸರಕಾರವು ನಡಿಸ ತ್ತಿರುವ ಸೈನ್ಯ-ಖರ್ಚು ಹಿಂದುಸ್ಥಾನದ ರಕ್ಷಣೆಗೆ ಅವಶ್ಯವಿಲ್ಲವೆಂದು ಲೋಕರು ಯಕರು ಹೇಳುವ ಸಂಗತಿ ಈಗ ಸುಳ್ಳಾಗಿ ಸ್ಪಷ್ಟವಾಗಿದೆ ಕಲಕತ್ತೆಯ ಪೊಡರ್ ರಿಸ್ಯ ಮಾಸಪತ್ರಿಕೆಯ ಸಂಪಾದಕರಾದ ಶ್ರೀಯುತ ಆನಂದ ಚಟ್ಟರ್ಜಿಯವರು ಬರೆದಂತೆ, ಹಿಂದುಸ್ಥಾನ ಸರಕಾರವು ಇಜಿಪ್ತ, ಮಲಯಾ ಕಡೆ ಹಿಂದುಸ್ಥಾನದಲ್ಲಿಗೆನ್ಸೈನ್ಯ ಖರ್ಚುಗಳನ್ನು ರವಾನಿಸಿದ್ದರ ಮೇಲಿಂದ ಹಿಂದುಸ್ಥಾನದಲ್ಲಿ ಶಾಂತಿ ರಕ್ಷಣೆಗಾಗಿ ಅಷ್ಟು ಸೈನ್ಯಬಲ ಅವಶ್ಯವಿಲ್ಲ ವೆಂಬ ಮಾತು ಸಿದ್ಧ, ಅಂತೆಯೇ ಯುದ್ಧಕಾಲದಲ್ಲಿಯೂ ಅವಶ್ಯವಿಲ್ಲವೆಂಬ ಮಾತು ಸಹ ಸಿದ್ಧ! ಅಂದ ಬಳಿಕ, ಆ ಸೈನ್ಯಕ್ಕಾಗಿ ಹಿಂದುಸ್ಥಾನ ಸರಕಾರವು ಸಮಸ್ಯಾ ಕಾರಣ ಖರ್ಚಿಸಲೋಸುಗ ಖರ್ಚು ಮಾಡುತ್ತಿದೆಂದು ಸ್ಪಷ್ಟವಾಯಿತು. ಹಿಂದುಸ್ಥಾನ ಸರಕಾರವು ಸೈನ್ಯ ಖರ್ಚನ್ನು ಕಡಿಮೆ ಮಾಡಿ ಒರುವದಿಲ್ಲವಾಗಿಯೂ, ಹಿಂದುಸ್ಥಾನದಲ್ಲಿ ಶಾಂತಿ ಪಾಲನೆಗೆ ಇಷ್ಟಸೈನ್ಯ ಶಿಬಂದಿ ಅವಶ್ಯವೆಂದೂ ಪ್ರತಿಪಾದಿಸಿದ್ದು ಲೋಕವಂಚನೆಯೆಂ ಯಾರಾದರೂ ಟೀಕಿಸಿದರೆ ಅದು ಅಯುಕ್ತವಾದೀತು ಎಂದು ಸಮ್ಮಿಂದ ಜೀಳಲಾಗದು ಸೈನ್ಯ ಇಲಾಖೆಯ ಖರ್ಚು ಮೀತಿ ಮೀರಿದ್ದರಿಂದ ಹಿಂದುಸ್ಥಾನ ಸರಕಾರಕ್ಕೆ ಹಿಂದುಸ್ಥಾನದಿಗಳಿಗೆ ಅವಶ್ಯವಿಲ್ಲದ ಲೋಕೋದ್ಧಾರ ಕಾರ್ಯಗಳಿಗಾಗಿ ಪ್ರಾಂತಿಕ ಸರಕಾರಗಳಿಗೆ ನೆರವು ಗಲು ತೊಂದರೆಯಾಗಿದೆ. ಹಿಂದುಸ್ಥಾನಸರಕಾರವು ನಿರ್ಮಲಚಿತ್ತದಿಂದ ಈ ವಿಷಯವನ್ನು ಪರಾಂಬರಿಸಿ ಸಾಮಾನ್ಯ ಕಾರಣಕ್ಕಾಗಿ ನಡಿಸುವ ಸೈನ್ಯ ಖರ್ಚಿನ್ನು ಸಾಮಾನ್ಯ ಸರಕಾರದಿಂದಲೇ ಪಡ್ಡುಗೊಳ್ಳು ಟೀಕಾಗಿ ನಾವು ಸೂಚಿಸುತ್ತೇವೆ ಈ ಉಪಾಯದಿಂದ ಪ್ರಾಂತಿಕ ಸರಕಾರಗಳಿಗೆ ಬೇರೆ ಬೇರೆ ಲೋಕೋದ್ಯೋಜನೆಗಳಿಗಾಗಿ ತಗಲುವ ಖರ್ಚು ಪೂರೈಸಲಿಕ್ಕೆ ಹಿಂದುಸ್ಥಾನ ಸರಕಾರಕ್ಕೆ ಅನುಕೂಲ ನಾಗುವದು.

---

೨ ಯುದ್ಧ ಸಮಯದಲ್ಲಿ ವರ್ತಕ-ಲೋಕದೊಳಗೆ ಗೆಲುಭೆಯುಂಟಾಗುವದು ಸಾಹಜಿಕ. ಯುರೋಪಖಂಡದೊಳಗೆ ಯುದ್ಧಾರಂಭವಾದ ವಾರ್ತೆ ಬಂದೊಡನೆ ಸೇಟಿಗಳಲ್ಲ ಜೀನಸುಗಳ ಧಾರಣೆ ಭರಭರನೆ ಏರಿತು ಜನಸುಗಳು ಇದ್ದಷ್ಟಲ್ಲೆ. ವಿದೇಶಗಳಿಗೆ ರಫ್ತಾಗಿ ಲಿಕ್ಕಿ, ಧಾರಣೆ ಮಾತ್ರ ಕೂತಲ್ಲೆ ಏರಿಹೋಗಿದೆ! ಚೆಮಣಿ ಎಣ್ಣೆ, ಅಕ್ಕಿ, ಗೋಧಿ, ಕಬ್ಬಿಣ, ಜೀಲ್ಲಿ, ಚಿನ್ನ ಮೊದಲಾದವುಗಳ ಧಾರಣೆ ಏರೀತಿಕು! ಆಸುಕೂಲವಿದ್ದವರು ಸೇಟುಯಲ್ಲಿ ಸರಕುಗಳನ್ನು ಕೊಂಡುಕೊಂಡು ಒಳ್ಳೆ ಮಾಡಿದರು. ಹಿಂದುಸ್ಥಾನ ಸರಕಾರವೂ ಪ್ರಾಂತಿಕ ಸರಕಾರಗಳೂ ಇಂಥ ದುಂಡಿಯನ್ನು ನಿರ್ಬಂಧಿಸುವದಕ್ಕಾಗಿ ಕಟ್ಟುಳೆಗಳನ್ನು ವಿಧಾಡಿಸಿವೆ. ತಪ್ಪಿ ಜೀನಸ ಗಳ ದರಗಳನ್ನು ಏರಿಸುವ ವರ್ತಕರಿಗೆ ಘೋರ ಶಿಕ್ಷೆಯಾಗುವಂತೆ ಕಾಜಾರಾಸನಗಳು ವರ್ತಿಸಲ್ಪಟ್ಟಿವೆ. ವರ್ತಕರು ಗಾಬರಿ ಮಾಡಲಾಗದು, ಸಮಾಧಾನ ಹಿಡಿಯಬೇಕು, ಜೀನಸುಗಳಗನ ಕಿಲೆ ಮೇಲಾಗಿ ಕನ್ನಡ ಲಿಪಿಯಲ್ಲಿ ಕೊಂಕಣಿ ಭಾಷೆಯ ಸ್ವರಗಳು ಸರಿಯಾಗಿ ಬರೆಯಬರುವಂತಿಲ್ಲ. ಕೊಂಕಣಿಗೂ ಸಂಸ್ಕೃತಕ್ಕೂ ಸಂಬಂಧವಿರುವದರಿಂದ ದೇವನಾಗರಿ ಲಿಪಿಯನ್ನೇ ಮೊಟ್ಟಮೊದಲು ಕಲಿಸುವದು ಶ್ರೇಯಸ್ಕರವಾದದ್ದು. ಕನ್ನಡ ಲಿಪಿ, ಕನ್ನಡ ಭಾಷೆ ಪ್ರಾಂತ-ಭಾಷೆಯಾದ್ದರಿಂದ ಅದನ್ನು ಕಲಿಯಲಿಕ್ಕೆ ಆಮೇಲೆ ಹೆಚ್ಚಿನ ಅನುಕೂಲತೆಯೇ ಹೊರತು ಪ್ರತಿಕೂಲವಿಲ್ಲ ಮೇಲಾಗಿ ಸಾಸ್ಥರತೆಯ ಪ್ರಚಾರದಲ್ಲಿ ಅಕ್ಷರಜ್ಞಾನದ ಮೇಲೆ ವ್ಯಾಧಾನ್ಯವುಂಟು, ಹೊರತು ಭಾಷಾಜ್ಞಾನದ ಮೇಲೆ ಕಟಾಕ್ಷವಿಲ್ಲ. ಭಾಷಾಜ್ಞಾನವನ್ನು ಗೃಹೀತವಾಗಿಟ್ಟುಕೊಂಡು— ಯಾಕಂದರೆ ಪ್ರತಿಯೊಬ್ಬರೂ ಒಂದಿಲ್ಲೊಂದು ಭಾಷೆ ಬಲ್ಲೆ ಓದುತ್ತಲೆ— ಅಕ್ಷರಜ್ಞಾನ ಮಾಡಿಕೊಡುವದೇ ಸಾಸ್ಥರತೆಯ ಉದ್ದೇಶ. ಕೊಂಕಣಿ ಕಲಿತರೆ ಕನ್ನಡಕ್ಕೆ ಜಾಸ್ತಿ, ಕನಾ೯ಟಕ ಪ್ರಾಂತರಚನೆಗೆ ಬಾಧೆ ಮೊದಲಾದ ವಿಚಾರಗಳು ಅವಾಪ್ತಸಂಗಿಕ ವೆಂದು ನಾವು ನಮೂದಿಸಬಯಸುತ್ತೇವೆ ಮುಂಬಯಿ ಸರಕಾರವಾದರೂ ಈ ವಿಷಯವನ್ನು ಕೂಲಂಕಷವಾಗಿ ಸಮಾಲೋಚಿಸಿ ಕೊಂಕಣಿಗರಿಗೆ ಕೊಂಕಣಿ ಭಾಷೆಯನ್ನು ದೇವನಾಗರಿ ಲಿಪಿಯಲ್ಲಿ ಬರೆಯಬರುವಂತೆ ಏರ್ಪಾಟು ಮಾಡಲು ಸಾಕ್ಷರತಾ ಮಂಡಳಿಕ್ಕೆ ಸಲಹೆ ಕೊಡಬೇಕೆಂಗಿ ನಾವು ವಿನ್ಮಯಿಸುತ್ತೇವೆ.

---

೩ ಮುಂಬಯಿ ಸರಕಾರವು ಆಯುರ್ವೇದ ವಿದ್ಯಾಲಯ ವನ್ನೊಂದು ಹೊರಡಿಸುವ ವಿಚಾರ ದಲ್ಲಿವೆ ಇನ್ನೂ ನೆಲೆ ನಿಶ್ಚಯವಾಗಿಲ್ಲ. ಅದನ್ನು ನಮ್ಮಾ ಜಲ್ಲೆಯೊಳಗೆ ಸ್ಥಾಪಿಸಬೇಕಾಗಿ ನಮ್ಮ ಸೂಚನೆಯುಂಟು ನಮ್ಮ ಜಲ್ಲೆಯೊಳಗೆ ಬೆಟ್ಟ ಪ್ರದೇಶ ವಿರುವದರಿಂದ ಕರತರದ ವನಸ್ಪತಿಗಳು ಸಕಸ್ಮದೊಯ್ಯವಂತಿದೆ. ಸಂಶೋಧನ ಮಾಡಲಕ್ಕಾಗಿ ಅನುಕೂಲವುಂಟು ನಮ್ಮ ಸಹ್ಯಾದ್ರಿ ಪ್ರದೇಶ ದಿವ್ಯ ವನಸ್ಪತಿಗಳ ಭಾಂಡಾರವೆಂದು ಲೋಕಪ್ರಸಿದ್ಧವಿದೆಯಿನೆ. ಆಯುರ್ವೇದ ವಿದ್ಯಾಲಯವು ಸ್ಥಾಪನ ಕೊಂದಿದರೆ, ಆಯುರ್ವೇದ ಶಾಸ್ತ್ರಜ್ಞರು ಬೇರೆ ಬೇರೆ ವನಸ್ಪತಿಗಳ ಗುಣಧರ್ಮಗಳನ್ನು ಪರೀಕ್ಷಿಸಿ ಅವುಗಳಿಂದ ಲೋಕಪ್ರಯೋಜನವಾಗುವಂತೆ ಉಪಾಯಯೋಜನೆ ಮಾಡಬಹುದು. ವಿದ್ಯಾರ್ಥಿಗಳಿಗೂ ಸಂತೋಷನ ಮಾಡಲು ಅನುಕೂಲವಾಗುವಂತೆ ಆಯುರ್ವೇದ ವಿದ್ಯಾಲಯದ ಸ್ಥಾಪನೆಗೆ ಕಲ್ಲಿಯ ಪರಿಸ್ಥಿತಿ ತೀರ ಅನುಕೂಲವಿದ್ದರಿಂದ ಇಲ್ಲಿಯೇ ಮುಂಬಯಿ ಸರಕಾರವು ಆಯುರ್ವೇದ ವಿದ್ಯಾಲಯವನ್ನು ಹೊರಡಿಸುವಂತೆ ಏರ್ಪಾಟು ಮಾಡಬೇಕಾಗಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ ಈ ಯೋಜನೆಯಿಂದ ನಮ್ಮ ಜಲ್ಲೆಯೊಳಗೆ, ಸ್ವಾಮ್ಯವಾಗಿ ಹಳ್ಳಿ ಹಳ್ಳಿಗಳಲ್ಲಿ ನೆಲೆಸಿದ ಬೇರೆ ಬೇರೆ ಬೆನ್-ಬೇಸರಿಕೆಗಳ ಕಾರಣಗಳ ಗೃಹಕೆಯಾಗಿ ಅವನ್ನು ನಿವಾರಿಸಿಕೊಳ್ಳಲು ಅನುಕೂಲವಾಗುವದೆಂಬ ದೊಂದು ಆಶೆ.

— ಮುಂಬಯಿ ಎಂಬ್ಲು ಸಭೆ ಈ ಮಾಹವಲ್ಲಿ ಪ್ರಣೆಯಲ್ಲಿ ಕೂಡ ವದಿತ್ತು. ಯುದ್ಧದ ಮೂಲಕ ಗವರ್ನರರೂ ಪ್ರಧಾನರೂ ಮುಂಬಯಿಗೆ ಹೋಗಿದ್ದಾರೆ. ಆದರಿಂದ ಮುಂಬಯಿಯಲ್ಲಿ ಸೋಮವಾರ ಸಭೆಯು ಬರ ತಾ ತಾನೇಗೆ ಎಸೆಂಬ್ಲಿಯ ಸಭೆ ಸೇರುವದಾಗಿ ಪ್ರಕಟಣೆ ಹೊರಟಿವೆ ಕೌನ್ಸಿಲು ಸಭೆಯು ೨೬ನೇ ತಾರೀಖಿಗೆ ಮುಂಬಯಿಯಲ್ಲಿ ಸೇರಲಿದೆ.

ಕೊಂಗ್ರೆಸ ಕಾರ್ಯಕಾರಿ ಮಂಡಳಿ.

ಮಹಾತ್ಮರು ಸರ್ವಾಧಿಕಾರಿ ಲಿನ್‌ಲಿಥ್‌ಗೋ ದೊರೆಗಳಿಂದ ತಂತಿ ಬಂದ ಮೇರೆಗೆ ಸಿಮ್ಲಾಕ್ಕೆ ಹೋಗಿ ನೋಮವಾರ ಅಪರಾನ್ಹ ೩|| ಘಂಟೆಗೆ ಸರ್ವಾಧಿಕಾರಿಗಳ ಕಡೆ ಹೋಗಿ ೨ ತಾಸು ವಿಚಾರವಿನಿಮಯ ಮಾಡಿ ೫|| ಘಂಟೆಗೆ ಹಿಂತಿರುಗಿದರು. ಸರ್ವಾಧಿಕಾರಿಗಳಿಗೂ ಮಹಾತ್ಮರಿಗೂ ಸಂಯುಕ್ತ ರಾಜ್ಯಪದ್ಧತಿ, ಯುದ್ಧದೊಳಗೆ ಹಿಂದೀಯರ ಸಹಾಯ ಇವುಗಳ ವಿಷಯ ಮಾತುಕತೆ ನಡೆಯಿತಾಗಿ ತಿಳಿಯುತ್ತದೆ ರಾಮ್ಯದ ಪರವಾಗಿ ಯಾವದೇ ನಿರ್ಣಯವನ್ನು ತಾವು [ಕೊಡಲಿಲ್ಲವಾಗಿಯೂ, ನಿರ್ಣಯ ಕೊಡುವ ಸರ್ವಾಧಿಕಾರಿ ಕೊಂಗ್ರೆಸ ಕಾರ್ಯಕಾರಿ ಮಂಡಳದ್ದೆಂದು ತಾವು ತಿಳಿಸಿದೆವಾಗಿಯೂ ಮಹಾತ್ಮರು ಸಿಮ್ಲಾದಿಂದ ಮೊಂಗಳವಾರ ಹೊರಡಿಸಿದ ಪ್ರಕಟಣೆಯಲ್ಲಿ ನಮೂದಿಸುತ್ತಾರೆ ಮಹಾತ್ಮರು ಹಾಗೆಯೇ ಮರುದಿನ ದಿಲ್ಲಿ ಮಾರ್ಗವಾಗಿ ಹೊರಟು ಗುರುವಾರ ವರ್ಧಾಕ್ಕೆ ತಲ್ಪಿದರು. ಪಂ|| ಜವಾಹಿರಲಾಲ ನೆಹರೂರವರು ಇನ್ನೂ ವರ್ಧಾಕ್ಕೆ ಬಂದು ತಲ್ಪಿಲ್ಲ. ಚೀನ ದೇಶದಿಂದ ಆವರು ಮಂಗಳವಾರ ಬೆಳಗಿನ ೮ ಘಂಟೆಗೆ ನಿವಾಸಿನಿಂದ ಹೊರಟು ಗುರುವಾರ ಬೆಳಿಗ್ಗೆ ರಂಗೂನಿಗೆ ತಲ್ಪಿದರು. ಅಲ್ಲಿಂದ ಕಲಕತ್ತೆಗ ಶನಿವಾರ ಬಂದರು. ಮಳೆಯ ಮೂಲಕ ಮುಂದ ನಿವಾಸಿನಿಂದ್ಕೆ ಹೊರಡಲಾಗಿಲ್ಲ; ಮೊನ್ನೆ ಸಂಜೆ ಕಲಕತ್ತೆಯಿಂದ ಖಾಸಿ ವರ್ಧಾಕ್ಕೆ ಹೊರಟ ವರ್ತೆಯಿದೆ ಬಹುತರವಾಗಿ ನಿನ್ನೆ ಧ್ಯಾನ್ಯ ಆವರು ವರ್ಧಾಕ್ಕೆ ತಲ್ಪಿರಬೇಕು. ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರವರು ತೀರ ಅಸ್ವಸ್ಥರಿದ್ದಾರೆ. ಆವರಿಗೆ ಕಾರ್ಯಕಾರಿ [ವಂಡಳದ ಸಭೆಗೆ ಬರುವದು ಸಾಧ್ಯವಿಲ್ಲ. ಆದರಿಂದ ಮಹಾತ್ಮರ ಕಾರ್ಯದರ್ಶಿಗಳಾದ ಶ್ರೀ|| ವ ಹಾದೇವಭಾಯಿ ದೇಸಾಯಿಯವರು ಬಿಹಾರ ಪ್ರಾಂತದ ಧಂಮಗಡಕ್ಕೆ ಹೋಗಿ ಬಾಬು ರಾಜೇಂದ್ರ ಪ್ರಸಾದರವರೊಡನೆ ಸಕಲ ಪರಿಸ್ಥಿತಿಯನ್ನು ಆಲೋಚಿಸಿದರು. ರಾಜೇಂದ್ರ ಪ್ರಸಾದರು ಶ್ರೀ|| ಮಹಾದೇವಭಾಯಿ ದೇಸಾಯಿಯವರಿಂದ ಎಲ್ಲ ಸಂಗತಿ ಕೇಳಿಕೊಂಡರು. ಆಸ್ವಸ್ಥರಿದಾಗ್ಯೂ ಕರ್ತವ್ಯ ವೆಂದು ರಾಜೇಂದ್ರರು ಶುಕ್ರವಾರ ಸಭೆಗಾಗಿ ಹೊರಟು ಜಬಲಪುರದಲ್ಲಿ ವಿಶ್ರಂಬವಾಗಬಾರದೆಂದು ಮೋಟಾರ ಹತ್ತಿ ಶುಕ್ರವಾರ ರಾತ್ರೆ ತಲ್ಪುತ್ತೇವಾಗಿ ತಂತಿಯಿಂದ ತಿಳಿಸಿದರು. ಆದರೆ, ಮೋಟಾರ ಪ್ರಯಾಣ ಕೈಕೊಳ್ಳುವ ಶಕ್ತಿ ಇಲ್ಲದ್ದರಿಂದ ಶನಿವಾರ ತಲ್ಪಿದರು.

ಶುಕ್ರವಾರ ಕಾರ್ಯಕಾರಿ ಮಂಡಳದ ಸಭೆ ಸೇರಿತು ಮೌ|| ತಬುಲ ಕಲಮ ಆಝಾದ, ಡಾ|| ಬಿ. ಪಿ. ರೊಯ್‌ರವರು ಕಲಕತ್ತೆಯಿಂದ ಹೊರಟಿದ್ದರು, ಆದರೆ ಸಭೆಗೆ ಬಂದು ತಲ್ಪಿದ್ದಿಲ್ಲ. ಬಾಬು ರಾಜೇಂದ್ರ ಪ್ರಸಾದರೂ ಪಂ|| ಜವಾಹಿರಲಾಲರೂ ಹಾಜರಿರಲಿಲ್ಲ. ಮಹಾತ್ಮರು ಶೇಗಾಂವಿನಿಂದ ಸಭೆಗೆ ಬಂದಿದ್ದರು ಕಾರ್ಯಕಾರಿ ಮಂಡಳದ ಸಭಾಸದರೂ, ನಿಮಂತ್ರಿತ ಲೋಕನಾಯಕರಾದ ಶ್ರೀ|| ಸುಭಾಷಚಂದ್ರ ಬೋಸ, ಒಯ್ಯಕ್ರಕಾಶನಾಚಾರ್ಯ ಆಚಾರ್ಯ ನರೇಂದ್ರ ದೇವ, ಶ್ರೀ|| ಮಾಧವಾಜ ಅಣೆ ಮೊದಲಾದವರೂ ಅರ್ಧತಾಸಿನ ತನಕ ವಿಚಾರವಿನಿಮಯ ಮಾಡಿಕೊಂಡು ಸಭೆ ವಿಸರ್ಜಿಸಿದರು.

ಪುನಃ ಸಭೆ ಶನಿವಾರ ಮಧ್ಯಾನ್ಹ ೧|| ಘಂಟೆಗೆ ಪ್ರಾರಂಭವಾಯಿತು. ಸಂಜೆ ೭|| ಘಂಟೆಯ ತನಕ ಪರಿಸ್ಥಿತಿಯ ಚರ್ಚೆನಡೆಯಿತು. ಸರ್ವಾಧಿಕಾರಿಗಳೂ ತಮಗೂ ನಡೆದ ಸಂಭಾಷಣೆಯನ್ನು ಮಹಾತ್ಮರು ಕಾರ್ಯಕಾರಿ ಮಂಡಳಕ್ಕೆ ವಿವರಿಸಿದರು ಪಂ|| ಜವಾಹಿರಲಾಲರು ಈ ಸಭೆಗೆ ಬಂದು ತಲ್ಪಿದ್ದಿಲ್ಲ ಸಭೆನ್ನೆ ರವಿವಾರ ಮುಂದರಿಸಲ್ಪಟ್ಟಿತ.

— ಹಿಂದುಸ್ಥಾನ ಸರಕಾರವು ಬೇರೆ ಬೇರೆ ರಾಜ್ಯ ಸನಗಳನ್ನು ಹೊರಡಿಸಿ ಯುದ್ಧ ಕಾಲದ ಪರಿಸ್ಥಿತಿಯನ್ನು ನಿಯಂತ್ರಿಸಿದೆ ಸೈನಿಕರಿಗೆ ಯ ದ್ಧದಲ್ಲಿ ಸಾದಂತೆ ಯಾರೂ ಮನಪೂರಿಸಬಾರದು, ಶತ್ರುಗಳಿಗೆ ಯಾರೂ ಯಾವದೇ ಪರಿಯಿಂದ ಸಹಾಯ ಮಾಡಕೂಡದು; ಹಣ ಪೂರೈಸಕೂಡದು, ಸುದ್ದಿ ಪೂರೈಸಕೂಡದು, ಯುದ್ಧನೆನ ಮಾಡಿ ಜೀನಸುಗಳ ಧಾರಣೆಯನ್ನು ಏರಿಸಕೂಡದ., ಸೈನಿಕರಿಗೆ ಉಳಕೊಳ್ಳಲು ಅಗತ್ಯವಿದ್ದಲ್ಲಿ ಸರಕಾರದ ಅಪ್ಪಣೆಯಾದೊಡನೆ ಮನೆಗಳನ್ನು ತೆರವು ಮಾಡಿಕೊಡಬೇಕು, ಸರಕಾರಕ್ಕೆ ಹಡಗುಗಳುಬೇಕಾದಲ್ಲಿಪೂರೈಸಬೇಕು;ಶತ್ರುಹಡಗಗಳನ್ನೂ ವಿಮಾನುಗಳನ್ನೂ ಕಂಡಕೂಡಲೆ ಸುದ್ದಿ ತಿಳಿಸಬೇಕು ಸೈನಿಕರ ಯುದ್ಧೋತ್ಸಾಹವನ್ನು ಕುಗ್ಗಿಸುವಂಥ ಯಾವದೇ ಸುದ್ದಿಯನ್ನು ಪ್ರಕಟಿಸಕೂಡದು.

ರಾ|| ವರ್ಟಿ ಶಾಂತಾರಾಮರಾಯರ ನಿಧನ !

ಶನಿವಾರ ತಾ. ೩೦ನೇಗೆ ರಾ|| ಶಾಂತಾರಾಮರಾವ ವರ್ಟಿ ಇವರು ಮುಂಬಯಿಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ತುಂಬಾ ಮನಸನಾಗುತ್ತದೆ. ರಾ|| ಶಾಂತಾರಾಮರಾಯರು ನಮ್ಮ ಜಿಲ್ಲೆಯ ಅಭಿಮಾನಗಾಗಿದ್ದು ಜಿಲ್ಲೆಯ ಉದ್ಧಾರಕ್ಕಾಗಿ ಮುಂಬಯಿಯಿಂದ ಆವರು ನಡಿಸಿದ ಪ್ರಯತ್ನಗಳು ಬರಕ್ಕರೇಯವಿವೆ ಕಾರವಾರದೊಳಗೆ ಸರ್ನಾಯಾಣರಾವ ಜಂಬಾವರಕರ ಅಧ್ಯಕ್ಷತೆಯಲ್ಲಿ ಮೊದಲನೇ ರಾಜಕೀಯ ಪರಿಷತ್ತನ್ನು ನೇರಸಲಿಕ್ಕೆ ವಿಶೇಷ ಪ್ರಯತ್ನ ಮಾಡಿದ ಮಹನೀಯರಲ್ಲಿ ರಾ|| ವರ್ಟಿ ಶಾಂತಾರಾಮರಾಯರು ಉಲ್ಲೇಖವನ್ನು ನಾವು ಮಾಡಲೇ ಬೇಕು. ಜಂಗಲ ದೂರುಗಳ ನಿವಾರಣೆಗಾಗಿ ಇವರು ತರತರದಿಂದ ಪ್ರಯತ್ನ ಪಾಡಿದ್ದಾರೆ. ' ಮುಂಬಯಿ ಕೈನಿಕರ ' ಪತ್ರದಲ್ಲಿ ಸದ್ಯಕ್ಕೆ ಆವರು ಬರೆದ ಒಂದ ಲೇಖಮಾಲೆಯಿಂದ ನಮ್ಮ ಜಿಲ್ಲೆಗೆ ಬಹಳ ಉಪಕಾರವಾಗಿದೆ. ನಮ್ಮ 'ವೃತ್ತ'ಕ್ಕೂ ರಾ|| ವರ್ಟಿಯವರು ಲೇಖಗಳನ್ನು ಬರೆದು ಉಪಕಾರ ನೂಡಿದ್ದುಂಟು; ಹೊಸ ಬೀದಿದಾಗ ಮುಂಬಯಿಯೊಳಗೆ ವರ್ತನೆ ಕೂಡಿಸಿ ನೆರವಾದ ಉಪಕಾರವನ್ನು 'ವೃತ್ತ'ವು ಎಂದಿಗೂ ಮರೆಯಲಾರದು. ಇಂಥವರ ನಿಧನ ದಿಂದುಂಟಾದ ದುಃಖದಲ್ಲಿ ನಮ್ಮ ಜಿಲ್ಲೆಯು ಸಾಗರಕರೆಲ್ಲರೂ ಪಾಲುಗಾರರಾಗಿದ್ದಾರೆಂದು ಆವರ ಕುಟುಂಬದವರು ಭಾವಿಸಿ ತಮ್ಮ ಶೋಕವನ್ನು ಸಾಂತ್ವನ ಮಾಡಿಕೊಳ್ಳತಕ್ಕದ್ದು. ಮೃತಾತ್ಮಾರಿಗೆ ಸದ್ಗತಿ ದೊರೆಯಲಿ !

THE NEW TIMBER DEPOT, HONAVAR. N. Kanara
Proprietor. *D A. Shanbhag,*
Forest Contractor.

ಯಾವತ್ತೂ ಇಮಾರತಿಗೆ, ಫರ್ನಿಚರುಗಳಿಗೆ ಬೇಕಾಗುವ ಕೂದಿ ಕಟ್ಟಿಗೆ ನನ್ನು ಡಿಪೋದಲ್ಲಿ ಯೋಗ್ಯ ದರದಿಂದ ಮಾರಾಟ ಮಾಡುತ್ತೇನೆ. ಆರ್ಡರು ಕೊಟ್ಟಲ್ಲಿ, ಆರ್ಡರಿನಲ್ಲಿ ನಮೂಸಿದಂತೆ ವೇಳೆಗೆ ಸರಿಯಾಗಿ ಕಟ್ಟಿಗೆ ಪೂರೈಸಲ್ಪಡುತ್ತದೆ.

ಕಾನಡಾವೃತ್ತ.

ಮಿತಿ ಪ್ರಮಾಥಿ ಸಂವತ್ಸರ ನಿಜ ಶ್ರವಣ ಕೃಷ್ಣ ೧೪ಶಿ ಸೋಮವಾರ

ಸತ್ಪಕ್ಕಕ್ಕೆ ವಿಜಯವಾಗಲಿ !

ನನ್ನ ದತ್ತತಾಯಿ ತಾರಾ ತಾಯಿ ಮಹಾರಾ ಇವಳು ೨೦೦೦ ತಿಂಗಳುಗಳಿಂದ ಅಪ್ಪಳ್ಳಿಯಲ್ಲಿ ಇತ್ತಲಗಿ ನಿ — ೫| ತಿಂಗಳುಗಳಿಂದ ಅವಳ ಆಸ್ತಾ ಸ್ಥಿತಿ ಬಹಳವಾಗಿದೆ ದೇಹಾಲಸ್ಯದ ಮೂಲಕವಾಗಿಯೂ ಅಪರವಯಸ್ಸಿನ ಮೂಲಕವಾಗಿಯೂ ಅವಳಿಗೆ ಚಿತ್ತಸ್ವಾಸ್ಥ್ಯವಿಲ್ಲ ಅವಳು ಬಹಳ ಚಂಚಲಳಾಗಿ ಸ್ವಳಿ ಮಾಡಬೇ ವಿಷಯ ಪರಿಣಾಮ ತಿಳಿಕೊಳ್ಳುವಷ್ಟು ವಿವೇಕಶಕ್ತಿ ಸಹ ಇರುವದಿಲ್ಲ ನಾನು ವೈದ್ಯ ರಾಯನ ಪರಿಯಿಂದ ಮುಂಬಯಿ ಮುಂತಾದ ಪರ ಗಳಲ್ಲಿ ಉಳಿಯಬೇಕಾಗುತ್ತದೆ ಕೆಲವು ಸ್ವಾರ್ಥ ಸಾಧಕರು ಇದರ ಪ್ರಯೋಜನವನ್ನು ಪಡಕೊಂಡು ನನ್ನ ಜ್ಞಾನತಾ ಉಪ್ಪು ಪರಾಧೀನ ಮಾಡಿಕೊಂಡು ಲಂಪಟ ಹೆಂಡಂದವ ದುರಾಲೋಚನೆ ಮಾಡಿದ್ದಾರಾಗಿ ನನಗೆ ತಿಳಿದುಬಂದಿದೆ. ನನ್ನ ತಾಯಿ ಹೆಸರಲ್ಲಿರುವ ಯಾವತ್ತೂ ಭೂಮಿ ನನ್ನ ಸ್ವಾಜೀರ್ಜಿತ ಇದ್ದು ಅದರಿಂಗೆ ಸದರ ನನ್ನ ದತ್ತ ತಾಯಿಗೆ ನಿನೊಂದೂ ಹಕ್ಕು ಸಂಬಂಧವಿರುವದಿಲ್ಲ ನನಗೆ ನನ್ನ ಹೆಸರಲ್ಲಿ ಪದವಿ ಮಾಡಲಿಕ್ಕೆ ಅಮುಕಾಲತೆ ಇಲ್ಲಾದ್ದರಿಂದ ಸದರ ದತ್ತ ತಾಯಿಯ ಹೆಸರಲ್ಲಿ ದಸ್ತೈವೆಜುಗಳಾಗಿದ್ದವು. ಪ್ರಸ್ತುತ ಮನೆ ಮತ್ತು ಕಂಪೌಂಡು ನಾಕ್ರ ನನ್ನ ತಾಯಿಯು ಹೆಸ್ತೆನದಿದ್ದು ಅದಕ್ಕೆ ನಾನೇ ಪಡ್ಡಿಯಳ ವಾರಸ ನಾತೆಯಿಂದ ಹಕ್ಕು ದಾರಳ್ತಾನೆ ನಮಗೆ ಆಸ್ತಿಯನ್ನು ಕ್ರಯ ಮಾಡ. ಅತವ, ಪರವರ್ತನ ಮೊದಲಾದ ಯಾವದೇ ರೀತಿಯಿಂದ ಪರಾಧೀನ ಮಾಡುವಂಥ ಯಾವದೇ ಪ್ರಸಂಗವಿಲ್ಲ. ಪರಾಧೀನತೆಗಳ ಗ್ರಹಿಕೆ ಪಡೆದು ಪರಾಧೀನ ಮಾಡುವಂಥ ಸ್ಥಿತಿ ಸಹ ನನ್ನ ತಾಯಿಯದಿರುವದಿಲ್ಲ. ಇದನ್ನು ತಿಳದು ಯಾ ದರೂ ನನ್ನ ಮೇಲ್ಕಾಣಿಸಿದ ದತ್ತತಾಯಿ ಕಡಯಿಂದ ಮನೆಯನ್ನಾಗಲಿ, ಭೂಮಿಯನ್ನಾಗಲಿ ಪರಾಧೀನ ಮಾಡಿಕೊಂಡಲ್ಲಿ ಅದರಿಂದ ಯಾರಿಗೂ ಏನೊಂದೂ ಹಕ್ಕು ಸ್ವಾತ್ಯಯಾಲಾದರು ಅಂಥ ಪರಾಧೀನತೆಗಳೆಲ್ಲ ಅಸಿಂದುವಾಗಿರುತ್ತಿದ್ದು ರದ್ದಾಗಿರುತ್ತವೆ. ಇಂಥ ಪರಾಧೀನತೆಗಳಿಂದ ನನಗೆನಾದಗಲಿ ಯಾವಕ್ಕೂ ನಷ್ಟ ಧರವಾಯಿ ಮಾಡಿಕೊಡಲು ಪರಾಧೀನ ಮಾಡಿಕೊಂಡವರು ಜವಾಬದಾರರಾಗಿರಬೇಕಾಗುವದು. ತಿಳಯವದು. ಕುಮಟಾ, ತಾ. ೬-೧೦ ೧೯೨೬.

ಲಕ್ಷ್ಮಿಬಾಯಿ ಹೆಗಡೆಕರ.

ಪರೀಕ್ಷೆ ಮಾಡಿಸೋಣಾಯಿತು. ೧೦ ದಿನಗಳಲ್ಲಿ ಎರಡು ಸಲ ಪರೀಕ್ಷೆ ನಡೆಯಿತು. ಡಾಕ್ಟರರು ನೊಟ್ಟನೊದಲು ಅನುಕೂಲ ಅಭಿಪ್ರಾಯ ಕೊಟ್ಟಿದ್ದರಿಂದೂ, ಪ್ರತಿಕೂಲ ಅಭಿಪ್ರಾಯ ಪಡೆಯುವ ದೆಸೆಯಿಂದ ಇನ್ನೊಮ್ಮೆ ಪರೀಕ್ಷೆ ಮಾಡೋಣಾಯಿತೆಂಬಲ್ಲಾ, ರಾ|| ಜೋಶಿಯವರು ಮಹಾರಾಷ್ಟ್ರೀಯರಲ್ಲತೆಂಬುದರಿಂದ ಅವರಿಗೆ ದಣಿಸಲ್ಲದುತ್ತದಾಗಿಯೂ ಮುಂದಿನ ಪತ್ರಿಕೆಗಳಲ್ಲಿ ಕೋಲಾಹಲ! ಗುರುವಾರ ಎಸೆಂಬ್ಲಿ ಸಭೆಯಲ್ಲಿ ಈ ಕುರಿತು ಪ್ರಶ್ನೋತ್ತರಗಳು ನಡೆದವು. ರಾ|| ಜೋಶಿ-ಕಲೆಕ್ಟ್ರರು ನಡಿಸಿದ ಕೆಲವು ಪತ್ರವ್ಯವಹಾರಗಳನ್ನೂ, ಡಾಕ್ಟರರ ಅಭಿಪ್ರಾಯಗಳನ್ನೂ ಎಸೆಂಬ್ಲಿಯಲ್ಲಿ ನಾ|| ಜೇರರು ವಿವರಿಸಿದರು. ಮುಂಬಯಿ ಜೇ. ಜೇ. ಆಸ್ಪತ್ರೆಯ ಕರ್ನಲ್ ಭಾಟಿಯಾ, ಡಾ|| ನುಸಾನಿ, ಡಾ|| ತಿರೋಡಕರರವರು ರಾ|| ಜೋಶಿಯವರ ಪರೀಕ್ಷೆ ಮಾಡಿಕೊಟ್ಟ ಅಭಿಪ್ರಾಯವನ್ನು ತಿಳಿಸಿದರು. ಕೆಲಸದ ಧಾರಣೆ ಮೂಲಕ ರಾ|| ಜೋಶಿಯವರ ಮಿದುಳು ದಣಿದಿದೆಂದೂ ಇವರಿಗೆ ೧೨ ತಿಂಗಳ ವಿಶ್ರಾಂತಿ ಅವಶ್ಯ ನಿರುವದೆಂಬ ಡಾಕ್ಟರರು ಸರಕಾರಕ್ಕೆ ಸಲಹೆ ಕೊಟ್ಟಿದ್ದರು. ಸರಕಾರದ ಕಡೆ ನಡಿಸಿದ ಶಪ್ಪನೆವಾದ ಮೇಲಿಂದ ಅವರ ಬುದ್ಧಿ ಸರಿಯಾಗಿರುವದಿಲ್ಲವಾಗಿ ಸಂದೇಹ ಬಂತೆಂದು ನಾ|| ಜೇರರು ಪುಡಿದು, ಸರಕಾರಕ್ಕೆ ಬರಿದ ಕೆಲವು ಪತ್ರಗಳನ್ನೂ ಓದರೋಗಲು, ಮುಂಬಯಿ ಸರಕಾರದ ಮೇಲೆ ಅರೋಪ ಹೊರಿಸಿದ ರಾ|| ಜೋಶಿ ಪ್ರಭೃತಿ ಸಭಾಸದರೇ ಅನ್ನೋದ ರಜ್ಜೇಪಿಸಿ ಸಾರ್ವಜನಿಕ ಹಿತಕ್ಕಾಗಿ ಅವನ್ನು ಪ್ರಕಟಿಸಬಾರದೆಂದು ಒಳ್ಳೇ ಆವೇಶದಿಂದ ಅಡ್ಡಿ ಮಾಡಿದರು. "ನನ್ನ ಸರಕಾರದ ಹೇತುಗಳು ಯಾವಾಗಲೂ ಪರಿಶುದ್ಧವಾದವು; ಸರಕಾರದ ಮೇಲೆ ಸತ್ಯ-ಸಭ್ಯತೆಗಳ ಪರಿವೆ ಹಿಡಿಯದೆ ನೀವು ದುಷ್ಟ ಅರೋಪ ಹೊರಿಸಿದಿರಿ; ಆದರಿಂದ ಆ ಪತ್ರಗಳನ್ನ ಓದುವ ಪ್ರಸಂಗವನ್ನು ನೀವೇ ತಂದಿರಿ!" ಹೀಗೆ ನಾ|| ಜೇರರು ನುಡಿಮು, ರಾ|| ಜೋಶಿ ಕಲೆಕ್ಟರರು ವೈದ್ಯಾನಿಕ ಹೆಜ್ಜೆಗಳಂದ ಜನಸಾಮಾನ್ಯರ ಸಂರಕ್ಷಣೆ ಮಾಡಿ ಕೂರದಿಸಿದ ಇಲಾಖಾಧಿಪತಿಗಳಿಗೆ ಬರಿದ ಒಂದು ಪತ್ರವನ್ನು ಓದಿದರು. ವೈದ್ಯಾನಿಕ ಹೆಜ್ಜೆಗಳಾದ ಪ್ರಶ್ನೆಯಲ್ಲಿ ಸಿಗಬಹುದಾದ ಸಂಚನೆಯ ಮಾದರಿಯನ್ನು ತಿಳಿಸುತ್ತೇವಾಗಿಯೂ, ಅದನ್ನು ತಿಳಕೊಂಡಿರಬೇಕಾಗಿಯೂ ಇಲಾಖಾಧಿಪತಿಗಳು ಜೋಶಿ-ಕಲೆಕ್ಟರರಿಗೆ ಬರಿದಿದ್ದರು. "ಮುಂಬಯಿ ಕಲೆಕ್ಟರು ಅಧ್ಯಾತ್ಮಿಕ ವ್ಯಕ್ತಿ. ಆದು ಮನುಷ್ಯನ ಅಧಿಕಾರಕ್ಷೇತ್ರದಲ್ಲಿ ಸೇರುವಂತಹದಲ್ಲ; ಸೂಚನೆಯ ಮೇಳಗೆ ಕಲೆಕ್ಟರರು ಕಚೇರಿಯಲ್ಲಿ ಇರಲಿಕ್ಕಿಲ್ಲ. ನೌಕರರಿಗೆ ಈ ಸೂಚನೆಯು ಗ್ರಹಿಕ ಪಡೆಯುವ ಶಕ್ತಿಯಲ್ಲ" ಮೊದಲಾದ ಶಬ್ದಾಡಂಬರ ಬರೆದು "ಜ. ಕೇ ಜೋಶಿ" ಎಂದು ಸಹಿ ಮಾಡಿ ಅದರ ಕೆಳಗೆ ಅರ್ಜಿನೇಇಸ್ಟಿಯಲ್ಲಿ ಹುಟ್ಟಿದವನು, ಈ ಮುಂಬಯಿನ ಕಲೆಕ್ಟರು, ಮುಂಬಯಿ ಉಪನಗರದ ಕಲೆಕ್ಟರು, ಡಿಸ್ಟ್ರಿಕ್ಟ ಮೆಜಸ್ಟೇಟು, ಸಾಲಸತ ಉದ್ಧಾರ ಅಧಿಕಾರಿ, ಮುಂಬಯಿ ಸರಕಾದ ಸ್ವಾಂಪ ಇಲಾಖೆಯ ಸುಪರಿಂಟೆಂಡೆಂಟು ಮೊದಲಾದ ಬಿರುದುಗಳನ್ನು ಜೋಡಿಸಿದ್ದರು. ಇದೆಲ್ಲ ಸಂಗತಿ ಸಭೆಯಲ್ಲಿ ಅರುಹಿದೊಡನೆ ಸಭಾಸದರಿಗೆ ತಾವು ಅಕೇಷ ಮಾಡಿದ್ದೇ ತಪ್ಪೆಂದು ಅನಿಸಿತು. ಮಂತ್ರಿ ಪತ್ರಿಕೆಗಳ ಟೀಕೆ ಮತ್ತಸರಭರಿತವಾದದ್ದೆಂದೂ ಸ್ಪುಟವಾಯಿತು.

***

ಮೈಸೂರು ಸಂಸ್ಥಾನದಲ್ಲಿ ಈವಾಗ ಸತ್ಯಾಗ್ರಹ ನಡೆದಿದೆ. ಮೈಸೂರು ಸರಕಾರವು ಮೈಸೂರು ಸಂಸ್ಥಾನಕ್ಕೆ ಕಾನೂನೆಂಬ ಹೊಸ ಕಾನೂನನ್ನು ಹೊರಡಿಸಿ, ಆ ಕಾನೂನಿನನ್ವಯ ಮೈಸೂರು ಕೊಂಗ್ರೆಸ ಕಚೇರಿಯನ್ನು ರುಜುಪಡಿಸಿ ಲೆಕ್ಕ ಮಾಡಿ ಲೆಕ್ಕದ ಪತ್ರಿಕೆಗಳನ್ನೂ ಜಪ್ತ ಮಾಡಿ ಒಯ್ದಿದೆ. ರಾ|| ಚನ್ನಯ್ಯಾ ಮರಿಯಪ್ಪಾ, ಬೋರಣ್ಣನವರಾ, ರಾಮಸ್ವಾಮಿ ಮೊದಲಾದ ಕೊಂಗ್ರೆಸ ಅಧಿಕಾರಿಗಳಿಗೆ ನೆರೆಹಿಡಿದು ಶಿಕ್ಷೆಗಳಾಗಿನೆ; ಅಷ್ಟಾಗ್ಯೂ ಸತ್ಯಾಗ್ರಹ ನಿಲ್ಲಿಯಟ್ಟಿಲ್ಲ. ಕೋಲಾರ, ಬೈರೂರು, ಮುಮುಕೂರು ಜಿಲ್ಲೆಗಳಲ್ಲಿ ಸತ್ಯಾಗ್ರಹ ರಭಸದಿಂದ ನಡೆದಿದೆ. ಚಿತ್ರದುರ್ಗದಲ್ಲಿ ಒಂಗಲ ಸತ್ಯಾಗ್ರಹ, ಬೆಂಗಳೂರಿನಲ್ಲಿ ಮಧ್ಯದಂಗಡಿಗಳ ಪಿಕೆಟಿಂಗು ನಡೆದಿದೆ; ಜೈಲುಗಳು ಕುಂಬಿಕೋದವು. ಅದರಿಂದ ದೊಡ್ಡ ದೊಡ್ಡ ಜೈಲುಗಳಲ್ಲಿ ಗುತ್ತಿಸಲುಗಳನ್ನು ಕಟ್ಟಿಸುವ ವಿಚಾರ ನಡೆದಿದೆ. ಇವೆಲ್ಲಿಗೆ ಸುಮಾರು ೫೦೨-೬೦೦ ಜನರು ಸತ್ಯಾಗ್ರಹ ಮಾಡಿ ಪರಿಸೆನೆ ಸೇರಿರುತ್ತಾರೆ ಒಂದು ತರವಾಗಿ ಎಲ್ಲ ಕೊಂಗ್ರೆಸ ಪ್ರಮುಖರು ಕಾರಾಗೃಹದಲ್ಲಿದ್ದಾರೆ. ಅದರಿಂದ ಈಗ ಸ್ತ್ರೀಯರು ಸತ್ಯಾಗ್ರಹದಲ್ಲಿ ಭಾಗವಹಿಸ ಮುಂದಾಗಿದ್ದಾರೆ. ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಸಭಾ ಸದರಾಗಿದ್ದ ಶ್ರೀಮತಿ ಯಶೋದಾಬಾಯರವರು, ಸತ್ಯಾಗ್ರಹ ನಡೆದಿವೆ.

ಕಾರ್ಯದಲ್ಲಿ ಸ್ತ್ರೀಯರು ಈಗ ಮುಂದಾಗುವ ಪ್ರಸಂಗ ಬಂದಿದೆಂದು ಉದ್ಯೋಧರ ಭಾಷಣ ಮಾಡಿ ಸ್ತ್ರೀಯರಿಗೆ ಪ್ರೇರೇಪಿಸಿದರು. ಮೈಸೂರು ಸಂಸ್ಥಾನದಲ್ಲಿ ಸತ್ಯಾಗ್ರಹಕ್ಕೆ ಈಗ ಒಳ್ಳೇ ಕಳಯೇರಿದೆ. ಬೆಂಗಳೂರಿನಲ್ಲಿ ಸಭಾ-ಪ್ರತಿಬಂಧಕ ಹುಕುಮಪ್ಪೆ ಮುರಿದು ಪ್ರತಿ ದಿವಸ ಸ್ವಯಂಸೇವಕರು ಸಭೆಸೇರಿಸಿ ಸೆರೆಮನೆ ಸೇರುತ್ತಿದ್ದಾರೆ.

ದಿವಾಣರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರು ರಾಜ್ಯಸುಧಾರಣೆಯ ವಿಚಾರ ಮಾಡುತ್ತಿದ್ದಾರೆ. ಪ್ರಜಾಪ್ರತಿನಿಧಿ ಸಭೆಯ ಅಧಿಕಾರಗಳನ್ನು ವಿಸ್ತರಿಸಿ ರಾಜ್ಯಾಧಿಕಾರವನ್ನು ಪ್ರಜೆಗಳಿಗೆ ಒಪ್ಪಿಸುವ ಕುರಿತು ಮೈಸೂರ ಸರಕಾರವು ಒಂದು ಮಂಡಳವನ್ನು ನೇಮಿಸಿದೆ. ಈ ಮಂಡಳದ ಸಭಾಪತಿರಲ್ಲೊ ಬ್ರಿಟಾನಿಯ ರಾಜಪ್ರತಿನಿಧಿ ಡಿ ವ್ಯಾ. ಗುಂಡಪ್ಪನವರು ರಾಜಿನಾಮೆ ಕೊಟ್ಟಿದ್ದಾರೆ. ಇವರ ಸ್ಥಳದಲ್ಲಿ ರಾ|| ಪಂಪಿಗೆ ವೆಂಕಟಪತ್ಯನವರು ನೇಮಿಸಲ್ಪಟ್ಟಿದ್ದಾರೆ. ದಿವಾಣರು ಈವಾಗ ಸಂಸ್ಥಾನ ಕಾರ್ಯಕ್ರಮವನ್ನು ಕೈಕೊಂಡಿದ್ದಾರೆ. ಮತ್ತು ಅಲ್ಲಲ್ಲಿಯ ಪ್ರಮುಖರೊಡನೆ ರಾಜ್ಯಸುಧಾರಣೆಯ ಕುರಿತು ಕ.ರಿತು ಆಲೋಚನೆಮಾಡುತ್ತಿದ್ದಾರೆ. ಮುಸಲ್ಮಾನರಿಗೆ ಪ್ರತ್ಯೇಕ ಮತದಾರ-ಸಂಘಗಳಿರತಕ್ಕಾಗಿ ಎಲ್ಲ ಕೊಂಗ್ರೆಸ ಪ್ರಮುಖರು ಕಾರಾಗೃಹದಲ್ಲಿದ್ದಾರೆ. ಅದರಿಂದ ಈಗ ಮುಸಲ್ಮಾನರಿಗೆ ಪ್ರತ್ಯೇಕ ಮತದಾರ-ಸಂಘಗಳು ಬೇಕೋ, ಸಂಯುಕ್ತ ಮತದಾರ ಸಂಘಗಳಂಬೇ ಕೋ? ಎಂಬದರ ಕುರಿತು ಚರ್ಚೆಯಾಗುತ್ತಿದೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಮುಸಲ್ಮಾನ ಸಭಾಸದರ ಸಂಖ್ಯೆ ಎಷ್ಟಿರಬೇಕೆಂಬದರ ಕುರಿತು ಸಹ ಚರ್ಚೆ

—. ಶ್ರೀ ರಘುನಾಥ ಸಮರ್ಥಃ—

ತವ ಮನ್ನೇ ತಮ್ಮ ಮುದ್ದಿನ ಮಕ್ಕಳನ್ನೂ

ಆಮಾಂಶ-ಅತಿಸಾರ
ವಿಷಮಜ್ವರ

ಈ ಭಯಂಕರ ರೋಗಗಳಿಂದ ರಕ್ಷಿಸಿಕೊಳ್ಳಿರಿ !!

ಈ ಕೆಳಗಿನ ಔಷಧಗಳು ರೋಗನಿವಾರಕ ಹಾಗೂ ಗುಣಕಾರಿ ಇರುತ್ತವೆ.

ಲಶುನಾದಿ ಗುಟಿಕಾಃ- ಅಜೀರ್ಣ ಮೂಲಕ ವಿರೇಚನ, ಹೊಟ್ಟೆಯುಬ್ಬಿಸುವಿಕೆ, ತೀವ್ರ ಹೊಟ್ಟೆನೋವು, ಕಣ್ಣಿಮಾಂದ್ಯ ಮತ್ತು ವಾತರೋಗ ಇವುಗಳಲ್ಲಿ ಬಹಳ ಉಪಯುಕ್ತ ಔಷಧವು.

ಮಲೇರಿಯಾ ಮಿಕ್ಸ್ಚರ್:- ಎಲ್ಲಾ ತರದ ಜ್ವರಗಳ ಮೇಲೆ ರಾಮಬಾಣ ಮದ್ದು.

ಅವಶ್ಯ ಬೀಳುವಷ್ಟು, ಸುಲಭಯ ಬೆಲೆಗೆ ಕೊಂಡುಕೊಳ್ಳಿರಿ

ದತ್ತಾತ್ರೇಯ ಕೃಷ್ಣಸಾಂಡೂ ಬ್ರದರ್ಸ

ಆಯರ್ವೇಷಧಿ ಕಾರಖಾನೆ, ಚೆಂಬೂರ-ಮುಂಬಯಿ.

ಹುಬ್ಬಳ್ಳಿ ಶಾಖೆ:-

ಮನೇಜರ, ಗೋ. ವೆಂ. ಭುಜಲೇ, ಆಯುರ್ವೇದತೀರ್ಥ,

ಮರಾಠಾಗಲ್ಲಿ, ಹುಬ್ಬಳ್ಳಿ.

ಕಾನಡಾ ವೃತ್ತ

ಕನ್ನಡ ನಾಡಿನ ಪ್ರಮುಖ

ರಾಷ್ಟ್ರೀಯ ವಾರಪತ್ರಿಕೆ.

ಜಾಹೀರಾತುದಾರರಿಗೆ ಅತ್ಯನುಕೂಲ ಸಾಧನ

ರಾಷ್ಟ್ರಸ್ತೋಮ ಕನ್ನಡಿಗರು ಬಂಧಾಪ ರಂಗಿ

ವ್ಯೋತ್ತಾಸಹಸಬೇಕು

ಬಟಕಳದಲ್ಲಿ ಬಂದಾಗ ಎಲ್ಲಿ ಉಳಿಯುವಿರಿ?

ಶ್ರೀ ಲಕ್ಷ್ಮೀನಿವಾಸ

ಹಿಂದು ಹೊಟೆಲ್,

ಪೋಸ್ಟ ಆಫೀಸಿನ ಬಳಿ, ಭಟಕಳ.

ಪ್ರಯಾಣಿಕರಿಗೆ ಊಟ-ಉಳಕೊಳ್ಳಲು

ಉತ್ತಮ ವ್ಯವಸ್ಥೆ!

ಒಮ್ಮೆ ಬಂದು ಸಂದರ್ಶಿಸಿರಿ!

'ಸ್ಟಾರ ಆಫ್ ಕೆನರಾ ಪ್ರೆಸ್',

ಕುಮಟಾ.

—*—

ನಮ್ಮಲ್ಲಿ ಕನ್ನಡ ಮತ್ತು ಇಂಗ್ಲಿಷ ಗ್ರಂಥ ರಾಜಿ ಫ್ಯಾನಿಯಲ್ ಪೇಪರ್ ಬೈಂಡಿಂಗ ಕಲ್ಲ ಪ್ರಿಂಟಿಂಗ ವಗೈರೆ ಸರ್ವ ವಿಧವಾದ ಜಾಬ ಪ್ರಿಂಟಿಂಗ ಕೆಲಸಗಳೂ, ಪುಸ್ತಕಗಳೂ, ಪತ್ರಿಕೆಗಳೂ, ಪುಸ್ತಕಗಳೂ ಮುದ್ರಣವಾಗಿ ರೂಲಿಂಗ ಬೈಂಡಿಂಗಗೆ ಕೆಲಸವೂ ಉತ್ತಮವಾಗಿ ಸುಲಭ ದರದಲ್ಲಿ ತಕ್ಕ ಕಾಲಕ್ಕೆ ತಯಾರಾಗಿ ಕೊಡಲ್ಪಡುವದು! ನಿಮ್ಮ ಕೆಲಸಗಳನ್ನು ನಮ್ಮಲ್ಲಿಗೆ ಕಳಿಸಿರಿ ಒಮ್ಮೆ ಅನುಭವ ತೆಕ್ಕೊಂಡು ನೋಡಿರಿ

ನೋಡಿದರೆ ಬಿಡದಿರುವ ಪುಸ್ತಕಗಳು.

೧ ಸಚ್ಚಕಿ ಜೋಲಿ
(ಪಿ ಸ್ಟೂ ಬೇರ್ಡಿನಿಂದ ಮೊಸರು ಗಿ ಮುಂಜ ಸ ಹಿಂಗ ಸ್ಥಾನ ಪುಸ್ತಕ)

೨ ಹಿಂದುಸ್ತಾನಿ ಮದಾರಿ ಶಬ್ದಕೋಶ
(ಸುಮಾರು ೧೫ ಸಾವಿರ ಶಬ್ದಾರ್ಥಗಳುಳ್ಳದ್ದು)

೩ ತ್ರಿಭಾಷಾ ಶಿಕ್ಷಕ
(ಕನ್ನಡ ಮರಾಠಿ ಇಂಗ್ಲಿಷ ಕಲಿಸುವ ಒಂದೆ ಪುಸ್ತಕ)

೪ ಸರ್ವಜ್ಞ ವಚನಗಳು
(ಪದ್ಯ ಮತ್ತು ಗದ್ಯ ಸಹಿತ ಪದ)

೫ ಆಂಗ್ಲಭಾಷಾ ಪ್ರಕಾಶಕ
ಭಾಗ I ರಿಂದ III
(ಆನ್ಸರ ಸಹಾಯವಿಲ್ಲದೆ ಸ್ವತಃ ಇಂಗ್ಲಿಷ ಕಲಿಯಲು ಸಾಧಕ)

ಇವುಗಳೆ ಪ್ರಖ್ಯಾತವಾದ ಮುಖ್ಯ ಪುಸ್ತಕಗಳು ಇವರ ಹಿಂದಿ ಪುಸ್ತಕಗಳೂ ಎಲ್ಲ ಬಗ್ಗೆ ಗಳೂ ಕನ್ನಡ ಪುಸ್ತಕಗಳೂ ಸಮ್ಮುಖ ಸಿಗುತ್ತವೆ

ಪತ್ರ - ವಿ ನ್ಯೂ ಸಸ್ಥಾನ ಪಬ್ಲಿಸಿಟಿ, ಕುಮಟಾ

ಪ್ರಸಿದ್ಧವಾದ ಜೀರ್ಣರೋಗಿಯಾದ ಹೊಟ್ಟೆಯ ಕಾಯಿಲೆ

— TRADE MARK —

ಪುನರ್ಪೇಲ ಕುಲಾಬಾ

— ಈ ಸಂಸ್ಥೆಯ —

ಬಾಣಂತಿತನದಲ್ಲಿ ಸ್ತ್ರೀ ಅರಕ್ತತೆಯಮೇಲೆ ಉಪಯುಕ್ತ

ಔಷಧವು

ಅಬ್ರಯೋಕ

PBHRALOHI

ದೊರೆಯುವ ಸ್ಥಳ—

ಕಾನಡಾ ಮುಸಲ್ಮಾನರುಜುಮವಾರ ಕನ್ನಡಿಕರಬ್ರದರ್ಸ
ಅಂಕೋಲಾ ವಿಶ್ವೇಶ್ವರಶಿವಲಿಂಗಮುಟು ದೇವಕಾ
ಅಮ್ಮನಿಸ್ಮಿ ಹೊನ್ನಾವರ- ಕಲ್ಯಾಣಪುರ ಬ್ರದರ್ಸ

ದಿ ಬೋಂಬೆ ಲ್ಯಾನ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908

ಈ ಕಂಪನಿಯ ಸರ್ವ ವಿಧ ಇನ್ಷೂರನ್ಸ ಕಂಪನಿಗಳಿಗಿಂತ ಹೆಚ್ಚು ಇದರ ಕಂಪನಿಯ ದರಗಳೂ ಕಡಿಮೆಯಾಗಿರುವವು ಬಹಳ ಸರಳವಾಗಿರುವವು ಕೆಲಸವೂ ಬೇಗನೆ ಆಗುವದು ಮತ್ತು ಇದರ ಕಂಪನಿಯ ಪಾಲಿಸಿಗಳಿಗೆ ಸರಕಾರಿ ಪ್ರೊ ನೋಟ್ಸ್‌ಗಳಲ್ಲಿಯೂ ಇಂಡಿಯನ್ ಟ್ರಸ್ಟ ಆಕ್ಟಿನಲ್ಲಿಯೂ ಸಾಲವು ಸಿಗುವದು ಇದರ ಕಂಪನಿಯ ಪಾಲಿಸಿಗಳಿಗೆ ಲಿವಾಲ್ವರಿಯು ಕೆಳಕ್ಕಾರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲಿ ಪಲ್ ಪೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಹೆಚ್ಚಿನ ವರ್ತಮಾನಕ್ಕೆ ಸ್ಥಳಿಕ ಏಜಂಟರ ಕಡೆ ಅಥವಾ ಪತ್ರದ್ವಾರದಿಂದ ಕೇಳಿಸಿ ವಿಳಾಸಕ್ಕೆ ಬರೆದರೆ ತಿಳಿಸಲ್ಪಡುವದು

D K Nayak Bros
K N Nayak
H ar t
R V Prabhu

K. Padmanabha Rao & Sons,
BELGAUM
Chief Agents for
Karnatik Districts & S M States

ಸುಲಭ ಕ್ರಯ! ಡಾಕ್ಟರ ಜೀ ಬೀ ಯವರ ಸುಗಂಧಿ ನಕ್ಷತ್ರ ಪುಡಿ ಸುಲಭ ಕ್ರಯ!

ಸೊಕ್ಕಸಿದ್ದವಂಡಿ ಈ ಸುಗಂಧ ನಕ್ಷತ್ರ ಪುಡಿಯು ಕಂಡು ಹಿಡಿಯುವಷ್ಟು ಸಾವಿರಾರ ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಕ್ಷತ್ರ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ— ಪಿನಸಿ, ಹಂಟಿಕಲಸೋವು ಕಲೆಯ ಜ್ವಾಯು ರೋಗಗಳ, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳ ಜಲದೂಷ ವಂಶವಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಲೇಪ್ಟ್ಯಾಕ್ ವ್ಯಾಧಿಗಳನ್ನೂ ಸ್ವಸ್ಥ ಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚಿಸುವುದಲ್ಲದೆ ಮೂರು ಜೆಲ್ಲೆಸಾಧಾರಣ ನ್ಯೂನಸಂಗಡ ಈ ಸುಗಂಧ ನಕ್ಷತ್ರದ ಪುಡಿಯಲ್ಲಿ ಬಂದು ಚಿಟಕೆಯನ್ನು ವಿಶ್ವಾಯಿಸಿದರೆ ಎಲ್ಲವೂ ಪರಿಹಾರವಾಗುವದು ಇದನ್ನು ಅನೇಕ ಪ್ರಭುಗಳು ಕಳಿಸಿ ಗೃಹದಲ್ಲಿ ಇಟ್ಟಿರುವರು ಪ್ರಸಿದ್ಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಪುಕ್ಕಟ ಕಳಿಸಲಾಗುವದು ಒಂದಕ್ಕೆ ಕ್ರಯ ರೂ ೦-೪ ಪ್ಲಿ ಪಿ ಳಿಗೆ ಡಜನ್‌ಗೆ ರೂ. ೨ ೮-೦ ವಿ ಪಿ ಒಂಟಿ ಒಂದಕ್ಕೆ ಕ್ರಯ ರೂ ೦-೪ ಪ್ಲಿ ಪಿ ಳಿಗೆ ಡಜನ್‌ಗೆ ರೂ. ೨ ೮-೦ ವಿ ಪಿ ಒಂಟಿ ದಯವಾಡಿ ನಿಮ್ಮ ಹೆಸರನ್ನೂ ಅತ್ಯಕ್ಷರವನ್ನೂ ಸರಿಯಾಗಿ ತಿಳಿಸಿ ವಂತೆ ಬರೆಯಿರಿ

ಪತ್ರ - ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಫ್ರೋ ಬಾ ಸಾಂ ನಿರ್ಕಟುೌನ ಮಾದರಸ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕಮ್ಮಿ ' ಸ್ಟಾರ ಆಫ್ ಕೆನರಾ ಪ್ರೆಸ್ಸಿ'ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B 1270. Monday, 16th October, 1939.

ವರ್ಷ ೨೨

ಕಾನಡಾವೃತ್ತ.

ಸಂಜೆಕೆ ೧೬

THE KANARA NEWS

ಪತ್ರದ ವರ್ಗಣೆ.
ಕುಮಟೆಯಲ್ಲಿ ಆಗಾವು ರೂಪಾಯಿ ೨-೪-೦.
ಮುನಿಯಾರ್ಡರಿನಿಂದ ರೂ. ೩-೧-೦.
ವಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ ೩-೪-೦.
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೨-೦

ನರಪತಿವಿಹಿತಕರ್ತಾ ಹೇತ್ತಾ ಯಾತಿ ಲೋಕೇ ಜನಪಹಿತಕರ್ತಾ ತ್ವತ್ತತೇ ಧಾರಿವರ್ಗೇ ।
ಇತಿ ಸಹತಿ ವಿರೋಧೇ ತತ್ಕಮಾನೇ ಸಮಾನೇ ನೃಪತಿಜನಪಹಾನಾ ತುಲ್ಯ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ
ಇನ್ನಷ್ಟ, ಇಂಗ್ಲಿಷ ಸ್ಯಾಂಪ್ಲಿನ (೧೫ ಎಮ್ ಉದ್ದ) ಆ ಸಾಲುಗಳವರೆಗೆ ರೂ 1-0-0
ಆನಂತ್ರ ಪ್ರತಿಸಾಲಿಗೆ 0-2-0
ಹಣ್ಣಿಂಗದ ಸಾಲು ಎಷ್ಟೂ ತೊಡ್ಡಿದಿರುವಹೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಜಾಗೆ ಪತ್ರಸ್ಥರ ಯಾ ಸಮಕ್ಷ ತಿಳಿಸಲ್ಪತುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೬ ಮಾಹೆ ಅಕ್ಟೋಬರ ಸನ್ ೧೯೩೯ನೇ ಇಸವಿ.)*-

KANAN DEVAN TEA

— QUALITY PRODUCTION ! —

* ಇಡೀ ಹಿಂದುಸ್ಥಾನದಲ್ಲೆಲ್ಲ ಸುಪ್ರಸಿದ್ಧವಾದ *

ಕಾನನ್ ದೇವನ್

ಕಂಪನಿಯ ಚಹಾ

ಈ ಚಹವು ಸಮುದ್ರ ದಂಡೆಯಿಂ ೪,೦೦೦ ಫೂಟು ಎತ್ತರವಾದ ನೀಲಗಿರಿ ಬೆಟ್ಟದಲ್ಲಿ ಬೆಳೆದಿದ್ದು, ಒಳ್ಳೇ ಸುವಾಸನೆಯುಳ್ಳದ್ದಿರುತ್ತದೆ ! ನಮ್ಮಲ್ಲಿ ಎಲ್ಲಾ ತರಗತಿಯ ಚಹಾ ರೋಕ ಯಾ ಚಿಲ್ಲರೆಯಾಗಿ ದೊರೆಯುತ್ತದೆ.

☛ ವ್ಯಾಪಾರಸ್ಥರಿಗೆ ವಿಶೇಷ ಸವಲತು ಕೊಡಲ್ಪಡುವದು !

ಹೊನ್ನಾವರ-ಭಟ್ಕಳ-ಸಿದ್ದಾಪುರ ಸ್ಟೊಕಿಸ್ಟರು —
ವಿ. ವಿ. ಶಾನಭಾಗ ಎಂಡ್ ಕೋ,
ಹೊನ್ನಾವರ.

ಕುಮಟಾ ಸ್ಟೊಕಿಸ್ಟರು —
ಡಿ. ಕೇ. ನಾಯಕ ಎಂಡ್ ಕೋ,
ಕುಮಟಾ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಷ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ರಿಜಿಸ್ಟರ್ಡ ಆಫೀಸು:— "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ— ಕುಂದಾಪುರ. ದ. ಕ.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು.

ಕಾಯಂ ರೇವಣಾತಿಗಳ ಬಡ್ಡಿ ದರಗಳು- 6 ತಿಂಗಳು ಮುದ್ದತ್ತಿಗೆ 3½%, 1 ವರ್ಷದ ಮುದ್ದತ್ತಿಗೆ 4%, 2 ವರ್ಷ ಯಾ ಹೆಚ್ಚಿನ ಅವಧಿಗೆ 4½%

ಅಲ್ಪ ಮುದ್ದತ್ತಿನ ರೇವುಗಳು (*Short term deposits*) ಸಹ ಅಂಗೀಕರಿಸಲ್ಪಡುವವು.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಕುಂದಾಪುರ,
1—1—1939

The Agricultural & Industrial Bank, Ltd.

ಜಿಲ್ಲಾ ಸಮಾಚಾರ.

(ಕಳೆದ ವಾರದ್ದು)

ಕಾರವಾರ— (ತಾ ೭—೧೦—೩೯) ಸೋಮವಾರ ಗಾಂಧಿ-ಜಯಂತಿಯ ಪ್ರೀತ್ಯರ್ಥ ಮುಂಡಾನೆ ‘ಸಮರ್ಥ ಸಾಬೆಗೃಹ’ದ ಆಂಗಳದಲ್ಲಿ ರಾ॥ ಮಂಕಂದರಾವ ಶಿರಸಾಟಿ ಇವರ ನೇತೃತ್ವದಲ್ಲಿ ಧ್ವಜವಂದನೆಯಾಯಿತು ಆಮೇಲೆ ಅದೇ ಸಾಬೆಗೃಹದಲ್ಲಿ ರಾ॥ ಶಿರಸಾಟರ ಗಾಂಧಿ ಚರಿತ್ರೆಯಕಾರ್ತೀಸನೆಯಾಯಿತು. ಅದೇ ಸಂಜೆ ಜಿಲ್ಲಾ ಧ್ವಜಾವತರಣ ರಾ॥ ವೆಂಕಟಪ್ಪಯ್ಯನವರು : ಸ್ಮಾರಕಾಲಯ ಭವನ’ದಲ್ಲಿ ಸಾದಿ ಭಾಂಡಾರವನ್ನು ತೆರೆಯುವ ಸಮಾರಂಭ ನೆರವೇರಿಸಿದರು ಅಂಕೋಲೆಯ ರಾ॥ ಶ್ರೀನಿವಾಸ ಮಹಾಲೇರಿಯವರು ಈ ಭಾಂಡಾರವನ್ನು ತೆರೆದಿರುತ್ತಾರೆ ಈ ಹೊತ್ತಿನ ತನಕ ರೂ ೪೬೭ ರ ಮಾಲು ಮಾರಾಟವಾಗಿರುತ್ತದೆ

ರಾ॥ ವೆಂಕಟಪ್ಪಯ್ಯನವರಿಗೆ ಸನ್ಮಾನ ಪತ್ರವನ್ನು ಕೊಡಲು ಜಿಲ್ಲಾ ಕೌನ್ಸಿಲ್ ಸಭೆಯು ಸರ್ವಾನುಮತದಿಂದ ನಿರ್ಣಯ ಮಾಡಿತ್ತು. ಆದರೆ ಅವು ಸಭಲವಾಗಿಲ್ಲ ಇವರ ಸ್ವಗ್ರಾಮದಲ್ಲಿ ಬೆಳಗಾವಿಯ ಅಲೆಕ್ಟರ ರಾದ ಮಿ॥ ಡೈಕ್‌ಶಾರವರು ಬರುತ್ತಾರೆ ಅವರು ತಾ ೧೩ ನೇಗೆ ಬಂದು ಗಾಜರಾಗುವರೆಂದು ಸುದ್ದಿಯಿದೆ

ಶಿರಸಿ ವಿಭಾಗದ ಪ್ರಾಂತ ಸಾಬೆಲಾಂಡ ರಾ॥ ತೇಲೂಗಾರವರು ಆಸಕ್ತಿಂಟ ಕೆಮಲಿನವರಾಗಿ ನೇಮಿಸಲ್ಪಟ್ಟಿದ್ದಾರೆ ಅವರ ಸ್ವಗ್ರಾಮವು ಹಿಂದೆ ಸಿದ್ದಾಪುರದೊಳಗೆ ಮಾಮಲೇದಾರ ರಾಗಿದ್ದ ರಾ॥ ತಿಮ್ಮಣ್ಣಕರರು ನೇಮಿಸಲ್ಪಟ್ಟಿದ್ದಾರಾಗಿ ತಿಳಿಯುತ್ತದೆ.

ರಾ॥ ಬಿಜೇಕರ ಇವರ ಸ್ವಗ್ರಾಮದಲ್ಲಿ ರಾ॥ ಎಸ್ ಕೇ ಕರಂದೀಕರ ಎಂಬವರು ನಮ್ಮ ಜಿಲ್ಲೆಯ ಎನ್ಕ್ಯೂಬ್ಬಿನ್ಸ್ ಇಂಜಿನಿಯರರಾಗಿ ನೇಮಿಸಲ್ಪಟ್ಟಿದ್ದಾರೆ

ಅಂಕೋಲಾ— (ತಾ ೭—೧೦—೧೯೩೯) ಹನುಮಜ್ಜಯಂತಿ ಶ್ರೀ ಲಕ್ಷ್ಮೀನಾರಾಯಣ ಮಹಾಮಾಯೂ ದೇವಸ್ಥಾನದಲ್ಲಿ ಬರುವ ನವರಾತ್ರಿಯೊಳಗೆ (ಅಶ್ವಿನ ಶುದ್ಧ ದಿನ) ಶ್ರೀ ಮಹಾಲಕ್ಷ್ಮೀ ಅಮ್ಮನವರ ಬಂಗಾರದ ಸಿಗ್ಗನ್ನು ಹೊಸಗೆ ತೆಗೆಯುವವರಿದ್ದಾರೆ ಕಳೆದ ಕ್ರೋಧನ ಸಂವಿದ ನಂತರ ಈ ವಿಗ್ರಹವನ್ನು ಹೊರಗೆ ತೆಗೆದಿಲ್ಲ

“ಇಲ್ಲಿಯ ಮಾಮಲೇದಾರರ ಬಿ ಡಿಸೋಜಾ ಇವರೊಳ ಇಲ್ಲಿಯ ಜಮಿನದಾರ-ಸಾಹುಕಾರರ ರ ಪೀಸನ್ನು ಕಾಯತ ರಿಗೂ ಗೆಳೆತನ ಬಹಳ ರಾ ಕಾಮತರು ದಿನಾಲು ಎಂಬಂತೆ ರಾ॥ ಡಿಸೋಜಾರವರೆ ದಿಡಾರಕ್ಕೆ ಹೋಗಿ ಮಾತಾಡುತ್ತ ಕೂಡ್ರುತ್ತಾರೆ ಮಾಮಲೇದಾರರು ಯಾರೊಬ್ಬರ ಗೆಳೆತನ ಬೇಸರಿಲ್ಲ ಯಾರೂ ಅಕ್ಷೇಪಪಲ್ಲ ಅವರೆ ಆ ಗೆಳೆತನವು ಆಡಳಿತಯ ಕಾರಭಾರದಲ್ಲಾಗಲಿ ಧರ್ಮಾಸನದ ಕೆಲಸದ ಬ್ಲಾಗಲಿ ಅತಿಮಿಸಹತ್ತಿದರೆ ಮಾತ್ರ ಅದನ್ನು ಯಾರೂ ಸಹಿಸಲಾರರು ಕಳೆದ ವಾರದಲ್ಲೊಂದು ದಿನ ಇಲ್ಲಿಯ ಶಿರಸ್ತೇದಾರರ ಮುಂದೆ ರಾ॥ ಕಾಮತರ ೩ ಗೇಣಿದಾರ ಬಾವಗಳು ವಿಚಾರಕ್ಕೆಬ್ಬಿವೆ ಅದರ ಮಾಮಲೇದಾರರು ಕಚೇರಿಗೆ ಬರುತ್ತಲೇ ಆ ಮೂರೂ ದಾವೆಗಳನ್ನು ತಮ್ಮ ಕಡೆಗೆ ತಂಸಿಕೊಂಡು ತಾವೇ ಅವುಗಳ ವಿಚಾರಣೆ ಸ್ವಾರಂಭಿಸಿದರಂತೆ ! ಹೀಗೇಕೆ ಮಾಡಿದರೆಂದು ಯಾರಿಗೂ ತಿಳಿಯಲಿಲ್ಲ ! ಶಿರಸ್ತೇದಾರರಿಂದ ಆ ದಾವೆಗಳ ಇತ್ಯರ್ಥ ಸರಿಯಾಗಿ ಆಗದಿಕ್ಕಿಲ್ಲೆಂಬ ಮಾಮಲೇದಾರರು ಹಾಗೆ ಮಾಡಿದರೋ ಯಾ ಮಾಮಲೇದಾರರೇ ಆ ದಾವೆಗಳ ನಿಕಾಲೆ ಮಾಡಬೇಕೆಂಬ ರಾ॥ ಕಾಮತರು ಆಗ್ರಹ ಮಾಡಿದರೋ ತಿಳಿಯದು ! ಮಾಮಲೇದಾರರ ಈ ನಡಾವಳಿಯು ಆಕ್ಷೇಪಾರ್ಹವಿರಬಹುದೆಂಬದಕ್ಕೆ ಸಂಶಯವಿಲ್ಲ.” ಇತ್ಯಾದಿ ಅಂಕೋಲೆಯ ನ್ಯಾಯಪಕ್ಷಪಾತಿಗಳೊಬ್ಬರು ಬರೆಯುತ್ತಾರೆ

ಕಳೆದ ತಾ ೩೦ನೇಗೆ ಮಾಮಲೇದಾರರು ಧಾರಣೆ ನಿಯಂತ್ರಣೆಯ ವಿಚಾರ ಮಾತಲು ವರ್ತಕರ ಸಭೆ ಕರೆದಿದ್ದರು ಕೆಲವು ವರ್ತಕರು ತಾವು ಅಕ್ಕಿಯನ್ನು ಮೂನೆಗೆ ೧೪½ ರೂ. ಪರಂತೆ ಖರೀದಿಸಿರುವೆವೆಂದು ಹೇಳಿದರು· ಕೆಲವರು, ರಂಗೂನ ಅಕ್ಕಿಯು ಚೀಲ ೧೫½ ರೂ ೪—೩—೦ ರಂತೆ ಮುಂಬಯಿಯಲ್ಲಿ ಖರೀದಿಯಾಗಿದೆ, ಇದ್ದ ತರಿಕ್ಕೆ ರೂ ೧೫ ಖರ್ಚು ಬರುತ್ತದೆ; ಮತ್ತು ಚೀಲ ೧೫½ ಅಕ್ಕಿಲ ಬೆಲೆ ರೂ ೧೫॥ ಬೀಳುತ್ತದೆ, ಎಂದು ಸುದಿದರು. ಹಾಗೂ ಈ ಅಕ್ಕಲ ಬೆಲೆಯ ಮೇಲೆ ೧೦೦½ ೧೦ ರಂತೆ ಲಾಭ ಕಕ್ಕೊಂಡು ಮಾರಾಟ ಮಾಡಲು ಪ್ರತಿಬಂಧವಿಕವಡೆ ದೆಂದು ಪ್ರತಿಪಾದಿಸಿದರು ! ಮಾಮಲೇದಾರರ ಸಾಕೇತರು ದಿನಿತನ ಹಿಡಿಯದ್ದರಿಂದ ಕೊನೆಗೆ ಧಾರಣೆಗಳ ನಿಷ್ಕರ್ಷ ನಾಗದೆ ಸಭೆಯು ವಿಸರ್ಜನೆಯಾಯಿತು !

ಕಳೆದ ತಾ ೩೦ನೇ ಸೋಮವಾರ ಮಧ್ಯಾಹ್ನ ಹಾರವಾಡೆ ಶಾಲೆಯಲ್ಲಿ ರಾ॥ ಗಣಪತಿ ಪಾಂಡುರಂಗ ಕುಲಕರ್ಣಿ ಅವರ್ಸಾ ಇವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಗಾಂಧಿ-ಜಯಂತಿ ಆಚರಿಸಲ್ಪಟ್ಟಿತು ಎಂಬ ಸೋನೂ ರಾಮ ನಾಯ್ಕರು ಭಾಷಣಾನಂತರ ಮಹಾತ್ಮರಿಗೆ ಪ್ರಿಯವಾದ ಖಾದಿಯನ್ನೇ ಕೊಂಡುಕೊಳ್ಳೆಂದು ಜನರಿಗೆ ಬೋಧಿಸಿದರು; ಮತ್ತು ಸಭೆಕರ ವತಿಯಿಂದ ಮಹಾತ್ಮರಿಗೆ ದೀರ್ಘಾಯುಷಾಗಿರೋಗ್ಯವನ್ನಿತ್ತು ಸಲಹುಲು ದೇವರ ಕಡೆ ಪ್ರಾರ್ಥನೆ ಮಾಡಿದರು ಇದೇ ಸಭೆಯಲ್ಲಿ ಜೀನಾಸೇ ಸೇವಾಶ್ರಮದ ರಾಗಲಿರುವ ಶಿಕ್ಷಕ ರ ಕಡತಿ ಇವರಿಗೂ ಸತ್ಕರಿಸಲಾಯಿತು. ಸಭೆಗೆ ಸ ದಸ್ಯರು, ಆಪ್ತರು, ಸಕಲಪೇಷ ವಗೈರೆ ಊರಿನಿಂದ ಬಹಳ ಜನರು ಸೇರಿದ್ದರು ನೆರೆದ ಜನರಿಗೆ ಬತ್ತಾಸು, ಪೇಲ್ಮಿ ಮತ್ತು ಪಲವಸ್ತುಗಳನ್ನೂ, ವಿದ್ಯಾರ್ಥಿಗಳಿಗೆ ಕಡ್ಡಿ-ಪೆನ್ಸಿಲುಗಳನ್ನೂ ಹಂಚಲಾಯಿತು

ಜಲಿಯೊಳ್— (ತಾ ೭—೧೦—೩೯) ಕಳೆದ ಸೋಮವಾರದಿಂದ ಇಲ್ಲಿ ಗಾಂಧಿ ಸಪ್ತಾಹ ವಿಜೃಂಭಣೆಯಿಂದಲೂ ಉತ್ಸಾಹವಿಂದಲೂ ಆಚರಿಸಲ್ಪಡುತ್ತಿದೆ ತಾ ೨ನೇಗೆ ಸ್ವಚ್ಛತಾ ಫೇರಿ, ಧ್ವಜವಂದನೆ, ಮಹಾತ್ಮರ ಛಾಯಾಚಿತ್ರದ ಮೆರವಣಿಗೆ ಮುತ್ತು ರಾ॥ ಹಳ್ಳಿಕೇರಿ ಹನುಮಂತಪ್ಪನವರ ಅಧ್ಯಕ್ಷತೆಯಲ್ಲಿ ಸರ್ವಜನಿಕ ಸಭೆ ಮುಂತಾದ ಕಾರ್ಯಕ್ರಮಗಳಾದುವು ಸಭೆಯಲ್ಲಿ ರಾ ಧ್ವಜಪೀಡ ಮತ್ತು ಕೇಕ ಕರ ಇವರ ಭಾಷಣಗಳಾದವು ಸಾಯಂಕಾಲದಲ್ಲಿ ದೀಪಾ ರ್ಚನೆಯಾಯಿತು ತಾ ೩ನೇಗೆ ಸ್ವಚ್ಛತಾ ಫೇರಿ, ಧ್ವಜವಂದನೆ ಮತ್ತು ಗಾಂಧಿ ಸೇವಾ ಸಂಘ, ರಾ॥ ಗಣಪತಿಗಿರಿ ಇವರ ಅಧ್ಯಕ್ಷತೆಯಲ್ಲಿ ಸಭೆ, ರಾ॥ ಗಿರೀಶ ಮಾಸ್ತರ ಮತ್ತು ಮುನೀರ ಮಾಸ್ತರ ಇವರ ಭಾಷಣಗಳು ಮುಂತಾದ ಕಾರ್ಯಗಳಾದವು ಕರಿಬಸಪ ಕೇರಿಯಲ್ಲಿ ಅಂದು ಸ್ವಚ್ಛಗೊಳಿಸಿದು ಜನರೂ ಒಟ್ಟಿ ಕಾರ್ಯಕ್ರಮದಲ್ಲಿ ಸೇರಿದ್ದರು ಮತ್ತು ಅಮರು ಇನ್ನು ಮುಂದೆ ಮದ್ಯಸೇವನೆ, ಸತ್ತ ಜನರಲ್ಲಿ ಮಾಂಸಭಕ್ಷಣೆ, ಸೂಲಿ ಬಡಿಯೂಣ ಮುಂತಾದ ಕೆಟ್ಟ ಪದ್ಧತಿಗಳನ್ನು ಬಿಡುವುದಾಗಿ ಪ್ರಾಮಿಸರಿಸಿದರು ತಾ ೪ನೇಗೆ ರಾ॥ ಹಳ್ಳಿಕೇರಿ ಗಿಂಗಣ್ಣನವರ ಅಧ್ಯಕ್ಷತೆಯಲ್ಲಿ ಖರಿಜನಸೇವಾ ಮಿತಿಗಳ ಸಭೆಯಾಗಿ ರಾ ರಾಮಸಿಂಗರವರ ಚಿತ್ತಾಕರ್ಷಕ ಭಾಷಣವಾಯಿತು ಹಂಜಿಕರು ಮಧ್ಯಾಹ್ನ ಮಂತಾದ ಆಸಪ್ಪ ಚಟುಗಳನ್ನು ಏಟ್ಟುಕೊಟ್ಟಿದ್ದರಾಗಿ ಆಜೆ ತಕ್ಕೊಂ ರಡು ಖಾದಿ ನೂರಾಐಕ್ಕೆ ಖಾದಿ ತಯಾರಿದ್ದರಂತೆ ಇನ್ನೂ ಅವು ಬಂದು ಮುಟ್ಟಲು ವದಿಲ್ಲ

ಶಿರಸಿ— (ತಾ ೬—೧೦—೩೯) ಅಯುರ್ವೇದ ಸಮ್ಮೇಲನದ ತಯಾರಿ ಧರದಿಂದ ಸಾಗಿದೆ ರಾ ನಿತ್ಯಾಮಿತ್ತ ಕಕೇರಿಯು ಸ್ಥಾಗತಾಧ್ಯಕ್ಷರು ರಾ ಪಟವರ್ಧನ ಪಿತಾ-ಪ್ರತ್ರರು ಸಮ್ಮೇಲನ ಯಶಸ್ವಿ ಮಾಡಲು ದೃಢನಿಯಮದ ದುಡಿಯುತ್ತಿದ್ದಾರೆ

ಇಲ್ಲಿಯ ಖಾದಿ-ಅಂಗಡಿಯಲ್ಲಿ ಈಗ ಖ್ಯಾತಿಗೆ ಕಡ್ಡಿದೆ ೪ ಅಂಗಡಿಗಳಿಗೆ ಅಂಗಡಿಗಳೆ ಹೊಸ ಖಾದಿ ಬರುವಲ್ಲಿ ಇದೀಗ ಗಾಂಧಿ-ಸಪ್ತಾಹ ಜನರು ಹೊಸ ಖಾದಿ ಕೊಂಡು ಕೊಳ್ಳಲಿಚ್ಛಿಸುತ್ತಾರೆ. ಆದರೆ ಅಂಗಡಿಯಲ್ಲಿ ಖಾದಿ ಪುರವಟ ತೀರ ಕಡಿಮೆ ಇದ್ದದ್ದರಲ್ಲಿ ಕೂಡ ಹಳೇ ಖಾದಿಯೇ ಹೆಚ್ಚು ! ಜೆಪಿಖಾ ಸಂಘೆವರು ಈ ಅಂಗಡಿಯ ಕಡೆಗೆಷ್ಟು ನೆಂದ ನೋಡುತ್ತಿರುವರೋನೇ !

ಹುಬ್ಬಳ್ಳಿಯ ಪಂಗಿ ಹಲಸೀಕರೊಡನೆ ಪಂಗಿ ಹಾರಾಷ್ಟ್ರರೂ ತಮ್ಮ ಸಹಕಾರಿಗಳ ಸಹಾಯದಿಂದ “ ರಿ ಳಜಾಟಿಕ ರಸೌಷಧಿ ದರ್ಕ್ಸ, ಲಿಮಿಟೆಡ್,” ಎಂಬ ಹೆಂಪಸುಮನ್ನು ಹೊರಡಿಸುವ ತಯಾರಿ ಮಾಡಿದ್ದಾರೆ. ಕಂಪನಿಯ ಸಂಳ್ಪಿತ ಬಂಡವಾಳ ರೂ. ೨ ಲಕ್ಷವಿರುವದು. ಶುರಕ್ಕೆ ರೂ. ೧೦—೧೦೦ ಕ ಸಾವಿರ ಶೇರುಗಳನ್ನಷ್ಟೇ ಹೊರಡಿಸುವರಂತೆ ತಿಳಿಯುತ್ತದೆ

ತಾ. ೨ನೇಗೆ ನಗರಕೊಂ ಕಮಿಟಿಯ ವರಫಾಗಿ ಮಹಾತ್ಮರ ಹುಟ್ಟುಹಬ್ಬದ ಉತ್ಸವ ಜರುಗಿತು. ಪ್ರಭಾತ ಫೇರಿ, ಧ್ವಜವಂದನೆ, ಮಧ್ಯಾಹ್ನದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಆಟ-ಪಾಟಗಳು, ಸಭೆ, ಸಾಬ್ಕೆದ್ದಲ್ಲಿಗಳಿಗೆ ಅಧಿಕಮಳಿಗೆ ಮುಂತಾದ ಕಾರ್ಯಕ್ರಮಗಳಾದವು ರಾ॥ ಗಣಪತಿ ಗಂಗೊಳ್ಳಿಯವರು ಸಭಾಧ್ಯಕ್ಷರಾಗಿದ್ದರು ಶ್ರೀ ನಾರಿಕಾಂಬಾ ಶಾಲೆಯಲ್ಲೂ ರಾ॥ ತಿಮ್ಮಪ್ಪ ನಾಯಕರ ಅಧ್ಯಕ್ಷತೆಯಲ್ಲಿ ಉತ್ಸವವಾಗಿ ರಾ॥ ಲೋಕರೆ ಮೊತ್ತರ ಭಾಷಣ ನಾಯಿತು

ಅವಾಲಾ ಅಧಿಕಾರಿಗಳೂ ಮಧ್ಯ ಪ್ರತಿಬಂಧ ಸಮಿತಿಯ ಸ್ವಯಂಸೇವಕರೂ ದಕ್ಷತೆಯಿಂದ ದುಡಿದು ಅಬಕಾರಿ ಗುತ್ತಿಗೆಗಳ ಪತ್ತೆ ಹಿಡಿಯುತ್ತಿದ್ದಾರೆ. ಕಳೆದ ತಾ. ೧೫ನೇಗೆ ಮಕ್ಕಿಗಾ ಎಂಬಲ್ಲಿ ಭಟ್ಟಿ ಸಾರಾಯಿ ಮಾಡುತ್ತಿದ್ದ ಬಗ್ಗೆ ಮಹಾವೇವಿ ಕೆಲಸಿ ಎಂಬವಳೊಗೂ, ಅದೇ ಆರೋಪದ ಮೇಲೆ ಕಳೆದ ತಾ. ೨ನೇಗೆ ಬೈಲಗದ್ದೆಯ ಥೇವನೊಡ ಎಂಬವನೂಗೂ ಸೆರೆ ಹಿಡಿದು ಬಿಟ್ಟಿ ಮಾಡಿಕೊಟ್ಟಿದ್ದರು. ಪಬ್ಲಿಸ್ಟಿಟಿಯು ಅವರಿಗೆ ಅನುಕೂಲವಾಗಿ ೧ ಮತ್ತು ೨ ತಿಂಗಳ ಶಿಕ್ಷೆ ವಿಧಿಸಿದ್ದಾರೆ. ಕಳೆದ ತಾ ೫ನೇಗೆ ಸಾಗರದಿಂದ ಬರುತ್ತಿದ್ದ ಒಂದು ಮೋಟಾರ ಬಂಡಿಯಲ್ಲಿ ತಪಾಸ ಮಾಡಲಾಗಿ ೨ ಬಾಟ್ಲಿ ಸರಾಯಿ ಸಿಕ್ಕಿತು. ಜೊತೆಗೆ ಪತ್ರಗಳೂ ಇದ್ದವಂತೆ ! ಬೇಕಾದಾಗ ಸರಾಯಿ ಕಳಿಸಿಕೊಡುವ ಅಕ್ಕಾಸೆಗೆ ಆ ಪತ್ರಗಳಲ್ಲಿದೆಯಂತೆ ! ಹುಬ್ಬಳ್ಳಿ ಅಧಿಕಾರಿಗಳು ಡ್ರಾಯಿಪ್ಪರ ಮತ್ತು ಕ್ಲೀನರ ಇವರಿಗೆ ಸೆರೆ ಹಿಡಿದು ಬಾಯಿಸಾನ ಮೇಲೆ ಬಿಟ್ಟಿದ್ದಾರೆ. ಈ ಪ್ರಕರಣದಿಂದ ಶಿರಸಿಯಲ್ಲೂ ಸಾಗರದಲ್ಲಿ ಒಳ್ಳೇ ಗಡಿಬಿಡಿ ಎದ್ದಿದೆ ! ಶಿರಸಿಯ ಒಬ್ಬೆಸ್ಟಿ ಶ್ರೀಮಂತರು ಈ ಪ್ರಕರಣದಲ್ಲಿ ಸಿಲುಕಿ ಬೇರೆಯವರ ಸಜಪಡುವಂತೆ ! ಕಳ್ಳರು ಒಂದಿಲ್ಲೊಂದು ದಿನ ಸಿಕ್ಕೇ ಸಿಗುತ್ತಾರೆಂಬ ಸಂಗತಿಯನ್ನು ಯಾರೂ ಮರೆಯತಕ್ಕದ್ದಲ್ಲ

ಸಿದ್ದಾಪುರ— (ತಾ ೫—೧೦—೩೯) ಮಳೆಯಿಲ್ಲದೆ ೧ ತಿಂಗಳಿಯಿತು ಒಳ್ಳೆರಿಗರು ಮೇಗಳಾಜನ ದಾರಿ ಕಾಯುತ್ತಿದ್ದಾರೆ

ಕಳೆದ ಸೋಮವಾರ ಗಾಂಧಿ ಜಯಂತೀ ಉತ್ಸವವು ಒಳ್ಳೆ ವಿಜೃಂಭಣೆಯಿಂದ ಜರುಗಿತು. ಮುಂಜಾನೆ ಪ್ರಭಾತ ಫೇರಿಯಾಯಿತು ಫೇರಿಯಲ್ಲಿ ಲೈಂಗಿಕಶಿಕ್ಷಣ ಸಮಿತಿಯ ಶ್ರೀ॥ ಎಸ್ ಆರ್ ಭಾಗವತ, ಶ್ರೀ॥ ಪಿ ನಾಯ್ಕ ಮೊದಲಾದ ಮಹಾಜನರು ಸೇರಿದ್ದರು. ಫೇರಿಯು ಮಳೆಕೆ ಖಾದಿ-ಭಾಂಡಾರದ ಬಳಿ ಬಂದಾಗ ಅಲ್ಲಿ ರಾ॥ ಭಾಗವತರ ಹಸ್ತದಿಂದ ಖಾದಿ ಸಂತೆಯ ಉದ್ಘಾಟನೆಯಾಯಿತು. ಮುಂದೆ ಧ್ವಜವಂದನೆಯಾದ ಮೇಲೆ ಧ್ವಜವಂದನೆಯಾಯಿತು. ಆ ಮೇಲೆ ಕನ್ನಡ ಶಾಲೆಯ ಬಳಿ ರಾ॥ ಭಾಗವತರಿಗೆ ಭಾರಿಕ ವ್ಯಾಯಾಮ ಶಾಲೆಯವರು ಲಾಠಿ-ಖಲಾಮು ಕೊಟ್ಟರು ಸಂಜೆ ೫ ಘಂಟೆಗೆ ಸಿಂಗರಿಸಿದ ಬಂಡಿಯಲ್ಲಿ ಮಹಾತ್ಮರ ಭಾವಚಿತ್ರವಿಟ್ಟು ಮೆರವಣಿಗೆ ಹೊರಡಿಸಿದ್ದರು ಹೆಂಗಸರೂ ಮಕ್ಕಳೂ ಈ ಉತ್ಸವದಲ್ಲಿ ಹೆಚ್ಚಾಗಿ ಸೇರಿದ್ದರು ಖಾದಿ-ಭಾಂಡಾರದವರು ಮನೆ-ಮನೆ ತಿರುಗಾಡಿ ಖಾದಿ ಮಾರುತ್ತಿದ್ದಾರೆ ಶುಕ್ರವಾರ ಸಂಜೆಯ ೫ ಗೆ ರೂ. ೧೩೫ ರ ಖಾದಿ ಮೊದಲಾಗಿದೆ ಖಾದಿ-ಭಾಂಡಾರದಲ್ಲಿ ಹೊಸ್ತಾವರೆ ಗ್ರಾಮೋದ್ಯೋಗ ಶಾಲೆಯಲ್ಲಿ ತಯಾರಾದ ಕೈಗಾರಿಕೆಯ ಚೀನಸುಗಳು ಮಾರಾಟಕ್ಕೆ ಸಿಗುತ್ತವೆ

ಭಟ್ಕಳ— ಮಧ್ಯಪ್ರತಿಬಂಧ ಸಮಿತಿಯ ಸದಸ್ಯರಾದ ರಾ॥ ನಾಗಪ್ಪನಾಯಕ್, ರಾ॥ ನಾಯಕ ಮತ್ತು ಮಂಜಪ್ಪ ಜೋಷಿ ಇವರು ಕಳೆದ ವಾರ ಶಿರೂರ ಗ್ರಾಮಕ್ಕೆ ಹೋಗಿ ಅಬಕಾರಿ ಅಂಗಡಿಗಳ ಪರಿಶೀಲನೆ ಮಾಡಿದರು ಅಲ್ಲಿ ಸರಾಯಿ ಮಾರುವವರಿಗೆ ಎಚ್ಚರಿಕೆ ಕೊಟ್ಟು ಬಂದರು ಅಲ್ಲಿ ಸರಾಯಿ ಮಾರುವವರು ಯಾರೂ ಇಲ್ಲವೆಂದು ತಿಳಿಯುತ್ತದೆ. ಈ ತಾಲೂ ಜನ ಅಭಾಪಯೋಗಿಸಿ ಮಾದಕದ್ರವ್ಯ ಮಧ್ಯಪ್ರತಿಬಂಧ ಸಮಿತಿಯವರು ಆಲೋಚನೆ ಮಾಡುತ್ತಿದ್ದಾರೆ

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ವಿಶೇಷ ಅಧಿವೇಶನ.

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ವಿಶೇಷ ಅಧಿವೇಶನವು ವರ್ಧಾದೊಗಿನ ನವಭಾರತ ವಿದ್ಯಾಲಯದ ಸಭಾಮಂದಿರದಲ್ಲಿ ಸೋಮವಾರ ತಾ. ೯ನೇ ಅಕ್ಟೋಬ್ಹರ ೫ ಘಂಟೆಗೆ ಪ್ರಾರಂಭವಾಯಿತು ಸುಮಾರು ೩೦೦ ಮಂದಿ ಪ್ರತಿನಿಧಿಗಳು ಸಭೆಗೆ ಚಿತ್ತೈಸಿದ್ದರು. ಸಭಾಮಂದಿರವು ತಕ್ಕಮಟ್ಟಿಗೆ ವಿಶಾಲವಾಗಿರದ್ದರಿಂದ ಪ್ರೇಕ್ಷಕರಿಗೆ ಪ್ರವೇಶವಿಲ್ಲದೆ, ಮುಖ್ಯ ಮುಖ್ಯ ಪತ್ರಿಕೆಗಳ ಪ್ರತಿನಿಧಿಗಳಿಗೆ ಮಾತ್ರ ಪ್ರವೇಶ ವಿದ್ದಿತು. ಸರಿಯಾಗಿ ೫ ಘಂಟೆ ಬಡಿಯಿದನೆ 'ವಂದೇ ಮಾತರಮ್' ಗೀತವನ್ನು ಸುಸ್ವರದಿಂದ ಹಾಡಿ ಸಕಲ ರಾಷ್ಟ್ರಪ್ರತಿನಿಧಿಗಳಿಗೆ ಭಾರತಮಾತೆಯಮೇಲಿನ ಭಯ ಭಕ್ತಿಗಳನ್ನು ಪ್ರಕಟಿಸಿಕೊಟ್ಟ ಬಳಿಕ, ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಎದ್ದುನಿಂತು ಪ್ರಾಸ್ತಾವಿಕ ಭಾಷಣ ಮಾಡಿದರು. ಆ ಕಾಲದಲ್ಲಿ ಸಭೆಯೊಳಗೆ ಎಲ್ಲೆಲ್ಲಿಯೂ ಗಾಂಭೀರ್ಯವೇ ನೆಲಿಸಿತು. ಈಗಿನ ಗಂಭೀರ ಪರಿಸ್ಥಿತಿಗೆಯನವ ಪ್ರಕಾರದಿಂದ ತಿರುಗಬೇಕೆಂಬ ಆಲೋಚನೆಯು ಪ್ರತಿಯೊಬ್ಬರೂ ಮಗ್ನರಾಗಿದ್ದರು. ರಾಜೇಂದ್ರರು ಸುಡಿದ್ದುನಂದರೆ:-"ನಾವು ಗಂಭೀರ ವಿಷಯವನ್ನು ಆಲೋಚಿಸಲು ಇಂದಿಗೆ ಸಭೆ ಸೇರಿದ್ದೇವೆ ನಾಳಿನ ಸಂಧ್ಯಾಕಾಲದ ಪೂರ್ವದ ಆಕ್ರಮಣದಿಂದ ಜಿಕ್ಕ ಚಿಕ್ಕ ಜನಾಂಗಗಳನ್ನು ರಕ್ಷಿಸಿಕೊಳ್ಳುವದಕ್ಕಾಗಿ ಈ ಯುದ್ಧ ಹೂಡಲ್ಪಟ್ಟಿರುವದೆಂದು ಹೇಳೀಗಾಗಿರುತ್ತದೆ. ಜರ್ಮನ್‌ರು ಪೋಲಂಡದ ಸ್ವಾತಂತ್ರ್ಯದ ಮೇಲೆ ಗಾಳಿ ಮಾಡಿಹೋದರೆಂದು ಹೇಳುತ್ತಾರೆ. ಸಿಡಿತ ಜನಾಂಗಗಳೊಡನೆ ನಾವು ಸಹಾನುಭೂತಿಯುಳ್ಳವರಾಗಿದ್ದೇವೆ. ಆದರೆ ಈ ಯುದ್ಧದ ಧ್ಯೇಯವೇನು? ಲೋಕಕ್ಕೆ ಹಿಯ ಪುರಸ್ಕಾರವೇ? ಅಥವಾ ಹಿಂದಿನ ಯುದ್ಧದ ಮುಂದಿದ ಅವ್ಯವಸ್ಥೆಯೇ? ಈ ಪ್ರಶ್ನೆಗೆ ಸಮರ್ಪಕ ಉತ್ತರ ದೊರೆತವರೆಗೆ ನಮ್ಮ ಘೋರಣವನ್ನು ನಾವು ನಿರ್ಣಯಿಸಲಾರೆವು. ಯುದ್ಧ ಧ್ಯೇಯಗಳೇನು? ಹಿಂದುಸ್ಥಾನದ ಒಗ್ಗೆ ಬ್ರಿಟಿಶರ ಘೋರಣವೇನು? ಎಂಬ ಸಂಗತಿಗಳನ್ನು ಪರಿಸ್ಪುಟಮಾಡಲು ನಮ್ಮ ಪ್ರಕಟಿಸೆಯಲ್ಲಿ ನಾವು ಕಾಲ ಕೊಂಡಿದ್ದೇವೆ ಬರೀ ವಚನದಿಂದ ನಮಗೆ ಸಮಾಧಾನವಿಲ್ಲ. ಸ್ವತಂತ್ರ ಜನಾಂಗವೆಂದು ನಮಗೆ ಗಡೆ ಸಲ್ಲದೆಕೇಕು. ನಾವು ಹೊರಡಿಸಿದ ಪ್ರಕಟಣೆಯನ್ನು ಲೋಕದೊಳಗಿನ ಬೇರೆ ಬೇರೆ ಜನಾಂಗಗಳು ಮನ್ನಿಸಿ ಲೋಕಕಾಯ್ದೆ ರಕ್ಷಣೆಗೆ ಅನ ಕೂಲವಾಗವಂತೆ ಹಿಂದುಸ್ಥಾನದೊಳಗ ತಕ್ಕ ಮಾರ್ಪಾಟುಗಳನ್ನು ಕೈಕೊಳ್ಳಲು ಬ್ರಿಟಿಶರಿಗೆ ಆತಂಕಗೊಳಿಸಿಲ್ಲಿ ನಾವು ಸರ್ವಾಧಿಕಾರಿಗಳಿಗೆ ಕಂಡ ೧೨ ಸಭೆಯ ಅಂಗೀಕಾರವನ್ನು ಸ್ವತ್ಯಾವಾಗಿ ತೀರಿದ್ದೇವೆ. ಸರ್ವಾಧಿಕಾರಿಗಳು ಆಲೋಚನೆ ಮಾಡುತ್ತಿರುವಾಗ ನಮಗೆ ತೀರಿದ್ದಾರೆ ದೇಶದೊಳಗೆ ಪಕ್ಷ ಪಂಗಡಗಳವೆ. ಆದರೆ, ಈ ಕಾಲಗಳಲ್ಲಿ ಮತಭೇದಗಳ ಮೇಲೆ ಕಟುವ್ಯವಿಡಕೂಡದು." ಈ ಪ್ರಕಾರ ಭಾಷಣವಾದ ಬಳಿಕ ಡಾ॥ ರಾಜೇಂದ್ರ ಪ್ರಸಾದರು ಅಧ್ಯಕ್ಷಸ್ಥಾನದಿಂದ ತೀರ್ಮಾನವನ್ನು ಸೂಚಿಸಿದ್ದೇನಂದರೆ:- ಈಗಿನ ಬಿಕ್ಕಟ್ಟಿನ ಕಾಲದಲ್ಲಿ ಕಾಲ-ಕಾಲಕ್ಕೆ ಒದಗುವ ಪರಿಸ್ಥಿತಿಗನುಗುಣವಾಗಿ ಕಾಲಕ್ಕಾಗಿ ಮಾರ್ಪಾಟುಗಳನ್ನು ಕೈಕೊಳ್ಳುವದು ಅವಶ್ಯ ವಿರುವದರಿಂದ ರಾಷ್ಟ್ರೀಯ ಸಭೆಯನ್ನು ದಿಶಂಬರ ತಿಂಗಳಲ್ಲಿ ಸೇರಿಸಿದರೆ ಇಲೆಕ್ಷನಿನ ಗಡಿಬಿಡಿಯಿಂದ ಜನಾಂಗದ ಮನಸ್ಸು ವ್ಯಗ್ರವಾಗುವದರಿಂದ ರಾಷ್ಟ್ರೀಯ ಸಭೆಯನ್ನು ಮಾರ್ಚ ತಿಂಗಳ ತನೇ ಪಕ್ಷದಲ್ಲಿ ಸೇರಿಸಬೇಕಾಗಿಯೂ, ಇಲೆಕ್ಷನ್-ಗಳ ತಾರೀಖುಗಳನ್ನು ಇನ್ನು ಮುಂದೆ ನಿರ್ಣಯಿಸತಕ್ಕದ್ದಾಗಿಯೂ, ಈ ಸಭೆಯು ತೀರ್ಮಾನಿಸುತ್ತದೆ. ಪರಿಸ್ಥಿತಿಗೆ ಅವಶ್ಯ ಬಿದ್ದರೆ ಕಾರ್ಯಕಾರಿ ಮಂಡಳವು ರಾಷ್ಟ್ರೀಯ ಸಭೆಯ ವಿಶೇಷ ಅಧಿವೇಶನವನ್ನು ಇಷ್ಟ ಕಂಡಾಗ ಸೇರಿಸತಕ್ಕದ್ದಾಗಿಯೂ, ಹೋದ ವರ್ಷದ ಕೊಂಗ್ರೆಸ ಪ್ರತಿನಿಧಿಗಳೇ ಆ ವಿಶೇಷ ಅಧಿವೇಶನದ ಪ್ರತಿನಿಧಿಗಳಾಗಿರಬೇಕಾಗಿಯೂ, ಈಗಿನ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ವಿಸರ್ಜನಿಸಲ್ಪಡತಕ್ಕ ಸಭೆಯಾಗಬೇಕಾಗಿಯೂ ಈ ಸಭೆಯು ತೀರ್ಮಾನಿಸುತ್ತದೆ." ಈ ರೀತಿಯು ಮನ್ನಿಸಲ್ಪಟ್ಟ ಬಳಿಕ, ಪಂ॥ ಜವಾಹರಲಾಲರು ಈ ತೀರ್ಮಾನವನ್ನು ಸೂಚಿಸುವಾಗ ಸುಡಿದ್ದೇನಂದರೆ:- ಲೋಕಕಾಯ್ದೆ ಮತ್ತು ಸ್ವಾತಂತ್ರ್ಯ ಇವೆರಡು ಮೂಲ ತತ್ವಗಳ ಮೇಲೆ ಈ ತೀರ್ಮಾನವಿರುವದು. ಹಿಂದುಸ್ಥಾನವನ್ನು ಸ್ವತಂತ್ರ ಜನಾಂಗವೆಂದೆಡೆಯಲ್ಲಿ ಘೋರಣವನ್ನು ಆ ಜನಾಂಗದ ಕಡೆಯಿಂದಲೇ ನಿರ್ಣಯಿಸಿಕೊಳ್ಳಬೇಕು. ಎಷ್ಟೇ ಉಪ-ಸೂಚನೆಗಳು ಸೂಚಿಸಲ್ಪಡಬಹುದು; ಆದರೆ ಮೂಲ ತತ್ವಗಳಲ್ಲಿ ನಮ್ಮೊಳಗೆ ಎಂದೂ ಮತಭೇದವಾಗಲಿಕ್ಕಿಲ್ಲ. ಅಂತರ್‌ರಾಷ್ಟ್ರೀಯ ರಾಜಕಾರಣವನ್ನು ಈ ಕನಕ ನಾವು ಶಾಸ್ತ್ರವೆಂದು ಅಭ್ಯಾಸ ಮಾಡುತ್ತಿದ್ದೆವು; ಈಗ ವ್ಯವಹಾರವೆಂದು ನಾವದನ್ನು ಕಲಿಯಬೇಕಾಗಿದೆ. ಅಂತರ್‌ರಾಷ್ಟ್ರೀಯ ರಾಜಕಾರಣವನ್ನು ಪುನರ್ಘಟಿಸುವ ಕಾರ್ಯವನ್ನು ಹಿಂದುಸ್ಥಾನವು ಕೈಕೊಳ್ಳತಕ್ಕದ್ದು. ನಮ್ಮ ಈ ತೀರ್ಮಾನವನ್ನು ಪಾಲಿಸಲ್ಪಟ್ಟಿದೆ ಹಿಂದುಸ್ಥಾನದ ಧ್ಯೇಯ ಸಾಧ್ಯವಾಗಲೇ ಬೇಕು. ಕೊಂಗ್ರೆಸ್ ಪ್ರಯತ್ನಿಸುವ ಸರ್ವಾಧಿಪತಿಗಳಿಗೆ ಕಂಡಿದ್ದು ಇದೇ ಮೊದಲನೇ ಸಲ। ಕೊಂಗ್ರೆಸ ಕಾರ್ಯಕಾರಿ ಮಂಡಲದ ಪ್ರಕಟಣೆ ಹೊರ ಬಳಿಕ ಈ ಸಂಘಾಷಣದ ಯೋಗ ಕೂಡಿ ಬಂದು ಇವರ ಮೇಲಿಂದ ನೀವು ತಕ್ಕ ಬೋಧಗಲಿಯತಕ್ಕದ್ದು. ಬಂದ ಬಂದ ಸಂಕಟಗಳಿಗೆ ಇದಿಂಗಿ ಅವನ್ನು ಪರಿಹರಿಸಿಕೊಂಡು ನಾವು ವಿಜಯ ಶಾಲಿಗಳಾಗುವುದನ್ನು ನಿರ್ಮಾಣ್ಯವಂತರಾಗಬೇಕು." ಈ ರೀತಿಯನ್ನು ಅನುಮೋದಿಸುವಾಗ ಸರದಾರ ವಲ್ಲಭಭಾಯಿ ಪಟೇಲರು ಸುಡಿದ್ದೇನಂತರೆ:- "ನಾವು ಬ್ರಿಟಿಶರೊಡನೆ ಮಾಲುಗಾರಿಕೆಯ ವ್ಯವಹಾರ ಮಾಡುವಲ್ಲಿ, ಬ್ರಿಟಿಶರಿಗೆ ತನ್ನ ಪ್ರಾಮಾಣಿಕತನವನ್ನು ಸಿದ್ಧಮಾಡಿಕೊಡಲು ಕೇಳುತ್ತೇವೆ. ಲೋಕಕಾಯ್ದೆ ಮತ್ತು ಲೋಕಸ್ವಾತಂತ್ರ್ಯದ ತತ್ವಗಳನ್ನು ಲೋಕದೊಳಗೆ ಹುಸ್ಪುಸುವದಕ್ಕಾಗಿ ಹಿಂದುಸ್ಥಾನವನ್ನು ಸ್ವತಂತ್ರಗೊಳಿಸಲು ರಾಷ್ಟ್ರೀಯ ಸಭೆಯು ಕೇಳಿಕೊಳ್ಳುತ್ತದೆ."

ಸರದಾರ ವಲ್ಲಭಭಾಯಿಯವರ ಭಾಷಣವಾದ ಬಳಿಕ, ಉಪಕಾರಕ್ಕಾಗಿ ಸಭೆಯು ಅರ್ಧ ತಾಸು ವಿಸರ್ಜನೆ ಹೊಂದಿತು. ಪುನಃ ಸಭೆ ಸೇರಿದ ಬಳಿಕ, ಸರ್ವಾಧಿಪತಿಗಳಿಗೂ ಕೊಂಗ್ರೆಸ ಪ್ರಮುಖರಿಗೂ ಆದ ಸಂಭಾಷಣಗಳ ವಿವರಗಳನ್ನು ತಿಳಿಸಬೇಕಾಗಿ ಸಭಾ

(ನಂತೇ ಸಾನ ಮೇಲೆ ಮುಂದಿನಿದೆ)

ಪತ್ರಕರ್ತರ ನುಡಿಗನ್ನಡಿ.

೧. ಇದೇ ಬರುವ ಡಿಸಂಬರ ತಿಂಗಳಲ್ಲಿ ಶಿರ್ಸಿಯಲ್ಲಿ ಅಖಿಲ ಕನ್ನಡ-ಟೀಕ ಆಯುರ್ವೇದ ಸಮ್ಮೇಲನವನ್ನು ಸೇರಿಸಬೇಕೆಂದು ಗೊತ್ತಾದ ಸಂಗತಿ ಈಗಾಗ ಎಲ್ಲರೂ ಬಲ್ಲಾದ ವಿಷಯ. ಶಿರ್ಸಿಯ ವಕೀಲರಾದ ರಾ|| ದೇವರು ವಿಶ್ವಾಮಿತ್ರ ಇವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯು ವಿಚಾರ್ಟಾಗಿ, ಸಮ್ಮೇಲನದ ತಯಾರಿ ಬರದಿಂದ ನಡೆದಿದೆ. ಸಮ್ಮೇಲನದ ಸಮಯ ಶ್ರದರ್ಶನವನ್ನೆಂದು ಸೇರಿಸಬೇಕೆಂದೂ ಗೊತ್ತಾಗಿದೆ ಶಿರ್ಸಿಯ ನಾಮಾಂಕಿತ ವೈದ್ಯರಾದ ರಾ|| ಪಟವರ್ಧನ ವೀಲಕಂರವರು ಈ ಪ್ರದರ್ಶನದ ಮುಖ್ಯ ಚಾಲಕರು ಆಯುರ್ವೇದ ಪ್ರಸಾರದಿಂದ ನಮಗೊದಗುವ ಪ್ರಯೋಜನಗಳ ಕುರಿತು ಈಗ ವಿಶೇಷ ವಣಿ-ಸುವದವಶ್ಯವಿಲ್ಲ ಆಯುರ್ವೇದ ಪದ್ಧತಿಯು ನಮ್ಮ ದೇಶಿ ಉಪಚಾರ ಪದ್ಧತಿಯಾಗಿದ್ದು, ಆ ಚಿಕಿತ್ಸೆಯಿಂದ ನಮ್ಮಲ್ಲಿಯ ರೋಗನಿವಾರಣೆಗೆ ಒಳ್ಳೇ ಪ್ರಯೋಜನ ದೊರೆಯುತ್ತದೆಂದು ಅನುಭವಿಕರಿಗೆಲ್ಲ ಗೊತ್ತಿದ್ದ ಮಾತು. ವನಸ್ಪತಿಗಳಿಂದ ಚಿಕಿತ್ಸೆಯಾಗುತ್ತಿದ್ದರಿಂದ ಔಷಧಗಳಿಗೆ ಹೆಚ್ಚು ಕ್ರಯ ಬೀಳದೆ ಬಡಬಗ್ಗರಿಗೆ ಸಹ ಚಿಕಿತ್ಸೆ ಪಡೆಯಲು ಅನುಕೂಲವಾಗುತ್ತದೆ. ನಮ್ಮಿ ದೇಶದೊಳಗ ಪರ್ವತಶ್ರೇಣಿಯಿದ್ದು, ಆ ಪರ್ವತಗಳಲ್ಲಿ ದಿವ್ಯವಾದ ವನಸ್ಪತಿಗಳು ಹುಟ್ಟುತ್ತವೆ. ಸಂಜೀವನಿ ವನಸ್ಪತಿಯಿಂದ ಶ್ರೀ ಲಕ್ಷ್ಮಣ ದೇವರು ಬದುಕಿಕೊಂಡ ಸಂಗತಿಯನ್ನು ರಾಮಾಯಣದಲ್ಲಿ ಅನೇಕರ ಓದಿರಬಹುದು. ನನ್ನುದ್ದೆಯ ಸಹ್ಯಾದ್ರಿ ಪ್ರದೇಶವಾದರೂ ದಿವ್ಯ ವನಸ್ಪತಿಗಳ ಭಾಂಡಾರನೇ. ಆದರೆ, ದುರ್ದೈವದಿಂದ ಬೇರೆ ಬೇರೆ ವನಸ್ಪತಿಗಳ ಗುಣಧರ್ಮಗಳನ್ನು ನಾವು ತಿಳಕೊಳ್ಳಬಯಸದೆ, ಚಿಕ್ಕ-ಪುಟ್ಟ ಔಷಧಗಳಿಗಾಗಿ ವಿದೇಶಗಳ ಮೇಲೆ ಅವಲಂಬಿಸಿಕೊಂಡಿದ್ದೇವೆ. ನೆರೆಹೊರೆಯ ಗ್ರಾಮಗಳಲ್ಲಿ ನಿತ್ಯದ ರೋಗಗಳನ್ನು ಚಿಕಿತ್ಸೆ ಮಾಡಬಲ್ಲ ವನಸ್ಪತಿಗಳು ವಿಪುಲವಾಗಿ, ಸುಲಭವಾಗಿ, ಉಚಿತವಾಗಿ ಸಿಗುತ್ತಿದ್ದಾಗ್ಯೂ ಸಹ ಬಹುಗರು ಆ ಕಡೆ ಲಕ್ಷಗೊಡದೆ, ಬುದ್ಧಿಪೂರ್ವಕವಾಗಿ ಅಲಸ್ಯ ಮಾಡಿ ಬಟ್ಟೆ ಹಿಡಕೊಂಡು ಪಟ್ಟಣಗಳಲ್ಲಿರುವ ದವಾಖಾನೆಗಳಿಗೆ ಎಡತಾಕುವ ನೋಟ ನಿಜವಾಗಿಯೂ ಶೋಚನೀಯವಿದೆ. ನಮ್ಮಲ್ಲಿ ಆಯುರ್ವೇದದ ಪ್ರಸಾರವಾಗಿದ್ದರೆ, ಆಯುರ್ವೇದಕ್ಕೆ ರಾಜಮಾನ್ಯತೆ ದೊರೆತಿದ್ದರೆ, ಚಿಕ್ಕ ಪುಟ್ಟ ರೋಗಗಳನ್ನು ಹಳ್ಳಿಗಳಲ್ಲಿಯೇ ಉಪಚರಿಸಿಕೊಳ್ಳಬಹುದೆಂಬ ಜ್ಞಾನವು ಸಾರ್ವತ್ರಿಕವಾಗಿದ್ದರೆ ಹಳ್ಳಿಗಳು ಇಂದಿಗೆ ಈ ಪರಿ ಹಿಂಸಾವಸ್ಥೆ ಹೊಂದುತ್ತಿದ್ದಿಲ್ಲ. ಹಳ್ಳಿಗಳೊಳಗಿನ ರೋಗಿಗಳು ಉಪಚಾರ ಹೊಂದದೆ ಪಿಂಕರಿಂದ ಉದಾಹರಣೆಗಳನೇಕವೆ. ಬಡಬಗ್ಗರಿಗೆ ಪಟ್ಟಣಗಳಿಗೆ ಹೋಗಿ ಉಪಚರಿಸಿಕೊಳ್ಳುವ ಶಕ್ತಿಯಾಗಲಿ ಅನುಕೂಲತೆಯಾಗಲಿ ಇರುವದಿಲ್ಲ. ಕೊಂಗ್ರೆಸ ರಾಜ್ಯಾಧಾರದಲ್ಲಿ ಆಯುರ್ವೇದಕ್ಕೆ ಸಿಕ್ಕಿದ ಪ್ರೋತ್ಸಾಹ ನೋಡಿ ನಮಗೊಳ್ಳೇ ಸಂತೋಷವನಿಸಿದೆ. ಆಯುರ್ವೇದ ಸಮ್ಮೇಲನದವರು ಸರಕಾರದ ಮನೋಭೂಮಿಯಲ್ಲಿ ಉಂಟಾದ ಅವಸ್ಥಾಂತರವನ್ನು ಲೆಕ್ಕಿಸಿ, ನಮ್ಮಿ ಜಲ್ಲೆಯೊಳಗೆ ಹೆಚ್ಚೆಚ್ಚಿನ ಆಯುರ್ವೇದ ಚಿಕಿತ್ಸೆಯು ಪ್ರಸಾರವಾಗುವಂತೆ ಕಲ್ಪಿಸತಕ್ಕದ್ದು.

೨. ನಮ್ಮಿ ಜಿಲ್ಲೆಯೊಳಗೆ ಸಹ್ಯಾದ್ರಿಯು ಬೆಟ್ಟ ಬಿರುವದರಿಂದ ಇಲ್ಲಿ ಬೇರೆ ಬೇರೆ ವನಸ್ಪತಿಗಳು ಹೇರಳವಿವೆ. ಅವುಗಳ ಗುಣಧರ್ಮಗಳನ್ನು ಅಭ್ಯಾಸ ಮಾಡಿ ಲೋಕಶ್ರಯೋಜನವಾಗುವಂತೆ ವಿಚಾರಿಸಿಗುವದು ಅತ್ಯವಶ್ಯ ಅದಕ್ಕಾಗಿ ನಮ್ಮಿ ಜಲ್ಲೆಯೊಳಗೆ ವನಸ್ಪತಿ-ಸಂಶೋಧನ ಶಾಲೆಯನ್ನು ಸ್ಥಾಪಿಸಬೇಕಾಗಿ ಸರಕಾರಕ್ಕೆ ನವ್ಮದೊಂದು ವಿನಂತಿಯುಂಟು. ರಾ|| ಪಟವರ್ಧನ ವೀಲಕಂರವರು ವನಸ್ಪತಿಗಳ ಪ್ರದರ್ಶನದ ವಿಚಾರದಿಂದ ಸಂಶೋಧನ ಶಾಲೆಯ ಪೂರ್ವತಯಾರಿಯನ್ನೇ ನಡಿಸಿರುವರಂಗಿ ನಾವು ತಿಳಿಯುತ್ತೇವೆ ವನಸ್ಪತಿಗಳ ಪ್ರದರ್ಶನದಿಂದ ನಮ್ಮಿ ಜಲ್ಲೆಯೊಳಗೆ ಹುಟ್ಟುವ ವನಸ್ಪತಿಗಳ ಮಾಹಿತಿಸ್ಸಾರ ಹೊಂದಿ ಸಂಶೋಧಕರಿಗೆ ಅಭ್ಯಾಸ ಮಾಡಲು ಅನುಕೂಲವಾಗುವಂತೆ ಸಂಶೋಧನೆಯಿಂದ ಪಡೆದ ವನಸ್ಪತಿಗಳ ಗುಣ-ಧರ್ಮಗಳ ಜ್ಞಾನ ದೊರೆಯುವದಲ್ಲದೆ, ಕೆಲವಷ್ಟಿಗೆ ಪ್ರಾಪ್ತಿಯು ಬಗುವಂತೆ ವನಸ್ಪತ್ಯೌಷಧಗಳ ಕಾರ್ಖಾನೆ ಗಳನ್ನು ವಿಸ್ತರಿಸಿದರೆ, ನಿರುದ್ಯೋಗಿ ಹಳ್ಳಿಗರಿಗೆ ಉದ್ಯೋಗ ದೊರಕಿ ಮರ್ಯಾದೆಯಿಂದ ಜೀವನೋಪಾಯ ಮಾಡಲು ಆನುಕೂಲವಂತೀತು. ಈ ತನಕ ಒದಗುತ್ತಿದ್ದ ವನ ಮೂಲಿಗಳು, ಅನುಭವಿಸುತ್ತಿದ್ದ ವನ ಕಷ್ಟಗಳು ಪರಿಹಾರಹೊಂದಿ ಜನರು ವನ ಸಂಪತ್ತಿಗನ್ನೂ, ವನ-ವಿಹಾರವನ್ನೂ ಅನುಭವಿಸುವರು ಇದಲ್ಲದೆ, ದೇಸಾಯರುವರು ಪೂರ್ತಿಯೋಗಿನ ವನ-ರಕ್ಷಕ ಪಂಪತ್ತಿನಲ್ಲಿ ಅಭಿವೃದ್ಧಿಯ ಬಟ್ಟಂತೆ, ವನ-ರಕ್ಷಣೆಯಿಂದ ಇನ್ನೆ ರಕ್ಷಣೆಯಾಗಿ ಜನಪೋಷಣೆಯು ಮಾಗುವಂತಿದೆ ಸಮ್ಮೇಲನದ ಜಾಲಕರೆ. ಈ ವಿಷಯವನ್ನು ಕೊಂಚ ಸಂವಿಸ್ತಾರದಿಂದ ಸವಿಲೋಚಿಸಿ ನಮ್ಮ ಜಿಲ್ಲೆಯೊಳಗ ಹುಟ್ಟುವ ವನಸ್ಪತಿಗಳಿಂದ ಔಷಧಾಲಯವನ್ನೂ, ಸಂಶೋಧನ ಶಾಲೆಯನ್ನೂ ಹೊರಡಿಸುವ ಆಲೋಚನೆ ಮಾಡಬೇಕಾಗಿ ನಾವು ಸೂಚಿಸುತ್ತೇವೆ. ಆಯುರ್ವೇದದ ಮುಂಜಿಯನ್ನು ಬಾಯ್ತುಂಬ ಬಣ್ಣಿಸುವದರಿಂದ ಕಾರ್ಯಭಾಗವಾಗುವಂತಿಲ್ಲ ಕಾಲಮಾನಕ್ಕನುಚಿತವಾಗಿ ನಾವು ನಮ್ಮ ಸಿದ್ಧಾಂತಗಳಿಗೆ ವ್ಯವಹಾರಿಕರೂಪ ಕೊಟ್ಟರೆ ಮಾತ್ರ ಅವುಗಳಿಂದ ಪ್ರಯೋಜನವಾಗಬಲ್ಲದು.

೩. ಸಮ್ಮೇಲನದವರು ಕೈಕೊಂಡಿರುವ ಕಾರ್ಯ ಪೂರ್ಣತೆಗೆ ಹಗಲುವನ್ನು ಶಕ್ತಿ ಕೊಡುವ ಕೆಲಸ ಜನ ಸಾಮಾನ್ಯರದು ಲೋಕಶಕ್ತಿಯ ಬಲದಿಂದಲೇ ಲೋಕೋಪಕಾರದ ಕಾರ್ಯಗಳು ನೆರವೇರಬಲ್ಲವು. ಸಮ್ಮೇಲನದ ಕಾರ್ಯದಲ್ಲಿ ಸಕಲರೂ ತನು-ಮನ-ಧನಗಳಿಂದ ನೆರವಾಗಬೇಕಾಗಿ ನಾವು ಬಿನ್ನೈಸಿಕೊಳ್ಳುತ್ತೇವೆ. ಇಂಥ ಸಮ್ಮೇಲನ ನಮ್ಮಿ ಜಲ್ಲೆಯೊಗೆ ಸಂದುವದು ಇದೇ ಮೊದಲು. ಇದನ್ನು ನಾವು ಆಚರ್ಕಿಯಿಂದ ಸ್ವಾಗತಿಸಿರಿಸಿ ಲೋಕಶ್ರಯೋಜನವನಾಗುವಂತೆ ಇದನ್ನು ಮರ್ಯಾದಿಸಿಕೊಂಡರೆ ನಮ್ಮ ಜಿಲ್ಲೆಯೊಗೆ ಜಹಾರುವಾದ ಸ್ಥಿತ್ಯಂತರ ಒದಗಿಬರುವದೆಂದು ನವ್ಮ ನಿಶ್ಚಯವಾಗಿ ಹೇಳಬಲ್ಲೆವು. ಪಶ್ಚಿತಿ ನನುಗೆ ಅನುಕೂಲವಿದೆ: ರಾಜಶಕ್ತಿ ನವ್ಮ ಮೇಲೆ ಅನುಗ್ರಹ ವಲ್ಲುಟ್ಟ ಅಪೂರ್ವ ಯೋಗವಿದು ! ಅದರಿಂದ ಜಲ್ಲೆಯೊಳಗಿನ ವಿಚಾರವಂತರು ತಮ್ಮ ವಿಚಾರಗಳಂದಲೂ, ಜಾಣರು ಜಾಣ್ಮೆಯಿಂದಲೂ, ಐಶ್ವರ್ಯವಂತರು ತಮ್ಮ ಕಾಣಿಕೆಯಿಂದಲೂ ಸಮ್ಮೇಲನ ಕಾರ್ಯದಲ್ಲಿ ಪೂರೈಸಿರಿ ಚಿತ್ಕೋದ್ಧಾರವನ್ನು ಸಾಧಿಸಿಕೊಳ್ಳಬೇಕಾಗಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ ಆಯುರ್ವೇದ ಚಿಕಿತ್ಸೆ ನವ್ಮದಾಗಿದ್ದು, ನವ್ಮ ಸಂಸ್ಕೃತಿಯದಿದ್ದು, ನವ್ಮ ಪರಂಪರೆಯದಿದ್ದು, ನಮ್ಮ ಸಿದಗಕ್ಕೆ ಅನುಕೂಲವಾದದ್ದಿದ್ದು, ಅದನ್ನು ಉದ್ಧರಿಸಿ ನವ್ಮ ಜಿಲ್ಲೆಯ ವೃದ್ಧಿ ಮಾಡಿಕೊಳ್ಳುವ ಸುಯೋಗ ಪ್ರಾಪ್ತವಾಗಲಿ ನಾವು ಎಷ್ಟು ಮಾತ್ರಕ್ಕೂ ತಕ್ಕಾರ ಮಾಡಲಾಗದು.

ಚಿತ್ರಬಿಂದು

ಮಕ್ಕಳ ಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement in Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡವಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆ ರೋಗ, ಕೋವೆರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ !

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3.

ಏತಕ್ಕೆ ಚಿಂತಿಸುವಿರಿ ?

ಆಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಪ್ಲೀಹ ಮತ್ತು ಲಿವರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ|| ಏ ಎನ್. ಶ್ರೀನಿವಾಸರಾವ್, ಲಿವ್ಹರ್ ಸ್ಪೆಷಲಿಸ್ಟ್,

ಎಂ ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.

☞ ಇವರಲ್ಲಿ ವಿಚಾರಿಸಿ. ಶಿರ್ಸಿ ಏಜಂಟ —

ಸುಬ್ರಾಯ ಸೀತಾರಾಮ ಹೆಗಡೆ ಉಸುಬೀಯ ಏಜಂಟ

ದೇವಪ್ಪಾ ಅಯ್ಯು ನಾಯ್ಕ

ಅ. ಭಾ. ಕೊಂ. ಕ. ವಿಶೇಷ ಅಧಿವೇಶನ

(೧೦ನೇ ಪಾನಿಂದ ಮುಂದರಿದ್ದು.)

ವಾರ್ತೆ ಹಬ್ಬಿದೆ. ರಾಷ್ಟ್ರೀಯ ಸಭೆಯು ವಿರೋಧ ಬಣೆಯಲ್ಲಿ ಸಾಮ್ರಾಜ್ಯ ಸರಕಾರವು ಅದನ್ನು ಎದುರಿಸಿ ಪರಿಹರಿಸಿಕೊಳ್ಳುವ ಸರ್ವತಯಾರಿಯನ್ನಿಟ್ಟಿರುವದಾಗಿಯೂ ದಿಲ್ಲಿಯೊಳಗಿನ ಸುದ್ದಿ. ಮತ-ಮತಾಂತರಗಳ ಗೊಂದಲವನ್ನು ಪ್ರದರ್ಶಿಸುವದಕ್ಕಾಗಿಯೇ ಸರ್ವಾಧಿಪತಿಗಳು ಪ್ರಮುಖರ ಪರಿಷ್ಕೃತಿಯ ವಿಚಾರಮಾಡದೆ, ಅವರಿಗೂ ಇವರಿಗೂ, ಕಂಡ ಕಂಡವರಿಗೂ ನಿಮಂತ್ರಿಸಿ ವಿಚಾರ ವಿನಿಮಯ ಮಾಡುತ್ತಾರೆಯೂ ಲೋಕಾಪವಾದ ಹಬ್ಬಿದೆ.

ಹಿಂದುಸ್ಥಾನದೊಳಗಿನ ರಾಜ್ಯಸುಧಾರಣೆಯ ಕುರಿತು ಘೋಷಣೆ ಮಾಡುವದಕ್ಕೆ ಸರ್ವಾಧಿಪತಿಗಳು ಮಹಾತ್ಮರ ಕಡೆ, ರಾಜೇಂದ್ರ ಪ್ರಸಾದ- ಪಂ|| ಜವಾಹಿರಲಾಲರ ಕಡೆ ಅವಧಿ ಕೇಳಿದಂತಾ ಪ್ರಕಟವಾಗಿದೆ. ತಾ. ೩೦ನೇ ಶುಕ್ರವಾರ ಸರ್ವಾಧಿಪತಿಗಳು ಘೋಷಣೆಯನ್ನು ಹೊರಡಿಸಬಹುದಂತೆ.

ವೆಸ್ಲೆ ಶುಕ್ರವಾರ ಪಾರ್ಲಿಮೆಂಟಿನಲ್ಲಿ ಕೂಲಿಕಾರ ಪಕ್ಷದ ಸಭಾಸದರು ಹಿಂದುಸ್ಥಾನದ ಪ್ರಶ್ನೆಯನ್ನೆತ್ತಿ ಭಾಷಣ ಮಾಡಿದರು:- "ಜಗತ್ತಿನೊಳಗೆ ಪ್ರಜಾಸತ್ತೆ, ಪ್ರಜಾಸ್ವಾತಂತ್ರ್ಯಕ್ಕ ನೂತನ ಮನ್ವಂತರ ಸ್ಥಾಪನೆಗಳಾಗಿ ನಾವು ಹೋರಾಡುತ್ತಿದ್ದರೆ ಪ್ರಪಂಚದಲ್ಲೆಯೆ ಹಿಂದುಸ್ಥಾನಕ್ಕೂ ಆ ಸ್ವತಂತ್ರ್ಯವನ್ನು ಅನ್ವಯಿಸಬೇಕಾಗಿ" ಮಿ|| ಸ್ಟೈಸರ್ ಕ್ರಿಪ್ಸರವರು ಉದ್ಗರಿಸಿದರು! "ಪ್ರಜಾಸತ್ತೆಯನ್ನೆ ನಮಗೆ ನಂಬಿಗೆಯಿದ್ದರೆ, ಜರ್ಮನಿಯಂತೆಯೇ ಹಿಂದುಸ್ಥಾನದೊಳಗಿನ ಪ್ರಜಾಸತ್ತೆಯಲ್ಲಿಯೂ ನಾವು ಶ್ರದ್ಧೆಯನ್ನಿಡಬೇಕೆಂದು ಮಿ|| ಕೆಂಬೆಲ್ ಸ್ಕಿಪ್ಸನ್ನರವರು ಒತ್ತಿಹೇಳಿದರು. "ಜರ್ಮನ್ನರಿಗೆ ಬುದ್ಧಿ ಹೇಳುವ ಗೊಡವೆಗೆ ನಾವು ಹೋಗುವ ಪೂರ್ವದಲ್ಲಿ ನಮ್ಮವ ನೆಯನ್ನು ನಿರ್ಮಲಗೊಳಿಸಬೇಕ. ಪ್ರಜಾಸತ್ತೆಯ ತತ್ವಗಳು ಹಿಂದುಸ್ಥಾನಕ್ಕೂ ಅನ್ವಯಿಸುತ್ತವಾಗಿ ಹಿಂದವಾಸಿಯರಿಗೆ ನಾವು ಅಭಿವಚನ ಕೊಟ್ಟಿರಿ, ಲೋಕವೆಗಳಿಗೆ ಪ್ರಜಾಸತ್ತೆಯನ್ನು ಸ್ಥಾಪಿಸುವ ಕಾರ್ಯದಲ್ಲಿ ನನಗೆ ಸೈನ್ಯಬಲಕ್ಕೂ ಮಿನಿಲಾದ ಸಾಮರ್ಥ್ಯ ದೊರೆದೀತು." ಹೀಗೆ ಮಿ|| ಸೊರೆನ್ ಸೆನ್ಸರವರು ನುಡಿದರು. ದೊರೆಗಳ ಸಭೆಯಲ್ಲಿ ಗುರುವಾರ ಯುದ್ಧದ ಸಂಹಾನವಲೋಕವನ್ನು ಕೇಳಿಕೊಂಡಿಷ್ಟಬಳಿಕ ಹಿಂದುಸ್ಥಾನದೊಳಗಿನ ಸಮಸ್ಯೆಯನ್ನು ಬಿಡಿಸಲು ಭಾ. ಮಂತ್ರಿಗಳು ಬೇಗನೆ ಪ್ರಕಟನೆಯನ್ನು ಹೊರಡಿಸಬೇಕಾಗಿ ಸ್ಟೆಲ್ ದೊರೆಗಳು ಕೇಳಿಕೊಂಡರು. ಈ ತನಿಕ ಈ ಕುರಿತು ಸ್ಪಷ್ಟೀಕರಣವಾದದ ಬಗ್ಗೆ ವಿಜಾದವನ್ನು ವ್ಯಕ್ತಪಡಿಸಿದರು.

ಸೋಮವಾರ ಸೇರಿದ ಪಾರ್ಲಿಮೆಂಟಿನ ಸಭೆಯಲ್ಲಿ ಯುದ್ಧ-ಧ್ಯೇಯಗಳನ್ನು ಸ್ಪಷ್ಟೀಕರಿಸಬೇಕಾಗಿ ಕೂಲಿಕಾರ ಪಕ್ಷದ ಸಭಾಸದರೊಬ್ಬರು ಮುಖ್ಯ ಪ್ರಧಾನರಾದ ಚೆಂಬರಲೇನರಿಗೆ ಸೂಚಿಸಿದರು. ಫ್ರೆಂಚ ಸರಕಾರದ ಅಭಿಪ್ರಾಯ ಪಡೆದು ಈರ್ವರೂ ಕೂಡಿ ಯುದ್ಧ ಧ್ಯೇಯಗಳನ್ನು ಸ್ಪಷ್ಟಗೊಳಿಸುವ ಜಾಹೀರ ನಾಮೆಯನ್ನು ಹೊರಡಿಸತಕ್ಕದ್ದೆಂದೂ ಸಭಾಸದರು ಮೇಲ್ಕಾಣಿಸಿದ ಮಾಡಿದರು. "ಯುದ್ಧದಲ್ಲಿ ಸೆರುವ ಹೇತುಗಳು ಈ ಹಿಂದೆಯೇ ಅನೇಕಾವರ್ತಿ ಸ್ಪಷ್ಟಗೊಳಿಸಾಗಿವೆ; ಇವೆರಡೂ ಸರಕಾರಗಳಲ್ಲಿ ಆ ಕುರಿತು ಸಂದೇಹವೆನಿಲ್ಲ; ಆದರೆ, ಇನ್ನೂ ಸ್ಪಷ್ಟನಾಗಿ, ಕ್ರಮಬದ್ಧವಾಗಿ ಯುದ್ಧ ಧ್ಯೇಯಗಳನ್ನು ಪ್ರಕಟಿಸುವ ಪ್ರಸಂಗನಿರುವದೇನೆಂಬದರ ಕುರಿತು ಇವೆರೂ ಸರಕಾರಗಳು ಆಲೋಚನೆ ಮಾಡುವವು. ಮತ್ತು ಇವೆರೂ ಸರಕಾರಗಳು ಒಮ್ಮನಸ್ಸಿನಿಂದ ಪ್ರಕಟನೆಯನ್ನು ಹೊರಡಿಸುವವು." ಹೀಗೆ ಮುಖ್ಯ ಪ್ರಧಾನರಾದ ಮಿ|| ಚೆಂಬರಲೇನರು ಉದ್ಗರಿಸಿದರು.

ಗುರುವಾರ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರವರೂ, ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರೂ, ಕಾರ್ಯಕಾರಿ ಮಂಡಳದ ಸಭಾಸದರಾದ ಶ್ರೀ|| ಶಂಕರರಾವ ದೇವರವರೂ, ಶ್ರೀ|| ಜಯರಾಮದಾಸ ದೌಲತರಾಮು, ಡಾ|| ಪಟ್ಟಾಭಿಸೀತಾರಾಮಯ್ಯಾ, ಡಾ|| ಪುರುಷೋತ್ತಮ ಟಂಡನ ಸಭಾಸದರಾದ ಶ್ರೀ|| ಕಂಕರರಾವ ದೇವರವರೂ, ಶ್ರೀ|| ಜಯರಾಮದಾಸ ದೌಲತರಾಮು, ಡಾ|| ಪಟ್ಟಾಭಿಸೀತಾರಾಮಯ್ಯಾ, ಡಾ|| ಪುರುಷೋತ್ತಮ ಟಂಡನ ಸಭಾಸದರೂ ಗುರುವಾರ ಸಂಜೆ ೫ ಘಂಟೆಗೆ ಶೇಗಾಂವಿಗೆ ಹೋಗಿ ೨ ತಾಸುಗಳ ತನಕ ಮಹಾತ್ಮ ರೊಡನೆ ವಿಚಾರವಿನಿಮಯ ಮಾಡಿ ವರ್ಧಾಕ್ಕೆ ಮರಳಿ ಳಿದರು. ಶನಿವಾರ ಅಪರಾಹ್ನ ೩ ಘಂಟೆಗೆ ಪುನಃ ವರ್ಧಾಕ್ಕೆ ಹೋಗಿ ಬೇರೆ ಬೇರೆ ವಿಷಯಗಳ ಕುರಿತು ಆಲೋಚನೆ ಮಾಡಿದರು.

THE NEW TIMBER DEPOT, HONAVAR. N Kanara
Proprietor:- ***D A. Shanbhag,***
Forest Contractor.

ಯಾವತ್ತೂ ಇಮಾರತಿಗೆ, ಫರ್ನಿಚರುಗಳಿಗೆ ಬೇಕಾಗುವ ಕೊಚಿದ ಕಟ್ಟಿಗೆ ನಮ್ಮ ಡಿಪೋದಲ್ಲಿ ಯೋಗ್ಯ ದರದಿಂದ ಮಾರಾಟ ಮಾಡುತ್ತೇವೆ. ಆರ್ಡರು ಕೂಟ್ಟಲ್ಲಿ, ಆರ್ಡರಿನಲ್ಲಿ ನಮೂದಿಸಿದಂತೆ ವೇಳೆಗೆ ಸರಿಯಾಗಿ ಕಟ್ಟಿಗೆ ಪೂರೈಸಲ್ಪಡುತ್ತದೆ.

ಭಿಷಗ್ರತ್ನ ಆಯುರ್ವೇದ ವಿದ್ಯಾನ್ ಬಿ ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್. (ರಿಜಿಸ್ಟರ್ಡ)

ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದಂಲ್ಲೂ ಜಗತ್ಪ್ರಸಿದ್ಧವಾಗಿದೆ

ಶ್ರೀಕರ ಕಸ್ತೂರೀ ಮಾತ್ರೆ. [ಪೊಟ್ಟಣಕ್ಕೆ 0-1-0.

ಸುವಾಸನೆಯುಳ್ಳ ಈ ಮಾತ್ರೆಗಳು ಮಕ್ಕಳ ಮತ್ತು ದೊಡ್ಡವರ ನೆನಪಿ, ಕೆಮ್ಮು, ಅಜೀರ್ಣ, ಜ್ವರ ಮುಂತಾದ್ದಕ್ಕೆ ಸಿವ್ವಿಷಧವ. ಬೆಲೆ 0—4—0, 0—2—0.

ಶ್ರೀಕರ ಬಾಲಸಂಜೀವಿನಿ.

ಚಿಕ್ಕ ಮಕ್ಕಳ ಮಂದಜ್ವರ, ಶೀತಜ್ವರ, ಎಳವು ಇತ್ಯಾದಿ ರೋಗಗಳಿಗೆ ಸಂಜೀವನ ಬೆಲೆ 0—1—0.

ಜೊರೆಯುವ ಸ್ಥಳ:- ಹೊನ್ನಾವರ.- ಕಲ್ಯಾಣಪೂರ ಬ್ರದರ್ಸ. ಕುಮಟಾ- ದೇವಸ್ಥಾ ಆಯ್ಯ ನಾಯ್ಕ, ದಿ ನ್ಯೂ ಸಪ್ಲಾಯ ಏಜನ್ಸಿ, ದಿ ಸ್ವದೇಶಿಕ ಫಾರ್ಮಸಿ.

ನಂಜನಗೂಡು ಸದ್ವೈದ್ಯಶಾಲಾ, ಬ್ರಾಂಚ್: ರಥಬೀದಿ, ಮಂಗಳೂರು.





ಮತಿ ಪ್ರಮೂಫ ಸಂಪತ್ತರ ಆಕ್ಟೀಜ ಶಾ ಲರ್ಫ, ಸೋಮವಾರ.

ಸರ್ವಾಧಿಪತಿಗಳಿಗೊಂದು ಅರಿಕೆ.

ಸರ್ವಾಧಿಪತಿ ಲಿನ್‌ಲಿಥ್ಗೋ ದೊರೆಗಳ ಬಳಿ ನಾವೊಂದು ಅರಿಕೆ ಮಾಡಿಕೊಳ್ಳಬಯಸುತ್ತೇವೆ. ಈಗಿನ ದಿನಮಾನ ತೀರ ಕಠಿಣವಾಗಿದೆ. ಯುದ್ಧ ಪ್ರಸಂಗದ ಮೂಲಕ ಹೇಳ-ಕೇಳದ ಕಷ್ಟಕಾರ್ಪಣ್ಯ ಎಲ್ಲರಿಗೂ ಬಂದೊದಗಿದೆ. ಸರ್ವಾಧಿಪತಿ ಲಿನ್‌ಲಿಥ್ಗೋ ದೊರೆಗಳುನಿರ್ಮಲಚಿತ್ತದಿಂದ ಸಕಲ ಪರಿಸ್ಥಿತಿಯನ್ನು ಸಮಾಲೋಚಿಸಬಯಸಿದ್ದಾರಾಗಿ ತಿಳಿದು ನಮಗೆ ಸಂತೋಷವಾಗಿದೆ. ಹಿಂದುಸ್ಥಾನ ದೇಶ ವಿಶಾಲವಾದ ಜನಾಂಗ. ಪ್ರಕೃತಿಭೇದದಂತೆ ಮತಭೇದಗಳಾದರೂ ನಮ್ಮಲ್ಲಿ ಇವೇ ಇವೆ. ಮತಭೇದಗಳಂತೆ ಪಕ್ಷಭೇದಗಳೂ, ಪಂಗಡಭೇದಗಳೂ ನಮ್ಮಲ್ಲುಂಟು. ಸರ್ವಾಧಿಪತಿ ಲಿನ್‌ಲಿಥ್ಗೋ ದೊರೆಗಳು ಸಕಲ ಪಕ್ಷ-ಪ್ರಮುಖರನ್ನು ಕರಿಸಿಕೊಂಡು ಬ್ರಿಟಿಶರ ಯುದ್ಧ ಘೋರಣಕ್ಕೆ ಅನುಕೂಲವಾಗುವಂತೆ ಯುದ್ಧ-ಪರಿಸ್ಥಿತಿಯಲ್ಲಿಕೈಕೊಳ್ಳಬೇಕಾದ ಉಪಾಯಗಳನ್ನು ನಿರ್ಧರಿಸಬಯಸುತ್ತಿರಬೇಕು. ಸರ್ವಾಧಿಪತಿಗಳ ಮಟ್ಟಿಗೆ, ಸಾಮ್ರಾಜ್ಯ ಸರಕಾರದ ಮಟ್ಟಿಗೆ ಯುದ್ಧ-ಪ್ರಸಕ್ತಾರದ ಮೇಲೆಯೇ ಸರ್ವಕರ್ತವ್ಯವಿರಬೇಕೆಂಬ ಮಾತನ್ನು ನಾವು ಒಪ್ಪುತ್ತೇವೆ. ಯುದ್ಧದಲ್ಲಿ ಜಯಶಾಲಿಗಳಾಗುವದಕ್ಕಾಗಿ ಹಿಂದುಸ್ಥಾನವನ್ನು ಸಂಘಟಿಸುವ ರೀತಿ-ನೀತಿಗಳನ್ನು ಸರ್ವಾಧಿಪತಿಗಳು ಪರಿಶೋಧಿಸುತ್ತಿದ್ದಾರೆ. ಸಾಮ್ರಾಜ್ಯ ಸರಕಾರವಾದರೂ ಯುದ್ಧ-ಪ್ರಸಕ್ತಾರದ ದೆಸೆಯಿಂದಲೇ ಸರ್ವಾಧಿಪತಿಗಳಿಗೆ ಲೋಕಪ್ರಮುಖರೊಡನೆ ವಿಚಾರ ಮಾಡುವ ಅಧಿಕಾರವನ್ನು ತೊಟ್ಟಿಟ್ಟಿದೆ.

ಆದರೆ, ಹಿಂದುಸ್ಥಾನದ ದೃಷ್ಟಿಯೇ ಬೇರೆ. ಹಿಂದುಸ್ಥಾನದ ಕಟಾಕ್ಷ ಪೂರ್ಣ ಸ್ವಾತಂತ್ರ್ಯದ ಮೇಲೆ! ಜಗತ್ತಿನೊಳಗಿನ ಘಟ್ಟಿಗಳಲ್ಲಿ ಹಿಂದುಸ್ಥಾನವು ಸ್ವಪಕೋಷದಿಂದ ಸಹಕರಿಸಬೇಕಾದರೆ ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು; ಆಧೀನ ರಾಜ್ಯವೆಂದು ಈಗ ಹಿಂದುಸ್ಥಾನದ ಗಣನೆಯಾಗುತ್ತಿದೆ. ಈಗ ಅಂತರ್‌ರಾಷ್ಟ್ರೀಯ ಲೋಕದೊಳಗೆ ಹಿಂದುಸ್ಥಾನಕ್ಕೆ ಸ್ಥಾನ-ಮಾನಗಳಲ್ಲ. ಸಾಮ್ರಾಜ್ಯ ಸರಕಾರವನ್ನು ಹೊರ್ತುಪಡಿಸಿ ಅಂತರ್‌ರಾಷ್ಟ್ರೀಯ ಘಟನೆಗಳ ಕುರಿತು ಸ್ವತಂತ್ರ ಮತ ಕೊಡುವ ಅಧಿಕಾರ ಹಿಂದುಸ್ಥಾನಕ್ಕಿಲ್ಲ. ಯುದ್ಧಮಾನ ರಾಷ್ಟ್ರಗಳಲ್ಲಿ ಈವಾಗ ಹಿಂದುಸ್ಥಾನದ ಗಣನೆಯಾಗುತ್ತದಷ್ಟೇ! ಆದರೆ, ಹಿಂದುಸ್ಥಾನವು ಈಗ ಯುದ್ಧದಲ್ಲಿ ಹ್ಯಾಗೆ ಸೇರಿತೆಂಬದೊಂದು ವಿಚಾರವಾಗತಕ್ಕ ವಿಷಯ. ಬ್ರಿಟಿಶ ಮುಖ್ಯ ಪ್ರಧಾನರಾದ ಚೆಂಬರಲೇನರವರು ಹೊರಡಿಸಿದ ಯುದ್ಧ-ಘೋಷಣೆಯೇ ನಮ್ಮ ಹಿಂದುಸ್ಥಾನದ ಯುದ್ಧಘೋಷಣೆ! ಆದರೆ, ಬ್ರಿಟಿಶ ಮಿತ್ರಸಹಕಾರಿಗಳು ಆ ಪ್ರಕಾರ ಯುದ್ಧದಲ್ಲಿ ಸೇರ್ದಿಯಾಗಲಿಲ್ಲ. ಇಂಗ್ಲಂಡದ ಬಳಿಯಲ್ಲಿರುವ ಆಯರ್ಲಂಡ ದೇಶವು ತಟಸ್ಥ ವೃತ್ತಿಯನ್ನೇ ತಳೆದಿದೆಂದು ಹೇಳಿದಲ್ಲಿಕ, ನಮ್ಮ ಹಿಂದುಸ್ಥಾನ ದೇಶಕ್ಕೆ ಮಾತ್ರ ಆಂಥ ಅಧಿಕಾರವಿರದಿರುವದು ವಿಶಂಗತವಷ್ಟವೇ?

ಯುದ್ಧ ಸಾಮಾನ್ಯ ವಿಷಯವಲ್ಲ; ವ್ಯಾಪಾವಾಯದ ವಿಷಯವದು! ಇಂಥ ಕ್ರಮವನ್ನು ಕೈಕೊಳ್ಳುವಾಗ, ಜನಾಂಗ-ಮತವನ್ನು ಅಲಕ್ಷಿಸಿ ಯುದ್ಧದಲ್ಲಿ ಇಡೀ ಜನಾಂಗವನ್ನು ಸೇರಿಸುವದು ೨೦ನೇ ಶತಮಾನದಲ್ಲಿ ತೀರ ಅಸಮರ್ಥನೀಯವಾದುದು. ಹಿಂದುಸ್ಥಾನದ ಸಹಕಾರವನ್ನು ಹೃತ್ಪೂರ್ವಕವಾಗಿ ಸಾಮ್ರಾಜ್ಯ ಸರಕಾರವು ಬಯಸುತ್ತಿದ್ದರೆ, ಸಾಮ್ರಾಜ್ಯ ಸರಕಾರವು ನಿರ್ಣಾಯಕ ಅಧಿಕಾರವನ್ನು ಹಿಂದುಸ್ಥಾನಕ್ಕೆ ಹರ್ಷದಿಂದ ಒಪ್ಪಿಸುವದು ಏಟಿತ. ಲೋಕಸ್ವಾತಂತ್ರ್ಯಕ್ಕಾಗಿ ಬ್ರಿಟಿಶರು ಬಿಡ್ಡನ್ನೆಸೆವಾಗ, ಲೋಕಸ್ವಾತಂತ್ರ್ಯ ರಕ್ಷಣೆಯಾಗುವಂತೆ ಜಗತ್ತಿನ ಪುನರ್ಘಟನೆಯನ್ನು ಮಾಡಹೊರಟಾಗ ವಿಶಾಲ ಹಿಂದೀಶನನ್ನು ಹಿಂದಿನಂತೆ ಮುಂದಿಯೂ ಅತಂತ್ರವಾಗಿ ಕಾಪಾಡಲಾಗದು; ಕಾಪಾಡುವ ಆಭಿಲಾಷೆ ಹಿಡಿಯುವದು ತೀರ ವಿಚಿತ್ರವಾದ ಸಂಗತಿ. ಸರ್ವಾಧಿಪತಿಗಳು ಈ ದೃಷ್ಟಿಯನ್ನು ಸಂಪೂರ್ಣವಾಗಿ ಅಲ್ಲಗಳೆದು ಲೋಕಸ್ವಾತಂತ್ರ್ಯದ ಪಾರ್ಶ್ವಭೂಮಿಯಲ್ಲಿ ಹಿಂದುಸ್ಥಾನದ ಪಾರತಂತ್ರ್ಯ-ಬ್ರಿಟಿಶ್-ತಂತ್ರ ಸರಿಹೋಲು-ತ್ವದೆನೆಂಬದನ್ನು ದಿಗ್ಭ್ರಾಂತಿಯಿಂದ ವಿಚಾರ ಮಾಡಬೇಕು. ನಿರ್ಮಲ ಮನಸ್ಸಿನಿಂದಲೂ, ನಿರ್ವಿಕಾರ ಚಿತ್ತದಿಂದಲೂ, ನಿರಭಿಮಾನದಿಂದಲೂ, ನಿಃಸ್ವಾರ್ಥದಿಂದಲೂ ಪರಾಂಬರಿಸಬೇಕಾಗಿ ನಾವು ಅರಿಕೆ ಮಾಡಿಕೊಳ್ಳುತ್ತೇವೆ.

ಬ್ರಿಟಿಶರ ಮೇಲೊದಗಿದ ಯುದ್ಧ ಸಂಕಟಗಳನ್ನು ಹಿಂದೀಯರು ಅಶ್ರಯಿಸಿ ಸ್ವದೇಶ-ಸ್ವತಂತ್ರತ್ವವನ್ನು ಬ್ರಿಟಿಶರ ಕಡೆಯಿಂದ ಸೆಳಕೊಳ್ಳಬಯಸುತ್ತಿಲ್ಲವೆಂದೂ, ಆರತ್ಯಾಲದಲ್ಲಿ ಈ ಪ್ರಕಾರ ಆಡ್ಡಗಟ್ಟುವದು ಶಿಷ್ಟಸಮ್ಮತವಲ್ಲವಾಗಿಯೂ ನಮಗೆ ಹೇಳಕೋಣವಾಗುತ್ತದೆ. ಹಿಂದುಸ್ಥಾನದೊಳಗೆ ಪಕ್ಷ-ಪಂಗಡಗಳಿರುವದರಿಂದ ಸಂಪೂರ್ಣ ಸ್ವಾತಂತ್ರ್ಯ-ಪ್ರಶ್ನೆ ಸಂಕೀರ್ಣವಾದದ್ದೆಂದೂ, ಯುದ್ಧಗಡಿಬಿಡಿಯಲ್ಲಿನಿರ್ಮಲಚಿತ್ತದಿಂದ, ಪ್ರಶಾಂತ ಬುದ್ಧಿಯಿಂದ ವಿಚಾರ ಮಾಡುವದು ಅಸಾಧ್ಯವೆಂದೂ ಪ್ರತಿವಾದಿಸೋಣವಾಗುತ್ತದೆ. ಈ ವಿಚಾರರಾಹಿತ್ಯವನ್ನು ನಾವು ಈ ಹಿಂದೆ ಕೇಳಿದ್ದೇವೆ, ಕೇಳುತ್ತ ನಂದಿದ್ದೇವೆ; ಕೇಳಿ ಕೇಳಿ ಬೇಸರ ಬಂದಿದೆಂದು ಹೇಳಿದರೆ ವಸ್ತುಸ್ಥಿತಿಯ ವಿಪರ್ಯಾಸವಾಗದೆಂದು ನಮ್ಮ ಭಾವನೆ. ಬ್ರಿಟಿಶರಿಗೆ ಹಿಂದುಸ್ಥಾನದ ಸಹಕಾರ ಸ್ವಸಂತೋಷದಿಂದ ಬೇಕೇನೆಂಬದೇ ಪ್ರಶ್ನೆ. ಹಾಗೆ ಬೇಕಾಗಿದ್ದರೆ, ಹಿಂದುಸ್ಥಾನದ ಸಂತೋಷದ ಮೇಲೆ ಕಟಾಕ್ಷವಿದ್ದರೆ ಹಿಂದುಸ್ಥಾನವನ್ನು ಮೊಟ್ಟಮೊದಲು ಸ್ವತಂತ್ರಗೊಳಿಸಬೇಕೆಂಬ ಮಾತು ತಂತಾನೇ ಸಿದ್ಧವಾಗುತ್ತದೆ. ಸ್ವಾತಂತ್ರ್ಯದ ಅಧಾವದಲ್ಲಿ, ಪಾರತಂತ್ರ್ಯದ ಭಾವದಲ್ಲಿ ಸ್ವಸಂತೋಷ, ಸ್ವಯಂಸ್ಫೂರ್ತಿ, ಸ್ವ-ಪ್ರೇರಣೆಗಳು, ಸ್ವ-ಅಂತಃಕರಣದಲ್ಲಿ ಉಂಟಾಗುವದು ಅಸಂಭವ.

ಸರ್ವಾಧಿಪತಿಗಳು ನಿಸರ್ಗ ನಿಯಮಗಳನ್ನು ಉಲ್ಲಂಘಿಸುವ ಹವ್ಯಾಸ ಹಿಡಿಯಲಾಗದು. ಮೇಲಾಗಿ, ಹಿಂದುಸ್ಥಾನದೊಳಗೆ ಮಹಾತ್ಮರ ಪುಣ್ಯ ಪ್ರಭಾವದಿಂದ ದೇಶಜಾಗೃತಿಯುಂಟಾಗಿದೆ. ಸ್ವಾತಂತ್ರ್ಯದ ಸ್ಫೂರ್ತಿ ಜನಾಂಗದೊಳಗೆ ಹೆಚ್ಚಿಕೊಂಡಿದೆ. ಅತಂತ್ರರಾಗಿ, ಪರತಂತ್ರರಾಗಿ ಯಾವದೊಂದು ಕಾರ್ಯವನ್ನು ಪುರಸ್ಕರಿಸಲು ಜನಸಾಮಾನ್ಯರು ಒಡಂಬಡುವರಲ್ಲ. ಜನಸಾಮಾನ್ಯರ ಸ್ವಾತಂತ್ರ್ಯಸ್ಫೂರ್ತಿಯನ್ನು ನಿರ್ಬಂಧಿಸಿಕೊಂಡು ಯುದ್ಧ-ಪುರಸ್ಕಾರಕ್ಕಾಗಿ ಅವಶ್ಯವುಳ್ಳ ಯಾವತ್ತೂ ಸಾಹಿತ್ಯಗಳನ್ನು ಪೂರೈಸಿಕೊಳ್ಳಹೋದರೆ, ಸ್ವದೇಶ-ಸ್ವಾತಂತ್ರ್ಯ ಪುರಸ್ಕರಕ್ಕಾಗಿ ಸರಕಾರಕ್ಕೆ ನಿರುಪಾಯದಿಂದ ಇದಿರಾಗಬೇಕಾದೀತು. ಸ್ವಾತಂತ್ರ್ಯವೇ ಸಮಸ್ತ ಜೀವಕೋಟಿಗೆ ಪರಮ ಸಾಧ್ಯವಾದಾಗ, ಸ್ವಾತಂತ್ರ್ಯಸ್ಫೂರ್ತಿಯುಳ್ಳ ಮಾನವನು ಪರತಂತ್ರನೆಂಬ ಭಾವನೆಯಿಂದ ಯಾವದೊಂದು ಕಾರ್ಯದಲ್ಲಿ ಹೃತ್ಪೂರ್ವಕ ನಿರವಾಗನೆದು ಅಸ್ವಾಭಾವಿಕವಾದ ಮಾತು. ಸರ್ವಾಧಿಪತಿಗಳು ಈ ವಿಷಯವನ್ನು ಸುದೀರ್ಘವಾಗಿ ಪರಾಂಬರಿಸಬೇಕೆಂದು ನಾವು ಅಂತಃಕರಣಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇವೆ. ಲೋಕದೊಳಗೆ ನಡೆಯುವ ಲೋಕಸ್ವಾತಂತ್ರ್ಯದ ಸಮರದಲ್ಲಿ ಸ್ವಾತಂತ್ರ್ಯದ ಅವೇಶದಿಂದಲೂ, ಸ್ವಾತಂತ್ರ್ಯದ ಉತ್ಸಾಹದಿಂದಲೂ ಹೋರಾಡಲು ಹಿಂದವಾಸಿಗಳಿಗೆ ಅನುಕೂಲ್ಯಗಳನ್ನು ಒದಗಿಸಿ ಕೊಡಬೇಕೆಂದೇ ನಾವು ಅರಿಕೆ ಮಾಡಿಕೊಳ್ಳುತ್ತೇವೆ. ಸಮಯ-ಸಾಧಕರು, ಆತ್ಮಗೌರವಾಭಿಲಾಷಿಗಳು ರಾಷ್ಟ್ರೀಯ ಸಭೆಯ ಮೇಲೆ ಬೇರೆ ಬೇರೆ ಆರೋಪಗಳನ್ನು ಹೊರಿಸಬಹುದು. ಅವುಗಳ ವಿಚಾರ ಇದಿಗ ಅನವಶ್ಯಕ. ಸುಪ್ತಿಯ ಸ್ವಾತಂತ್ರ್ಯಕ್ಕ ಸಮುಸ್ಯೆಯ ಮಟ್ಟಿಗೆ ರಾಷ್ಟ್ರೀಯ ಸಭೆಯನ್ನು ಬ್ರಿಟಿಶ ಸರಕಾರವು ಮನ್ನಿಸಲೇ ಬೇಕು; ಆ ಪ್ರಕಾರ ಮನ್ನಣೆ ಹೊಂದುವಷ್ಟು ಪರಾಕ್ರಮವನ್ನೂ ಸಾಹಸವನ್ನೂ ರಾಷ್ಟ್ರೀಯ ಸಭೆಯು ಲೋಕಕ್ಕೆ ಸಿದ್ಧಪಡಿಸಿರುವೆದೆಂದು ನಾವು ನಿಃಸಂದೇಹವಾಗಿ ಹೇಳಬಲ್ಲೆವು. ಬೇರೆ ಬೇರೆ ಪಕ್ಷ-ಪಂಗಡಗಳಿಗೆ ಕಟ್ಟಿಕೊಂಡು ಬ್ರಿಟಿಶ ಸರಕಾರವು ರಾಷ್ಟ್ರೀಯ ಸಭೆಯನ್ನು ಅಲಕ್ಷಿಸಿದರೆ ಯುದ್ಧ ಕಾರ್ಯದಲ್ಲಿ ಹಿಂದುಸ್ಥಾನದ ಸಂಚಯ ಸಿಗುವದು ದುರ್ಘಟವಾಗುವದೆಂದು ನಾವು ಖಂಡಿತವಾಗಿ ಹೇಳಬಲ್ಲೆವು. ಅಷ್ಟೇಕೆ, ಯುರೋಪ ಖಂಡದಲ್ಲಿ ಹಿಟ್ಲರನೊಡನೆ ಲೋಕ-ಸ್ವಾತಂತ್ರ್ಯಕ್ಕಾಗಿ ಬ್ರಿಟಿಶರು ಕಾದಾಡುವಾಗ, ಹಿಂದುಸ್ಥಾನದೊಳಗೆ ಲೋಕಸ್ವಾತಂತ್ರ್ಯ-ಭಕ್ಷಣಕ್ಕಾಗಿ ರಾಷ್ಟ್ರೀಯ ಸಭೆಯೊಡನೆ ಹೋರಾಡುವ ಪ್ರಸಂಗ ಬಂದೀತು. ವರ್ಷಾದೊಳಗಿನ ಧ್ವಜವಂದನ ಸಮಾರಂಭದ ಸಮಯ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರವರು ಸರಕಾರಕ್ಕೂ ರಾಷ್ಟ್ರೀಯ ಸಭೆಗೂ ಒಡಂಬಡಿಕೆಯಾಗಲೆಂದು, ಒಡಂಬಡಿಕೆಯಾಗುವದೆಂದು ಹಾರೈಸುತ್ತಿರುವಾಗಲೇ ರಾಷ್ಟ್ರವು ಸೋರ ಸಂಗ್ರಾಮಕ್ಕೆ ಸಿದ್ಧರಬೇಕಾಗಿ ರಾಷ್ಟ್ರಕ್ಕೆ ಮುಂಜಾಗ್ರತೆ ಕೊಟ್ಟ

ದ್ದಾರೆ. ಅಂಥ ಪ್ರಕಂಗವನ್ನೆಲ ನನ್ನ ಹಿಂದುಸ್ಥಾನದ ಮೇಲೆ ಕರದಂತೆ ನಾವು ಸರ್ವಾಧಿಪತಿಗಳಿಗೆ ವಿನಯ ಪೂರ್ವಕ ಅರಿಕೆ ಮಾಡಿಕೊಳ್ಳುತ್ತೇವೆ. ಲಂಡನ್ನಿನ 'ಟೈಮ್ಸ್', 'ಅಬ್ಸರ್ವರ್'ಮೆ ಪೋಸ್ಟ್', 'ಸ್ಕಾಟ್ಸ್‌ಮನ್' ಮೊದಲಾದ ಪತ್ರಿಕೆಗಳು ಹಿಂದುಸ್ಥಾನ ನೊಳಗಿರುವ ಪತ್ರ-ಪಂಗಡಗಳನ್ನೂ, ತೀವ್ರ ಮತಭೇದಗಳನ್ನೂ ಉಲ್ಲೇಖಿಸಿ ರಾಷ್ಟ್ರೀಯ ಸಭೆಯನ್ನು ಹಳಿಯುತ್ತವೆ. ರಾಷ್ಟ್ರೀಯ ಸಭೆಯ ಅಭಿಪ್ರಾಯದ ಮೇಲೆಗೆ ಹಿಂದುಸ್ಥಾನದ ರಾಜ್ಯಧಾರದಲ್ಲಿ ತಿದ್ದುಪಡಿ ಮಾಡಿದರೆ ಲೋಕಕ್ಕೆ ಅನರ್ಥವಾಗುವದೆಂದು ಭೀತಿ ಪಡುತ್ತವೆ. ಇಂಥ ಮಾಟ ಈಗ ನತೆಯಲಾರದೆಂದು ನಾವು ಬ್ರಿಟಿಶರಿಗೆ ಎಚ್ಚರಿಕೆ ಕೊಡುತ್ತೇವೆ. ಕುಟಿಲ ರಾಜನೀತಿಯ ಮರ್ಮ ಈವಾಗ ಹಿಂದವಾಸಿಯರಿಗೆ ಸ್ಪಷ್ಟವಾಗಿದೆ. ಸರ್ವಾಧಿಪತಿಗಳು ಈ ದುರುದ್ದೇಶ ಗಳಿಗೆ ಬಲಿಬೀಳಲಾಗದೆಂದು ನಾವು ಈ ಮೂಲಕ ತಿಳಿಸಬಯಸುತ್ತೇವೆ.ರಾಷ್ಟ್ರೀಯಸಭೆ ಹಿಂದೀಜನಾಂಗದ ಪ್ರತಿನಿಧಿಕ ಸಂಸ್ಥೆಯಲ್ಲವೆಂದು ನಾವು ಗೃಹಿಸಿ ತ ಹಿಡಿದಾಗ್ಯೂ, ಪೋಲಂಡದ ಸ್ವಾತಂತ್ರ್ಯಕ್ಕಾಗಿ ಕಾದಾಡಲು ನಿಮಂತ್ರಿಸುವ ಪುಣ್ಯಾತ್ಮರೂ ಪರೋಪ ಕಾರಿಗಳೂ ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಅಲ್ಲ ಗಳೆಯಬೇಕೆಂದು ಸಿದ್ಧವಾಗುವದಿಲ್ಲ; ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನೆರ್ಪಿಸಬೇಕೆಂದೇಸಿದ್ಧವಾಗುತ್ತದೆ.ವಿಲ್ಲಿಯ 'ಹಿಂದುಸ್ಥಾನ್‌ಟೈಮ್ಸ್' ಪತ್ರಿಕೆಕರು ನುಡಿದಂತೆ, ಸ್ವಾತಂತ್ರ್ಯವನ್ನೆರ್ಪಿಸಿದಬಳಕ,ಸ್ವಾತಂತ್ರ್ಯಯೋಜನೆ ಯಲ್ಲಿ ಯೊಕ್ಕಾರಿಗೆ, ಎಷ್ಟೆಷ್ಟು ಅಧಿಕಾರವನ್ನಿತ್ತು ಲೋಕರಕ್ಷಣೆ, ಲೋಕ-ಸಂತೋಷ ಸಾಧಿಸಬೇಕೆಂಬ ವಿಚಾರ ಮಾಡಬೇಕಲ್ಲದೆ ಅದಕ್ಕೂ ಪೂರ್ವದಲ್ಲಿ ಈ ವಿಷಯಗಳು ವಿಚಾರಕ್ಕೆಯಲ್ಲಿ ಸೇರ್ಪಡೆಯಾಗುವದಿಲ್ಲ; ಸರ್ವಾಧಿಪತಿಗಳು ಸುಜ್ಞರಿದ್ದಾರೆ, ಪ್ರಾಜ್ಞರಿದ್ದಾರೆ, ವ್ಯವಹಾರಜ್ಞರಿದ್ದಾರೆ. ರಾಷ್ಟ್ರೀಯ ಸಭೆಯ ಸ್ವಾ ನ-ಮಾನಗಳನ್ನೂ, ಕರ್ತೃತ್ವವನ್ನೂ ಅನುಭವಿಸಿದ್ದಾರೆ. ಅದರಿಂದ ಸರ್ವಾಧಿಪತಿಗಳು ಹಿಂದುಸ್ಥಾನದ ಜೊತೆಗೆ ಸ್ವಾತಂತ್ರ್ಯಸ್ಥಾಪನೆ ಮಾಡುವಂತೆ ಸಾಮ್ರಾಜ್ಯ ಸರಕಾರಕ್ಕೆ ಸಲಹೆ ಕೊಟ್ಟು ಲೋಕಸ್ವಾತಂತ್ರ್ಯದ ಸಂಗ್ರಾಮದಲ್ಲಿ ಹಿಂದವೀರರು ಉಳಿದುಸದಿರದ ಹೋರಾಡುವಂತೆ ಸ್ಥಿತಿಂಕರ ಒದಗಿಸಿಕೊಡಬೇಕಾಗಿ ನಾವು ಈ ಮೂಲಕ ಅರಿಕೆ ಮಾಡಿಕೊಳ್ಳುತ್ತೇವೆ.

ಸದ್ಯಕ್ಕೆ ಸಂಧಾನದ ಆಶೆಯಿಲ್ಲ!

[ನಿರೀಕ್ಷಕನು ಬರೆದುದು.]

ಸದ್ಯಕ್ಕೆ ಸಂಧಾನದ ಆಶೆಯಿಲ್ಲವೆಂದೇ ನನ್ನ ಎಣಿಕೆ ! ಹಿಟ್ಲರನು ಆಕ್ರಮಿಸಿದ ಯಾವತ್ತೂ ಪ್ರದೇಶ ಕದೋಗಿದ ಒಮ್ಮೆಲೇ ಅತನು ಹಿಂತಿರುಗಬೇಕೆಂದೂ ಇನ್ನು ಮುಂದೆ ಯುದ್ಧ ಮಾಡಬಿಕ್ಕಿಲ್ಲವೆಂಬ ಹೊಣೆ ಕೊಡಬೇಕೆಂದೂ ಪಾರ್ಲಿಮೆಂಟಿನಲ್ಲಿ ಶುಕ್ರವಾರ ಬ್ರಿಟಿಶ ಮಂತ್ರಿಪ್ರಧಾನನಾದ ಮಿ|| ಜೆಂಬರ್ಲೇನರವರು ಸ್ಪೋಟಣೆ ಮಾಡಿದ್ದಾರೆ! ಲೋಕದೊಳಗಿನ ಸಮಸ್ತ ಚಿಕ್ಕ ಚಿಕ್ಕ ಜನಾಂಗಗಳ ಸ್ವಾತಂತ್ರ್ಯವನ್ನು ಸಕಲ ಪರಿಸ್ಥಿತಿಯಲ್ಲಿಯೂ ಕಾಪಾಡುತ್ತೇನೆಂದು ಹಿಟ್ಲರನು ಹೊಣೆ ಕೊಡಬೇಕಂತೆ! ಹಿಟ್ಲರನ ಮಾತಿನ ಮೇಲೆ ಚೆಂಬರಲೇನರಿಗೆ,ನಂಬಿಕೆ ಬ್ಲನಂತೆ! ಕೊಟ್ಟ ವಚನಗಳನ್ನು ಅತನು ಪಾಲಿಸುವನೆನ್ನಲಂತೆ! ಯಾರಿಗೆ ಹೇಗೆ ಹೊಣೆ ಕೊಡಬೇಕು? ಎಂಬ ಸಂಗತಿಯೇ ನನಗೆ ತಿಳಿಯಲೊಲ್ಲದು. ಹಿಟ್ಲರನು ಹೊಣೆ ಕೊಡುವ ಬಗೆ ಹೇಗೆ? ಮೊಣಕೈಂತೆ ನಡಕೊಳ್ಳುವಿದ್ದಲ್ಲಿ ಅತನಿಗೆ ಶಾಸನ ಮಾಡುವ ಬಗೆ ಹೇಗೆ? ಹಿಟ್ಲರನ ಮಾತಿನ ಮೇಲೆ ಬ್ರಿಟನಿಂಗೆ ಅಷ್ಟಾಂಬಿಗೆಯಾದರೆ ಜರ್ಮನ್ ಜನಾಂಗದ ಸದ್ವರ್ತನದ ಬಗ್ಗೆ ಹಿಟ್ಲರನು ಯಾರ ಮಾತು ಕೊಡಬೇಕು? ಇವೇ ಮುಂತಾದ ವಿಷಯಗಳನ್ನು ವೈಪಾರಿಕ ಚೆಂಬರಲೇನರು ಸ್ಪಷ್ಟ ಮಾಡಲಿಲ್ಲ. ನಂದಿದ ಪೋಲಂಡದ ವಿಭಾಗನವನ್ನು ಜರ್ಮನ್‌ರು ಪತ್ಯತ್ತಿ ಪ ಪೂರ್ವಕವಾಗಿ ಕಾರಬೇಕಾದರೆ, ರುಶ್ಯರು ಪಡೆದ ಪೋಲಂಡದ ವಿಭಾಗದ ಗತಿಯೇನು? ರುಶ್ಯರು ಗೆದ್ದ ಪೋಲಂಡ ಅವರಿಗೇ ದಕ್ಕಬೇಕೆಂದು ಜೆಂಬರಲೇನರ ಅಭಿಪ್ರಾಯವುಂಟೇ? ಇದೇನೊ ನನಗೆ ತಿಳಿಯದ ಮಾತು ! ರುಶ್ಯರಿಗೊಂದು ನ್ಯಾಯ, ಜರ್ಮನ್‌ರಿಗೊಂದು ನ್ಯಾಯ! ಹೀಗೆ ನ್ಯಾಯ-ಭೇದವಾಗುವ ಬಗೆ ಹೇಗೆ? ನ್ಯಾಯವಂತ ಪರೋಪಕಾರಿ ಬ್ರಿಟಿಶ ರಿಗೆ ಇದು ಉಚಿತವೇ ಹೇಗೆ? ಎಂಬ ವಿಷಯಗಳನ್ನು ನಾನು ಚರ್ಚಿಸಬಯಸುವದಿಲ್ಲ ಜೆಂಬರಲೇನರ ಭಾಷಣದಿಂದ ಬ್ರಿಟಿಶರಿಗೆ ಸಂಧಾನ ಮಾಡಿಕೊಳ್ಳುವ ಆಶೆಯಿಲ್ಲವೆಂದು ಜರ್ಮನ್ ಸರಕಾರದ ಅಭಿಪ್ರಾಯ ವಾಗಿ ಯುದ್ಧ ಮುಂದರಿಸುವದಕ್ಕಾಗಿ ತಕ್ಕ ಉಪಾ

ನ್ನು ಹಿಟ್ಲರನು ಕೈಕೊಳ್ಳುತ್ತಿದ್ದಾನೆಂತೆ! ರುಶ್ಯರು ಸಂಧಿ-ಸಮರಗಳನ್ನು ಅಲಕ್ಷಿಸಿ ತಮ್ಮ ರಾಜಕಾರಣವನ್ನು ಕಮ್ಯುನಿಸ್ಟ್ ಸುಸೂತ್ರವಾಗಿ ನಡಿಸಕೊಡಗಿದ್ದಾರೆ. ರುಶ್ಯ ದೇಶದ ಮುಂಚಿನ ರಾಜಧಾನಿಯಾದ ಲೆನಿನ್‌ಗ್ರೇಡ ಬಂದರ ಬಾಲ್ಟಿಕ್ ಸಮುದ್ರದ ಮೇಲಿದ್ದು, ಅಲ್ಲಿಂದ ಉತ್ತರ ಸಮುದ್ರಮಾರ್ಗವಾಗಿ ನೈತಕರಿಪರಿಕ್ಕೆ ಲಿಥುಯಾನಿಯಾ, ಲಟ್ವೀವಿಯಾ, ಎಸ್ತೋನಿಯಾ, ಫಿನ್‌ಲೆಂಡ ಈ ನಾಲ್ಕು ಚಿಕ್ಕ ಚಿಕ್ಕ ಜನಾಂಗಗಳು ಅತ್ತ ಬರುತ್ತವೆ. ರುಶ್ಯರು ಲಿಥುಯಾನಿಯಾ, ಲಟ್ವೀವಿಯಾ, ಎಸ್ತೋನಿಯಾ ಈ ಮೂರು ಜನಾಂಗಗಳೊಡನೆ ಕರಾರು ಮಾಡಿಕೊಂಡು, ಆ ಜನಾಂಗಗಳ ಸ್ವಾತಂತ್ರ್ಯವನ್ನು ಅಪಹರಿಸಿಕೊಂಡಿದ್ದಾರೆ. ಈ ಕರಾರಿನಂತೆ ಎಸ್ತೋನಿಯಾದೊಗಿನ ಜೆಬಲ್ ಒಮ್ಸೆಲ, ದಾಗೋ, ಬಾಲ್ಟಿಷ್ ದ್ವೀಪಗಳೆಲ್ಲವೂ ಬಂದರಗಳೆಲ್ಲವೂ ಗಿ ಲಕ್ಷಕ್ಕೆ ವಿಷ್ಟಿ ರುಶ್ಯರು ಸೈನ್ಯಗಳನ್ನಿಟ್ಟಿದ್ದಾರೆ. ಲಿಥುಯಾನಿಯಾ ದೇಶ ತೀರ ಬಡಬಿದ್ದ ಸ್ಥಲೀಕ. ರುಶ್ಯರೊಡನೆ ಯಾವದೇ ಕರಿತು ಇವರ ಆಕ್ಷೇಪಿಸಲಿಲ್ಲ; ರುಶ್ಯರು ವಿಲ್ನಾ ಬಂದರ ಬೇಕೆಂದರು; ಅಘಿಪ್ರಾಯಾನಿಯಾದವರು ಒಪ್ಪಿಕೊಂಡರು! ತಮಗೆ ಇನ್ನು ಮುಂದೆ ಪರಜಕ್ರಮದಿಂದ ರಕ್ಷಿಸಬೇಕಾಗಿ ಪ್ರಾರ್ಥಿಸಿ ಕೊಂಡರು! ಅಂದ ಮೇಲೆ ಲಿಥುಯಾನಿಯಾ ದೇಶ ಸಂಪೂರ್ಣ ರುಶ್ಯರ ಸ್ವಾಧೀನವಾದಂತೆಯೇ! ಆ ಮೇಲೆ ಫಿನ್‌ಲೆಂಡ ದೇಶದ ಬಾರಿ ಬಂತು! ಫಿನ್‌ಲೆಂಡ ದೇಶವು ಒಮ್ಮೆಲೇ ರುಶ್ಯರ ಸ್ವಾಧೀನವಾಗಲೊಡಂಬ ಡಲಿಲ್ಲ; ಸಂಗ್ರಾಮದ ತಯಾರಿ ನಡಿಸಿತು! ಫಿನ್‌ಲೆಂಡದಿಂದ ರಾಯಭಾರಿಯನ್ನು ಮೊಸ್ಕೋಕ್ಕೆ ರುಶ್ಯ ಸರಕಾರವು ಕಡಿಸಿಕೊಂಡು ಸುದೀರ್ಘವಾಗಿ ಚರ್ಚೆ ನಡಿಸಿತು. ಫಿನ್‌ಲೆಂಡದ ಸ್ವಾತಂತ್ರ್ಯವನ್ನು ಆಪಹರಿಸಲೆಳಸಿದರೆ ಕೆಂಪ ಕೆಟ್ಟಿಬ್ಬೂದೀತೆಂದು ಅಮೇರಿಕೆಯ ಅಧ್ಯಕ್ಷ ರೂಯ್ಸವೆಲ್ಟರು ರುಶ್ಯ ಸರಕಾರಕ್ಕೆ ತಿಳಿಸಿದರಂತೆ! ಡೆನ್ಮಾರ್ಕ, ನೊರ್ವೇ, ಸ್ವೀಡನ್ ಮೊದಲಾದ ಸರಕಾರಿಗಳು ಫಿನ್‌ಲೆಂಡದ ಸ್ವಾತಂತ್ರ್ಯವನ್ನು ಭಂಗಪಡಬಾರದಾರದಾಗಿ ರುಶ್ಯರಿಗೆ ವಿನಂತಿ ಮಾಡಿಕೊಂಡವು. ಫಿನ್‌ಲೆಂಡದಲ್ಲಿ ರುಶ್ಯ ಸರಕಾರ ದೊಡನೆ ಯುದ್ಧ ಹೂಡುವ ತಯಾರಿ ನಡಿಸಲ್ಪಟ್ಟಿತು. ಆದರೆ ಫಿನ್‌ಲೆಂಡ ಸರಕಾರವು ವಿರೋಧಿಕುವದಾಗಿ ನಾನು ಎಣಿಸುವದಿಲ್ಲ. ಫಿನ್‌ಲೆಂಡದೊಗೆ ಒಡಂಬಡಿಕೆಯಾದ ಸಾಧಾರ ಸುದ್ದಿ ಇನ್ನೂ ಬರಲಿಲ್ಲವೆನೇೋ ಅಹುದು! ಅದರೂ ಆಮೇಲೆಗೆ ನಂಬಿಕೊಂಡು ಫಿನ್‌ಲೆಂಡ ಸರಕಾರವು ಬಲಾಢ್ಯ ರುಶ್ಯರೊಡನೆ ಯುದ್ಧ ಹೂಡುವೆಂದು ನಾನೆನು ಎಣಿಸುವದಿಲ್ಲ. ರುಶ್ಯರ ಸೂಚನೆಗಳನ್ನು ಫಿನ್‌ಲೆಂಡವು ರಾಯಭಾರಿಗಳು ಆಲೋಚಿಸಿ, ಅವಕ್ಕೆ ಒಪ್ಪಿಕೊಂಡರಾಗಿ ಬರ್ಲಿನ್‌ದಿಂದ 'ರ್ಯೂಟರ್' ಸುದ್ದಿಗಾರರು ಮೊನ್ನೆ ತಿಳಿಸುತ್ತಾರೆ. ಮೊಸ್ಕೂದಿಂದ ಇಂದು-ನಾಳೆ ಸಂಧಿಯ ಪ್ರಕಟಣೆ ಹೊರಡಬಹುದಾಗಿ ನಾನು ಎಣಿಸುತ್ತೇನೆ. ಹೀಗೆ ಈ ನಾಲ್ಕೂ ರಾಜ್ಯಗಳು ರುಶ್ಯರ ಸ್ವಾಧೀನವಾಗುವದರಿಂದ ಯುರೋಪ ಖಂಡದಲ್ಲಿ ರುಶ್ಯರಿಗೆ ಪರಿಗಟ್ಟುವದೆಂಥಾದ್ದಿಲ್ಲ. ಬಾಲ್ಟಿಕ್ ಸಮುದ್ರ, ಉತ್ತರ ಸಮುದ್ರಗಳೂ ರುಶ್ಯರಿಗೆ ಅನಿರ್ಬಂಧವಾಗಿ ವ್ಯವಹರಿಸಲು ಅನುಕೂಲವಾಗಿವೆ. ಮೇಲಾಗಿ ಹಿಟ್ಲರನು ರುಶ್ಯರಿಗೆ ಅಂಕಿತನಾಗುತ್ತಾನೆ. ಲೆನಿನ್‌ಗ್ರೇಡಿಂದ ಡೆಂಝಿಗ್ ಬಂದರದ್ದನ್ನೇಲೆ ನಾಗಿ ಹೋಗಲಿಕ್ಕೆ ಈಗ ರುಶ್ಯರಿಗೆ ಅನುಕೂಲ!ತೀರ ಪಮಾಣ! ಈತನಕ ಉತ್ತರಸಮುದ್ರದ ಒಡೆಯರು ಜರ್ಮನ್‌ರಿದ್ದರು. ಈಗಿನ ಎಪಿಸ್ಟ

'ವೃತ್ತ'ಕ್ಕೆ ಮುಂದಿನ ವಾರ ರಜೆ.

ದಸರೆ ಹಬ್ಬದ ನಿಮಿತ್ತ ಮಾಡಿಕೆಯಂತೆ ಮುಂದಿನ ವಾರ 'ವೃತ್ತ'ಕ್ಕೆ ರಜೆ. ಮುಂದಿನ ಸಂಚಿಕೆ ಸೋಮವಾರ ತಾ. ೨೦-೧೦-೬೯ನೇಗೆ ಹೊರಡುವದು.

ಚಂದಾದಾರರೆಲ್ಲರೂ ತಮ್ಮ ತಮ್ಮ ವರ್ಗಣಿಯನ್ನು ಮುಟ್ಟಿಸಬೇಕಾಗಿ ಆಗ್ರಹದ ವಿನಂತಿಯಿದೆ. ಮಹಾಯುದ್ಧದ ಮೂಲಕ ಕಾಗದ-ಶಾಯಿ ಮೊದಲಾದ ಆಚ್ಛಾದಾನಾಹಿತ್ಯಗಳ ಬೆಲೆ ಇಮ್ಮಡಿಗಿಂತಲೂ ಮೇಲ್ಪಟ್ಟು ಏರಿಹೋದರೂ 'ವೃತ್ತ'ದ ಪುಟಗಳ ಸಂಖ್ಯೆ ಕಡಿಮೆಯಾಗಿಲ್ಲ. ವರ್ಗಣಿದಾರರು ಇತಿ ನಿಂತ ವರ್ಗಣೆಯನ್ನು ಅಭಿಮಾನದಿಂದ ತಲ್ಪಿಸಿದರೆ 'ವೃತ್ತ'ದ ಮೇಲೆ ಉಪಕಾರವಾಗುವದು.

'ವೃತ್ತ'ದಲ್ಲಿ ವಾರ-ವಾರಕ್ಕೆ ಯುದ್ಧ-ವಾರ್ತೆಗಳೂ, ಯುದ್ಧಕ್ಕೆ ಸಂಬಂಧಪಟ್ಟ ಇತರ ವಾರ್ತೆಗಳನ್ನೂ, ಹಿಂದುಸ್ಥಾನದೊಳಗಿನ ರಾಜಕಾರಣದ ವಾರ್ತೆಗಳನ್ನೂ ಸಮಾಲೋಚಿಸಲ್ಪಡುತ್ತಿವೆ. ಇನರು ವರ್ಗಣಿದಾರರಾಗಿ ಸೇರಿ 'ವೃತ್ತ'ಕ್ಕೆ ಪ್ರೋತ್ಸಾಹಿಸಬೇಕಾಗಿಯೂ, ಸ್ವೀಕೃತ ಪ್ರಯೋಜನ ಪಡೆಯಬೇಕಾಗಿಯೂ ವಿನಂತಿ.

ಮೆನೇಜರ.

ಸ್ಥಾನಿಕ ವೃತ್ತಾಂತ.

ಕುಮಟಾ— ಶುಕ್ರವಾರ ಸಂಜೆಯಿಂದ ತಿರುಗಿ ಮಳೆ ಬೀಳಲಾರಂಭಿಸಿದೆ ! ಮೊನ್ನೆ ಶನಿವಾರ ೧೫ ಇಂದು ಮಳೆ ಯಾಯಿತು ! ಇನ್ನೂ ಮಳೆಯಾಗುವ ಲಕ್ಷಣಗಳು ತೋರಿ ಬರುತ್ತಿವೆ ! ಗದ್ದೆಗಳಲ್ಲಿನಿವ ಬೆಳೆಯೆಲ್ಲ ಈಗ ಆಡ್ಡ ಬಿದ್ದಿದೆ ಇಂಥ ಸಮಯದಲ್ಲಿ ದಿನಾಲು ಮಳೆ ಬಿದ್ದರೆ, ಕೊಯಲು ಮಾಡಲಾಗದೆ ಭತ್ತ ಉದುರಿ ಹೋಗುವದು, ಹುಲ್ಲು-ಭತ್ತಗಳೆರಡೂ ಮುಗ್ಗಿ ಹೋಗುವವು, ಬೆಳೆದ ಭತ್ತ ಬೇರು ಬಿಡುವದು ! ಅಂತು ಈ ವರ್ಷದ ನಂತೆ ಬೇಕಾ ದಾಗ ಬೇಳದೆ ಅತ್ತತ್ತ ಬೇಡವಾಗಿ ಬಿದ್ದು ಒಕ್ಕಲಿಗ ರನ್ನೂ ಜನರನ್ನೂ ಹಣ್ಣಗೆ ತರುವ ಆಲೋಚನೆ ಮಾಡಿ ರುವಂತೆ ತೋರಿಬರುತ್ತಿದೆ ! ದೈವೇಚ್ಛೆಯ ಮುಂದೆ ಮಾನವನ ಪಾಡೇನು ? ಊರಲ್ಲಿ ಬಗೆಬಗೆಯ ಬೇನೆಗಳು ಕಂಡುಬರು ತ್ತಿವೆ. ಜನರು ಎಚ್ಚರಿಕೆಯಿಂದ ಇದ್ದಷ್ಟು ಕಡಿಮೆ !

ಶುಕ್ರವಾರದಿಂದ ನಾಡಿಯೆಂತೆ ಬೇರೆ ಬೇರೆ ದೇವಸ್ಥಾ ನಗಳಲ್ಲಿ ನವ ರಾತ್ರಿ ಉತ್ಸವಕ್ಕೆ ಪ್ರಾರಂಭವಾಗಿದೆ ಸಂಜೆಯ ಹೊತ್ತಿನಲ್ಲಿ ಮಳೆ ಬೀಳುತ್ತಿರುವದರಿಂದ ಸ್ವಲ್ಪ ವಿರಮಿಸಾ ಗುತ್ತಿದೆ ಶ್ರೀ ಶಾಂತೇರಿ ಕಾಮಾಕ್ಷಿದೇವಸ್ಥಾನದಲ್ಲಿ ಸಾಂಗಲಿ ಸಂಸ್ಥಾನದ ರಾ॥ ದಿಗ್ವಿಜಯರೆರೆಂಬವರು ಮಂಠಾ ರೇತಾನೆಗ ಳನ್ನು ಮಾಡುತ್ತಾರೆ ಗಿಳ ವರ್ಷಗಳ ಹಿಂದೆ ಶ್ರೀ॥ ಮಹಾರೊಕ ಮಹಾರಾಜರು ತಮ್ಮ ಶಿಷ್ಯವೃಂದದೊಂದಿಗೆ ಈ ಜಿಲ್ಲೆಯಲ್ಲಿ ಸಂಚಾರ ಮಾಡುತ್ತಾ ಈ ಊರಿಗೆ ಬಂದಾಗ ರಾ ದಿಗ್ವಿಜ ಯರು ಆ ವೃಂದದಲ್ಲಿದ್ದರು ಅವರು ಹರಿಕರ್ತನೆಯ ೀಗನೇವಾ (ನ್ಯಾಸಂಧ) ಮಾಡಿದ್ದು ಆ ಮಾ ಲೇ ಮತ್ತು ಇನೇ ಕುಮಟಾ ಊರಲ್ಲಿಂಡಿ. ೧೯೨೦ನೇ ಇಸವಿಯಲ್ಲಿ ಗೋವೆಯಿಂದಳಿಗೆ ಹೋಗಿ ೬೦೦ ಕ್ರಿಸ್ತೀ ಗಾವಡಿಗಳಿಗೆ ಶುದ್ಧೀಕರಣ ಮಾಡಿ ಹಿಂದೂ ಧರ್ಮ ದಲ್ಲಿ ಸೇರಿಸಿಕೊಂಡ ಸುಪ್ರಸಿದ್ಧ ಆನಂದಮಾರ್ತಿಗಳು ಇವ ರೇ ಆಗಿರುತ್ತಾರೆ ಇವರ ಪ್ರಭಾವಶಾಲಿ ಪ್ರಚಾರಕ್ಕಳಿಗೆ ಅಂಜಿಕೊಂಡು ಗೋವಾ ಸರಕಾರವು ಅವರಿಗೆ ಗೋವಾ ಪ್ರವೇಶ ನಿಯಂ ತ್ರಣದ ಆಜ್ಞೆಯನ್ನು ಹೊರಡಿಸಿತು ಇಂದಿಗೂ ಅವರಿಗೆ ಆ ಪ್ರವೇಶ ನಿಯಂತ್ರಣದ ಆಜ್ಞೆಯು ಜಾರಿಯಲ್ಲಿರುವದು ಅವರು ಹೋದಲ್ಲಿ ಬಂದಲ್ಲಿ ಸರಕಾರವು ಗುಪ್ತ ಪೋಲೀಸ ಬೇವಸ್ಥಾನದಲ್ಲಿ ಕುಂದಾಪುರದ ರಾ॥ ಶಾರಂತರಂಬಂದರೂ, ೀ ಯಂಬೀಶ್ವರ ಕಾಮಾಕ್ಷಿ ದೇವಸ್ಥಾನದಲ್ಲಿ ಬೆಂಗಳೂರಿನ ರಾ॥ ವಿಮಲಾ ನಂದರೆಂಬವರೂ ಕನ್ನಡ ರೇತಾನೆಗಳನ್ನು ಮಾಡುತ್ತಾರೆ

ಇವ್ವಿ ಮಾಮಲೇದಾರರಾಗಿದ್ದ ರಾ॥ ರಾಸದೇಯವರು ಮೊನ್ನೆ ಶನಿವಾರ ಮುಂಜಾನೆ ೧೦ವಾರಕ್ಕೆ ಹೋಗಿ ತಮ್ಮ ಹೊಸ ಸ್ಥಾನದಲ್ಲಿ ಹಾಜರಾದರು.

ಕಳೆದ ಮಂಗಳವಾರ ತಾ ೧೦ನೇಗೆ ಮಹಾತ್ಮಾ ಗಾಂಧಿ ಸಪ್ತಾಹದ ಮಂಗಲೋತ್ಸವವಾಯಿತು ದಿನದಂತೆ ಮುಂಜಾನೆ ಪ್ರಭಾತ ಫೇರಿ, ಧ್ವಜವಂದನೆಗಳಾದವು ಸಂಜೆ ಯು ಹೊತ್ತಿಗೆ ಮಹಾತ್ಮರ ಪ್ರತಿಮೆಯನ್ನು ಸಿಂಗಾರ ಮಾಡಿ ದ ಮಂಟಪದಲ್ಲಿಟ್ಟು ಊರ ಸುತ್ತಲೂ ಮೆರವಣಿಗೆ ತೆಗೆದಿ ದ್ದರು. ಮೆರವಣಿಗೆಯು ತಿರುಗಿ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂದಿನ ಪಟಾಂಗಣಕ್ಕೆ ಬಂದ ಬಳಿಕ, ಅಲ್ಲಿ ಸಭೆಯಾಯಿತು ತಾ॥ ಕೂಂ ಕಮಿಟಿಯ ಅಧ್ಯಕ್ಷ ರಾದ ರಾ॥ ಲಕ್ಷ್ಮಣ ಸುಬ್ರಾಯ ಕಾಮತರವರು ಮಾತ ನ್ನಾಡಿ ಈ ವರೆಗೆ ಜರುಗಿಸಿರುವ ಕಾರ್ಯದ ಸ್ವರೂಪವನ್ನೂ ಅವರ ಲೋಕೋತ್ತರತೆಯನ್ನೂ ತಿಳಿಸಿದೇ, ಮಹಾತ್ಮರು ಹಾಕಿಕೊಟ್ಟಿರುವ ಮಾರ್ಗದಿಂದ ನಡೆದು ಸ್ವಾತಂತ್ರ್ಯ ಪ್ರಾಪ್ತಿ ಮಾಡಿಕೊಳ್ಳುವ ಮಹಾಕಾರ್ಯಕ್ಕೆ ನೆರವಾಗಿರೆಂದು ಜನರಿಗೆ ಬೋಧ ಮಾಡಿದರು ಆಪರ ಹಿಂದಿನಿಂದ ೩-೪ ವಿದ್ಯಾರ್ಥಿಗಳ ಭಾಷಣಗಳಾದವು ಕೊನೆಗೆ ಧ್ವಜಾವರೋ ಹಣ, ರಾಷ್ಟ್ರಗೀತಗಳಾಗಿ ಸಮಾರಂಭವು ಕೊನೆಗೊಂಡಿತು ಬಂದ ಜನರಿಗೆ ಖಾಲಕರು ಲಡ್ಡುಗಳನ್ನು ಹಂಚಿದರು

ಮಹಾತ್ಮರ ಜಯಂತಿಯ ದಿನದಿಂದ ಮೊನ್ನೆ ಶನಿವಾರ ಸಂಜೆಯ ವರೆಗೆ ಖಾದಿ ಭಾಂಡಾರದವರು ರೂ. ೯೬೦ ರ ಖಾದಿ ಮಾರಾಟ ಮಾಡಿರುತ್ತಾರೆ

ತಾಲೂಕ ಕಚೇರಿಯವರು ಇಷ್ಟರಿಯ ವರ್ಷಗಳಿಗೆ ತಾ ೧೯-೯-೬೯ನೇಗೆ ಇವ್ವ ಅಕ್ಕಿ, ಸಕ್ಕರೆ, ತೆಂಗಿನ ಎಣ್ಣೆ, ಎಳ್ಳೆ ಣ್ಣೆ, ತೆಂಗಿನಕಾಯಿ, ಕೆರೊಸಿನ ಎಣ್ಣೆ ಮತ್ತು ಬೆಂಕಿಪೆಟ್ಟಿಗೆ ಇವುಗಳ ಧಾರಣೆಗಳನ್ನು ತಿಳಿಸಿ, ಈ ಜೀವನಸಾಮಗ್ರಿಗಳ ಧಾರಣೆಗ ಳನ್ನು ತಾ ೧೯-೯-೬೯ರ ಧಾರಣೆಗಳ ೧೯೦೬ಕ್ಕೆ ೧೯೬೯ನ ಹೆಚ್ಚಿಗೆ ಏರಿಸದಂತೆಯೂ ಏರಿಸಿದ್ದು ಕಂಡು ಬಂದಲ್ಲಿ ಮುಂಬಯಿ ಸರಕಾರದ ಧಾರಣೆ ನಿಯಂತ್ರಣ ಹುಕುಮಿ ನನ್ವಯ ಏಪ್ಟಿ ಹೂಡಿ ಶಿಕ್ಷೆ ಮಾಡಲಾವೀತೆಂಬುದಾಗಿಯೂ ಎಚ್ಚ ರಿಕೆ ಕೊಟ್ಟಿರುತ್ತಾರೆ ಸೊದಲನೇ ಎಚ್ಚರಿಕೆಯ ಪ್ರಕಟಣೆ ಯಷ್ಟಲ್ಲದೆ ತಾಲೂಕ ಕಚೇರಿಯವರು ಪ್ರಕಟಿಸಿದ ಧಾರಣೆಗಳು ಕೆಲ ಮಟ್ಟಿಗೆ ಅಸಾಸ್ತವಿಕವಿದ್ದ ನ್ನೆ, ಜಿಲ್ಲಾಧಿಕಾರಿಗಳು ಜಾರಿ ಗೊಡಿಸಿದ ಧಾರಣೆಗಳೂ ವಿಸಂಗತವಿದ್ದವು ಸಾಕರು ಕೂಡಲೆ ಈ ಸಂಗತಿಯನ್ನು ಅಧಿಕಾರಿಗಳ ಕಿವಿಮಾತಿಗೆ ಅವರು ಸಿಗ್ಗೆ ಶನಿವಾರ ಹೊಸ ತಿಮ್ಮಪತಿ ಪಟವಾರ ಪಟ್ಟುಮಾಡಿ ಪ್ರಕಟಿಸಿದ್ದಾರೆ

ಇದಿಯ ರಾ॥ ಮಾಧವ ಮುಳುಂದ ಶಾನಭೋಗ, ಬಿ ಎಸ್ಸಿ, ಬಿ ಟಿ ಯವರು ಎತಿನಬೋಳೆಕ್ಕೆ ಹೋಗಿ ರಿಲೈಮ್ಸ್ ಇನ್ ಎಜ್ಯುಕೇಶನ್' ಮತ್ತು 'ಎಜು ಆಫ್ ಬಿ ಟಿ ಎಂಬ ಉನ್ನತ ಶಿಕ್ಷಣ ಪದವಿಗಳನ್ನು ಪಡೆದು ಸುರಕ್ಷಿತವಾಗಿ ಸದ್ಯಕ್ಕೆ ಮುಂಬಯಿಗೆ ಮರಳಿ ಬಂದಿದ್ದಾರೆ ಮುಮ್ಮೆ ಸ್ವಾತಂತ್ರ್ಯದ ನಾಗಿ ವೀರರು ರಾ॥ ಶಾನಭೋಗರಿಗೆ ಕಳೆದ ವಾರ ಆಪಿಲ್ ಧಿಂಡೀಯ ಕೊಂಗ್ರೆಸ್ ಕಮಿಟಿಯು ಅಧಿವೇಶನ ಕ್ಕಾಗಿ ವರ್ಧಾಕ್ಕೆ ಹೋಗುವಾಗ ರಾ॥ ಶಾನಭೋಗರಿಗೆ ಬೆಂಕಿ ಯಲ್ಲಿ ಕರಕೊಂಡು ಬಂದಿಯಲ್ಲಿ ಈವರೂ ಮಾತಾಡುತ್ತಾ ವರ್ಧಾಕ್ಕೆ ಹೊರಟರು ರಾ॥ ಶಾನಭೋಗರಿಂದ ಇಂಗ್ಲೆಂಡ, ಆಯರ್ಲಂಡ ಫ್ರಾನ್ಸ ಬೆಲ್ಜಿಯಂ, ಜರ್ಮನಿ, ಆಪೇರಿಕಾ ನೋದಲಾದ ದೇಶಗಳನ್ನು ಸಂಚರಿಸಿ ಅಪ್ಪಟವೂ ಅನೇಕ ಶಿಕ್ಷಣತಜ್ಞರನ್ನು ಸಂಪರ್ಕಿಸಿ ಮರಳಿದ್ದಕ್ಕೆ ನಾ॥ ವೀರರು ರಾ॥ ಶಾನಭೋಗರಿಂದ ಒಬ್ಬ ಸುಶಿಕ್ಷಿತ ನ್ನು ಕುತೂಹಲಪೂರ್ವಕ ವಾಗಿ ಕೇಳಿಕೊಂಡರಂತೆ ! ಮುಂಬ ಯಿ ಇಲಾಖೆಯಿಂಗಳಿಗೆ ವರ್ಷಾ ಶಿಕ್ಷಣಾಯೋಜನೆಯಂತೆ ಕೊರಯನ ಹೊಸ ಶಿಕ್ಷಣ ಕಾರ್ಯದಲ್ಲಿ ರಾ॥ ಶಾನಭೋಗರಿಗೆ ಮುಖ್ಯಾಧಿಕಾರಿಯಾಗಿ ನೇಮಿಸುವಷ್ಟಾಗಿರಲಿ ಮುಂಬ ಯಿ ಕೈಪ್ತಸಿಕಲ್ ಪತ್ರಿಕೆಯಲ್ಲಿ ಒಬ್ಬ ಸುನ್ನಿಧಿರು ಬರೆ ಯುತ್ತಾರೆ

ಕಳೆದ ತಾ ೧೬ನೇಗೆ ಮುಂಬಯಿಯಲ್ಲಿನ ಗೌಡ ಸಾರಸ್ವತ ಬ್ರಾಹ್ಮಣ ಸಭೆಯವರು ದಾದರದಲ್ಲಿರುವ ಕಿಂಗ ಜೊರ್ಜ ಇಂಗ್ಲಿಷ ಸ್ಕೂಲಿನಲ್ಲಿ ರಾ॥ ಲಕ್ಷ್ಮೀಕಾಂತ ಶಾಂತಾ ರಾಮ ದಾಭೋಳಕರ ಇವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ರಾ॥ ಶಾನಭಾಗರಿಗೆ ಸ್ವಾಗತ-ಸತ್ಕಾರ ಮಾಡಿದರು ರಾ॥ ಬಾಗಣ, ರಾ॥ ಶೇಷಗಿರಾವ ಕೇಶವೈನ, ರಾ॥ ಮಹಾ ಬಲೇಶ್ವರ ಭಟ್ಟ ಗೋಸಿ, ಡಾ॥ ಎಸ್ ಎಸ್ ರಾವ್, ರಾ ಡಿ ಬಿ ತೀಲಂಗ ವಗೈರೆ ಗೈಡಸ್ಟರು ರಾ॥ ಶಾನಭಾಗರು ಪಡೆದ ಪ್ರತಿಷ್ಠೆಯನ್ನು ಕೊಂಡಾಡಿದರು ಈಗ ವೀಪಡ ಲ್ಲಾಗಿರುವ ಶಿಕ್ಷಣ ಸುಧಾರಣೆಯ ಮನ್ವಂತರದಲ್ಲಿ ೧ ಶಾಲಾಭಾಗ ಶಿಕ್ಷಕರಾಗುವವರು ಏಲ್ಲೇ ಉಬಯೋ ಗಕ್ಕೆ ಬೀಳುವವೆಂದು ಅಧ್ಯಕ್ಷರು ಹಾರೈಸಿದರು

ಶಿರಿ ದಿನ್ಹಾಜನ ಪ್ರಿಯತಮಾಕೇಬಂದಾ ರಾ॥ ಜಿ. ನ್ಹಿ. ನೈಕ್, ಎಲ್ ಏ ಇವರಿಗೆ ನೇಮಿಸೋಣಾಗಿದೆ.

ಗ್ರಾಮೋದ್ಯಾಪದ ಹೊಸ ಯೋಜನೆಯಂತೆ ಈ ಜಿಲ್ಲೆ ಯಲ್ಲಿ ೨ ವಿಭಾಗಗಳು ಮಾಡೋಣಾಗಿವೆ. ಒಂದು ಕಂಪಾಗ, ಇನ್ನೊಂದು ಶಿರಿ. ಪ್ರತಿಯೊಂದು ವಿಭಾಗಕ್ಕೆ ಒಬ್ಬೊಬ್ಬ ಇನ್ಸ್‌ಪೆಕ್ಟರರಿಗೆ ನೇಮಿಸೋಣಾಗಿದೆ. ಇವ್ವಿ ಎರಿ ಕಲ್ಚರಲ್ ಏಸ್ಟಾನಿಯರ್‌ಗಳಿಗಿದ್ದ ರಾ॥ ಹುಬ್ಬರವರಿಗೆ ಆರ ವಾರ ವಿಧಿಗಡೆ ಇಪ್ಪತ್ತೆಕ್ಕರಾಗಿ ನೇಮಿಸೋಣಾಗಿದೆ, ಮತ್ತು ರಾ॥ ಶುಬ್ಬರವರ ಸ್ಥಳದಲ್ಲಿ ರಾ॥ ಬಿ ಬಿ ಎಲಿಗಾರ ಇವರಿಗೆ ನೇಮಿಸೋಣಾಗಿದೆ

ಆಯುರ್ವೇದ ಸಮ್ಮೇಲನದ ಸ್ವಾಗತ ಸಮಿತಿಯವರು ಇಲ್ಲಿ ಬಂದು ಸಮ್ಮೇಲನಕ್ಕೆ ಸುಸ್ವರು ಜಂ ಕೂಡಾಯಾ ಲಿಲ್ಲವೆಂಬ ಸಮಾಚಾರವನ್ನು ಪಡೆದರಾಗಿ ತಿಳಿಯುತ್ತದೆ

ಮುಂಬಯಿ ಎಸೆಂಬ್ಲಿಯಲ್ಲಿ ರಾ॥ ಎಸ್ ಜಿ ಗೋಸಿ ಯವರು ಕೇಳಿದ ಒಂದು ಪ್ರಶ್ನೆಗೆ ಪ್ರತ್ಯುತ್ತರವಿಯುತ್ತ ಸುಲ್ಲಿಸಿ ಇಲಾಖೆಯ ಸಚಿವರಾದ ರಾ॥ ನಾರಾಯಣ ಪೇಸಾ ಯಿಯವರು ಉತ್ತರವನ್ನು ಇತ್ತಿದ್ದರಿಂದ ಈ ತನಕ ಕಾರವಾರ ತಾಲೂಕಿನಲ್ಲಿ ರೂ ೧೯೧೦, ಅಂಕೋಲಾ ತಾಲೂಕಿನಲ್ಲಿ ರೂ ೬೨೨, ಕುಮಟಾ ತಾಲೂಕಿನಲ್ಲಿ ರೂ ೧೪೨೦, ಹೊನ್ನಾವರ ತಾಲೂಕಿನಲ್ಲಿ ರೂ ೨೮೪೯, ಭಟ್ಕಳ ವೇರೆ ಯಲ್ಲಿ ರೂ ೧೯೬೬, ಸಿದ್ದಾಪುರ ತಾಲೂಕಿನಲ್ಲಿ ರೂ ೨೭೦೪, ಶಿರಿ ತಾಲೂಕಿನಲ್ಲಿ ರೂ ೧೧೪೭, ಮುಂಡ ಗೋಡ ವೇರೆಯಲ್ಲಿ ರೂ ೪೪೮, ಯಲ್ಲಾಪುರ ತಾಲೂಕಿ ನಲ್ಲಿ ರೂ ೪೧೧, ಹಳಿಯಾಳ ತಾಲೂಕಿನಲ್ಲಿ ರೂ ೪೬೮ ಮತ್ತು ಸದ ವೇರೆಯಲ್ಲಿ ರೂ ೬೩೦೩ ಕೂಡಿ ಆಂತು

SAVING & SPENDING.

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING and SPENDING and who have, by sheer force of will, built up a bulky Savings Bank Account.

The Canara Industrial & Banking Syndicate, Ltd

Estd.] (Incorporated in British India) [1925

HEAD OFFICE.- UDIPI. (S India.)

ಸ್ಥಾನಿಕ ವೃತ್ತಾಂತ.

(೧೯೬ ನೆಯ ಪುಟದಿಂದ ಮುಂದರಿಸಿದ್ದು)

ತು ಸುರುವಿನ ಊರತುಂಬ ಇದೇ ಮಾತು. ಇಷ್ಟೇನಾಗಿ ಬಹುದೆಂದು ಜನರು ತರ್ಕಿಸುತ್ತಾರೆ (ಆದೊಂದು ಸಮುದ್ರ ನೀರ್ಪಕ್ಷೆ ಮಾಡಲು ಬಂದ ವಿಮಾನನಿರೀಕ್ಷಣ ಜನರು, ಗಾಬರಿಯಾಗುವ ಕಾರಣವಿಲ್ಲ)

ಈ ವರ್ಷ ಇಲ್ಲಿ ಬರೇ ೮ ಜನ ಕೊಂಗ್ರೆಸ ಸದಸ್ಯರಾಗಿದ್ದಾರೆ. ೧೯೩೮ರಲ್ಲಿ ೫೫೨ ಕೊಂಗ್ರೆಸ ಸದಸ್ಯರಾಗಿದ್ದರು. ಕಳೆದ ಎರಡು ವರ್ಷಗಳಲ್ಲಿ ನೂಡಿದ ಕೊಂಗ್ರೆಸ ಸದಸ್ಯರ ವಂತಿಕೆಯ ಹಣವೆ ಅನ್ನವೆಷ್ಟೆಯಾಗಿರುವದರಿಂದ ಜನರಲ್ಲಿ ಒಂದು ತರದ ಉನಾಸ್ಥೆಯುಂಟಾಗಿದೆ

ಇಲ್ಲಿ ತೆರೆಯಿಲ್ಪಡುವ ಚಿಕಿತ್ಸಾಲಯವಿದ್ದಲ್ಲಿ ರಾಗಿ ಬಾಳಿಗಿಯವರಿಗೆ ನೇಮಿಸುವದೊಳಿತೆಂದು ಊರ ಜನರು ಜಿಲ್ಲಾ ಬೋರ್ಡ ಆಫೀಸ್ದಾರಿಗೆ ಮೊನೆ ಬಾಡಿಕೊಂಡಿದ್ದರು ಆದರೆ, ಇಲ್ಲಾಗುವ ಚಿಕಿತ್ಸಾಲಯವು ಯುನಾನಿ ಪದ್ಧತಿಯದಿರುವ ದೆಂದು ಅಧ್ಯಕ್ಷರಿಂದ ಪತ್ರ ಬಂದಿದೆ ಆ ಚಿಕಿತ್ಸಾಲಯವು ಬೇಗನೇ ತೆರೆಯಿಲ್ಪಡಲೆಂದು ಜನರು ಹಾರೈಸುತ್ತಾರೆ

ಗೇರಸಪ್ಪು— ಇಲ್ಲೊಂದು ದೆವಾಜಾನಿ ತೆರೆಯು ಸರಕಾರದವರು ಸಂಕಲ್ಪಿಸಿ ೬-೭ ತಿಂಗಳುಗಳಾದವು. ದವಾಖಾನೆಗೆ ಅನುಕೂಲ ಸ್ಥಳವನ್ನು ಸಹ ಆರಿಸಿಟ್ಟಿದ್ದಾರೆ ಆದರೆ, ದವಾಖಾನೆ ಮಾತ್ರ ಇನ್ನೂ ತೆರೆಯಿಲ್ಪಡಲಿಲ್ಲ ಈಗ ಚಳಿಗಾಲ ಸನಿಹವು ಬಂತು ಚಳಿಗಾಲದಲ್ಲಿ ಇಲ್ಲಿ ಚಳಿಜ್ವರದ ಹಾವಳಿ ಬಹಳ ಕಾರಣ, ದವಾಖಾನೆಯನ್ನು ಅದನ್ನು ತೀವ್ರ ತೆರೆಯುವ ವ್ಯವಸ್ಥೆ ಮಾಡುವದವ್ಯವಸ ಜಿಲ್ಲಾಧಿಕಾರಿಗಳು ಇತ್ತ ಗಮನಿಸುವರೇ ?

ಮುಡ್ಗೇರ್ತಿಶ್ವರ— (ತಾ ೬-೧೦ ೩೯) ಊರಿನ ಸಾವಕಾರರು ತಮ್ಮ ಆಸ್ತಿಯನ್ನು ಪರಸ್ಪರರ ಕೈತಕರಿಂದ ಮಾರುತ್ತಿರುವದರಿಂದ ತಾವು ಉಪವಾಸ ಸಾಯುವ ಪ್ರಸಂಗ ಬಂದೊದಗಿದೆಯೆಂತಲೂ, ತಮಗೆ ಕಾಯಂ ಬೇಕಂತಲೂ ತೀರಮಕ್ಕ ನ್ಯಾಮದವರು ಜಿಲ್ಲಾಧಿಕಾರಿಗೆ ತಂತಿ ಕಳಿಸಿದ್ದರಂತೆ ಆ ತಂತಿಯು ಚೌಕಶಿ ಬಗ್ಗೆ ಭಟಕಳ ಪೀಠೇಯ ಮಹಾಸ್ವಾಮಿಯವರ ಹತ್ತರ ಕಳಿಸಲ್ಪಟ್ಟ ಮೇರೆಗೆ ಮಹಾಲ್ವರಿಯವರು ಆ ಊರಿಗೆ ಹೋಗಿ ಚೌಕಶಿ ಮಾಡಿದರು ಅಲ್ಲಿಯ ಜಮೀನವಾರಿಯಾಗಿ ಹತ್ತರ ೪೦೦ ಮುಡಿ ಅಕ್ಕಿ ಶಿಲ್ಕು ಇದ್ದಿತು, ಆಪರೋಗಿಂದ್ಲ ೧೪೦ ಮುಡಿ ಅಕ್ಕಿಯನ್ನು ಅವರು ಭಟಕಳದ ವ್ಯಾಪಾರಿಗಳಿಗೆ ಕೊಡಲೂಪ್ಪಿ ಸಾಟಿ ಮಾಡಿದ್ದರಂತೆ ! ಮಹಾಸ್ವಾಮಿಯವರು ಎಷ್ಟು ಸಂಗತಿಗಳನ್ನು ತಿಳಕೊಂಡು, ಜಮೀನದಾರರು ಕೊಡಲೊಪ್ಪಿದ ಅಕ್ಕಿಯನ್ನು ಕೊಡಲಿಲ್ಲವೆಂತಲೂ, ಇನ್ನುಳಿದ ಅಕ್ಕಿಯನ್ನು ಮುಡಿಯೊಂದಕ್ಕೆ ೫೫ ೫ ೫ ರಂತೆ ಮತ್ತು ಚಿಲ್ಲರೆ ಮಾರುವದಾದರೆ ಸ್ಯಾರಿ ೧ಕ್ಕೆ ೫ - ೫ ಆಣೆಗಳಂತೆ ಮಾರಾಟ ಮಾಡತಕ್ಕದ್ದೆಂತ.ೂ ಆ ಜಮೀನದಾರರಿಗೆ ವಿಧಿಸಿರುತ್ತಾರೆ ಅದರಂತೆ ಆ ಜಮೀನದಾರರಲ್ಲಿ ದಿನಾಲು ೪ ೫ ಮುಡಿ ಅಕ್ಕಿ ಚಿಲ್ಲರೆ ಮಾರಾಟವಾಗುತ್ತಿದೆ ೩೪ ಮೈಲು ದೂರದಿಂದ ಸಡ ಬಂದು ಬಡ ಜನರು ಅಕ್ಕಿ ತತ್ಕಾಲ್ಯಕ್ಕುತ್ತಾರೆ.

ಶಿರಾಲಿ— (ತಾ ೧೩ ೧೦-೩೯) ಕಳೆದ ೧೯೩೮ ರಲ್ಲಿ ಇಲ್ಲಿಯ ಜನರು ಕೊಂಗ್ರೆಸ ಕೆಲಸಕ್ಕಾಗಿ ಮುಷ್ಠಿ ಧಾನ್ಯ ಎಸ್ಟೆಂ ಮಾಡಿ ಕೆಲವು ಹಣ ಕೂಡಿಸಿದ್ದರು ಆವ ರೊಳಗಿಂದ ಖರ್ಚು ಆದದ್ದು ಕಳೆಯಲಾಗಿ ರೂಪಾಯಿ ೪೩-೧೦-೦೦ ಆ ನಿಧಿಯ ವ್ಯವಸ್ಥಾಪಕರಾದ ರಾಗಿ ಶಾಸ್ತ್ರಿಕರ ಗಣಪತರಾವ ಅಗ್ರಾಣಕರ ಇವರ ಬಳಿ ಶಿಲ್ಕು ಉಳಿದಿತ್ತು ರಾಗಿ ಅಗ್ರಾಣಕರು ಈಗ ೪-೫ ವರ್ಷಗಳಿಂದ ಮಂಗಳೂರಿನಲ್ಲಿದ್ದಾರೆ ಜಿಲ್ಲಾ ಕೊಂಗ್ರೆಸ ಕಮಿಟಿಯವರು ಅವರಿಗೆ ಬರೆದು ಆ ಹಣವನ್ನು ವಸೂಲ ಕೊಡಿಸಬೇಕಾಗಿ ಇನ್ನಿನೆ ತಾವು ತರಿಸಿಕೊಳ್ಳಬೇಕಾಗಿ ಜನರು ವಿನ್ನವಿಸುತ್ತಾರೆ

ಇಲ್ಲಿ ಚಿಲ್ಲರೆ ಅಕ್ಕಿ ಮಾರಾಟ ಮಾಡಿದ ಇಬ್ಬ ಗೃಹಸ್ಥರಲ್ಲಿ ಒಬ್ಬರ ಹೆಸರು ರಾಗಿ ನರಸಿಂಹ ಮಹಾಮಾಯ ಪ್ರಭು ಎಂದು ಇರುತ್ತದೆ, ಹೊರತು ತಾ ತರ ,,ವೃತ್ತದಲ್ಲಿ ಬರೆದಂತೆ, ರಾಗಿ ಮಹಾಮಾಯ ಪ್ರಭು ಎಂದು ಇರುವದಲ್ಲ. ರಾಗಿ ಉಪ್ಪೋಣಿಯವರು ಪ್ರಭುವಿನ ಅಕ್ಕಿ ಮಾಂಟಿವಾಗಿ ಹೊಸದ ಮೇಲೆ, ಬಡ ಜನರಿಗೆ ಅಗ್ಗದರದಿಂದ ಅಕ್ಕಿ ಮಾರುವ ಬಗ್ಗೆ ೫೫ ಚಿತ್ರಾಪುರ ಮುರವ ಪಾಲಕ್ಕಗಾರ ರಾಗಿ ಎನ್ ಆರ್. ಜೆಟ್ಟಿ ಇವರು ಮಠದಲ್ಲಿ ಶಿಲ್ಕು ಇದ್ದ ಅಕ್ಕಿಯನ್ನು ರಾಗಿ ಪ್ರಭುರ ವಕಾ ಕೊಟ್ಟಿರುತ್ತಾರೆ ಈ ಬಗ್ಗೆ ಬಡ ಜನರು ಮಠದವರನ್ನು ತುಂಬಾ ಹೊಸುತ್ತಿದ್ದಾರೆ.

ಭಟಕಳ— (ತಾ. ೧೮-೧೦ ೩೯) ನಿನ್ನೆ ಬಹಳ ಮಳೆಯಾಯಿತು ಈ ಮಳೆಯಿಂದ ಬೆಳೆ ಹಾಳಾಗುವದೆಂದು ಒಕ್ಕಲಿಗರು ಚಿಂತೆಗೊಳಗಾಗಿದ್ದಾರೆ

ಸೆರೆ-ಕುಡುಕರ ಶಿರವರೆ ಯಾತ್ರೆ ಜೋರಿನಿಂದ ನಡೆದಿದೆ ! ಮೊನ್ನೆ ಮುಂಡಳ್ಳಿಯ ಕೆಲವರು ಸೆರೆ ಕುಡಿದು ಬಂದು ಬಳ್ಳೇ ಹೊಡೆದಾಟ ಮಾಡಿಕೊಂಡರೆಂಬ ಸುದ್ದಿ ಬಂದಿದೆ ಸಮುದ್ರ ಮಾರ್ಗವಾಗಿಯೂ ಕಳ್ಳಸಾಗಣೆ ಸರಾಯಿ ಬರುತ್ತ ದಾಗಿ ಸುದ್ದಿಯುಂಟು ಅಧಿಕಾರಿಗಳು ಅತಿಜಿಯಲ್ಲೂ ದಕ್ಷತೆ ತೋರಿರುವದು ಅವಶ್ಯವಿದೆ

ನಮ್ಮ ಜಿಲ್ಲೆಯಲ್ಲಿ ಜೈನ ಸಾಕುವ ಉದ್ಯೋಗ ನಡಿಲು ಸಾಕಷ್ಟು ಇಂದಿಗೆ ರೈತರಿಗೆ ಈ ವ್ಯವಸಾಯದ ಶಿಕ್ಷಣ ಸೊಡುವನು ಅವಶ್ಯವಿದೆ ಅದ್ದರಿಂದ ರೈತರಿಗೆ ಶಿಕ್ಷಣ ಸದ್ದಿಯಂ ಪದ್ಧತಿಯಿಂದ ಜೈನ ಸಾಕಲು ಪ್ರೋತ್ಸಾಹ ಸರಿಕ್ಕೂ, ಅನುಕೂಲ ಸ್ಥಳಗಳಲ್ಲಿ ಜೈನ ಸಾಕುವ ಶಿಕ್ಷಣ ಕೊಡಲಿಕ್ಕೂ, ಜನರಿಗೆ ಈ ಉದ್ಯೋಗದ ವಾಸ್ತವಿಕತೆಯನ್ನೂ ವ್ಯಾಪಾರವನ್ನು ಪೂರ್ಣಸರಿಕ್ಕೂ, ಈ ವ್ಯವಸಾಯ ಕೈಕೆಸುಳ್ಳವರ ಮಾರ್ಗದಲ್ಲಿ ಬರಲುಬಾದ ಬೊಂದರೆಗಳನ್ನು ದೂರಪಡಿಸಲಿಕ್ಕೂ, ಈ ಉದ್ಯೋಗಕ್ಕೆ ಅವಶ್ಯತ್ವರ್ಯ ಅನು ಟು ಮಾಡುವೆಂದು ನಂದಿಗೆ

— ಶ್ರೀ ರಘುನಾಥ ನಮರ್ಥ —

ಗಳನ್ನೂ ತಮ್ಮ ಮುದ್ದಿನ ಮಕ್ಕಳನ್ನೂ

ಆಮಾಂಶ-ಅತಿಸಾರ
ವಿಷಮಜ್ವರ

ಈ ಭಯಂಕರ ರೋಗಗಳಿಂದ ರಕ್ಷಿಸಿಕೊಳ್ಳಿರಿ !!

ಈ ಕೆಳಗಿನ ಔಷಧಗಳು ರೋಗನಿವಾರಕ ಹಾಗೂ ಗುಣಕಾರಿ ಇರುತ್ತವೆ

ಲಘುವಾದಿ ಗುಟಿಕಾ:- ಅಜೀರ್ಣ ಮೂಲಕ ವಿರೇಚನ, ಹೊಟ್ಟೆಯುಬ್ಬೆರಿಣ, ತಿಪ್ಪ ಹೊಟ್ಟನೋವು, ಅಗ್ನಿಮಾಂದ್ಯ ಮತ್ತು ವಾತಕಾರ ಇವುಗಳಲ್ಲಿ ಒಳಗೆ ಉಪಯುಕ್ತ ವಾದದ್ದು

ಸುಲೇರಿಯಾ ಮಿಕ್ಸರ:- ಎಲ್ಲಾ ತರದ ಜ್ವರಗಳ ಮೇಲೆ ರಾಮಬಾಣ ಮದ್ದು.

ಅನ್ಯ ಬೇಗುವಷ್ಟು, ಸಲಹೆಯು ಮೇರೆಗೆ ಕೊಂಡುಕೊಳ್ಳಿರಿ

ದತ್ತಾತ್ರೇಯ ಕೃಷ್ಣ ಸಾಂಡೂ ಬ್ರದರ್ಸ

ಆರ್ಯೌಷಧಿ ಕಾರಖಾನೆ, ಚೆಂಬೂರ-ಮುಂಬಯಿ

☞ ಟಮಲ ಒಸ್ಸಿಗೆ ಹೋಗುವ ಪ್ರಯಾಣಿಕರಿಗಾ ಹಾಗು ಆಸ್ಪತ್ರೆಯಲ್ಲಿ ಚಿಕಿತ್ಸೆಯ ಬಗ್ಗೆ ಬಂದವರಿಗ ಚಲೋ ವ್ಯವಸ್ಥೆ ಇದೆ!

ಒಮ್ಮೆ ಬಂದು ಸಂದರ್ಶಿಸಿರಿ!

ಬಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್. (ರಿಜಿಸ್ಟರ್ಡ)

ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದರಲ್ಲೂ ಜಗತ್ಪ್ರಸಿದ್ಧವಾಗಿದೆ

ಶ್ರೀಕರ ಕಸ್ತೂರೀ ಮಾತ್ರೆ. [ಪೊಟ್ಟಣಕ್ಕೆ 0-1-0.

ಸುವಾಸನೆಗೆ, ಈ ಮಾತ್ರೆಗಳ ಸೇವನೆಯಿಂದ ಹೊಟ್ಟೆನೋವು, ಕೆಮ್ಮು, ಅಜೀರ್ಣ, ಜ್ವರ ಮುಂತಾದವುಗಳಿಗೆ ವಿಶೇಷವಾಗಿ ಬೆಲೆ 0—4—0, 0—2—0.

ಶ್ರೀಕರ ಬಾಲಸಂಜೀವಿನಿ.

ಬಿಕ್ಕಮಕ್ಕಳ ಮಂದಜ್ವರ, ಶೀತಜ್ವರ, ಎಳವು ಇತ್ಯಾದಿ ರೋಗಗಳಿಗ ಸಂಜೀವನ ಬೆಲೆ 0—4—0

ದೊರೆಯುವ ಸ್ಥಳ ಜೊನ್ನಾವರ ಕಲ್ಯಾಣಪುರ ಬ್ರದರ್ಸ ಕುಮಟಾ:- ದೇವಪ್ಪಾ ಆಯ್ಯ ನಾಯ್ಕ, ದಿ ನ್ಯೂ ಸರ್ವಾಯ ಏಜನ್ಸಿ, ದಿ ಸ್ವದೇಶಿಕ ಫಾರ್ಮಸಿ.

ನಂಜನಗೂಡು ಸದ್ವೈದ್ಯಶಾಲಾ, ಬ್ರಾಂಚ್- ರಥಬೀದಿ, ಮುಂಗಳೂರು.

ನೋಡಿದರೆ ಬಿಡದಿರುವ ಪುಸ್ತಕಗಳು.

೧ ಸಭ್ಯಕ ಬೋಲಿ
(ದಿ ಫ್ಯೂ ಬೋರ್ಡಿನಿಂದ ಹೊಸದಾಗಿ ಮಂಜೂರಾದ ಹಿಂದುಸ್ತಾನಿ ಪುಸ್ತಕ)

೨. ಹಿಂದುಸ್ತಾನಿ-ಮರಾಠಿ ಶಬ್ದಕೋಶ.
(ಸುಮಾರು ೧೫ ಸಾವಿರ ಶಬ್ದವ್ಯಸಗಳುಳ್ಳದ್ದು)

೩ ಶ್ರೀಭಾಷಾ ಶಿಕ್ಷಕ.
(ಕನ್ನಡ,ಮರಾಠಿ,ಹಿಂದಿ ೩ ಭಾಷೆಕಲಿಸುವ ಒಂದೇ ಪುಸ್ತಕ)

೪. ಸರ್ವಜ್ಞ ವಚನಗಳು.
(ಪದ್ಯ ಮತ್ತು ಟೀಕಾ ಸಹಿತವಾದದ್ದು)

೫ ಆಂಗ್ಲಭಾಷಾ ಪ್ರವೇಶಕ.
ಭಾಗ I ರಿಂದ III
(ಇಂಗ್ಲಿಷ ಶಾಲೆಯಿಲ್ಲದೆಸ್ಥಳ ಇಂಗ್ಲಿಷ ಕಲಿಯುವ ಸಾಧನ)

ಇವಲ್ಲದೆ ದ ಭಾ ಹಿಂದೀ ಪ್ರಚಾರ ಸಭಾ, ಮದ್ರಾಸ ಇವರ ಹಿಂದೀ ಪುಸ್ತಕಗಳೂ ಎಲ್ಲ ಬಗೆಯ ಶಾಲೇ ಕಲಿಯಾಗಿ ಕನ್ನಡದ ಪುಸ್ತಕಗಳೂ ಸಮ್ಮಲಿ ಸಿಗುತ್ತವೆ ಕತ್ತೆ - ದಿ ನ್ಯೂ ಸರ್ವಾಯ ಏಜನ್ಸಿ, ಕುಮಟಾ.

ಸುಲಭ ಕ್ರಯ! ಡಾಕ್ಟರ ಜೇ. ಬೀ. ಯವರ ಸುಗಂಧ ನಸ್ಯದ ಪುಡಿ. ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ

(Registered Trade Mark.)

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ದೊಗ್ಗಾತಪತ್ರ ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥ ವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿಕಲೆನೋವು ಕಲೆಯಜ್ಜುಯು ರೋಗಗಳು, ಕಣ್ಣುಗಳಲ್ಲಿ ಉಂಟಾಗಕ್ಕಯ ಸರ್ವ ವ್ಯಾಧಿ ಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟಿರ್ವ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯು ನ್ನೂ ಹೆಚ್ಚಿಸುವುದಕ್ಕೆ ಮೂರು ಬೆಟ್ಟಿನಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಪೂರ್ಣವಾಗುವರು. ಇದನ್ನು ಅನೇಕ ಪ್ರಭುಗಳು ತಮ್ಮ ನೈಹದಲ್ಲಿ ಉಪಯೋಗಿಸುತ್ತಿರುವರು. ಇದರಿಂದ ಬೇರೆಯಾಗಿ ಉಪಯೋಗಿಸಬಹುದು. ಬಾಯಿಂದ ಸೀಸೆ ಹೊಕ್ಕಲೆ ಕಳಿಸಲಾಗಿದೆ. ಬುದ್ಧಿ ಒಂದಕ್ಕೆ ಕ್ರಯ ರೂ ೦-೪-೦, ನಿಷ್ಪಿಳಕೆ ಡಜನ್‌ಗೆ ರೂ. ೨-೮-೦ ವಿ ಪಿ ಲಂ ದುಬಾವಣಿ ನಿಮ್ಮ ಹೆಸರನ್ನೂ, ಆಪ್ತೆಸನ್ನೂ ಸಯವಾಗಿ ತಿಳಿಯುವಂತೆ ಬರೆಯಿರಿ

ಪತ್ತೆ - ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಫೋ ಬಾ ಗಂ೦, ಪಾರ್ಕ್‌ಟೌನ ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ವರ ಲಕ್ಷ್ಮಿ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 6th November, 1939.

ವರ್ಷ ೨೨

ಪತ್ರದ ವರ್ಗಣೆ.

ಕುಮಟೆಯಲ್ಲಿ ಆಗಾವು
ರೂಪಾಯಿ ೩-೪-೦.
ದುಸ್ಥಿಯಾರ್ದರಿಗಿಂತ
ರೂ. ೩-೧-೦.
ಬ್ರಿ. ಪಿ. ಅಂಚೆಯ್ಕ ಸೇರಿ
ರೂಪಾಯಿ ೩-೪-೦.
ಪ್ರತಿ ಸಂಚಿಕೆಗೆ ೦-೧-೦
ಹಲೇ ಸಂಚಿಕೆಗೆ ೦-೨-೦

ಕಾನಡಾವೃತ್ತ.

THE KANARA NEWS.

ನರಪತಿವಿಹಿತಕರ್ಮಾ ತೋಷ್ಟಾತಾಂ ಯಾತಿ ಲೋಕೇ ಜನಪದಹಿತಕರ್ತಾ ಸ್ವಲ್ಪತಾಂ ಯಾತಿ ಕಾಲೇ।
ಇತಿ ಸಹತಿ ವಿವೇಚ್ಯ ವರ್ತಮಾನೇ ಸಮಾನೇ ನೃಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೧೯

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಪ್ಯಾಂ ಆಯಿನ (೧೫ ಎಮ್ ಉದ್ದ) ೧ ಸಾಲುಗಳವರೆಗೆ ರೂ.೧-೦-೦
೧ ನಂತ್ರ ಪ್ರತಿಸಾಲಿಗೆ ೦-೨-೦.
ಹತ್ತಿಂಗದ ಸಾಲು ಎಷ್ಟು ಹತ್ತಾರಿರುವದೋ ೧ ಮಾಸ ದಿಂದ ಅಷ್ಟು ಸಾಲುಗಳು ಪ್ರಕಟಿಯಲ್ಪಡುವವು.
ಬಾಕಿ ಜಾಹೀರಾತುಗಳ ಅಗ್ರ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೬ ನೊಂಪೆ ನವಂಬರ ಸನ್ ೧೯೩೯ನೇ ಇಸವಿ.)*-

KANAN DEVAN TEA

— QUALITY PRODUCTION ! —

* ಇಡೀ ಹಿಂದುಸ್ಥಾನದಲ್ಲೆಲ್ಲ ಸುಪ್ರಸಿದ್ಧವಾದ *

ಕಾನನ್ ದೇವನ್

ಕಂಪನಿಯ ಚಹಾ

ಈ ಚಹವು ಸಮುದ್ರ ಸಂಡೆಯಿಂದ ೬,೦೦೦ ಫೂಟು ಎತ್ತರವಾದ
ನೀಲಗಿರಿ ಬೆಟ್ಟದಲ್ಲಿ ಬೆಳೆದಿದ್ದು, ಒಳ್ಳೇ ಸುವಾಸನೆಯುಳ್ಳದ್ದಿರುತ್ತದೆ !
ನಮ್ಮಲ್ಲಿ ಎಲ್ಲಾ ತರಗತಿಯ ಚಹಾ ತೋಕ ಯಾ ಚಿಲ್ಲರೆಯಾಗಿ ದೊರೆಯುತ್ತದೆ.
☛ ವ್ಯಾಪಾರಸ್ಥರಿಗೆ ವಿಶೇಷ ಸವಲತು ಕೊಡಲ್ಪಡುವದು !

ಹೊನ್ನಾವರ-ಭಟ್ಕಳ-ಸಿದ್ದಾಪುರ ಸ್ಟಾಕಿಸ್ಟರು:—
ವಿ. ವಿ. ಶಾನಭಾಗ ಎಂಡ್ ಕೋ,
ಹೊನ್ನಾವರ.

ಕುಮಟಾ ಸ್ಟಾಕಿಸ್ಟರು:—
ಡಿ. ಕೇ. ನಾಯಕ ಎಂಡ್ ಕೋ,
ಕುಮಟಾ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಶ್ರೀಧರ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ರಿಜಿಸ್ಟರ್ಡ ಆಫೀಸು:— "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ— ಕುಂದಾಪುರ. ದ. ಕ.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು.
ಕಾಯಂ ತೇವಣಾತಿಗಳ ಬಡ್ಡಿ ದರಗಳು— 6 ತಿಂಗಳು ಮುದ್ದತ್ತಿಗೆ 3½%; 1 ವರ್ಷದ ಮುದ್ದತ್ತಿಗೆ 4%;
2 ವರ್ಷ ಯಾ ಹೆಚ್ಚಿನ ಅವಧಿಗೆ 4½%.
ಅಲ್ಪ ಮುದ್ದತ್ತಿನ ತೇವುಗಳು (Short term deposits) ಸಹ ಅಂಗೀಕರಿಸಲ್ಪಡುವವು.
ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಕುಂದಾಪುರ,
1—1—1939.

The Agricultural & Industrial Bank, Ltd.

ಲೋಕಪ್ರತಿನಿಧಿಗಳೊಡನೆ ಸರ್ವಾಧಿಪತಿಗಳ ಸಂಧಾನ ತಿರುಗಿ ಸುರುವಾಗಿದೆ!

ಕಳೆದ ವಾರ ನಾವು ಸೂಚಿಸಿದಂತೆ ಸರ್ವಾಧಿಪತಿಗಳು ತಿರುಗಿ ರಂಪ್ಟದ ಮುಂದಾಳುಗಳೊಡನೆ ಸಂಧಾನ ನಡಿಸಲುರಂಭಿಸಿದ್ದಾರೆ ನವಂಬರ್ ತಾ ೧ ನೇ ಬುಧವಾರ ದಿಲ್ಲಿಗೆ ಬಂಡು ತಮಗೆ ಭೇಟ್ಟಿಯಾಗಬೇಕೆಂದು ಅವರು ಮಹಾತ್ಮರಿಗೂ, ರಾಷ್ಟ್ರಪತಿ ರಾಜೇಂದ್ರ ಪ್ರಸಾದರಿಗೂ, ಮುಸ್ಲಿಮ್ ಲೀಗಿನ ಅಧ್ಯಕ್ಷರಾದ ಜನಾಬ ಮಹಮ್ಮದ ಅಲಿ ಜಿನ್ನಾರವರಿಗೂ ತಂತಿಯಿಂದ ಬಿನ್ನವಿಸಿದ್ದರು ಆ ಕಾಲಕ್ಕೆ ಡಾ|| ರಾಜೇಂದ್ರ ಪ್ರಸಾದರು ವರ್ಧ ದಲ್ಲಿಯೇ ಇದ್ದರು ಅವರೂ ಮಹಾತ್ಮರಾ ಕೂಡಿ ತಮ್ಮ ಪರಿವಾರದೊಡನೆ ವಿಂಗಳವಾರ ಮುಂಜಾನೆ ಸ್ಪೆಂಡ್ ಟ್ರೈನ್ ಎಕ್ಸ್‌ಪ್ರೆಸ್ ಗಾಡಿಯಿಂದ ದಿಲ್ಲಿಗೆ ಸಯಾಣ ಬೆಳೆಸಿದರು ಗಾಡಿಯು ಸಂಯಾಗಿ ನಡದಿದ್ದರೆ ಬುಧವಾರ ಅಪರಾಹ್ನದಲ್ಲಿ ಅವರು ದಿಲ್ಲಿಗೆ ಮುಟ್ಟ ತ್ತಿದ್ದರು ಆದರೆ ಮಾರ್ಗದಲ್ಲಿ ಏನೋ ತೊಂದರೆ ಯಾಗಿ ಆವರ ಆಗಬಂಡಿಯು ದಿಲ್ಲಿಗೆ ತಲ್ಪಲು ಸುಮಾರು ತಾಸು ವಿಳಂಬವಯಿತು ಹೀಗಾಗಿ ಒದ ವಾರವೆ ಧ್ವನ್ಯೆ ೧ ಘಂಟೆಗೆ ಎಂದು ನಿಶ್ಚಿಯಿ ಸಲ್ಪಟ್ಟಿ ಭೇಟ್ಟಿಯ ಸಮಯ ಸಂಜೆ ೫ಕ್ಕೆ ಮುಂದೂಡಲ್ಪಟ್ಟಿತು ಮಹಾತ್ಮರ ಗಾಡಿಯು ಭಾಗಪುರದ ಮೇಲಿಂದ ಹಾದು ಹೋಗುತ್ತಿದ್ದಾಗ ಮಧ್ಯಸ್ಥಾಂತದ ಮಂತ್ರಿಗಳಾ ನಾಗಪುರದಿಂಳಗಿನ ಕೊಂಗ್ರೆಸ ಪ್ರಮುಖರೂ ಮಹಾತ್ಮರಿಗೆ ಸುಖಪ್ರಯಾಣ ಬಯಸಲೆಂತಾಗು ರೈಲ್ವೆ ನಿಲ್ದಾಣಕ್ಕೆ ಹೋಗಿದ್ದರು ಅವರ ಕೂಡ ಮಾತ ನಾಡುತ್ತ, "ಸರ್ವಾಧಿಪತಿಗಳು ಕರೆದಪ್ಪ ಸಾರೆ ನಾನು ಅವರಿಗೆ ಭೇಟ್ಟಿಯಾಗುವೆ, ನಾನು ಆಶಾವಾದಿ ಸಾಯುವ ವರೆಗೆ ಆಶಾವಾದಿಯೆ' ಉಳಿಯ ವೆನು !" ಎಂದು ಮಹಾತ್ಮರು ನುಡಿದಿದ್ದರೆಂದು ತಿಳಿಯುತ್ತದೆ

ದಿಲ್ಲಿಯಲ್ಲಿ ಮಹಾತ್ಮರೂ ರಾಷ್ಟ್ರಪತಿಗಳೂ ಬಿರ್ಲಾ ಭವನದಲ್ಲಿ ಇಳಕೊಂಡಿದ್ದರು ಅವರಿಬ್ಬರೂ ಮಧ್ಯಾನ್ಹ ೩-೨೦ಕ್ಕೆ ಮೋಟರ ಒಂಡಿಯ ಲ್ಲಿ ಕುಳ ತು ಬಿ|| ಜಿನ್ನಾರವರು ಇಳಕೊಂಡಿದ್ದ ಬಂಗಲೆಗೆ ಹೋದರು ಮಹಾತ್ಮರು ನೇರವಾಗಿ ಸರ್ವಾಧಿಪತಿ ಗಳ ಆರಮನೆಗೆ ಹೋಗದೆ ಬಿ|| ಜಿನ್ನಾರವರ ನಿವಾ ಸಸ್ಥಾನಕ್ಕೆ ಹೋದದ್ದು ನೋಡಿ ಜನರು ಚಕಿತ ರಾದರು! ಮಹಾತ್ಮರೂ ರಾಷ್ಟ್ರಪತಿಗಳೂ ಸರ್ವಾಧಿ ಪತಿಗಳ ಆರಮನೆಗೆ ಪ್ರತ್ಯೇಕವಾ ಗಿ ಹೋಗುವರೆಂತ ಲೂ ಬಿ|| ಜಿನ್ನಾರವರು ಒಬ್ಬರೆ ಗಂಟಾಗಿಯೇ ಅಲ್ಲಿ ತಲ್ಪುವರೆಂತಲೂ ಇತ್ತಿಟ್ಟಿನವರ ಭೇಟ್ಟಿಯನ್ನೊಪ್ಪಿ ದನಿಸಿ ತಂದ ಶ್ರೇಯಸ್ಸನ್ನು ಸರ್ವಾಧಿಪತಿಗಳು ತಮ್ಮ ಕಡೆ ನೆಳಕೊಳ್ಳುವರೆಂತಲೂ ಜನಸಾಮಾನ್ಯರ ಎಣಿಕೆಯಿತ್ತು ಆದರೆ, ದೂರದರ್ಶಿ ಮಹಾತ್ಮರು ಆ ಶ್ರೇಯಸ್ಸನ್ನು ಪರಸ್ಪ ಸರ್ವಾಧಿಪತಿಗಳಿಗೆ ಸಿಗ ಗೊಡಲಿಲ್ಲ ಘಂಂತ ಮಾತೆಯ ಪ್ರಕಾರನ್ನ ಒತ್ತ ಟ್ಟಿಗೆ ತರಲು ಪರಸ್ಪರ ಸಹಾಯದ ಇಚ್ಛೆಯ ಪ್ರೇರಣೆ ಯ ಅವಶ್ಯಕತೆ ಇಲ್ಲವೆಂದು ಕೃತಿಯಿಂದ ತೋರಿಸ ವದಕ್ಕಾಗಿಯೇ ಮಹಾತ್ಮರು ಬಿ|| ಜಿನ್ನಾರವರ ನಿವಾ ಸಸ್ಥಾನಕ್ಕೆ ಹೋಗಿ ಅವರೊಡನ ಅರ್ಧ ತಾಸು ಮಾತುಕತೆಯಾಡಿ ಮೂವರೂ ಕೂಡಿ ಮುಂದೆ ಸರ್ವಾಧಿಪತಿಗಳ ಆರಮನೆಗೆ ಹೋಗಿಹೊರಟರು ಬಿ|| ಜಿನ್ನಾರವರ ನಿವಾಸಸ್ಥಾನದಿಂದ ಹೊರಟಿಂದ ಕೂಡಲೆ, ಮಹಾತ್ಮರು ಜಿನ್ನಾರವರಿಗೆ ತಮ್ಮ ನ್ನೋಟಾರಿನಲ್ಲೇ ಕೂಡ್ರಲು ಬಿನ್ನವಿಸಿದರು ಆಗ ಬಿ ಜಿನ್ನಾರವರು, ನಾನು ನನ್ನ ಮೋಟಾರಿನಲ್ಲಿ ಕುಳತಲೆ ನಿಮ್ಮನ್ನೆಸ ಹಿಂಬಾಲಿಸಿ ಬರುವೆನು !" ಎಂದು ಉತ್ತರವಿಯಯಿಸಾಗಿ, 'ಹಾಗಾದರೆ ನಾವು ಮೂವರೂ ನಿನ್ನ ಗಾಡಿಯಲ್ಲೇ ಹೊಗುವಾ !" ಎಂದು ಮಹಾತ್ಮರು ನಗೆಮೊಗದಿಂದ ನುಡಿದರಾಗಿಯ, ಮಂಡಿ ಬಿ|| ಜಿನ್ನಾರವರ ಗಾಡಿಯಲ್ಲೇ ಕೂತು ಮೂವರೂ ಒಕ್ಕಟ್ಟಿಗೆ ಸರ್ವಾಧಿಪತಿಗಳ ಆರಮನೆ ಯನ್ನು ಸೇರಿದರಾಗಿಯೂ ದಿಲ್ಲಿಯ ವಾರ್ತಾವಾಹ ಕರು ತಿಳಿಸುತ್ತಾರೆ

ಮಹಾತ್ಮಾದಿ ತ್ರಿವರ್ತಿಗಳು ಸರಿಯಾಗಿ ೩-೩೦ ಕ್ಕೆ ಸರ್ವಾಧಿಪತಿಗಳ ನಿವಾ ಸ್ಥಾನಕ್ಕೆ ಎತ್ತಿದರು ಕೂಡಲೆ ಸರ್ವಾಧಿಪತಿಗಳ ಅಂಗರಕ್ಷಕರು ಅವರನ್ನು ಸ್ವಾಗತಿಸಿ ಸರ್ವಾಧಿಪತಿಗಳ ಬಳಿ ಕರೆದೊಯ್ದರು ಲೋಕಪ್ರತಿನಿಧಿಗಳು ಸರ್ವಾಧಿಪತಿಗಳೊಡನೆ ಇಪ್ಪತ್ತ ಳ ನಿಮಿಷ ತನಕ ಮಾತುಕತಾಡಿಕೊಂಡು ಹಿಂತಿರುಗಿದರು ಏನೇನು ಚರ್ಚೆಯಾಯಿತೆಂದು ತಿಳಿಯಲು ಮಾರ್ಗವಿಲ್ಲ "ನವು ಬಿಡ್ಡು ಮನಸ್ಸಿನಿಂದ ಸರ್ವಾಧಿಪತಿಗಳ ಕೂಡ ಚರ್ಚ ಮಾಡಿದಿವ್ವೆ, ಅವರು ನಮ್ಮ ಮುಂದಿಟ್ಟ ವಿಷಯಗಳನ್ನು ನವ್ವು (ಕೊಂಗ್ರೆಸ) ಕಾರ್ಯಕಾರಿ ಮಂಡಳಿಯಲ್ಲಿ ಈಗ ಆಲೋಚಿಸುವವರಿದ್ದೇವೆ !" ಎಂಬುದೇ ರಾಷ್ಟ್ರಪತಿ ಗಳು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಲೊಪ್ಪಿದರು ಈ ಸಂದರ್ಶನವಂದ ಮೇಲೆ ಹೊರಬಿ ಸರಕಾರಿ ಪ್ರಕ ಟಣೆಯಲ್ಲಾ ಚರ್ಚೆಯ ವಿಷಯಗಳ ದಿಗ್ದರ್ಶನ ತೋರಿಬರುವದಿಲ್ಲ ಸಾಮಾನ್ಯ ಸ್ವರೂಪದ ಚರ್ಚೆ ಯಾಯಿತಾ, ಆ ಬಳಿಕ ಸಭೆಯು ಮುಂದರಿಸಲ್ಪಟ್ಟಿತು ಎಂದು ಆ ಪ್ರಕಟಣೆಯು ತಿಳಿಸುತ್ತಿತ್ತು ಆ ಸಭೆಯು ಮುಂದರಿಸಲ್ಪಟ್ಟಿತು ? ಮತ್ತು ಮುನೇ ಸಂದ ರ್ಶನವೆ ಎಂದು ಒದಗಿಬರಲಿದೆ ? ಎಂಬ ವಿಸರ ತಿಳಿಯಲಿಲ್ಲ

ಆದರೆ ಪತ್ರಿಕಾ ಪ್ರತಿನಿಧಿಗಳು ಸುಮ್ಮಗುಳಿಯುವವರೆ? ಅವರು ಆಚೆಈಚೆಯ ಮಾತುಗಳನ್ನೂ ಮಾಜಾಜ ರಮುಖಚರ್ಯೆಗಳನ್ನೂ ಸೂಕ್ಷ್ಮವಾಗಿನೋಡಿಕೊಂ ಡುಲೋಕಪ್ರತಿನಿಧಿಗಳಿಗೂ ಸರ್ವಾಧಿಪತಿಗಳಿಗೂ ಏನೇನು ಚರ್ಚೆಯಾಗಿರಬಹುದೆಂಬದನ್ನ ಊಹಿಸಿ ಕೆಲವು ವಿವರಗಳನ್ನು ಪ್ರಕಟಿಸಿದ್ದಾರೆ ಸರ್ವಾಧಿಪತಿಗಳು ಸಲಹಾಕಾರ ಮಂಡಳದ ತಮ್ಮ ಕ್ಲಪ್ಪನೆಯ ನ್ನು ವಿಸ್ತರಿಸಿ ಹೆಳ್ಳರಬಹುದಾಗಿಯೂ, ಆದರೆ ಅದು ಲೋಕಪ್ರತಿನಿಧಿಗಳಿಗೆ ಗ್ರಾಹ್ಯವಾಗಲಿಲ್ಲವಾ ಗಿಯೂ ಸುದ್ದಿಗಾರರು ತರ್ಕಿಸುತ್ತಾರೆ ಆದ್ದರಿಂದ ಮಧ್ಯವರ್ತಿ ಸ್ಥಿ ತಿಯಲ್ಲಿ ಲೋಕಪ್ರತಿನಿಧಿಗಳಿಗೆ ಸಂಧಿಸಿಕೊಂಡು ತಮ್ಮ ಕಿಂಯಕ್ಕಾರಿ ನುಂಡಳವನ್ನೇ ಸರ್ವಾಧಿಪತಿ ಗಳು ವಿಸ್ತರಿಸಯೋಜಿಸಿರಬೇಕಾಗಿ ಸದ್ದಿಗಾರರ ಊಹೆಯ ದೆ ಸಲಹೆಗಾರರ ಮಂಡಳಕ್ಕಿಂತ ಕಾರ್ಯ ಕಾರಿ ನ ಂಡಳದ ಅಧಿಕಾರವೆ ಹೆಚ್ಚಿಗೆ ಇರುವದರಿಂದ ಲೋಕಪ್ರತಿನಿಧಿಗಳು ಕಾರ್ಯಕಾರಿ ಮಂಡಳದ ವಿಸ್ತರಣೆಯನ್ನೇ ಒಪ್ಪುವರೆಂದು ಅವರು ಪ್ರತಿಪಾದಿಸು ತ್ತಾರೆ ಈಗ ಸರ್ವಾಧಿಪತಿಗಳ ಕಾರ್ಯಕಾರಿ ಮಂಡ ಳದಲ್ಲಿ ೨ ಮಂದಿ ಬ್ರಿಟಿಶರು, ಮೂವರು ಭಾರತೀಯರು, ಹಿಂಗೆ ೬ ಸದಸ್ಯರಿದ್ದಾರೆ ಈ ಸಂಖ್ಯೆಯನ್ನು ೧೫ಕ್ಕೇರಿಸಿ, ಆವುಗಳಲ್ಲಿ ೮ ಸ್ಥಳಗಳನ್ನು ಕೊಂಗ್ರೆ ಸಿಗೂ, ೩ ಸ್ಥಳಗಳನ್ನು ಮುಸ್ಲಿಮ್ ಲೀಗಿಗೂ, ೧ ಸ್ಥಳವನ್ನು ಅಧಿಕಾರೇತರ ಯುರೋಪಿಯನ್ ರಿಗೂ, ೧ ಸ್ಥಳವನ್ನು ಬ್ರಿಟಿಶ ಸಿನ್ಸಿಲಿಯನ್ ಅಧಿಕಾರಿಗಳಿಗೂ, ಇನ್ನುಳಿದ ೧ ಸ್ಥಳವನ್ನು ಯಾವದೊಂದು ಹಿಂದಿ ಸಂಸ್ಥಾನದ ಸಚಿವರಿಗೂ ಕೊಡುವ ಆಲೋ ಚನೆ ನಡೆದಿರಬೇಕೆಂದು ಸುದ್ದಿಗಾರರು ಊಹಿಸು ತ್ತಾರೆ ಈ ವಾರ್ತಾವಾಹಕರು ಆಪ್ಪಕ್ಕೇ ತಡೆಯದೆ, ಕಾರ್ಯಕಾರಿ ಮಂಡಳದ ವಿಸ್ತರಣೆಯ ಯೋಜನೆ ಲೋಕ ಪ್ರತಿನಿಧಿಗಳಿಗೆ ಸಮ್ಮತವಾದಲ್ಲಿ, ಸರ್ವಾಧಿಪ ತಿಗಳ ಕಾರ್ಯಕಾರಿ ಮಂಡಳದ ಸದಸ್ಯ ಸ್ಥಾನಗಳಿಗೆ ಯಾರ್ಯಾರ ನೇಮಣೂಕಿಗಳಾಗಬಹುದೆಂಬದನ್ನೂ ತರ್ಕಿಸಿ ಅವರ ಯಾದಿಯನ್ನೂ ಪ್ರಸಿದ್ಧ ಮಾಡಿ ದ್ದಾರೆ ಕೊಂಗ್ರೆಸಿಗೆ ಸಿಗಬಹುದಾದಂಥ ೮ ಸ್ಥಾನಗಳಿಗೆ ಡಾ|| ರಾಜೇಂದ್ರ ಪ್ರಸಾದ, ಸರದಾರ ವಲ್ಲಭಭಾಯಿ ಪಟೇಲ, ಪಂ|| ಜವಹರಲಾಲ ನೆಹರೂ, ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯ, ಶ್ರೀ|| ಘನಶ್ಯಾಮದಾಸ ಬಿರ್ಲಾ, ಶ್ರೀ|| ಜಯರಾಮದಾಸ ದೌಲತರಾಮ ಇವರೂ, ಒಬ್ಬ ಶೀಖ ಮುಂದಾಳು ಗಳೂ, ಒಬ್ಬ ದಲಿತ ವರ್ಗದ ಮುಂದಾಳುಗಳೂ ಆಂಶಲ್ಪಡುವೆಂದು ಅವರು ಭವಿಷ್ಯ ವರ್ತಿಸಿದ್ದಾರೆ ಕೊಂಗ್ರೆಸಿನ ಪರವಾಗಿ ಯಾವ ಮಹಮ್ಮದೀಯರಿಗೂ ಆಂಶವಾರದಾಗಿ ಬಿ|| ಜಿನ್ನಾರವರು ಹೆಚ್ಚು ತೊಡಬಹ ದಂತ ! ಹಾಗೆ ಅವರು ಹಟ ಹಿಡಿಯದಿದ್ದಲ್ಲಿ, ಕೊಂಗ್ರೆಸಿನ ಒಂದು ಸ್ಥಳ ಮಾ|| ಅಬುಲ ಕಲಮ ಆಝಾದರಿಗೆ, ಅವರು ಒಪ್ಪದಿದ್ದರೆ ಸರ್ ವಯ್ಕುರ ಹುಸೆನರಿಗೆ ಕೊಡಲುಬಹುದೆಂದಂತೆ ! ಒ ಸ್ಥಿರ್ ಲೀನ ನಿ ೩ ಸ್ಥಳಗಳು ಬಿ|| ಜಿನ್ನಾ ಸರ್ ಸಿಕಂದರ ಹಯಾತ್‌ಖಾನ ಮತ್ತ ಖಿಜ್ರಹಾಯಿಮುದ್ದೀನ ಇವರ ವಾಗಿ ಹೋಗಲವಂತೆ ! ಮತ್ತು ಸಂಸ್ಥಾನ-ಸಚಿವರಿಗೆ ಕೂಡಮಾಡಿದ ಸ್ಥಳಕ್ಕೆ ಸರ್ ಎಸ್ಸರ್ ಇಸ್ಮಾಯಿಲ್‌ರವರ ನೇಮಣೂಕಿಯಾಗಬಹುದೆಂ ದೂ, ಆವರೇ ಬ್ರಿಟಿಶ ಹಿಂದುಸ್ಥಾನ ವತ್ತ ಹಿಂದೀ ಹಿಂದುಸ್ಥಾನಗಳ ನಡುವೆ ಭಿನ್ನಾಭಿ ಪ್ರಾಯ ಮಾಡಿತರಲು ಆರ್ಪರಿಯುವರೆಂದೂ ಹೇಳೋಣಾಗು ತ್ತಿದೆ ಈ ಎಲ್ಲ ಯೋಜನೆಗೆ ಬ್ರಿಟಿಶ ಸರಕಾರದ ಒಪ್ಪಿಗೆ ಸಿಕ್ಕಿದಯೋ ಇಲ್ಲವೋ ಎಂದು ಸುದ್ದಿಗಾರರು ಸಂಶಯ ತರ್ಕೊಳ್ಳುತ್ತಾರೆ ಆದರೆ ಏನಾದರೂ ಮಾಡಿ ಲೋಕ ಪ್ರಮ ಖರೊಡನೆ ಸಂಧಿಯನ್ನೊ ದಗಿಸಿ ತಂದು, ಪ್ರಕೃತ ಮಹಾಯುದ್ಧದಲ್ಲಿ ಭಾರ ತೀಯರು ಅಂತಿಕರಣಪೂರ್ವಕ ನೆರವಾಗುವಂತೆ ಸರ್ವಾಧಿಪತಿಗಳು ಪ್ರಯತ್ನ ಮಾಡದೆ ಇರಲಾರ ರೆಂದು ಈ ಪತ್ರಿಕಾ ಪ್ರತಿನಿಧಿಗಳ ಅಂಬೋಣವಿದೆ

***

ಹಿಂದು-ಮುಸ್ಲಿಮ್ ಐಕ್ಯದ ಪ್ರಯತ್ನಗಳೇ ?

ಸರ್ವಾಧಿಪಂಗಳ ಆರಮನೆಯಂದ ಹೊರಬಿದ್ದ ರಾಷ್ಟ್ರಪತಿಗಳೂ ಮಹಾತ್ಮರೂ ನೆಟ್ಟಿಗೆ ಬಿರ್ಲಾ ಭವನ ಕ್ಕೆ ಮರಳಿ ಬರದೆ, ಇನ್ನೊನ್ನೆ ಬಿ|| ಜಿನ್ನಾರವರ ಒಂಗಲೆಗೆ ಹೋದರು ಮತ್ತು ಅಲ್ಲಿ ಅರ್ಧ ಘಂಟೆ ಯ ತನಕ ಏನೋ ಮಹತ್ವದ ವಿಷಯಗಳ ಕುರಿತು

ಮುಸ್ಲಿಮ್ ಲೀಗ ಪ್ರಮುಖರ ಧೋರಣೆ ಅನುಯಾಯಿಗಳಿಗೆ ಮಾನ್ಯವಿಲ್ಲ!

ಚರ್ಚೆಯನ್ನು ಮೆಗಿಸಿ ಮಹಾತ್ಮರು ತಿರುಗಿ ಬಿರ್ಲಾ ಭವನಕ್ಕೆ ಒಂದಾಗಿ ಸಂಜೆ ೫ ಗಂಟೆ ಒಡಿಯಿತು ಇನ್ನೂ ಬಿ|| ಜನ್ನಾರವರೊಡನೆ ಚರ್ಚೆ ನಡೆಯುತ್ತಿದೆ ಆ ಚರ್ಚೆಯನ್ನು ಮುಂದರಿಸುವ ದಕ್ಕಾಗಿ ಗುರುವಾರ ಮಹಾತ್ಮರು ಪ್ರಯಾಗದಿಂದ ಪ್ರ|| ಜವಹರಿರಾಲರನ್ನು ಕರೆಯಿಂಡಿದ್ದರು ಆದರಂತೆ ಪಂ|| ಜವಾಹರಿರಾಲರಿಗೆ ಬಿ|| ಜಿನ್ನಾರವರಿಗೂ ದೀರ್ಘ ಚರ್ಚೆ ನಡೆಯಿತು ಈ ಚರ್ಚೆಯಲ್ಲಿ ಅವಶ್ಯ ಬಿದ್ದರೆ ಸಹಾಯ ಮಾಡುವದಕ್ಕಾಗಿ ಮಹಾತ್ಮರು ಶನಿವಾರದ ತನಕ ದಿಲ್ಲಿಯಲ್ಲಿ ಉಳ ಬಿದ್ದರು

ಬಿ|| ಜಿನ್ನಾರವರೂ, ಮುಸ್ಲಿಮ್ ಲೀಗ ಕಾರ್ಯಕಾರಿ ಮಂಡಳದ ಪ್ರಮುಖರೂ ತಮ್ಮ ಅಂತರಂಗ ಉದ್ದೇಶಸಾಧನೆಗಾಗಿ ಭಾರತೀಯ ಸ್ವಾತಂತ್ರ್ಯದ ಬೇಡಿಕೆಯನ್ನು ಮೆರೆಯಾಡಿರುವರಂದರೂ ಮುಸ್ಲಿಮ್ ಲೀಗಿನ ತರುಣರೂ, ಹಿಂದುಸಭಾಸದರೂ ಹಾಗಾಗಬಾರದು ಎಂದು ಒಪ್ಪುವದಿಲ್ಲ ಅದಕ್ಕಾಗಿಯೇ, ಕೊಂಗ್ರೆಸ ಪಕ್ಷದವರು ವಂದೆ ಮಂಡಿಸಿದ ಸ್ವಾತಂತ್ರ್ಯದ ಬೇಡಿಕೆಗೆ ವಿರೋಧ ಮಾಡಿದ ಅಪಕೀರ್ತಿ ತಮಗಿ ಬರಬಾರದೆಂಬ ಉದ್ದೇಶದಿಂದಲೇ ಸಂಯುಕ್ತಪ್ರಾಂತದ ಎಸೆಂಬ್ಲಿ ಯೋಗಿನ ಮುಸ್ಲಿಮ್ ಲೀಗ ಪಕ್ಷದ ಸಭಾಸದರು ಸಭಾತ್ಯಾಗದ ನೆವ ಮಾಡಿ ಹೊರ ಹೊರಟುಹೋಗಿದ್ದರಂಬಿ ಬಲ್ಲವರು ಹೇಳುತ್ತಾರೆ ಆದ್ದರಿಂದ ಬಿ|| ಜಿನ್ನಾರವರು ತಮ್ಮ ಪ ಬಂಚಿನ ಧೋರಣೆಯನ್ನು ಬದಲಿಸದೇಕಾಗಿದೆಯೆಂದೂ, ಕೊಂಗ್ರಸಿನೊಡನೆ ಸಾಮೋದಾಬಾರದ ಮಾತುಗಳನ್ನಾಡುವ ಪ್ರಸಂಗ ಬಂದೂದಗಿದೆಯೆಂತಲೂ ಹೇಳುತ್ತಾರೆ ಸರ್ವಾಧಿಕಾರಿಗಳಾದರೂ ಬುದ್ಧವಾರವೆ ಸಂದರ್ಶನದ ಕಾಲಕ್ಕೆ ಕೊಂಗ್ರಸ ಲೀಗಗಳೊಳಗಿನ ಮತ ಭೇದಗಳನ್ನು ಪರಿಹರಿಸಿಕೊಂಡು ಯಾವದೊಂದು ಒಮ್ಮತದ ಯೋಜನೆಯನ್ನು ತಮಗೆ ಸಂದರಪಡಿಸಲು ಇತ್ತ್ಯಟ್ಟಿನವರಿಗೂ ಬೋಧಿಸಿರಬಹುದೆಂಬುದಿಯಾಗಿ ತರ್ಕ ಮಾಡಲಂಗುತ್ತಿದೆ ಅಂತ ವ ಹಾತ್ಮರು ಈ ಸಾರೆ ಹಿಂದುಮುಸ್ಲಿಮ್ ಐಕ್ಯವನು ಒದಗಿಸಿತರಲು ಮನಸ್ಸು ಮಾಡಿರುವರೆಂದು ತಿಳಿದುಬರುತ್ತದೆ

***

ಮಂತ್ರಿಮಂಡಳಗಳ ರಾಜೀನಾಮೆಗಳು

ಮದ್ರಾಸ ಇಲಾಖೆಯ ಗವ್ಹರ್ನರರಾದ ಲೊರ್ಡ ಅರ್ಸ್ಕಿನ್‌ರವರು ಕಳೆದ ಸೋಮವಾರ ಮಧ್ಯಾಹ್ನದಲ್ಲಿ ತಮ್ಮ ಮಂತ್ರಿಮಂಡಳದ ರಾಜೀನಾಮೆಗಳನ್ನು ಸ್ವೀಕರಿಸಿ, ಹಿಂದುಸ್ಥಾನ ಸರಕಾರದ ಕಾಯಿದೆಯ ೫೨ನೇ ಕಲಮಿನನ್ವಯ ಪ್ರಾಂತದ ಸರ್ವಾಧಿಕಾರವನ್ನು ತಮ್ಮ ಕಡೆಗೆ ಸೆಳಕೊಂಡಿದ್ದಾರೆ ಕೊಂಗ್ರೆಸ ಮಂತ್ರಿಗಳು ರಾಜೀನಾಮೆ ಕೊಟ್ಟ ತರುವಾಯ ಇನ್ನಾವ ಪಕ್ಷದವರೂ ಮಂತ್ರಿಮಂಡಳ ರಚಿಸಲು ಸಿದ್ಧರಾಗದ್ದರಿಂದ ಏರುವಾಯವಾಗಿ ತಾವು ಪ್ರಾಂತಿಕ ಘಟನೆಯನ್ನು ಒದಿಗೂತ್ಪಟೀಲಾಯತೆಂದೂ, ಕಾನೂನು ಮಂಡಳಕ್ಕಿರುವ ಯಾವತ್ತೂ ಅಧಿಕಾರವನ್ನು ತಾವೆ ಸ್ವೀಕರಿಸುವ ಪ್ರಸಂಗ ಬಂದಿರುತ್ತದಾಗಿಯೂ ಪ್ರಕಟನೆ ಹೊರಡಿಸಿರುತ್ತಾರೆ ಇನ್ನು ಮುಂದೆ ಅವಶ್ಯಕ ಕಾಯಿದೆಗಳನ್ನು ಮಾಡುವ ಅಧಿಕಾರವೂ, ರಾಜ್ಯಭಾರವನ್ನು ನಡಿಸುವ ಹೊಣೆಯೂ ಸ್ವಾಂತಾಧಿಪತಿಗಳ ಮೇಲೆಯೆ ಇರುತ್ತದೆ ಪ್ರಾಂತಾಧಿಪತಿಗಳು ತಮಗೆ ಸಲಹೆ ಕೊಡುವದಕ್ಕಾಗಿ ಹಿಂದೆ ಲೆಲಕಾಲ ಒಡಿಸಾ ಪ್ರಾಂತದ ಬದ್ದಿ ಗವ್ಹರ್ನರರಾಗಿದ್ದ ಮಿ|| ಜ. ಟಿ ಬೋಗ, ಮಿ|| ಎಚ್ ಎಮ್ ಹುಡ್ ಮತ್ತು ಮಿ|| ಟಿ ಜಿ ರುದರಫೋರ್ಡ ಎಂಬ ಮೂವ ಬ್ರಿಟಿಶ ಅಧಿಕಾರಿಗಳನ್ನ ತಮ್ಮ ಸಲಹೆಗಾರರನ್ನಾಗಿ ನೇಮಿಸಿಕೊಂಡಿದ್ದಾರೆ ಮತ್ತು ಅವರೊಳಗೆ ದೀರೆ ಬೀರೆ ಇಲಾಖೆಗಳನ್ನು ಹಂಚಕೊಟ್ಟಿದ್ದಾರೆ ಸರ್ವಾಧಿಪತಿಗಳು ಆತ್ತ ದಿಲ್ಲಿಯಲ್ಲಿ ಲೊಕಪ್ರತಿನಿಧಿಗಳೊಡನೆ ಸಂಧಾನದ ಮಾತು ನಡಿಸುತ್ತಿರುವಂಗ ಇತ್ತ ಮದ್ರಾಸದ ಗವ್ಹರ್ನರರು ಪ್ರಾಂತಿಕ ರಾಜ್ಯಘಟನೆಯನ್ನೇ ವಿಸರ್ಜಿಸಿದ್ದು ಅಶುಭ ಲಕ್ಷಣವಾಯಿತೆಂದು ದಿಲ್ಲಿಯ ರಾಜಕಾರಣಜ್ಞರ ಅಂಬೋಣ ಮದ್ರಾಸದಂತ ಇನ್ನು ಳಿದ ಪ್ರಾಂತಗಳ ಗವ್ಹರ್ನರರು ತಮ್ಮ ಮಂತ್ರಿಮಂಡಳಗಳ ರಾಜೀನಾಮೆಗಳನ್ನು ಗಾಬರಿಯಿಂದ ಸ್ವೀಕರಿಸದಂತೆ ಸರ್ವಾಧಿಪತಿಗಳು ಸೂಚನೆ ಕೊಟ್ಟಿದ್ದರಾಗಿ ಸ್ಥಿತಿಯಂಟು ಮುಂಬಯಿಯ ಪ್ರಧಾನ ಮಂಡಳದವರು ಕಳೆದ ಮಂಗಳವಾರ ಸಂಜೆ ೪ ಗಂಟೆಗೆ ಸ್ವಾಂತಾಧಿಪರಿಗೆ ಛಿಟ್ಟಿಯಾಗಿ ತಮ್ಮ ರಾಜೀನಾಮೆಗಳನ್ನು ಕೊಟ್ಟಯಾಗಿ ತಮ್ಮ ರಾಜೀನಾಮೆಗಳನ್ನು ಕೂಡಲೆ ಸ್ವೀಕರಿಸದೆ, ರಾಜ್ಯಭಾರದ ಬೇರೆ ವ್ಯವಸ್ಥೆಯಾಗುವ ತನಕ, ನಿಮ್ಮ ರಾಜೀನಾಮೆಗಳನ್ನು ಸ್ವೀಕರಿಸಲಾರೆವೆಂದು ಗವ್ಹರ್ನರರು ನಾ|| ಪೇರರಿಗೆ ಪ್ರತ್ಯುತ್ತರ ಕೊಟ್ಟ ರುದಿನ ಸರ್ ಅಕಮ್ಮದ ದಿಹಲಿಯವರವರಿಗೆ ಒರವಾಡಿಕೊಂಡು ಅವರು ಮಂತ್ರಿಮಂಡಳ ರಚಿಸಲು ಒಪ್ಪುತ್ತಾರೆಂದೂ ಚರ್ಚೆ ಮಾಡಿದರು ಸರ್ ಅಹಮ್ಮದ ದಿಹಲಿಯವರು ತಮ್ಮ ಪಕ್ಷದ ಸಭಾಸದರ ಹಾಗು ತಮ್ಮ ಮುಂಗಾಣಿಗಳಿಂದ ಬಿ|| ಜಿನ್ನಾರವರ ಅಭಿಪ್ರಾಯ ತಿಳಿಕೊಂಡು, ಹಿಂದಿನಿಂದ ತಿಳಿಸುತ್ತೇನೆಂದು ಹೇಳಿ ತಿರುಗಿ ಒಂದರು ಕಾಲಿಗೆ ಅವರು ತಮ್ಮವನೊಡನೆ ಆಲೋಚನೆ ಮಾಡಿ, ಸದ್ಯದ ಪರಿಸ್ಥಿತಿಯಲ್ಲಿ ಕಮ್ಮಿಂದ ಮಂತ್ರಿಮಂಡಳ ರಚಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆಂದು ತಿಳಿದುಬಂದಿದೆ ಸರ್ ಅಹಮ್ಮದರಿಗೆ ಮಂತ್ರಿಮಂಡಳ-ರಚನೆಯ ಹೊಣೆಯನ್ನು ಸ್ವೀಕರಿಸಲು ಅಂತರಾಳ ವ ಬ್ರಿಮಂಡಳದ ಸಭಾಸದರೂ ಸಿದ್ಧರಿದ್ದಾಗಿ ಸರ್ ಧನಜಕಹಂ ಕೂಪರ್, ಸರ್ ಸಿದ್ದಾಪ್ಪಾ ಕಂಬಳಿ ಮತ್ತು ಬಿ|| ಜಮುನಾದಾಸ ಮೇಧಾ ಇವರು ಆಗ್ರಹ ಮಾಡಿದ್ದರಾಗಿ ನಮೂದಿಸಲು ವಿನೋದವೆನಿಸುತ್ತಿದೆ! ಗವ್ಹರ್ನರರಿಗೆ ವಿಶ್ವತಂತ್ರಿ ರಾಜ್ಯಭಾರ ನಡಿಸಗೊಡುವದಕ್ಕಿಂತ ಅಲ್ಪ ಮೆತದ ಮಂತ್ರಿಮಂಡಳ ರಚಿಸುವದೇ ಇಷ್ಟವೆಂದು ಈ ಪ್ರಕಟದ ತತ್ವಜ್ಞಾನ! ಸರ್ ಅಹಮ್ಮದ ದಿಹಲಿಯವರು ಈ ಪ್ರಮೋಶಿಗಳ ಮಾತಿಗೆ ಕಿವಿಗೊಡಲಿಲ್ಲವೆಂಬ ಮಾತು ಬೇರೆ ಮೊನ್ನೆ ಶನಿವಾರ ಮುಂಜಾನೆ ಇಲಾಖಾಧಿಪತಿಗಳಿಂದ ಸರ್ ಕೂಪರ ಲುಸ್ಟೇಯವರು ತಮ್ಮ ಮಂತ್ರಿಮಂಡಳದ ರಾಜೀನಾಮೆಯನ್ನು ಸ್ವೀಕರಿಸಿ ಮಿ|| ಜ ವ್ಯಾಲ್ಲ, ವಿ|| ಎಚ್ ಎಫ್ ನೈಟ್ ಮತ್ತು ಮಿ|| ಜೇ ಎ ಮಿದನ ಈ ಮೂವ ಸಿವ್ಹಿಲಿಯರ್ ಅಧಿಕಾರಿಗಳನ್ನು ತಮ್ಮ ಸಲಹೆಗಾರನ್ನಾಗಿ ನೇಮಿಸಿಕೊಂಡಿದ್ದಾರೆ

ಆದರಂತೆ ಸಂಯುಕ್ತ ಪ್ರಾಂತ ಮತ್ತು ಬಿಹಾರ ಪ್ರಾಂತಗಳ ಮಂತ್ರಿಮಂಡಳಗಳೂ ತಮ್ಮ ರಾಜೀನಾಮೆಯನ್ನು ತಮ್ಮ ತಮ್ಮ ಗವ್ಹರ್ನರರಿಗೆ ಒಪ್ಪಿಸಿದವು ಸಂಯುಕ್ತ ಪ್ರಾಂತದ ಎಸೆಂಬ್ಲಿಯೊಳಗಿನ ವಿರೋಧಿ ಪಕ್ಷದ ಮುಖಂಡರಾದ ಚೌಧರಿ ಖಲಿಕ್ ಉಝಮಾನರವರೂ, ಬಿಹಾರ ಎಸೆಂಬ್ಲಿಯ ವಿರೋಧಿ ಪಕ್ಷದ ಮಿ|| ಮಹಮ್ಮದ ಯುನೂಸರವರೂ, ಶ್ರೀ|| ಚಂದ್ರೀಕ್ಯರಪ್ರಸಾದ ನಾರಾಯಣ ಸಿಂಹರವರೂ ಮಂತ್ರಿಮಂಡಳ ರಚಿಸಲು ಏನಾಕರಿಸಿದರು ಮಂತ್ರಿಗಳ ರಾಜೀನಾಮೆಗಳನ್ನು ಶುಕ್ರವಾರ ಆಯಾ ಗವ್ಹರ್ನರರು ಸ್ವೀಕರಿಸಿ ಹಿಂದುಸ್ಥಾನ ಸರಕಾರದ ಕಾಯಿದೆಯ ೫೨ನೇ ಕಲಮಿನನ್ವಯ ಆಯಾ ದೆ ಮಂಡಳದ ಅಧಿಕಾರವನ್ನೂ ರಾಜ್ಯಭಾರ ನಡಿಸಿಕೊಂಡು ಹೋಗುವ ಹೊಣೆಯನ್ನೂ ತಮ್ಮ ಕಡೆ ತಕ್ಕೊಂಡಿದ್ದಾರೆ

ಮಧ್ಯಪ್ರಾಂತ ಎಸಂಬ್ಲಿಯ ಅಧಿವೇಶನಕ್ಕೆ ಕಳೆದ ಬುಧವಾರ ಪ್ರಾರಂಭವಾಗಿದೆ ನಾಳೆ ಬರುವ ಬುಧವಾರದೊಳಗ ಕೆಲವು ಮಹತ್ವದ ಮಸೂದೆಗಳನ್ನು ಮಂಜೂರ ಮಾಡಿಕೊಂಡು ಅಲ್ಲಿಯ ಮಂತ್ರಿಮಂಡಳವು ಗುರುವಾರದಸ್ಟರಲ್ಲಿ ತಮ್ಮ ರಾಜೀನಾಮೆಯನ್ನೀಯುವದೆಂದು ತಿಳಿಯಬ್ಬತ್ತದೆ

ಒಡಿಸಾ ಎಸೆಂಬ್ಲಿಯಲ್ಲಿ ಸರ್ವಾಧಿಪತಿಗಳ ಪ್ರಥಟನೆಯ ನಿಷೇಧ ಮಾಡುವ ಗೊತ್ತುವಳಿಯು ಮೊನ್ನೆ ಶುಕ್ರವಾರ ವಂಬ್ಯ ಪ್ರಧಾನರ ದ ನಾ|| ವಿಶ್ವನಾಥ ದಾಸರವರ ಕಡೆಯಿಂದ ಮಂಡಿಸಲ್ಪಟ್ಟಿತು ಆವರ ಮಂತ್ರಿಮಂಡಳವೂ ಈ ವಾರ ಅಧಿಕಾರಸನ್ಯಾಸ ಮಾಡಿ ಹೊರಹೊರಟು ಬರುವದು

ಆಸಾಮದ ಪರಿಸ್ಥಿತಿ ವಿಲಕ್ಷಣವಾಗಿದೆ ಅಲ್ಲಿ ೨೮ ಕೊಂಗ್ರೆಸ ಮಂತ್ರಿಮಂಡಳವಿಲ್ಲ ಕೊಂಗ್ರೆಸಿಗರೂ ಕೊಂಗ್ರೆಸಿನೊಡನೆ ಸಹಕಾರ ಮಾಡಲೇಕುವ ಬೇರೆ ಕೆಲ ಪಕ್ಷಗಳೂ ಕೂಡಿ ಸಮ್ಮಿಶ್ರ ಮಂತ್ರಿಮಂಡಳ ರಚಿಸಿಕೊಂಡು ರಾಜ್ಯಭಾರ ನಡಿಸುತ್ತಿದ್ದಾರೆ ರಾಜೀನಾಮೆ ಕೊಡುವ ಸೂಚನೆ ಸಮ್ಮಿಶ್ರ ಮಂತ್ರಿಮಂಡಳದ್ದು ಬೆಂಬಲ ಕೊಡುವ ಕೊಂಗ್ರೆಸೆತರ ಪಕ್ಷಗಳಿಗೆ ಒಪ್ಪಿಗೆಯಿಲ್ಲ ರಾಜೀನಾಮೆ ಕೊಡುವದರಿಂದ ಸಮ್ಮಿಶ್ರ ಮಂತ್ರಿಮಂಡಳವು ಕೈಕೊಡಿಯುವ ಬೇರೆ ಬೇರೆ ಲೋಕೋದ್ಯಾರದ ಯೋಜನೆಗಳು ಅವಶ್ಯಕ್ಕೆ ಕಡಿಯಾವದೆಂತಲೂ ಆವುಗಳ ಅಭಿಪ್ರಾಯ ಆದ್ದರಿಂದ ಆಸಾಮ ವ್ಯಾಂತವನ್ನು ರಂಜನಾಮಯ ನಿಯಮಕ್ಕೆ ಆಪವಾದವೆಂದು ಹೊರಪಡಿಸಿಕೊಡಬೇಕಾಗಿ ಅವರು ವೈಸ್‌ರಿಯೆಂಟರಿ ಸೆಕ್ರಾಕೂಟೆಯ ಕಡೆ ಬನ್ನವಿಸಿದ್ದಾರೆ ಮತ್ತು ಎಲ್ಲ ಪರಿಸ್ಥಿತಿಯನ್ನೂ ಕಮಿಟಿಯ ಮುಂದಿಟ್ಟ ಕಮಿಟಿಯ ಅಭಿಪ್ರಾಯ ತಿಳಿಕೊಳ್ಳಲು ಕೆಲವು ಪ್ರಮುಖರ ವಿಪ್ಪ ಮಂಡಳವನ್ನು ಕಳುಹಿಸಿಕೊಟ್ಟಿದ್ದಾರೆ

***

(೧೦೬ನೇ ಪುಟದ ಮೇಲೆ ಮುಂದರಿದೆ)

ದೊರೆಗಳ ಸಭೆಯಲ್ಲಿ ಹಿಂದೀ ಬೇಡಿಕೆಗಳ ಚರ್ಚೆ.

ಲೊರ್ಡ್ ಸೆಮ್ಮುಅಲ್‌ರ ಕೊಂಗ್ರೆಸ ಪಕ್ಷದ ಸಮರ್ಥನೆ.

ಭಾರತ ಮಂತ್ರಿ ಝುಟ್ಟಿಂಡ ದೊರೆಗಳ ನಕಾರ ಘಂಟೆ!!

ಕಳೆದ ಗುರುವಾರ ಹಿಂದುಸ್ಥಾನದ ಪರಿಸ್ಥಿತಿಯ ಕುರಿತು ಪಾರ್ಲಿಮಂಟಿನ ಮೊರೆಗಳ ಸಭೆಯ ಲ್ಲಿ ಬಹಳ ಬೋಧಪ್ರದ ಚರ್ಚೆಯಾಯಿತು. ಆದರೆ ಸಾರಾಂಶ ಈ ಕೆಳಗೆ ಕೊಡಲಾಗಿದೆ

ಚರ್ಚೆಯನ್ನು ಪ್ರಾರಂಭಿಸುತ್ತ ಕೂಲಿಕಾರಪಕ್ಷದ ಸ್ಪೆಲ್ ದೊರೆಗಳು ಮಾಡಿದ್ದರೆನಂದರೆ — ಭಾರತೀಯ ಪರಿಸ್ಥಿತಿ ಕಂಡು ನಮ್ಮ ಪಕ್ಷಕ್ಕೆ ಬಹಳ ಚಿಂತೆ ಯಾಗಿಹತ್ತಿದೆ. ಭಾರತೀಯರ ಆಕ್ಷೆ-ಆಕಾಂಕ್ಷೆಗಳನ್ನ ಪೂರೈಸುವದರ ಮೇಲೆಯೇ ಸರಕಾರಕ್ಕೆ ನವ್ಯಪಕ್ಷದ ಬೆಂಬಲ ಅವಲಂಬಿಸಿಕೊಂಡಿದೆ. ಈಗ ಭಾರತದಲ್ಲಿ ಆ[illegible]ತ್ವದಲ್ಲಿರುವ ಸ್ವರಾಜ್ಯಯಂತ್ರಕ್ಕೆ ಕೇಲು ಹಾ[illegible] ಬಾರದೆಂದು ನಾವು ಹಿಂದಿನ ಮುಕ್ಷಪ್ರಭುಗಳಿಗೆ ಹೇಳು ತ್ತಿರುವಂತೆ, ಬರೀ ನಕಾರಾತ್ಮಕ ಉತ್ತರವನ್ನಾಗಲಿ ಭವಿಷ್ಯದ ಬಗ್ಗೆ ಅಸ್ಪಷ್ಟ ಆಸ್ವಾಸನೆಗಳನ್ನಾಗಲಿ ಕೊಡುವ ಧೋರಣೆಯನ್ನು ಸರಕಾರವು ಅನುಸರಿಸು ವದಾದರೆ ಸರಕಾರಕ್ಕೆ ನಮ್ಮ ಪಕ್ಷದ ಬೆಂಬಲ ದೊರೆ ಯಲಿಕ್ಕಿಲ್ಲೆಂದು ನಾನು ಎಚ್ಚರಿಕೆ ಕೊಡಲಿಚ್ಛಿಸು ತ್ತೇನೆ. ಭಾರತೀಯರು ತಮ್ಮ ರಾಷ್ಟ್ರದ ರಾಜ್ಯಭಾರ ನಡಿಸಿಕೊಂಡು ಹೋಗುವ ಪಾತ್ರತೆಯನ್ನು ಚೆನ್ನಾಗಿ ಸಿದ್ಧಗೊಳಿಸಿದ್ದಾರೆ ಸಾಮಂತ ಸ್ವರಾಜ್ಯ ದೊರೆ ತನಿಸಲು ಅವರಿಗೆ ಪೂರ್ಣ ಅಧಿಕಾರವಿದೆ ವತ್ತು ಅದ ನ್ನು ಸಂಪಾದಿಸಲು ಭಾರತೀಯರು ಕೈಕೊಳ್ಳಬಹು ದಾದ ಯಾವತ್ತೂ ನ್ಯಾಯ್ಯ ಮತ್ತು ವ್ಯವಹಾರ್ಯ ಪ್ರಯತ್ನಗಳಿಗೆ ನಾವು ಸಂಪೂರ್ಣ ಬೆಂಬಲ ಕೊಡುವೆವು

ಸ್ಪೆಲ್ ದೊರೆಗಳ ತರುವಾಯ, ಹರಿಪುರ ರಾಷ್ಟ್ರೀಯ ಸಭೆಯ ಕಾಲಕ್ಕೆ ಹಿಂದುಸ್ಥಾನದಲ್ಲಿ ಅಡ್ಡಾಡಿ ಸಮಗ್ರ ರಾಜಕೀಯ ಪರಿಸ್ಥಿತಿಯ ಅಭ್ಯಾಸ ಮಾಡಿದ ಸೆಮ್ಮುಅಲ್ ದೊರೆಗಳ ಸುದೀರ್ಘ ಭಾಷಣವಾಯಿ ತು. ಅವರು ನುಡಿದದ್ದೇನಂದರೆ — ಭಾರತೀಯ ಪರಿಸ್ಥಿತಿಯು ಬಹಳ ಜನರಿಗೆ ಚಿಂತೆಯನ್ನುಂಟುಮಾ ಡಿದೆ ಈ ವಿಷಯ ಕಳೆದ ವಾರ ಕೊಮನ್ಸ ಸಭೆ ಯಲ್ಲಿ ಚರ್ಚೆಯಾಗಿದೆ, ಇಲ್ಲೂ ಆ ವಿಷಯ ಪೂರ್ಣ ಚರ್ಚೆಯಾಗುವದು ಅವಶ್ಯವೆಂದು ನನ್ನ ಭಾವನೆ ಭಾರತೀಯರಿಗೂ ನಮಗೂ ಮತಭೇದವೆದ್ದಿದೆ, ಮತ್ಸೈಕ್ಯವೆಲ್ಲಿದೆ ? ಎಂಬದನ್ನು ನೋಡ ವಾ ಪ್ರಕೃತ ಯುದ್ಧದಲ್ಲಿ ಹಿಟ್ಲರನ ಅಕ್ರಮಣಶೀಲ-ನೀತಿಗೆ ಗಳೆಯಾಗಿದ್ದಿರೆ, ಅವರ ಪ್ರಜೆಗಳಿಗೆ ನಿಸರ್ಗದತ್ತ ಹಕ್ಕು ಗಳುಂಟಲ್ಲವೇ ? ೧೯೦೦-೩೦ ವರ್ಷಗಳ ಹಿಂದಾದ ಒಪ್ಪಂದಗಳ ಸತ್ಯಗಳನ್ನು ಹೇಳಿ ಸಂಸ್ಥಾನಿ-ಪ್ರಜೆ ಗಳ ಹಕ್ಕುಗಳನ್ನು ಕಾಲಡಿ ತುಳಿಯಲಾಗದು ಈ ಎಲ್ಲ ಪರಸ್ಪರ ವಿರೋಧಿ ಹಕ್ಕು ಬಾಧ್ಯತೆಗಳೊಳಗೆ ಸಮನ್ವಯ ಮಾಡಿತರುವದು ಒಳ್ಳೇ ಮುತ್ಸದ್ದಿಗ ಒಪ್ಪದ ಕೆಲಸವಾಗಿರುವದು! ಈ ಸಮಸ್ಯೆ ಬಿಡಿಸಲು ಸರಕಾರದವು ಇತ್ತೀಚೆಗೆ ಪ್ರಯತ್ನಿಸಿದ್ದು ಕಂಡು ಬರುವದಿಲ್ಲ ಸರ್ವಾಧಿಪತಿಗಳು ಸಂಯುಕ್ತ ರಾಜ್ಯ ಘಟನೆಯನ್ನು ಅಮಲಿನಲ್ಲಿ ತರುವ ತಮ್ಮ ಉತ್ಸಾಹದ ಭರದಲ್ಲಿ ಅಲ್ಪಸಂಖ್ಯಾಕರ ಸವ ಸೈಯನ್ನು ಬಿಡಿಸ ತಿಕ ಘಟನೆಗಳು ಯತ್ಕಿಂಚಿತ್ ಕಾರ್ಯ ಮಾಡಿವೆ ಯೆಂಬದನ್ನು ನಾವು ಒಪ್ಪಬೇಕು ಯಾವ ಮಂತ್ರಿ ಮಂಡಳದ ಒಗ್ಗೂ ಗನ್ನರ್‌ರಂಗಲ್ಲಿ ಹಿಂದುಸ್ಥಾನಿ ಸರಕಾರದವರಾಗಲಿ ಎಂದೂ ದೂರಕೊಂಡಿದ್ದಿಲ್ಲ ನಾವು ಸಾಮಂತ ಸ್ವರಾಜ್ಯದ ಕಿತ್ತನನ್ನಷ್ಟೇ ಒಪ್ಪುತ್ತೇವೆ, ಆದರೆ ಅದನ್ನು ಕಾರ್ಯರಂಗಕ್ಕೆ ತಳಿಸಲು ಪ್ರಯತ್ನಿಸುವದಿಲ್ಲ, ಎಂದು ರಾಷ್ಟ್ರೀಯ ಸಭೆಯವರು ನಮ್ಮನ್ನು ದೂರುತ್ತಾರೆ ಸಾಮಂತ ಸ್ವರಾಜ್ಯದ ಧ್ಯೇಯವನ್ನಷ್ಟೇ ತಿರುತಿರುಗಿ ತೋರಿಸಿ ಪ್ರಯೋಜನ ವೇನು? ಸರಕಾರದವರು ಮುಸಲ್ಮಾನರ ಇಲ್ಲವೆ ಸಂಸ್ಥಾನಿಕರ ಅನುಜ್ಞೆಯನ್ನು ನುಂಗೋತ್ತಿದ್ದಾರೆ ಇದರ ಅರ್ಥ ಭಾರತಕ್ಕೆ ಸ್ವರಾಜ್ಯ ಬೇಕೋ, ಬೇಡವೋ ? ಎಂಬ ಪ್ರಶ್ನೆಯ ನಿರ್ಣಯ ಮಾಡುವ ಅಧಿ ಕಾರ ಮುಸಲ್ಮಾನರ ಕೈಯಲ್ಲಿ ಕೊಟ್ಟಂತಾಗುತ್ತದೆ! ಮುಸಲ್ಮಾನರಿಗೆ ಸಂಯುಕ್ತ ರಾಜ್ಯಘಟನೆಯ ಕುರಿ ತು ಆಕ್ಷೇಪ ಬೆಂಬಲಿಸಲ್ಪಟ್ಟಿ, ಸಂಯುಕ್ತ ರಾಜ್ಯ ಪಟನೆ ಒಂದರೆ, ತಮ್ಮ ಗತಿಯೇನೆಂದು ಅವರು ಆಂಜುತ್ತಿದ್ದಾರೆ ತನ್ನವರ ಬೆಂಬಲಿಗಳ ನ್ನೆಲ್ಲ ಕುಂದುಗಳು ಒಪ್ಪುವ ತನಕ ತಾವು ಸಾಮಂತ ಸ್ವರಾಜ್ಯವನ್ನು ಆಮಲಿನಲ್ಲಿ ತರಲು ನಿರೋಧಿಸುವೆ ನೆಂದು ಅವರು ಹೇಳುವದು ಸಾಜಜಸಕಾದುದು ಅಂತು ಹಿಂದುಸ್ಥಾನದ ಭವಿತವ್ಯ ನಿರ್ಣಯಿಸುವ ಅಧಿಕಾರವನ್ನು ಒಕಡೂಡಿಗಿನ ಪ್ರಜೆಗಳಿಗೆ ಸಾಡುವದರ ಬದಲು, ೧೫ ಪ್ರಜೆಗಳಿಗೆ ಕೊಡುವದೇ ಸರಕಾರದ ಪಕ್ಷತ ಧೋರಣವೆಂಬಂತೆ ತೋರುತ್ತಿ ದೆ. ಈ ಬಗ್ಗೆ ಕೊಂಗ್ರೆಸು ಸಂಸ್ಥ ಕೊಳ್ಳತ್ತಿದ್ದುದು ಆಶ್ಚರ್ಯವಲ್ಲ ಮುಸಲ್ಮಾನಾದಿ ಅಲ್ಪಸಂಖ್ಯಾಕರ ಹಕ್ಕುಗಳನ್ನು ರಕ್ಷಿಸಬೇಕಾದುದು ಅವಶ್ಯಕವಿದಯೇ ನೋ ನಿಜ ಆದರಂತೆ ಒಡುಸಂಖ್ಯಾಕರ ಹಕ್ಕುಗಳ ನ್ನಾದರೂ ನಾವು ರಕ್ಷಿಸಬೇಡವೇ ? ಮಿಶ್ರ ಜಾತಿಗಳ ದ್ದ ದೇಶಗಳಲ್ಲಿ ಪ್ರಜಾಸತ್ತೆಯನ್ನು ಅವಲಂಬಿಸಲ್ಲಿ ತರು ವಾಗ ಒಡುಸಂಖ್ಯಾಕರ ರಾಜ್ಯಾಧಿಕಾರಕ್ಕೂ ಅಲ್ಪ ಸಂಖ್ಯಾಕರ ಸ್ವತಂತ್ರಕ್ಕೂ ಹೇಗೆ ಮಿಳಗೂ ಡಿಸುವೆಂಬಂದ ಕಠಿಣ ಸಮಸ್ಯೆ! ಸಂಸ್ಥಾನಿಕರ ಪ್ರಶ್ನೆಯು ಬಲು ಗಡಚಾರಿನೆ ಸಮಗೂ ಸಂಸ್ಥಾನಿ ಕರಿಗೂ ಆದ ಒಪ್ಪಂದಗಳನ್ವಯಸಂಸ್ಥಾನಿಕರಿಗೆ ಹಕ್ಕು ಗಳುಂಟಲ್ಲವೇ ? ಆದರೆ ಸಲಹೆಗಾರ ಮಂಡಳದ ನೇಮಣೂಕೆಯು ವಿನಕ ಇನ್ನಾತ್ಮನ ಪ್ರಶ್ನೆ ಯ ವಿಚಾರವೂ ಈಗ ಸಾಧ್ಯವಿಲ್ಲವೆಂದು ಸರ್ವಾಧಿ ಪತಿಗಳು ಹೇಳುತ್ತಾರೆ! ಪ್ರಕೃತ ಚರ್ಚೆಯಲ್ಲಿ ಒಂ ದು ಸಂಗತಿ ಮಾತ್ರ ಸ್ಪಷ್ಟವಾಗಿದೆ! ಅದ್ಯಾವದೆಂ ದರೆ, ಸಂಯುಕ್ತ ರಾಜ್ಯಘಟನೆಯನ್ನು ಅಮಲಿನಲ್ಲಿ ತರುವ ಮೊದಲು ರಾಷ್ಟ್ರೀಯ ಕಾಯಿದೆಯಲ್ಲಿ ತಿದ್ದು ಪಡಿ ಮಾಡುವಷನಸ್ಯವಿದೆಯೆಂಬದು! ಅದನ್ನು ನಾವು ಇಂಗಲೇ ಯಾಕೆ ಮಾಡಬಾರದು ?

ಭಾರತೀಯರು ಸ್ವಾತಂತ್ರ್ಯ ಬೇಡುತ್ತಿರಲ್ಲ! ಎಂದು ಕೆಲವರು ವಾದಿಸಬಹುದು. ನಾನು ಈ ಸ್ವಾತಂತ್ರ್ಯದ ಬಗ್ಗೆ ಮಹಾತ್ಮಾ ಗಾಂಧಿಯವರೊಡನೆ ಚರ್ಚೆ ಮಾಡಿದ್ದೇನೆ. ಭಾರತವು ತನ್ನ ಭವಿತವ್ಯ ವನ್ನು ನಿರ್ಣಯಿಸಲು ಸ್ವತಂತ್ರವಿರತಕ್ಕದ್ದೆಂಬುದೇ ಸ್ವಾತಂತ್ರ್ಯದ ಅರ್ಥವೆಂದು ಮಹಾತ್ಮರು ನನಗೆ ತಿಳಿ ಹೇಳಿದ್ದುಂಟು! ಭಾರತವು ಸ್ವತಂತ್ರವಾದರೆ ಅದು ಬ್ರಿಟಿಷ ಸಾಮ್ರಾಜ್ಯವನ್ನು ಬಿಟ್ಟುಹೋಗುವ ವೆಂದು ನನಗನಿಸದವಿಲ್ಲ ಭಾರತದರಕ್ಷಣಯ ಭಾರ ಬಹಳ ಮಟ್ಟಿಗೆ ನನ್ನ ಮೇಲೆಯೇ ಉಳಿಯುವದು. ಸಾಮ್ರಾಜ್ಯದ ಹೊರಗುಳದು ತನ್ನ ಅಕ್ಕರಕ್ಷಣೆ ಮಾಡಿಕೊಳ್ಳಲು ಭಾರತವು ಅಪಾರ ವೆಚ್ಚದ ಯೋಜನೆಗಳನ್ನು ಕೈಕೊಳ್ಳಲು ಅಣಿಯಾದೀತೆಂದು ನಾನು ಕಲ್ಪಿಸಲಾರೆ! ಯುದ್ಧ ಮುಗಿದ ಮೇಲೆ ಭಾವೀ ಸುಧಾರಣೆಗಳ ವಿಷಯ ಆಲೋ ಚಿಸಲು ಸಾಮ್ರಾಜ್ಯ ಸರಕಾರದ ಪ್ರತಿನಿಧಿಗಳು ಹಿಂದುಸ್ಥಾನದ ಬೇರೆ ಬೇರೆ ಜಾತಿ-ಮತ-ಪಂಥಗಳ ಹಾಗು ಸಂಸ್ಥಾನಿಕರ ಕೂಡ ಚರ್ಚೆ ಮಾಡಲು ಸಿದ್ಧರಾಗುವೆವೆಂದು ಸರ್ವಾಧಿಪತಿಗಳು ಸಾರಿದ್ದಾರಲ್ಲೇ? ಕೊಂಗ್ರೆಸು ಬೇಡುವ ಪ್ರಜಾಪ್ರತಿನಿಧಿ ಸಭೆಗೂ ಈ ಸಭೆಗೂ ಮಹದಂತರವಿದೆಯೆಂದು [illegible]ನಗನಿಸು ವದಿಲ್ಲ ಹಿಂದುಸ್ಥಾನದಲ್ಲಿ ಒಂದು ಸ್ವಿಪ್ಟ್ ಕೌನ್ಸಿಲು ಸ್ಥಾಪಿಸುವದು ಆವಶ್ಯವಿರುತ್ತಾಗಿ ನನ್ನ ಸೂಚನೆ ಯಿದೆ ಅದರೊಳಗೆ ಬೇರೆ ಬೇರೆ ಪಕ್ಷ-ಪಂಗಡಗಳ ಪ್ರಮುಖರನ್ನು ಸೇರಿಸಿಕೊಂಡಲ್ಲಿ ಪರಸ್ಪರ ಚರ್ಚೆ ಮಾಡಿಕೊಳ್ಳಲು ಬಹಳ ಅನುಕೂಲವಾಗುವಂತಿದೆ ಯುದ್ಧಾನಂತರದಲ್ಲಿ ಮಾಡಬೇಕಾಗಿರುವ ಘಟನೆಗಳ ಚರ್ಚೆ ಮಾಡಲು ನಾವು ಮಸಹತು ಸರಕಾರದ ಪ್ರತಿನಿಧಿಗಳಿಗೆ ಒರವಾಡಿಕೊಳ್ಳುವೆವು ಅದರಂತೆ ಹಿಂದೀ ಪ್ರತಿನಿಧಿಗಳನ್ನೂ ನಾವು ಸನಾನಸ್ಕಂಧರಂತೆ ಬರವಾಡಿಕೊಳ್ಳುವದು ಬಹಳವಾಗುವದು. ಭಾರತದ ಭವಿತವ್ಯವೇನೆಂದು ಈಗಲೇ ಜಾಹೀರ ಮಾಡಿರಿ!

ಸಾಮ್ರಾಜ್ಯದ ಸ್ಥಿರ ಪ್ರಜೆಗಳು ಭಾರತದಲ್ಲಿದ್ದಾರೆಂಬ ದನ್ನು ಮರೆಯಲಾಗದು.

ಕೊಂಗ್ರೆಸ್ಸು ವಂಶ್ಯಿಪದತ್ಯಾಗ ಮಾಡಿದ್ದು ಫಲ ಯಾಗಿಲ್ಲ. ಈ ಮಂತ್ರಿಮಂಡಳಗಳ ಕಾರ್ಯ ಬಹಳ ಪ್ರಕಂಸನೀಯವಾಗಿತ್ತು. ಸರ್ವಾಧಿಪತಿಗಳೂ ಅದನ್ನು ಒಪ್ಪಿದ್ದಾರೆ. ಪ್ರಾಂತಿಕ ಸರಕಾರಗಳಿಗೆ ಸಂಬಂಧಪಟ್ಟಿ ಲ್ಲದ ರಾಜಕಾರಣಕ್ಕಾಗಿ ಆ ಕಾರ್ಯಕ್ಕೆ ಕಡಿಮಾತಿದ್ದು, ಯುಕ್ತವೆನಿಸುವದಿಲ್ಲ. ಸರಕಾರದವರು ಲೋಕ-ಪ್ರತಿ ನಿಧಿಗಳೊಡನೆ ಒಕ್ಕೂದ ಮಾಡಿಕೊಂಡು ಮಂತ್ರಿಗಳು ಬೇಗನೇ ತಿರುಗಿ ಅಧಿಕಾರ-ಸ್ವೀಕಾರ ಮಾಡುವಂತೆ ಪ್ರಯತ್ನಿಸಬೇಕೆಂದು ನಾನು ಅಗ್ರಹ ಮಾಡುತ್ತೇನೆ.

ಸೆಸ್ಸುಯೆಲ್ ದೊರೆಗಳ ಹಿಂದಿನಿಂದ ಸೆಲಿಸಬರಿ ದೊರೆಗಳು ಮಾತಾಡಿಲ್ಲವು. ಲೊರ್ಡ ಸ್ಯಾಲ್ಸ್‌ಬರ್ರಿ ಭಾಷಣದಿಂದ ಬ್ರಿಟಿಶ ಸರಕಾರವು ಸರ್ವಾಧಿಪತಿ ಗಳೂ ಬೇಸರಗೊಳ್ಳುವ ಪ್ರಸಂಗವುಂಟೆಂದು ಭಾವಿಸಿ ದರು. ಹಿಂದೀ ಜನರು ತಮ್ಮ ಪಕ್ಷ ಸಮರ್ಥಿಸಿ ಬೇಡಿ ಕೆಗಳನ್ನು ಮಂಡಿಸುವದರ ಬದಲು ಈ ಇಕ್ಕಟ್ಟಿನ ಪ್ರಸಂಗದಲ್ಲಿ ಬ್ರಿಟಿಶ ಸರಕಾರದ ಮೇಲೆ ಒತ್ತಾಯ ಮಾಡಲೆದ್ದಿದ್ದಾರೆಂದು ಅವರು ಆರೋಪಿಸಿದರು ಆಂತರ್‌ರಾಷ್ಟ್ರೀಯ ಬಿಕ್ಕಟ್ಟು ಉಂಟಾಗಿರುವ ಸಮ ಯದಲ್ಲಿ ಸ್ವರಾಜ್ಯದ ಚಳವಳಿಯನ್ನು ಪ್ರಾರಂಭಿಸಲು ನೋಡಿ ಈ ದೊರೆಗಳಿಗೆ ಉದ್ವೇಗವಾಗಿದೆಯೇ! ತಮ್ಮ ಭಾಷಣವನ್ನು ಮುಂದರಿಸುತ್ತಾ, ನಾಮಂತ ಸ್ವರಾಜ್ಯ ಕೊಟ್ಟ ಮೇಲೆ ಭಾರತೀಯರಿಗೆ ಸಾಮ್ರಾಜ್ಯದಲ್ಲಿ ಸಮಾನ ಸ್ಥಾನವು ಸಿಕ್ಕಿತೆಂದು ಭಾವಿಸಿದ್ದರೆ ಅದು ಸ್ವಾತಂತ್ರ್ಯ ಸಿಗುವವರೆಗೆಷ್ಟೆ, ಪಾರ್ಲಿಮೆಂಟು ಸುಧಾರಣಾ ಕಾಯಿದೆಯೊಳಗೆ ಸೌರ್ವಭೌಮಿತ ವಿವಿಧ ಸಂಸ್ಥಾನ ಯೋಜನೆಗಳ ರೂಪಕಲ್ಪನೆಯಿಂದ ದೂರ ಗೊಳ್ಳುವದಿಲ್ಲವೆಂದು ಅವರು ಹೇಳಿದರು. ಭಾರತೀಯರಿಗೆ ಸ್ವಾತಂತ್ರ್ಯ ಕೊಟ್ಟಲ್ಲಿ ಹಿಂದುಳಿದ ವರ್ಗದವರ ಮೂಲ ನಿವಾಸಿಗಳ ಹಾಗು ಅಲ್ಪಸಂಖ್ಯಾಕರ ಗತಿಯೇನು? ಎಂದು ಕೇಳಿದರು ಮುಸಲ್ಮಾನ ಪ್ರತಿನಿಧಿಗಳು ಕಿರ ಸ್ಮರಿಸಿ ಸರಕಾರವು ಮುಂದರಿದಲ್ಲಿ ಅಗತ್ಯತೋಳಗಿನ ಮಿಲಿಟ್ಟಾನ ಸಮಾಜವು ಉದ್ಭಿನ್ನವಾಗುವದೆಂದು ಅವರು ಎಚ್ಚರಿಕೆ ಕೊಟ್ಟರು

ಕೊನೆಗೆ ಭಾರತ ಮಂತ್ರಿಗಳಾದ ಲೆಬ್ಲ್ಯಡ್ ದೊರೆಗಳು ಚರ್ಚಿಯ ಸಮಾರೋಪ ಮಾಡಿ-ತ್ತ ನುಡಿದದ್ದೇನೆಂದರೆ— ಸೆಸ್ಸುಯಲ್ ದೊರೆಗಳಿಗೆ ಭಾರ ತೀಯ ಸಮಸ್ಯೆ ಬಿಡಿಸುವದು ಎಷ್ಟು ಕಠಿಣವಿರುವ ದೆಂಬದರ ಕಲ್ಪನೆ ಇಲ್ಲ! ದುಂಡು ಮೇಜಿನ ಪರಿಸ ತ್ತುಗಳ ಕಾಲಕ್ಕೂ ಘಟನಾ ಕಾಯಿದೆಯ. ಚರ್ಚೆಯ ಕಾಲಕ್ಕೂ ಅವರು ಚರ್ಚಾ ವುಂಡಳದ ಸಭಾಸ ದರಿರುತ್ತಿದ್ದರೆ ಅವರಿಗೆ ಈ ಎಲ್ಲ ಸಂಗತಿಗಳು ತಿಳಿ ಯುತ್ತಿದ್ದವು. ಈಗ ಪ್ರಾಣಾಂತಕ ಯುದ್ಧ ನಡೆವರು ವಾಗ, ಘಟನಾ ಕಾಯಿದೆಯ ಪಿದ್ಧಾಂತ ಮಾಡುವ ದು ಶಕ್ಯವಿದೆಯೆಂದು ನವಗನಿಸುವದಿಲ್ಲ ಆದರೂ ಭಾರತೀಯರ ಸಮಾಧಾನಕ್ಕಾಗಿ ನಾವು ಸಿಲಹೆ ಮಂಡಳದ ಯೋಜನೆಯನ್ನು ಮುಂದೊಡ್ಡಿದ್ದೇವೆ ಸಲಹೆ ಮಂಡಳದಲ್ಲಿ ಪ್ರಜಾಪ್ರತಿನಿಧಿಗಳ ಸರಕಾರ ದ ನಂಬಗಸ್ಥ ಮಾಹಿತಿ ಸಿಗುವಂತೆ ಸರಕಾರಿ ಯೋಜನೆಗಳ ಮೇಲೆ ತಮ್ಮ ಅಭಿಪ್ರಾಯವ್ಯಕ್ತಪಡಿಸ ಲು ಅವರಿಗೆ ಇಂಬು ಸಿಗುವಂತಿದೆ, ಮತ್ತು ಮಂಡ ಳದಲ್ಲಿ ಬೇರೆ ಬೇರೆ ಜಾತಿಗಳ ಪ್ರತಿನಿಧಿಗಳು ಒಟ್ಟಿ ಗೂಡುವದರಿಂದ ಅವರೊಳಗಿನ ಮತಭೇದಗಳು ಅಳಿ ದುಹೋಗುವಂತಿನ ಇಷ್ಟು ಪ್ರಯೋಜನಕಾರಿ ಯೋ ಜನೆಯನ್ನು ಭಾರತೀಯರು ತಿರಸ್ಕರಿಸಿದ್ದು ಅತೀವ ದುಃಖಕರ. ಹಿಂದುಸ್ಥಾನದಲ್ಲಿ ಜಾತಿ-ಜಾತಿಗಳೊಳಗೆ ವೈಮನಸ್ಯವಿರುವ ಸಂಗತಿಯನ್ನು ಮರೆಯಲಾಗದು.

ಪೊನ್ನೈ ಮೊನ್ನೆ 'ನೆಂಜೆಕ್ಸ್‌ಚರ ಗಾರ್ಡಿಯನ್' ಪತ್ರಿಕೆ ಯಸ್ಟೆ ಪ್ರಕಟವಾದ ಜೆ| ಜಿನ್ನಾರವರ ಪ್ರಕಟಣೆ ತಾವು ನೋಡಿರಬಹುದು ಹಿಂದುಮುಸಲ್ಮಾನರ ಪ್ರಮುಖರ ನ್ನು ಒಕ್ಕಟ್ಟಗೆ ಕರೆಕಂದು ಅವರಲ್ಲಿ ಐಕ್ಯಮಾಡಿಕರುವ ದವಶ್ಯವಿದೆ. ಸರ್ವಾಧಿಪತಿಗಳು ಇದಿಗ ಈ ಕಾರ್ಯ ಕೈಕೊಂಡಿದ್ದಾರೆ. ಅವರು ದಿಲ್ಲಿಯಲ್ಲಿ ಕೊಂಗ್ರೆಸ-ಲೀಗುಗಳ ಮುಂದಾಳುಗಳೊಡನೆ ಚರ್ಚೆನಡಿಸಿದ್ದಾರೆ

ಕೊಂಗ್ರೆಸ ಮಂತ್ರಿಮಂಡಳಗಳು ಇದೀಗ ಅಧಿಕಾ ರತ್ಯಾಗಮಾಡಿ-ತ್ತಿರುವದು ಬಹು ವಿಷಾದಕರ ಸಂಗತಿ ವ್ಯಾಪಾರಾಧಿಪರು ನಿರುವಾಯವಾಗಿ ಪ್ರಾಂತಿಕ ಫಟ ನೆಯನ್ನು ವಿಸರ್ಜಿಸಿ ಪ್ರಾಂತಿಕ ರಾಜ್ಯಭಾರವನ್ನು ತಾವೇ ಅಂಗೀಕರಿಸಬೇಕಾದ ಪ್ರಸಂಗ ಒಂದಿದೆ.

ಹಿಂದೀ ಸಂಸ್ಥಾನಗಳಲ್ಲಿ ಜಾತೀಯ ಕಲಹ ಳಿ ಲ್ಲವೆಂದು ಸೆಮ್ಯುಅಲ್ ದೊರೆಗಳು ಕಪ್ಪೆ ತಿಳಿ ನಳಿಕೆ ಮಾಡಿಕೊಂಡಿದ್ದಾರೆ ಹೋದ ಬೇಸಿಗೆಯ ಲ್ಲಿ ಹೈಂಯಾದದೊಳಗಿನ ಇಸ್ಲಾಮು ಸರಕಾರದ ನಿರ್ಬಂಧ ಹಿಂದುಸ್ಥಾನದೊಳಗಿನ ಬೇರೆ ಬೇರೆ ಭಾಗಗಳಿಂದ ಹಿಂದು ಜನರು ಸತ್ಯಾಗ್ರಹ ಹೂಡಿದ ಸಂಗತಿ ನಾನು ಅವರ ನೆನಪಿಗಿ ಕಂದುಕೊಡಲಿಚ್ಚಿಸು ತ್ತೇನೆ ನಾವು ಸಾಮ್ರಾಜ್ಯಾಧಿಕಾರ ಕಾಪಾಡಿಕೊಳ್ಳ ಲು ಹೋಗಾಡುತ್ತಿದ್ದೇವೆಂದು ಕೆಲವು ಭಾರತೀಯರು ಇನ್ನೂ ಹೇಳುತ್ತಿದ್ದಾರೆ. ಒಂದು ೧ಷ್ಟದ ಮೇಲೆ ಇನ್ನೊಂದು ರಾಷ್ಟ್ರವು ಸಕ್ತಿಯನ್ನು ನಡಿಸು ವದೇ ಸಾಮ್ರಾಜ್ಯಾಧಿಕಾರದ ಅರ್ಥವಾಗು ಇ ಈ ಸಾಮ್ರಾಜ್ಯ ಸತ್ಪೆಯನ್ನು ರ್ಗನೇ ಇ ಹಿಂದುಸ್ಥಾನ ಸರಕಾರದ ಕಾಯಿದೆಯ ಕಾಲಕ್ಕೆ ನಾವು ಬಿಟ್ಟುಕೊಟ್ಟಿದ್ದೇವೆ ನಮಗ ಸಾಮ್ರಾಜ್ಯ ಲಾಲಸ ಇರುತ್ತಿದ್ದರೆ ಗಿಡಿಗನೇ ಇಸ್ಲಿಯ ಘಟನಾ ಕಾಯಿದೆಗೆ ಸಮ್ಮತಿ ಕೊಡುತ್ತಿದ್ದಿಲ್ಲ ನಮ್ಮ ಉದ್ದೇಶ ಪ್ರಪ್ಪಸುವದೇ ಆ ಉದ್ದೇಶಸಾಧನೆಯ ಪೂರ್ವದ ಮೆಟ್ಟಿಲಾಗಿರುವ ಸಲಹೆ ಮಂಡಳದ ಯೋಜನೆಯನ್ನು ಮುಂದೊಡ್ಡಿದ್ದೇವೆ ಈ ಸಲಹೆ ಮಂಡಳದಲ್ಲಿ ಪ್ರಜಾಪ್ರತಿನಿಧಿಗಳ ಸರಕಾರ ದ ನಂಬಗಸ್ಥ ಮಾಹಿತಿ ಸಿಗುವಂತೆ ಸರಕಾರಿ ಯೋಜನೆಗಳ ಮೇಲೆ ತಮ್ಮ ಅಭಿಪ್ರಾಯವ್ಯಕ್ತಪಡಿಸ ಲು ಅವರಿಗೆ ಇಂಬು ಸಿಗುವಂತಿದೆ, ಮತ್ತು ಮಂಡ ಳದಲ್ಲಿ ಬೇರೆ ಬೇರೆ ಜಾತಿಗಳ ಪ್ರತಿನಿಧಿಗಳು ಒಟ್ಟಿ ಗೂಡುವದರಿಂದ ಅವರೊಳಗಿನ ಮತಭೇದಗಳು ಅಳಿ ದುಹೋಗುವಂತಿನ ಇಷ್ಟು ಪ್ರಯೋಜನಕಾರಿ ಯೋ ಜನೆಯನ್ನು ಭಾರತೀಯರು ತಿರಸ್ಕರಿಸಿದ್ದು ಅತೀವ ದುಃಖಕರ. ಹಿಂದುಸ್ಥಾನದಲ್ಲಿ ಜಾತಿ-ಜಾತಿಗಳೊಳಗೆ ವೈಮನಸ್ಯವಿರುವ ಸಂಗತಿಯನ್ನು ಮರೆಯಲಾಗದು.

ಪೊನ್ನೈ ಮೊನ್ನೆ 'ನೆಂಜೆಕ್ಸ್‌ಚರ ಗಾರ್ಡಿಯನ್' ಪತ್ರಿಕೆ ಯಸ್ಟೆ ಪ್ರಕಟವಾದ ಜೆ| ಜಿನ್ನಾರವರ ಪ್ರಕಟಣೆ ತಾವು ನೋಡಿರಬಹುದು ಹಿಂದುಮುಸಲ್ಮಾನರ ಪ್ರಮುಖರ ನ್ನು ಒಕ್ಕಟ್ಟಗೆ ಕರೆಕಂದು ಅವರಲ್ಲಿ ಐಕ್ಯಮಾಡಿಕರುವ ದವಶ್ಯವಿದೆ. ಸರ್ವಾಧಿಪತಿಗಳು ಇದಿಗ ಈ ಕಾರ್ಯ ಕೈಕೊಂಡಿದ್ದಾರೆ. ಅವರು ದಿಲ್ಲಿಯಲ್ಲಿ ಕೊಂಗ್ರೆಸ-ಲೀಗುಗಳ ಮುಂದಾಳುಗಳೊಡನೆ ಚರ್ಚೆನಡಿಸಿದ್ದಾರೆ

ಕೊಂಗ್ರೆಸ ಮಂತ್ರಿಮಂಡಳಗಳು ಇದೀಗ ಅಧಿಕಾ ರತ್ಯಾಗಮಾಡಿ-ತ್ತಿರುವದು ಬಹು ವಿಷಾದಕರ ಸಂಗತಿ ವ್ಯಾಪಾರಾಧಿಪರು ನಿರುವಾಯವಾಗಿ ಪ್ರಾಂತಿಕ ಫಟ ನೆಯನ್ನು ವಿಸರ್ಜಿಸಿ ಪ್ರಾಂತಿಕ ರಾಜ್ಯಭಾರವನ್ನು ತಾವೇ ಅಂಗೀಕರಿಸಬೇಕಾದ ಪ್ರಸಂಗ ಒಂದಿದೆ.

ಹಿಂದೀ ಸಂಸ್ಥಾನಗಳಲ್ಲಿ ಜಾತೀಯ ಕಲಹ ಳಿ ಲ್ಲವೆಂದು ಸೆಮ್ಯುಅಲ್ ದೊರೆಗಳು ಕಪ್ಪೆ ತಿಳಿ ನಳಿಕೆ ಮಾಡಿಕೊಂಡಿದ್ದಾರೆ ಹೋದ ಬೇಸಿಗೆಯ ಲ್ಲಿ ಹೈಂಯಾದದೊಳಗಿನ ಇಸ್ಲಾಮು ಸರಕಾರದ ನಿರ್ಬಂಧ ಹಿಂದುಸ್ಥಾನದೊಳಗಿನ ಬೇರೆ ಬೇರೆ ಭಾಗಗಳಿಂದ ಹಿಂದು ಜನರು ಸತ್ಯಾಗ್ರಹ ಹೂಡಿದ ಸಂಗತಿ ನಾನು ಅವರ ನೆನಪಿಗಿ ಕಂದುಕೊಡಲಿಚ್ಚಿಸು ತ್ತೇನೆ ನಾವು ಸಾಮ್ರಾಜ್ಯಾಧಿಕಾರ ಕಾಪಾಡಿಕೊಳ್ಳ ಲು ಹೋಗಾಡುತ್ತಿದ್ದೇವೆಂದು ಕೆಲವು ಭಾರತೀಯರು ಇನ್ನೂ ಹೇಳುತ್ತಿದ್ದಾರೆ. ಒಂದು ೧ಷ್ಟದ ಮೇಲೆ ಇನ್ನೊಂದು ರಾಷ್ಟ್ರವು ಸಕ್ತಿಯನ್ನು ನಡಿಸು ವದೇ ಸಾಮ್ರಾಜ್ಯಾಧಿಕಾರದ ಅರ್ಥವಾಗು ಇ ಈ ಸಾಮ್ರಾಜ್ಯ ಸತ್ಪೆಯನ್ನು ರ್ಗನೇ ಇ ಹಿಂದುಸ್ಥಾನ ಸರಕಾರದ ಕಾಯಿದೆಯ ಕಾಲಕ್ಕೆ ನಾವು ಬಿಟ್ಟುಕೊಟ್ಟಿದ್ದೇವೆ ನಮಗ ಸಾಮ್ರಾಜ್ಯ ಲಾಲಸ ಇರುತ್ತಿದ್ದರೆ ಗಿಡಿಗನೇ ಇಸ್ಲಿಯ ಘಟನಾ ಕಾಯಿದೆಗೆ ಸಮ್ಮತಿ ಕೊಡುತ್ತಿದ್ದಿಲ್ಲ ನಮ್ಮ ಉದ್ದೇಶ ಪ್ರಪ್ಪಸುವದೇ ಆ ಉದ್ದೇಶಸಾಧನೆಯ ಪೂರ್ವದ ಮೆಟ್ಟಿಲಾಗಿರುವ ಸಲಹೆ ಮಂಡಳದ ಯೋಜನೆಯನ್ನು ಮುಂದೊಡ್ಡಿದ್ದೇವೆ ಈ ಸಲಹೆ ಮಂಡಳದಲ್ಲಿ ಪ್ರಜಾಪ್ರತಿನಿಧಿಗಳ ಸರಕಾರ ದ ನಂಬಗಸ್ಥ ಮಾಹಿತಿ ಸಿಗುವಂತೆ ಸರಕಾರಿ ಯೋಜನೆಗಳ ಮೇಲೆ ತಮ್ಮ ಅಭಿಪ್ರಾಯವ್ಯಕ್ತಪಡಿಸ ಲು ಅವರಿಗೆ ಇಂಬು ಸಿಗುವಂತಿದೆ, ಮತ್ತು ಮಂಡ ಳದಲ್ಲಿ ಬೇರೆ ಬೇರೆ ಜಾತಿಗಳ ಪ್ರತಿನಿಧಿಗಳು ಒಟ್ಟಿ ಗೂಡುವದರಿಂದ ಅವರೊಳಗಿನ ಮತಭೇದಗಳು ಅಳಿ

ಸ್ಥಾನಿಕ ವೃತ್ತಾಂತ.

(೧ನೇ ಪಾನಿನಿಂದ ಮುಂದರಿಸಿದ್ದು)

ಅಧ್ಯಷ ಶ್ರೀ ಕಾಂತೇಂ ಕಾಮಾಕ್ಷಿ ವೇಷಸ್ಥಾನದಲ್ಲಿ ಗುಡಿಯಚಾಲಕರ ಸಹಾಸಭೂತಿಯಿಂದಲೂ ಅಹಿಂಸಾವಾ ದಿಗಳ ಪ್ರಯತ್ನದಿಂದಲೂ ದಸರೆಯ ದಿನ ನಡಿಯುತ್ತಿದ್ದ ಪ್ರಾಣಿಬಲಿಯು ಈ ವರ್ಷದಿಂದ ನಲ್ಲಿಸಲಾಗಿದೆ ಪ್ರಾಣಿ ಬಲಿಯ ಬದಲು ಶ್ರೀ ಸ್ವಾಧಿಷ್ಠಿಪ್ಪ ಸಾತ್ವಿಕ ಪೂಜಾ-ವಿಧಿ ಯೋಗಗಳನ್ನು ನಡಿಸಬೇಕಾಗಿ ನಿಶ್ಚಯವಾಗಿದೆ

ಶಿರ್ಸಿ— ಜ ಕೊ. ಶಿ ಯ ಕಾರ್ಯಕಾರಿ ಮಂಡ ಳದ ಸಭೆ ಈಚೆಗೆ ಸೇರಿದ್ದಲ್ಲಿ ರವಿವಾರ ತಾ. ೨೨ನೇಗೆ ಬೆಲ್ಲಾ ಧ್ಯಕ್ಷ ರಾ ಶಾಸ್ತ್ರಿ ಇವರ ಅಧ್ಯಕ್ಷತೆಯಲ್ಲಿ ಸೇರು ತ್ತು. ಈ ವರೆಗಿನ ಕಾರ್ಯದ ವರದಿಯೂ, ಜಮಾ-ಖರ್ಚಿ ನ ಪತ್ರಿಕೆಯೂ ಹಿರಿ ಮಂಜೂರು ಮಾಡಲ್ಪಟ್ಟಿವು. ಕೊಂಗ್ರೆಸ ಕಾರ್ಯಕಾರಿ ಮಂಡಳದ ಯುದ್ಧ ವಿಷಯಕ ಪ್ರಕಟಣೆಗೆ ಬೆಂಬಲ ಕೊಟ್ಟು, ಅವರ ತತ್ವಗಳನುಸಾರವಾಗಿ 'ಕೊಂ ಗ್ರೆಸ ವಾರಪತ್ರಿಕೆ' ಯ ಮುಖಾಂತರ ಪ್ರಚಾರ ಮಾಡಬೇ ಕಾಗಿಯೂ, ಕೊಂಗ್ರೆಸಿನ ಯುದ್ಧ ಘೋಷಣೆಯ ಅನುಸಾ ಪ್ರಚಾರ ಕಾರ್ಯ ಕೈಕೊಳ್ಳಲು ಜಿಲ್ಲಾ ಜೊ ಳಿನಿಗೆ ಕೊಂಗ್ರೆಸ ಪಕ್ಷದ ಎನೆಂದಿ ಕೌನ್ಸಿಲು ಸದಸ್ಯರಿಗೆ ವಿನ್ಸ ವಿಸಿಕೊಳ್ಳಬೇಕಾಗಿಯೂ ತೀರ್ಮಾನವಾಯಿತು ಅಯಾ ಕೊಂಗ್ರೆಸ ಮಂತ್ರಿಮಂಡಳಗಳು ತಮ್ಮ ತಮ್ಮ ಕಾನೂನು ಮಂಡಳಗಳಲ್ಲಿ ಕೊಂಗ್ರೆಸಿನ ಯುದ್ಧ-ನೀತಿಯನ್ನು ಯಶಸ್ವಿಯಾಗಿ ಮಂಜೂರು ಮಾಡಿಸಿಕೊಂಡು ಮಂತ್ರಿಪದತ್ಯಾಗ ಮಾಡಲಿಸಿಯಾದ ಬಗ್ಗೆ ಅವರನ್ನು ಅಭಿ ನಂದಿಸುವ ಗೊತ್ತುವಳಿಯೊಂದು ಸ್ವೀಕಾರಪ್ಪಟ್ಟತು ಕೆರಿ ರೋಗ ಪೀಡಿತರು ಸಮಿತಿಯ ಚಾಕಿರಿ ಕಾರ್ಯ ಇನ್ನೂ ನುಗಿಯದ್ದರಿಂದ ಅದನ್ನು ಮುಗಿಸಿ ವರದಿಯನ್ನೊಸ್ಸಿಸಲು ನವಂಬರ ತಿಂಗಳ ಕೊನೆಯ ತನಕ ಅವಧಿ ಕೊಡಲಾಯಿ ತು ಜಿಲ್ಲಾ ಶಿಕ್ಷಣ ಪ್ರಸಾರಕ ಸಮಿತಿಗೆ ರೂ. ೧೦೦ ಧನ ಸಹಾಯ ಕೊಡಬೇಕೆಂದು ನಿರ್ಣಯವಾಯಿತು ಮತ್ತು ಈ ಜಿಲ್ಲೆಯ ವಿಶಿಷ್ಟ ಪರಿಸ್ಥಿತಿಯನ್ನು ಲಕ್ಷಿಸಿ ತಂದು ಸೂಸರು ೧೦ ಹುಡುಗರು ಹಾಜರಿರುವ ಖಾಲಿಗಳಿಗೂ ಕೂಡ ಸಾಹಿತ್ಯ ಪೂರ್ವಕೆಯ ಧನಸಹಾಯವನ್ನೂ ನಿಶ್ಚಾವ ಳಿಯ ನಿರ್ಣಪಡಿ ಧನಸಹಾಯವನ್ನೂ ಕೊಡುವಂತೆ ಸರ ಕಾರ್ಕ್ಕೆ ವಿನಂತಿ ಮಾಡಲಾಯಿತು. ಜಿಲ್ಲಾ ಮದ್ಯ-ಮಾಡಕ ಪ್ರತಿಬಂಧಕ ಸಮಿತಿಗೆ ಸರಕಾರದಿಂದ ಮಂಜೂ ರಿಂದ ಧನಸಹಾಯ ಇನ್ನೂ ಬಂದಿಲ್ಲವಾದ್ದರಿಂದ ಸಮಿ ತಿಯ ಅಗತ್ಯದ ಕಾರ್ಯ ಸಾಗಿಸಿಕೊಂಡು ಹೋಗಲು, ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಆ ಕಮಿಟಿಗೆ ರೂ. ೨೦೦ ಮುಂಗಡ ಕೊಡಬೇಕೆಂದು ಮಂಜೂರಿ ಮಾಡ ಲಾಯಿತು ಸದ್ಯದ ಅಸಾಧಾರಣ ಸ್ಥಿತಿಯಲ್ಲಿ ಚುನಾವಣೆಗ ಳನ್ನು ಹೇಗೆ ನಡಿಸಬೇಕೆಂದರ ಕುರಿತು ಪ್ರಾಂ. ಕೊಂ. ಕ. ಯ ಸೂಚನೆಗಳನ್ನು ಸರಿಪ್ಪಡಿಸಬೇಕೆಂದು ಗೊತ್ತಾ ಯಿತು. ಜಿಲ್ಲಾ ಸಿಪ್ಪಿಂಗ್ ಬೋರ್ಡಿನ ೩ ಸದಸ್ಯರಲ್ಲಿ ಮೂ ವರು ರಾಜಿನಾಮೆ ಕೊಟ್ಟಿರುವದರಿಂದಲೂ ಬೋರ್ಡಿನ ಕೆಲಸ ನಡಿಸುವದು ಅಸಾಧ್ಯವಿರುವದರಿಂದಲೂ ಜ ಕೆನಿಂ ಕಮಾ ಟಿಯವರು ಕೊಸ ನೂತನ ಸದಸ್ಯರನ್ನು ಮಾಡುವ ತನಕ ಕಾರ್ಯ ಕಾರಿ ಮಂಡಳದವರೇ ಬೋರ್ಡಿನ ಕೆಲಸ ನಡಿಸಬೇಕೆಂ ಬ ಗೊತ್ತಾಯಿತು

(೨ನೇ ಪಾನಿನ ಮೇಲೆ ಮುಂದರಿಸಿದೆ)

ಚಿಕ್ಕ ಸಂಕ್ಷಿಪ್ತ ಯಶ್ಶಸ್ಸ್ ಮತ್ತು ಸ್ಟೀಪಿಗೆಗಳ ವಿಷಯದಲ್ಲಿ ಉದ್ದಾರಗಳೆ ಮಾಡುವದು ದುಃಸಾಧ್ಯವಿರುವದೆಂದು ಬಹಳ ಜನರು ತಿಳಿಯುತ್ತಾರಷ್ಟೆ. ಆದರೆ ಜಮ್ಮಿ ವೆಂಕಟರಮಣಯ್ಯನವರು ಕೋಡಿಸಿ ಪೂರ್ಣತಗೂಯ್ದ

ಲಿವ್ಹರ್ ಕ್ಯೂರ್ (ರಜಿಸ್ಟರ್ಡ)

ಎಂಬ ಔಷಧದ ಪ್ರಯೋಗದಿಂದ ಈ ವಿಕಾರಗಳನ್ನು ಯುಕ್ತಿಯ ರೀತಿಯಿಂದ ಗುಣ ಪಡಿಸಬರುತ್ತದೆಂದು ಬಹ ಜನ ವೈದ್ಯ-ಡಾಕ್ಟರುಗಳೆ ಈಗ ಪೂರ್ಣ ಮನವರಿಕೆಯಾಗಿದೆ

ವಿಶೇಷ ಮಾಹಿತಿಯ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಒರಕೊಳ್ಳರಿ —

ಜಮ್ಮಿ ವೆಂಕಟರಮಣಯ್ಯ ಎಂಡ್ ಸನ್ಸ್,

ಲಿವರ್ ಕ್ಯೂರ್ ಆಫೀಸು, ೩ ಮತ್ತು ೪, ಸೆಲ್ಲಾ ಬ್ಲೈಟ್, ಮೈಲಾಪೂರು, ಮದ್ರಾಸ

ಕಾನಡಾವೃತ್ತ.

ಮಿತಿ ಶ್ರಮಾಧಿ ಸಂವತ್ಸರ ಆಶ್ವಿಜ ೪ ೪ಮಿ, ಸೋಮವಾರ

ಆಳರಸರ ಆಟವೇ ತಿಳಿಯದು!

ರಾಷ್ಟ್ರದೊಳಗಿನ ರಾಜಕೀಯ ಪರಿಸ್ಥಿತಿಯು ಈಗ ತೀರ ಸಂದಿಗ್ಧವಾಗಿದೆ ಮುಂದೇನು? ಸಂಧಿಯೋ, ಸಮರವೋ? ಎಂದು ಜನಸಾಮಾನ್ಯರು ಕೇಳುತ್ತಿದ್ದಾರೆ! ಸತ್ಯಾಗ್ರಹದ ವಿನಹ ಈಗ ರಾಷ್ಟ್ರಕ್ಕೆ ಅನ್ಯ ಗತಿಯಿಲ್ಲ, ಸತ್ಯಾಗ್ರಹಕ್ಕೆ ನಾವು ಸಿದ್ಧರಾಗಿರತಕ್ಕದ್ದು ಎಂದು ಅಖಿಲ್ಲೆಯ ಕಾರ್ಯಕರ್ತರು ಸಮರಸನ್ನಾಹ ಮಾಡತೊಡಗಿದ್ದಾರೆಂತಲೂ ಕೇಳಿಬರುತ್ತಿದೆ ರಾಷ್ಟ್ರದ ನುಡಿಗಾಳುಗಳಿಗೂ ಈ ವರ್ತಮಾನ ತಿಳಿದಿದ್ದರಿಂದಲೇ ಇವರು, "ದುರುಕಬೇಡಿರಿ! ವಿಚಾರ ಮಾಡದೆ ಸತ್ಯಾಗ್ರಹ ಪ್ರಾರಂಭಿಸಬೇಡಿರಿ!" ಎಂದು ಜನತೆಗೆ ಮುಂಜಾಗ್ರತೆ ಕೊಡಹತ್ತಿದ್ದಾರೆ ರಾಷ್ಟ್ರೀಯ ಸಭೆಯ ಯುದ್ಧ-ಮಂಡಳಿಯ ಅಧ್ಯಕ್ಷರಿಂದ ಪಂಡಿತ ಜವಾಹರಲಾಲರು ಮೊನ್ನೆ ದಿಲ್ಲಿಯಲ್ಲಾದ ತಮ್ಮ ಭಾಷಣದಲ್ಲಿ ಇದೇ ಎಚ್ಚರಿಕೆ ಕೊಟ್ಟಿರುತ್ತಾರೆ ಇದೀಗಲೇ ಸತ್ಯಾಗ್ರಹ ಹೂಡಲು ತಮಗೆ ಮನಸ್ಸಿಲ್ಲ. ಸಾರ್ವತ್ರಿಕ ಸತ್ಯಾಗ್ರಹ ಸಮರ ಹೂಡಲು ಯಾ ಸಾಧನಿಸಲು ಅನುಕೂಲವಾದ ವಾತಾವರಣ ರಾಷ್ಟ್ರದೊಳಗೆ ಕಂಡುಬರುವದಿಲ್ಲ, ಹೀಗೆ ಮಹಾತ್ಮರಾ ಮೊನ್ನೆಯ 'ಹರಿಜನ ಪತ್ರಿಕೆಯಲ್ಲಿ ಬರೆದಿರುತ್ತಾರೆ ಮತ್ತು ಸಮಸ್ತ ರಾಷ್ಟ್ರಸೇವಕರಿಗೆ ಜಾತೀಯ ಒಕ್ಕಟ್ಟಿನ ಸಾಧನೆ, ಅಸ್ಪೃಶ್ಯತಾ ನಿವಾರಣೆ ಮತ್ತು ಖಾದಿ ಪ್ರಚಾರದಂತಹ ವಿಧಾಯಕ ಕಾರ್ಯಕ್ರಮಗಳನ್ನು ನಿಷ್ಠೆಯಿಂದ ಪುರಸ್ಕರಿಸಿ, ರಾಷ್ಟ್ರೀಯ ಸಭೆಯಲ್ಲಿ ಕಂಡು ಬರುವ ದೌರ್ಬಲ್ಯವನ್ನು ಹೊಡೆದೋಡಿಸಲು ಉಪದೇಶ ಮಾಡಿದ್ದಾರೆ ರಾಷ್ಟ್ರೀಯ ಸಭೆಯ ಪ್ರಮುಖರು ಸತ್ಯಾಗ್ರಹಕ್ಕೆ ಸಿದ್ಧರಿಲ್ಲೆಂದಲ್ಲ. ಸರಕಾರದವರು ತಮ್ಮ ಅವಿವೇಕದಿಂದ ಒತ್ತಾಯಪಡಿಸಿದರೆ ರಾಷ್ಟ್ರೀಯ ಸಭೆಯಾದರೂ ಅವರನ್ನೆದುರಿಸಲು ಎಳ್ಳಷ್ಟೂ ಹಿಂಜರಿಯಲಿಕ್ಕಿಲ್ಲೆಂದು ಅವರು ಘಂಟಾಘೋಷವಾಗಿ ಜಾಗ್ರತೆ ಕೊಡುತ್ತಿದ್ದಾರೆ.

ಹೀಗೆ ಒಂದೆಡೆ ಸತ್ಯಾಗ್ರಹದ ಸುದ್ದಿ ಕೇಳಬರುತ್ತಿದ್ದರೆ, ಇನ್ನೊಂದೆಡೆ ಸಂಧಾನದ ಪ್ರಯತ್ನಗಳೂ ಕಂಡು ಬರುತ್ತಿವೆ ಸರ್ವಾಧಿಪತಿಗಳ ಆಕ್ಟೋಬರ ತಾ. ೧೮ನೇಗೆ ಹೊರಡಿಸಿದ ಪ್ರಕಟಣೆಯೇ ಬ್ರಿಟಿಶ ಸರಕಾರದ ಕೊನೆಯ ಮೇಳಕೆಯಲ್ಲವೆಂದು. ತಿಳಿಯಬೇಕಾಗಿದೆ ಹೀಗಾದರೂ ಮಾಡಿ ಹಿಂದೀ ಜನತೆಯನ್ನು ಸಮಾಧಾನಪಡಿಸಿ, ಅವರು ಯದ್ಧಕಾರ್ಯದಲ್ಲಿ ಸರಕಾರಕ್ಕೆ ನೆರವಾಗುವಂತೆ ಪ್ರಯತ್ನ ನೂಡಲು ಬ್ರಿಟಿಶ ಸರಕಾರವು ಹುತೊರೆಯುತ್ತಿದೆಯೆಂದು ಎಣಿಸಲ್ಬಾಗಿದೆ. ಆದ್ದರಿಂದಲೇ ಸರ್ವಾಧಿಪತಿಲಿನ್‌ಲಿತ್‌ಗೋ ದೊರೆಗಳು ತಿರುಗಿ ರಾಷ್ಟ್ರದ ಶ್ರಮು ಓಡಿಸಿನ ಸಂಧಾನ ಮಾಡಿಕೊತ್ತಿದ್ದಾರೆ. ಈ ಸಂಧಾನದ ಕಾರ್ಯವು ಇನ್ನೂ ಕೆಲಕಾಲ ನಡೆಯುವದಾಗಿ ಕಾಣುತ್ತಿದೆ ಬ್ರಿಟಿಶ ಸರಕಾರವು ಭಾರತೀಯ ಸಮಸ್ಯೆ ಬಿಡಿಸುವ ತೊಡೆಯನ್ನು ಸರ್ವಾಧಿಪತಿಗಳಿಗೆ ನು ನೆಡೆಯುತ್ತಿವೆ, ಆವರ ಅಂತರಂಗದೊಡಗಿನ ಗುಟ್ಟೂನು ಅಧಿವಾ ಅವರು ಸಾಧಿಸಲು ಪ್ರಯತ್ನ ಮಾಡುವ ಉದ್ದೇಶವಾದರೂ ಏನು? ಎಂಬದರ ಕಲ್ಪನೆ ಸ್ಪಷ್ಟವಾಗಿ ತಿಳಿದುಬರುವದಿಲ್ಲ ಆದ್ದರಿಂದಲೇ ಮುಂದೇನು ಮಾಡತಕ್ಕದ್ದೆಂದು ತಮಗೆ ಇನ್ನೂ ಹೊಳೆಯುವದಿಲ್ಲವಂದು ಮಹಾತ್ಮರು ಬರೆಯುತ್ತಾರೆ

ಬ್ರಿಟಿಶ ರಾಜನೀತಿಯ ಇತಿಹಾಸದಲ್ಲಿ ಹಿಂದೆ ಇಂಥ ಅನೇಕ ಪ್ರಸಂಗಗಳು ಘಟಿಸಿದ ಉದಾಹರಣೆಗಳಿವೆ ಒಂದೆಡೆ ಪ್ರಜಾ-ಪ್ರತಿನಿಧಿಗಳೊಡನೆ ಸಂಧಾನದ ಪ್ರಯತ್ನ ನಡೆಸುತ್ತಿರುವಾಗಲೇ ಇನ್ನೊಂದೆಡೆ ದಬ್ಬಾಳಿಕೆಯ ಶಾಖ್ತ್ರಗಳನ್ನು ಸಜ್ಜುಗೊಳಿಸುವದ, ಮತ್ತು ಸಂಧಾನದ ಪ್ರಯತ್ನ ಮುರಿದು ಹೋದರೆ ಆ ಅಪಕೃತ್ಯಗೂ ಎದುರಾಗಲು ತಾವು ಸಿದ್ಧರಿದ್ದೇವೆಂದು ಪ್ರತಿಪಕ್ಷಿಗಳಿಗೆ ಬೆದರಿಕೆ ಹಾಕುತ್ತ, ಕೊನೆಗೆ ವಿನಮ್ರರಾಗಿ ತಮ್ಮ ಹಟವನ್ನು ತೊರೆದು ಪ್ರತಿಪಕ್ಷಿಗಳೊಡನೆ ಬ್ರಿಟಿಶರು ಒಪ್ಪಂದ ಮಾಡಿಕೊಂಡಿರುವ ಅನೇಕ ಹಿಂದಿನ ಉದಾಹರಣೆಗಳು ಬ್ರಿಟಿನಿನ ಇತಿಹಾಸದಲ್ಲಿ ಲಭಿಸುತ್ತವೆ ಒಮ್ಮೇಲೆ ತನ್ಮ ಹಟ ಬಿಡುವ ಪ್ರವೃತ್ತಿ ಬ್ರಿಟಿಶ ಮುತ್ಸದ್ದಿಗಳಲ್ಲಿ ಕಂಡುಬರುವದಿಲ್ಲ ಕೊನೆಯ ಹನಕ ತಿಮ್ಮನೆ ಹಟ ಸಾಧಿಸಲು ಪ್ರಯತ್ನ ಮಾಡುವದನ್ನು ಅವರು ಎಂದೂ ಬಿಡುವಂಥಿಲ್ಲ ಆದರೆ, ಪ್ರತಿ-ಪಕ್ಷಿಗಳು ತನ್ಮಷ್ಟೇ ಇಲ್ಲವೆ ತಮಗಿಂತ ಹೆಚ್ಚು ಹಟವಾದಿಗಳಾಗಿ, ಸಿದ್ಧರಾಗಿ ಕೂತುಕೊಂಡರೆ, ಕೊನೆಗೆ ಸಮಾಧಾನಚಾರಗಳಿಂದ ಅನುನಯಿಸಿ ಮಾತಿಕತ್ತಿಗೆ ಅವರು ನಿಲ್ಲುತ್ತಾರೆ ೧೮ ವರ್ಷಗಳ ಹಿಂದೆ ಆಯರ್ಲಾಂಡದ ಪ್ರತಿನಿಧಿಗಳ ಕೂಡ ಒಪ್ಪಂದ ನಾತು ಕತೆಗಳು ನಡೆಯುವಾಗ ಬ್ರಿಟಿಶರ ವರ್ತನೆಯು ಇದೇ ತರದಿತ್ತು ಸಂಧಾನ ಮುರಿಯಿತು! ಎಂಬ ಸುದ್ದಿಗಳು ಕ್ಷಣ ಕ್ಷಣಕ್ಕೆ ಕೂರಹಬ್ಬುತ್ತಿದ್ದವು, ಜನರೆಲ್ಲರೂ ಸಂಧಾನ ಮುರಿದುಹೋಯಿ ತೆಂದಲೂ ನಿಶ್ಚಯ ರಾಗಿದ್ದರು ಇಂಥ ಸಂಸ್ಥಿತಿಯಲ್ಲಿ ಲೊಯ್ಡ ಜಾರ್ಜ ರಂಥ ನಿಷ್ಣಾತ ಪ್ರವೃತ್ತಿಯ ಮಹಾ ಪ್ರಧಾನರು ಮೆತ್ತಗಾಗಿ ಕೊನೆಗೆ ಆಯರ್ಲಂಡದ ಪ್ರಜಾ-ಪ್ರತಿನಿಧಿಗಳೊಡನೆ ಒಪ್ಪಂದ ಮಾಡಿಕೊಂಡು ಅವರಕೊಡ ಹಸ್ತಾಂದೋಲನ ಮಾಡಲಿಲ್ಲವೇ? ಹಿಂದೀ ರಾಷ್ಟ್ರೀಯ ಸಭೆಯ ಇತಿಹಾಸದಲ್ಲೂ ಇಂತಹ ಘಟನೆಗಳು ಅನೇಕ ಸಲ ಸಂಭವಿಸಿದ್ದುಂಟು ೧೯೧೯ನೇ ಇಸ್ವಿಯ ಗಾಂಧಿ-ಇರ್ವಿನ್ ಒಪ್ಪಂದದಕಾಲಕ್ಕೂ ಇದೇ ರೀತಿ ನಡೆದಿತ್ತು ೩೫ ವರ್ಷಗಳ ಹಿಂದೆ ಕೊಂಗ್ರೆಸ ಜನರು ಮಂತ್ರಿಪದ-ಸ್ವೀಕಾರ ಮಾಡುವ ಕಾಲಕ್ಕೂ ಬ್ರಿಟಿಶ ರಾಜಕಾರಣಿಗಳು ಮೊದಮೊದಲು ಕಠೋರ ಸಂಧಾನ-ಸಂದರ್ಶನಗಳ ಆಟವನ್ನಾದರೂ ನಡಿಸಿರಲಿಲ್ಲವೆ? ಈಗ ಯುದ್ಧ ನಡೆದಿರುವಾಗ ಭಾರತೀಯ ರಾಜ್ಯಘಟನಾ ಕಾನೂನಿನಲ್ಲಿ ಏನಾ ತಿದ್ದುಪಡಿ ಮಾಡಲು ಶಕ್ಯವಿಲ್ಲವೆಂದೂ, ರಾಜ್ಯ ಯಂತ್ರದಲ್ಲಿ ವಿಶೇಷ ಬದಲಾವಣೆಗಳನ್ನು ಮಾಡುವದು ಸಾಧ್ಯವಿಲ್ಲವೆಂತಲೂ ಭಾರತ ಮಂತ್ರಿಗಳು ಮೊನ್ನೆ ತಾನೇ ಲಂಡನಿನ ಪಾರ್ಲಿಮೆಂಟ ಸಭೆಯಲ್ಲಿ ಹೇಳಿದ ಮಾತೇ ಬ್ರಿಟಿಶ ಸರಕಾರದ ಕೊನೆಯ ಮಾತಾಗಿರುತ್ತಿದ್ದರೆ, ಸರ್ವಾಧಿಪತಿಗಳು ಲೋಕಪ್ರಮುಖರೊಡನೆ ಸಂಧಾನಗಳನ್ನು ನಡಿಸುತ್ತಿರುವರೇಕೆಂದು ತಿಳಿಯದು ಅಂತು ಆಳರಸರ ಮನಸ್ಸಿನಲ್ಲಿ ಏನೇ ನಡೆಯುತ್ತಿರಲಿ, ಆಳರಸರ ಆಟವೇ ತಿಳಿಯದು!

ತನವನ್ನು ತೋರಿಸುತ್ತ ಕೊನೆಗೆ ಮೈತ್ರಿಗಾಗಿ ಸೌಹಾರ್ದಭಾವದಿಂದ ಕೊಂಗ್ರೆಸ್ಸಿಗರಿಗೆ ನುಂಡಿಮಂಡಳ ರಚಿಸಲು ಆಪ್ತರ ಮಾಡಿಕೊಟ್ಟಿದ್ದ ಸಂಗತಿಯನ್ನು ನಾವಿನ್ನೂ ಮರೆತಿಲ್ಲ. ಈಗಿಗ ಅದೇ ನಾಟಕದ ಪುನರಾವೃತ್ತಿಯಾಗುವುದೋ ಏನೆಂದು ತಿಳಿಯುವದಿಲ್ಲ.

ಆಳರಸರ ಆಟಗಳೇನಿದ್ದಾಗ್ಯೂ ಕೊಂಗ್ರೆಸ ಮುಂದಾಳುಗಳು ಅವರ ಬಲೆಯಲ್ಲಿ ಸಿಲುಕಿಬೀಳಲಾರದೆಂಬ ಮಾತು ಮಾತ್ರ ಸ್ಪಷ್ಟವಿದೆ. ಡಾ| ಪಟ್ಟಾಭಿಸೀತಾರಾಮಯ್ಯನವರು ನುಡಿದಂತೆ, ಸರಕಾರದವರು ಕೊಂಗ್ರೆಸ್ಸಿಗೆ ನಮೆರವು ಆವ್ವಾನವನ್ನು ಕೊಟ್ಟರೆ ಅದನ್ನು ಸ್ವೀಕರಿಸಲು ರಾಷ್ಟ್ರೀಯ ಸಭೆಯವರು ಸಂಪೂರ್ಣ ಸಿದ್ಧರಿದ್ದಾರೆ. ಅಂತಹ ಪ್ರಸಂಗ ಬರಬಹುದೆಂದು ಕಲ್ಪಿಸಿಕೊಂಡೇ ಅವರು ತಮ್ಮ ಸನ್ನಾಹಗಳನ್ನು ಮಾಡುತ್ತಿದ್ದಾರೆ. ರಾಷ್ಟ್ರೀಯ ಸಭೆಯ — ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳದ ಅಪ್ಪಣೆಯನ್ನಾತ್ಮಲೇ ಆಂಧ್ರಾಸಮಯ ಸಮರಾಂಗಣದಲ್ಲಿಳಿದು ರಾಷ್ಟ್ರಸ್ವಾತಂತ್ರ್ಯದ ಬಗ್ಗೆ ಹೋರಾಡಲು ಭಾರತೀಯರು ಸಿದ್ಧರಾಗಿದ್ದಾರೆ, ಸಿದ್ಧರಾಗುತ್ತಿದ್ದಾರೆ. ಕೆಲವರಂತೂ ಇದಿಗಲೇ ಸತ್ಯಾಗ್ರಹ ಪ್ರಾರಂಭಿಸಿದೆಂದು ಮಕ್ತಾತ್ಮರಿಗೂ ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೂ ಅಗ್ರಹ ಮಾಡಹತ್ತಿದ್ದಾರೆ. ಆಳರಸರೂ ಸರ್ವಾಧಿಕಾರಿಗಳೂ ಆ ಎಲ್ಲ ಸಂಗತಿಗಳನ್ನು ಚೆನ್ನಾಗಿ ಅರಿತುಕೊಂಡು ರಾಷ್ಟ್ರೀಯ ಸಭೆಯನ್ನು ಕೆಣಕಲಾಗದೆಂತಲೂ, ಕೆಣಕಬಾರದೆಂತಲೂ, ಭಾರತೀಯ ಸ್ವಾತಂತ್ರ್ಯಾದ್ಯೋಪ್ತಿಗೆ ಬ್ರಿಟಿಶರು ಹಿತವನ್ನೂ ಬಯಸುವ ಮಹಾತ್ಮರೊಡನೆ ಆಪ್ತಾಲೋಚನೆ ಮಾಡಿ ಸಮರ ಪ್ರಸಂಗವನ್ನು ತಪ್ಪಿಸಿಕೊಳ್ಳುವೆರೆಂತಲೂ ನಾವು ನೆರೆನಂಬಿದ್ದೇವೆ

(ಇನೇ ಪಾನ್ಸಾನಿಂದ ಮುಂದುವಸಿದ್ದು.)

ಸಿದ್ದಾಪುರ— (ತಾ ೦-೧೧-೬೯) ಕಳೆದ ತಾ. ೨೬ನೇಗೆ ಇಲ್ಲಿಯ ಕೊಂಗ್ರೆಸ ಕವಿಸಾಬೆಯಲ್ಲಿ ರಾಷ್ಟ್ರಸೇವಾ ಸಂಘದ ಮುಖಾಸಳಿ ರಾ| ಗೋಪಾಲ ಮಡಗಾಂವಕರ ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕೊಂಗ್ರೆಸ ಕಾರ್ಯಕಾರಿ ಮಂಡಳದ ಸ್ಥಳಿತಿಗೆ, ದೆಂಬಲ ಕೊಡುವ ನೊತ್ತು ನಲ್ಲಿ ಯಾದುಮಾ ರಾಷ್ಟ್ರಸೇವಾ ಸಂಘದ ಪ್ರತಿಯೊಬ್ಬ ಸದಸ್ಯನು ಪ್ರತಿ ತಿಂಗಳಿಗೆ ೨೪೦ ಗಜ ಸ್ವತಃ ನೂತ ನವಾಗಿ ನೂಲಿನ ಕೆಂಡಕ್ಕೆದ್ದಿಂತಲೂ, ಯಾವದೊಂದು ಅನಿವಾರ್ಯ ಅಡಚಣೆಯು ಮೂಲಕ ಯಾವದೊಂದು ತಿಂಗಳ ವಂತಿಗೆ ನೂಲನ್ನು ಆ ತಿಂಗಳ ಕೊನೆಯೊಳಗಾಗಿ ಕೊಡದಿದ್ದಲ್ಲಿ ಮುಂದಿನ ತಿಂಗಳ ವಂತಿಗೆಯೊಂದಿಗೆ ಅಷ್ಟಿಗೆಯನ್ನು ಕೊಡಬೇಕೆಂತಲೂ, ಹಾಗೆ ಕೊಡದಿದ್ದಲ್ಲಿ ತಪ್ಪು ಗಾರ ಸದಸ್ಯನ ಸದಸ್ಯತ್ವವು ತಂತಾನೇ ರದ್ದಾಗುವದೆಂತಲೂ ಒಂದು ಹೊಸ ನಿಯಮ ಮಾಡಲಾಯಿತು. ಅದು ಈಹೊತ್ತಿನಿಂದ ಅಮಲಿನಲ್ಲಿ ಬರುವದು. ಆದೇ ದಿನ ತಾಲೂಕಾ ಮಧ್ಯಸ್ಥಿಕಾಂಧಕ ಸಮಿತಿಯ ಸಭೆಯಾಗಿ, ಇಲೇ ತಾಲೂಕಿನಲ್ಲಿ ಪ್ರಜಾತಾ ಕಾರ್ಯ ನಡಿಸಲು ಅಲ್ಲಲ್ಲಿ ಸ್ಥಾನಿಕ ಕಾರ್ಯಕರ್ತರನ್ನು ನೇಮಿಸಲಾಯಿತು.

ಅಂದೇ ಸಾಯಂಕಾಲ ಪುನಃ ರಾ| ದೊಡ್ಮನೆ ನಾಗೇಶ ಹೆಗಡೆ ಅಧ್ಯಕ್ಷತೆಯಲ್ಲಿ ತಾಲೂಕ ಕೊಂಗ್ರೆಸ ಕವಿಸಾಬೆಯ ಮಹಾಸಭೆ ಕೂಡಿ, (೧) ಕೊಂಗ್ರೆಸ ಕಾರ್ಯಕಾರಿ ಮಂಡಳದ ಯುದ್ಧ ನೀತಿಗೆ ದೆಂಬಲ, (೨) ತಾಲೂಕಾ ಮಧ್ಯಸ್ಥಿಬಂಧಕ ಸಮಿತಿಗೆ ರೂ. ೧೫ ಮತ್ತು ಜಿಲ್ಲಾ ಶಿಕ್ಷಣ ಸಮಿತಿಗೆ ರೂ. ೧೫ ಧನಸಹಾಯ ಕೊಡಲು ಮಂಜೂರಿ, (೩)ಕಳೆದ ವರ್ಷದ ಕಾರ್ಯದ ವರದಿ ಮಂಜೂರ ನೂಡುನದು ಮುಂತಾದ ಕೆಲಸಗಳು ಜರುಗಿದವು.

ಇಲ್ಲಿಯ ಹಿಂದೀ ಕೇಂದ್ರದಿಂದ ದ. ಭಾ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಿಗೆ ೭೬ ಜನರು ಕುಳಿತಿದ್ದರು. ಅವರಲ್ಲಿ ಪ್ರಥಮಯಲ್ಲಿ ೧೩, ಮಧ್ಯಮೆಯಲ್ಲಿ ೧೮ ಮತ್ತು ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ೬ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ ಮಧ್ಯಮಾ-ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಉಳಿತವರಲ್ಲಿ ಹೆಚ್ಚಾಗಿ ೧೩-೦೪ ವರ್ಷದೊಳಗಿನ ತರುಣ ರಿರುತ್ತಾರೆ.

ಕಾರವಾರ— (ತಾ ೫-೧೧-೬೯) ಶಿರೀಯಲ್ಲಿ ನಬಜಜ್ಜಾದ ರಾ| ರಾಜಾಳ್ಕರ್‌ರವರಿಗೆ ವರ್ಗವಾದ ಸುದ್ದಿಯದು. ಅವರ ಸ್ಥಳದಲ್ಲಿ ರತ್ನಾಗಿರಿಯ ಸಬಜಜ್ಜರಾದ ರಾ| ಕಾಜಿಯವರ ನೇಮಾಣಾಕಿಯಾಗಿದೆ ಹೊನ್ನಾವರದ ಸಬಜಜ್ಜ ಕೋಟ್ಯಿಗೆ ಹಾವೇರಿಯ ಸಬಜಜ್ಜರಾದ ರಾ| ತಲ್ಲಾಕರವರು ಬರುವರೆಂದು ನರ್ತಮಾನ ಬಂದಿದೆ ಇದರ ಮೇರಿಂದ ಶಿರ್ಸಿ-ಕುಮಟಾ-ಹೊನ್ನಾವರ ಕೋರ್ಟುಗಳಲ್ಲಿ ಯಾವದಾ ದರೊಂದು ಕೋರ್ಟು-ನಿರ್ನವನಾ ಕುಮಟಿಯ ಕೋರ್ಟು ಮುಚ್ಚಲ್ಪಡುವದೆಂದು ಇಲ್ಲಿ ಹರ್ಬಿದ ಗಾಳಿ ವರ್ತಮಾನವು ಸದ್ಯಕ್ಕಾದರೂ ನಿರಾಧಾರವೆಂದು ಹೇಳಬೇಕಾಗಿದೆ.

ಇಲ್ಲಿಯ ಪ್ರಸಿದ್ಧ ಜಂಗಲ ಕಂಟ್ರಾಕ್ಟರಾಗಿರುತ್ತಿದ್ದ ರಾ| ಸಾ| ಮಹಾಬಲೇಶ್ವರರಾವ ಬಾಡಕ್ಕರ ಟೋಕರೆ ಇವರು ಕಳೆದ ಬುಕ್ರವಾರ ರಾತ್ರೆ ಕೈಲಾಸವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ ಹೊನ್ನಾವರದ ಕೆಲವು ದಿನಗಳಿಂದ ಅಸ್ವಸ್ಥರಿದ್ದರು. ಇತ್ತೀಚೆಗೆ ಅವರ ಹೊಟ್ಟೆಯ ಮೇಲೆ ಒಂದು ವ್ರಣವಾಗಿತ್ತು. ಅದನ್ನು ಶಸ್ತ್ರಕ್ರಿಯೆಯಿಂದ ಹಿಡಿಯ ತೆಗೆದ ನಂತರ ಅವರು ಏನೇ ದಿನೇ ಕ್ಷೀಣರಾಗುತ್ತ ಸಾಗಿ ತಿರಕೊಂಡರು ಕೈಲಾಸವಾಸಿಗಳು ತಾಲೂಕ ಬೋರ್ಡ, ಜಿಲ್ಲಾ ಲೋಕಲ್ ಬೋರ್ಡ, ಕಾರವಾರ ಮ್ಯುನಿಸಾಲಿಟಿ, ಕಾರವಾರ ಅರ್ಬನ್ ಸಹಕಾರ ಬ್ಯಾಂಕ ಮೊದಲಾದ ಸಂಸ್ಥೆಗಳಲ್ಲಿ ಕೆಲಿ ಯಶಾಶಕ್ತಿ ಲೋಕಸೇವೆ ಮಾಡಿದ್ದಾರೆ. ಬೆಂಡಹೊಂದ ಯಾಂಗಣ ಅವರು ಬರಿಗೈ ಯಿಂದ ತೆರುಗಿ ಕಳಿಸುತ್ತಿದ್ದಿಲ್ಲ ನಿನ್ನೆ ಅವರ ಪ್ರೇತಯಾತ್ರೆಗೆ ಬಹಳ ಜನರು ಕೂಡಿದ್ದರು ಜನ್ಮಭೂಮಿಯಾದ ಕೋಡಿಬಾಗದಲ್ಲಿ ಅವರ ದಹನವಾಯಿತು ಮೃತ್ಯಾರಿಗೆ ಸದ್ಗತಿಯಾಗಲೆಂದು ಹಾರೈಸುತ್ತೇವೆ.

ಯುದ್ಧ ಮಾಡದೆ ಹೋರಾಡುವ ಕೌಶಲ್ಯ!

[ನಿರೀಕ್ಷಕನು ಬರೆದುದು.]

ಬ್ರಿಟನ್-ಫ್ರಾನ್ಸ್-ಜರ್ಮನಿಗಳೊಳಗೆ ಯುದ್ಧವೇ ನೋ ನಡೆಯುತ್ತಿದೆ. ಯುದ್ಧದ ವಾರ್ತೆಗಳೂ ಬರುತ್ತಿವೆ. ರಣಭೂಮಿಯಲ್ಲೆಲ್ಲ ಇತ್ತಿಟ್ಟಿನ ಸೈನಿಕರೂ, ವೈಮಾನಿಕರೂ ತಮ್ಮ ತಮ್ಮ ಸಕಲ ಯುದ್ಧಸಾಹಿತ್ಯವನ್ನು ಸಿದ್ಧಗೊಳಿಸಿ ಸಜ್ಜಾಗಿ ನಿಂತಿರುವೆ ಸುದ್ದಿಗಳೂ ಕೇಳಬರುತ್ತಿವೆ ಅಲ್ಲಲ್ಲಿ ೧-೨ ಪಡಗಗಳನ್ನು ಮುಳುಗಿಸಿದ, ೧-೨ ವಿಮಾನುಗಳನ್ನು ಉರುಳಿಸಿದೆ, ಶತ್ರು ರಾಷ್ಟ್ರದ ಮೇಲಿಂದ ವಿಮಾನಗಳು ಹಾರಿ ಪರಿಸ್ಥಿತಿ ನಿರೀಕ್ಷಿಸಿಕೊಂಡು ಕಲ್ಲಲೆ ಛಾಯಾಚಿತ್ರಗಳನ್ನು ತಕ್ಕೊಂಡುಬಂದ ಸುದ್ದಿಗಳೂ ಬರುತ್ತವೆ ಆದರೆ ಇದಕ್ಕೆ ಯುದ್ಧವೆಂದು ಕರೆಯು-ವದು ಹೇಗೆ? ಒಂದೆರಡು ವಾರಗಳಲ್ಲಿ ಪೋಲಂಡದ ನೂರಾರು ವೈಲು ಪ್ರದೇಶವನ್ನು ಉದ್ಧ್ವಸ್ತ ಮಾಡಿ ಅಕ್ರಮಿಸಿಕೊಂಡ ಜರ್ಮನ್ ಸೈನಿಕರೂ ವೈಮಾನಿಕರೂ ಈಗ ಏನು ಮಾಡುತ್ತಿದ್ದಾರೆ? ಯುದ್ಧಕ್ಕಾರಂಭವಾದಂದಿನಿಂದ ೬ ವಾರಗಳ ವರೆಗೆ ಜರ್ಮನ್ ಪ್ರದೇಶದಲ್ಲಿ ಒಳಗ್ಗಿನ ಫ್ರೆಂಚ್ ಸೇನೆಯು ಈಗ ಏನು ಮಾಡುತ್ತಿದೆ? ಇತ್ತಿಟ್ಟಿನವರ ಬಲಾಢ್ಯ ವಿಮಾನ ದಳಗಳು ಏಕೆ ಸುಮ್ಮನಿವೆ? ಎಂಬದೇ ಗೂಢ ಪ್ರಶ್ನೆ! ಪಶ್ಚಿಮ ರಣಭೂಮಿಯಮೇಲೆ ಈ ವರೆಗೆ ನಡೆದ ಕಾದಾಟಗಳಲ್ಲೆಲ್ಲ ಜರ್ಮನಿಯೇ ಗೆದ್ದಿದೆಯೆಂದು ತಜ್ಞರ ಅಭಿಪ್ರಾಯ. ಸಮುದ್ರದಲ್ಲಿ ಜರ್ಮನಿಯು ಬ್ರಿಟಿಶರ "ಕ್ಷೇಜಯರ್" ಮತ್ತು 'ರೊಯಲ್ ಓಕ್" ದಂತಹ ಯುದ್ಧನಾವೆಗಳನ್ನು ಮುಳುಗಿಸಿ ಬ್ರಿಟಿಶರ ನೌಕಾಬಲವು ಹೇಗೆಯೆಮ್ಮು ಅಭೇದ್ಯವಿಲ್ಲೆಂದು ಸಿದ್ಧಪಡಿಸಿದೆ. ಆಜೆಯ ವಾರ ಮುಳುಗಿಸಲ್ಪಟ್ಟ "ರೊಯಲ್ ಓಕ" ಎಂಬ ಯುದ್ಧನೌಕೆಯು ಬ್ರಿಟಿಶರು ಈ ವರೆಗೆ ಅಭೇದ್ಯವೆಂದು ತಿಳಿಯ ತ್ತಿದ್ದಂಬಂದು "ತೇಲಾಡುವದುರ್ಗ"ವಾಗಿತ್ತು! ಇಂತಹ ಉಕ್ಕಿನ ಕೋಟೆಗಳೂ ಕೂಡ ಆಧುನಿಕ ಸ್ಫೋಟಕ ಸಾಮಗ್ರಿ ಮುಂದೆ ತಡೆಯಲಾರವೆಂದ ಮೇಲೆ ಇನ್ನಿತರ ನೌಕೆಗಳ ಗತಿಯೇನು? ಭೂಗತ ರಣಭೂಮಿಯ ಮೇಲೂ ಜರ್ಮನಿಯೇ? ಈ ವರೆಗೆ ವಿಜಯ ಸಂಪಾದಿಸಿದೆಯೆಂದು ಒಪ್ಪಬೇಕಾಗುತ್ತಿದೆ.

೬ ವಾರಗಳ ವರೆಗೆ ಪ್ರಯತ್ನ ಮಾಡಿ ಫ್ರೆಂಚರು ಅಕ್ರಮಿಸಿದ ಜರ್ಮನಿಯ ಪ್ರದೇಶದೊಳಗಿಂದ ಅರೇ ದಿನಗಳಲ್ಲಿ ಅವರನ್ನು ಹಿಂದಕ್ಕಟ್ಟಿದ್ದು, ಹಿನ್ನೆಟ್ಟುಲು ಹಚ್ಚಿಸಿದ್ದು ಜರ್ಮನ್ನರು ಹೇಗೆಸಾಧಿಸಬೇಕಾದ ಸಂಗತಿಯೇ ನರಿ! ಈ ಪ್ರದೇಶದಲ್ಲಿ ಶತ್ರುಗಳಿಗೆ ಇದಿರಾಗಿ ಲಕ್ಷಾವಧಿ ಸೈನಿಕರ ನರಮೇಧ ನಡಿಸುವದು ಇಪ್ಪತ್ತಲ್ಲೆಂದು ಭಾವಿಸಿ ಫ್ರೆಂಚ್-ಸೇನಾಪತಿ ಜನರಲ್ ಗೆನೆಲಿನ್‌ರವರು ಬಹಳ ಕೌಶಲ್ಯ ಹಿಮ್ಮೆಟ್ಟಿದರೆಂದು ವಿಲಾಯತಿಯ ಪತ್ರಿಕೆಗಳು ಬಣ್ಣಿಸುತ್ತವೆ! ಈವಾಗ ಯುದ್ಧ ಭೂಮಿಯಲ್ಲಿ ಹವೆ ಕಟ್ಟುವ ಕಾರಣ ವಿಶೇಷ ಯುದ್ಧದ ಚಟುವಟಿಕೆಗಳನ್ನು ನಡಿಸಲು ಆಸ್ಪದವಿಲ್ಲೆಂದು ಬೇಕೋಗಾಗುತ್ತಿದೆ ಹವೆ ಕಟ್ಟಿದುದರಿಂದ ಮಾತು ಸಟೆಯಲ್ಲ. ಆದಾಗ್ಯೂ ಉಭಯ ಪಕ್ಷಗಳಲ್ಲಿ ಯುದ್ಧದ ಅವೇಶನೇ ಕಂಡುಬರುವದಿಲ್ಲವೆಂಬ ಮಾತು ಅಶಕ್ಯವಲ್ಲ. ಇದರ ಮರ್ಮವೇನೆಂದು ತಿಳಿಕ್ಕಾಲ್ಕೇಕಾದರೆ ಬ್ರಿಟಿಶರಿಗೂ ಫ್ರೆಂಚರಿಗೂ ಶತ್ರುಪ್ರಕ್ಷ ರಣಭೂಮಿಯಲ್ಲಿ ಹೋರಾಡುವ ಇಚ್ಛೆಯಿಲ್ಲ. ಜರ್ಮನಿಯನ್ನು ನಾಲ್ಕೂ ಬದಿಯಿಂದ ಸುತ್ತುಗಟ್ಟಿ, ಜರ್ಮನಿಗೆ ಬೇಕಾದ ಆಹಾರ ಸಾಮಗ್ರಿಗಳನ್ನೂ ಯುದ್ಧ ಸಾಹಿತ್ಯಗಳನ್ನೂ ನಿಗದಂತೆ ನಾಡಿ ಅವರಿಗೆ ಹಣ್ಣೆಗೆ ತಂದುವೇ ಬ್ರಿಟಿಶರ ಯುದ್ಧ ನೀತಿಯಾಗಿದೆಯೆಂದು ತಿಳಿಯಬೇಕಾಗಿದೆ. ಜರ್ಮನಿಗೆ ಸಹಾಯ ಮಾಡಿಎಹುದಾದ ರಾಷ್ಟ್ರಗಳನ್ನು ತನ್ನ ಪಕ್ಷಕ್ಕೆ ಎಳಕೊಂಡು, ಅವು ಜರ್ಮನಿಗೆ ನೆರವಾಗದಂತೆ ಮನವೊಲಿಸಿ ಮತ್ತು ಜರ್ಮನಿಯ ಸಾಮ್ರಾಜ್ಯತೃಷ್ಣೆಗೆ ಬಲಿಯಾಗಿ ಬಳಲುತ್ತಿರುವ ಜನರನ್ನು ಸರಕಾರದ ವಿರುದ್ಧ ಎಬ್ಬಿಸಿಕೊಟ್ಟು ಜರ್ಮನಿಯ ಬಲವನ್ನು ಕುಗ್ಗಿಸುವದೇ ಬ್ರಿಟಿಶರು ಅನುಸರಿಸುತ್ತಿರುವ ಯುದ್ಧಪದ್ಧತಿಯಾಗಿರುತ್ತದೆ. ಇಂಥ ಸ್ಥಿತಿಯಲ್ಲಿ ರಣರಂಗಕ್ಕೆ ಕಳೆಯೆಲ್ಲಿಂದ ಬಂದೀತು? ರೋಮಾಂಚಕಾರಿ ಯುದ್ಧ ವಾರ್ತೆಗಳು ಓದಸಿಗುವದಾದರೂ ಎಂತು? ಓದುಗರು ಚಿಕ್ಕ-ಪುಟ್ಟ ಜಗಳಗಳ ಸುದ್ದಿಗಳನ್ನಷ್ಟೇ ಕೇಳಿ ಕೃಪ್ತರಾಗಬೇಕು!

ಸ್ಥಾನಿಕ ವೃತ್ತಾಂತ.

ಕುಂಟಿಬಿ— ೩-೬ ದಿನಗಳಿಂದ ಮಳೆಯಾಯ್ದು ರಾತ್ರಿ ಚೆಳಿ ಬೀಳಲಾರಂಭಿಸಿದೆ. ಆವರೂ ಮೈಯ್ದೆ ಶಕೆಯಾಗುತ್ತಿರುವವನ್ನು ನೋಡಿದರೆ ೪೦-೦ ದಿನಗಳಲ್ಲಿ ಪುನಃ ಮಳೆ ಬೀಳಬಹುದೆಂದು ತೋರುತ್ತಿದೆ. ಒಕ್ಕಲಿಗರು ಭರಭರನೆ ಗದ್ದೆ ಕೊಯ್ದು ಮಾಗಿಸುವದರಲ್ಲಿ ತೊಡಗಿದ್ದಾರೆ. ಊರೊಳಗೆ ಚಿಕ್ಕ-ಪುಟ್ಟ ಬೀನ-ಬೇಸರಿಕೆಗಳು ಇದ್ದೇ ಇವೆ.

ಹೊನ್ನ ಸಲಜಕ್ಕರಾದ ರಾ॥ ಸರೂಳೇಕರವರು ಮೊನ್ನೆ ಮುಂಜಾನೆ ಇದ್ದ ಬಂದು ತಲ್ಪದರು; ಅವರು ಇಂದು ಬಾಜರ್ ತಕ್ಕೊಳ್ಳುವರು.

ಈಚೆ ಸಪ್ಟಂಬರ ತಿಂಗಳಲ್ಲಾದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಿಗೆ ಇಲ್ಲಿಯ ಕೇಂದ್ರದಿಂದ ಕೂತು ತೇರ್ಗಡೆಯಾದವರ ಹೆಸರುಗಳು ಈ ಕೆಳಗಿನಂತಿವೆ:-

ಪ್ರಥಮಾ- (ಪ್ರಥಮ ಶ್ರೇಣಿ) ಶಂಕರ ವ್ಹಿ. ಮಂಡಿತ, ಕುಪ್ಪಯ್ಯಾ ಎಸ್ಸ್. ಹೆಗಡೆ, ನಾರಾಯಣ ಬಿ. ಕಾಸಭಾಗ, ಮಧುಸೂದನ ಜಿ. ಭಟ್ಟ, ರಮಾಬಾಯಿ ಭಟ್ಟ; (ದ್ವಿತೀ. ಶ್ರೇಣಿ) ಮೋಹನ ಆರ್. ಕಾಮತ, ಶಂಕರ ವಿ. ಭಟೆಕಳಕರ, ಹರಿಪರ ಜಿ. ಬಳಕೂರ, ರಾಮಬಾಳ ಜಿ. ಸಹುಕೋಣ, ವಿಷ್ಣು ಆರ್. ಶಿರೂಡಕರ, ರಾಮಬಾಳ ಪಿ. ಪೈ, ಸುಬ್ರಾಯ ಎಸ್ಸ್. ಪ್ರಭು, ಬಾಬು ವಿ. ಕಾಸಭಾಗ, ಸರ್ವೋತ್ತಮ ಎಸ್ಸ್. ಕಾಮತ್, ಸರ್ವೋತ್ತಮ ಎಸ್ಸ್. ಗೋಳಿ, ಕಾಶೀನಾಥ ಎಸ್. ಕಾಸಭಾಗ, ಆನಂದ ರಾವ ವಿ. ಭಟ್ಟ, ಸಂಜೀವ ಎಸ್. ಕಲ್ಯಾಣಪುರಕರ, ಮಾಧವ ಜಿ. ಪಂಡಿತ, ಹಿರಾ ಕಾಮತ, ಗಂಗಾಬಾಯಿ ಬೋರಕರ, ರಕುಂಡಲಾ ಕೇ. ಪ್ರಭು, ರಮಾಬಾಯಿ ಕಾಸಭಾಗ, ಸುಶೀಲಾಬಾಯಿ ಗೋಕರ್ಣ, ಗಂಗಾಬಾಯಿ ಮಕ್ಕಿ ಕೇರಿ, ಸುಮಂಗಲಾಬಾಯಿ ಪ್ರಭು, ಸಾವಿತ್ರಿ ರೇಗೋ, ಅನುಸೂಯಾಬಾಯಿ ಕಾಸಭಾಗ, ಸುಶೀಲಾಬಾಯಿ ಘಾತಕ ಹೇಕರ, ಸುಶೀಲಾಬಾಯಿ ಕುಲಕರ್ಣಿ, ಸುಧಾ ಕಲ್ಯಾಣಪುರಕರ, ಇಂದುಬಾಯಿ ಸೈ, ಸೌ॥ ಸುಶೀಲಾ ಭುಜಬಲಿ.

ಮಧ್ಯಮಾ- (ಪ್ರಥಮ ಶ್ರೇಣಿ) ಸೂರಪಂಡಿ ಜಿ. ಗುಡಿಗಾ, ಅಚ್ಯುತ ಆರ್. ಕಾಸಭಾಗ, ವಾಸುದೇವ ಕೇ. ನಾಯಕ, ಬಾಲಕೃಷ್ಣ ಎಸ್. ಕಾಸಭಾಗ, ವಿಠಲಾ ವ್ಹಿ.ಮ್ಹಾ ಪಸೇಕರ, ತಾರಾ ಪಡುಕೋಣ, ಸಿಂಧೂ ದೀವಗಿಕರ, ಅಂಜನಿ ಕಲ್ಯಾಣಪುರಕರ, ಇಂದಿರಾ ಪೈ; ರಮಾ ವೆಂಟಿಕರ್(ದ್ವಿತೀಯಶ್ರೇಣಿ) ತಿಮ್ಮಣ್ಣ ಎಸ್ಸ್. ಭಟ್ಟ, ಶ್ರೀಮತಿ ವ್ಹಿ. ನಾಯ್ಕ, ಶ್ರೀನಿವಾಸ ಆರ್. ಪೈ, ರಾಮೇಶರ ಪಿ. ಕಾಮತ, ವೆಂಕಟ್ರಮಣ ಎಸ್. ಕಲ್ಲುಚ್ಚಿಕರ, ವಿಷ್ಣು ಎಸ್. ಭಟ್ಟ ಅಡಕೋಳಿ, ವಿಷ್ಣು ಆರ್. ಪಂಡಿತ, ಸುಲೋಚನಾ ಕಾಮತ, ಲೀಲಾ ಪಡುಕೋಣ, ಶ್ರೀದೇವಿ ಕಾಸಭಾಗ, ಸುಲೋಚನಾ ಭಟ್ಟ, ಶ್ರೀಮತಿ ಕಾಸ್ಸಭಾಗ, ಮಾಧವ ಜೀ. ಪ್ರಭು.

ರಾಷ್ಟ್ರಭಾಷಾ- (ದ್ವಿತೀಯ ಶ್ರೇಣಿ) ಮಹಾಬಲೇಶ್ವರ ಪಿ. ತೊರ್ಕೆ, ರಾಮಬಾಳ ಬಿ. ಚಿತ್ತಾಲ, ಶೇಷಗಿರಿ ಜಿ ಪೈ, ದಿನಕರ ಎಸ್. ಗೋಳಿ, ನರಸಿಂಹ ಪಿ. ಪ್ರಭು.

ಮಲ್ಲಾಪುರ ಕೇಂದ್ರದಿಂದ ಈ ಕೆಳಗಿನವರು ತೇರ್ಗಡೆಯಾಗಿದ್ದಾರೆ:- **ಪ್ರಥಮಾ-** (ಸ್ವ. ಶ್ರೇ.) ವೆಂಕಟಿಂಮಣ ಹೊಸಬಾಣ್ಣ ನಾಯ್ಕ, ಕೃಷ್ಣಾ ಶಾಂತಾರಾಮ ಬಲ್ಲಾಳ, ಸುಬ್ರಾಯ ಅನಂತ ಉಭಯಕರ, ಈಶ್ವರ ರಾಮಾ ಕೃಷ್ಣ ಶಿಬಾಡ; (ದ್ವಿ. ಶ್ರೇ.) ನಾಗೇಶ ಸುಬ್ರಾಯ ಭಟ್ಟ, ಶ್ರೀಮತಿ ವಿಠ್ಠಲ ನಾಗರಕಟ್ಟೆ, ಲಲಿತಾ ನಾಗರಕಟ್ಟೆ. **ಮಧ್ಯಮಾ-** (ದ್ವಿ. ಶ್ರೇ.) ಈಶ್ವರ ಶ್ರೀಧರ ಹೆಗಡೆ ಕೂಜಳ್ಳಿ.

ಉಮಟಿನ ಮ್ಯುನಿಸಿಪಾಲಿಟಿಯ ಎನೇ ಪಾರ್ಷದೊಳಗಿನ ಕ್ರಿಶ್ಚನ್ ಸದಸ್ಯರಾದ ರೆ॥ ಫಾ॥ ಎ ಬೆರೆಟೋರವರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟರುವ ಕಾರಣ, ಆ ಸ್ಥಾನಕ್ಕೆ ಹೊಸ ಚುನಾವಣೆ ನಡೆಯಲಿದೆ. ಈ ಸ್ಥಾನಕ್ಕೆ ಹುರಿಯಾಳು-ಪತ್ರಗಳನ್ನು ಸಾದರಪಡಿಸುವ ಕೆಲಸ ಈವೆದ ವಾರ ಮಾಸುಲೇವಾರ ಸಾಯೆಬರು ಮುಂದೆ ನಡೆಯಿತು. ಮಿ॥ ಫ್ರಾನ್ಸಿಸ್ ಸುಬ್ಬಾರೋರ ನಿಮೋನ್ಹಾ ಮತ್ತು ಎಫ್. ಎ. ಎಕ್ಸ್. ಅಲ್ಮೆಡಾ ಇವರಿಬ್ಬರು ಹುರಿಯಾಳುಗಳಾಗಿದ್ದಾರೆ. ಇಬ್ಬರ ಹುರಿಯಾಳು-ಪತ್ರಗಳೂ ಸ್ವೀಕರಿಸಲ್ಪಟ್ಟಿವೆ. ಉಪ-ಚುನಾವಣೆಯು ಮತದಾನ ಇದೇ ಬರುವ ತಾರೀಕು ೧೩—೧೨—೧೯೩೯ನೇಗೆ ನಡೆಯುವದು.

ಹಿರೇಗುತ್ತಿಯ ನಾಗರಿಕರೊಬ್ಬರು ಬರೆಯುತ್ತಾರೆ:— "ಇದ್ದಿಯ ಸಹಕಾರ ಸಂಘವನ್ನು ಹೊಂದಿಸಿಗೊಳಿಸಬೇಕೆಂದು ಕೆಲ ಕಾರ್ಯಾಸಕ್ತಿಗಳ ಪ್ರೋತ್ಸಾಹನೆ ನಡೆದಿದೆ ಯೆಂಬವಾಗಿ ಹಿಂದೆ ವೃತ್ತ'ದಲ್ಲಿ ಪ್ರಕಟವಾದ ಸಂಗತಿ ಈಗ ಸತ್ಯವಾಗಿ ಪರಿಣಮಿಸಿದೆ. ಹೊಸ ವರ್ಷದ ಕಾರ್ಯಕಾರಿ ಮಂಡಳದ ವಿಧಿವ್ಯವಸ್ಥೆ ಕೆಲವು ಚೆನ್ನಾಗಿ ಸುಪರಿಣಿಯ ವ್ಯಕ್ತಿಗಳಿಂದ ಮಾಡಿಕೊಂಡಿರಬೇಕಾಗಿ ಅನುಮಾನ ಹೊರಡುತ್ತಿದೆ. ಆ ಮಾರುಗಳೇನು ಮತ್ತು ಅವುಗಳಲ್ಲಿ ಸತ್ಯಾಂಶವಿದೆ? ಎಂಬುದರ ಬಗ್ಗೆ ಬೋರ್ಡಿನ ಕಛೇರಿಯಿಂದ ಸಂಘದ ಕಾರ್ಯಕಾರಿ ಮಂಡಳಿಗೆ ಬರೆದು ಬಂದಿಸ್ಪಾನ್ಸರಿಂದಲೂ, ಬಗ್ಗೆ ಪರೀಸ್ಥಾ ಬೋರ್ಡಿನ ಸಹ ಪರೀಕ್ಷಾಸ್ಪಾದ್ದರಿಂದ ಲೂ ನಾವು ಮೇಲೆ ಅನುಮಾನಿಸಿರುವಂಥ ಕಲ್ಪ ಪ್ರಯೋಗಿಸ ಬೇಕಾಗಿದೆ. ಬೋರ್ಡಿನವರು ಕಳೆದ ತಾ. ೨೫-೯-೧೯೩೯ನೇ ಕೂಡಿದ ಸಭೆಯಲ್ಲಿ ನಮ್ಮ ಊರ ಸಂಘದ ಕಾರ್ಯಕಾರಿ ಮಂಡಳಿಯನ್ನು ಸಸ್ಪೆಂಡ ಮಾಡುವ ತರಾವನ್ನೆಂದು ಕೈಕೊಂಡಿರುವರಂಗಿ ಇದೀಗ ಸಂಘದ ಕಾರ್ಯಕಾರಿ ಮಂಡಳಿಕ್ಕೆ ವಿಳಂಬವಾಗಿ ಅಧಿಕಾರಿಯವರಿಗೆ ಕಡೆಯಿಂದ ಪತ್ರ ಬಂದಿದೆ ತನಕ ನಮ್ಮ ಸಂಘದ ಕಾರ್ಯಕಾರಿ ಮಂಡಳಿಕ್ಕೆ ಅದರ ಪುರಿ ಸುಳುವು ಸಹ ಸಿಗಲಿಲ್ಲ! ಬೋರ್ಡಿನ ಠರಾವಿನ್ವಿ ಸಸ್ಪೆಂಡ ಮಾಡಿದ ವ್ಯಕ್ತಿ ಕಾರ್ಯಕಾರಿ ಮಂಡಳಿಯ ಆ ಕಾಲದ ಎಂದರೆ ಸಂಘದ ಕಾರ್ಯಕಾರಿ ಮಂಡಳಿಯ ಅಗಮಿಸ್ತಕಿಂದು ಸಂಗತಿ ದೊರಗೂ ತಿಳಿಸಿ ಹೊಳಿಯಿಸಿದ್ದಾರೆ. ಈಗಿನ ಕಾರ್ಯಕಾರಿ ಮಂಡಳಿಯು ತಾ. ೭-೧೦-೧೯೩೯ನೇ ನೇಗಾದ ಸಂಘದ ಸಾಮಾನ್ಯ ಸಭೆಯಲ್ಲಿ ಹಿಮ್ಮತಿಯಿಂದ ಅಧಿಕಾರವನ್ನು ಕಾರ್ಯಕಾರಿ ಮಂಡಳಿಯವರಿಕ್ಕಿದೆ. ಹೀಗಿರು ತ್ತಾ, ತಾ. ೨೫-೯-೧೯೩೯ನೇಗಾದ ಯೂನಿಯನ್ ಬೋರ್ಡಿನ ಸಂಬಂಧಿನ್ಯಯ ಸಸ್ಪೆಂಡ ಮಾಡಲ್ಪಟ್ಟ ಕಾರ್ಯಕಾರಿ ಮುಂಡಳವು ಹೊಸ ಕಾರ್ಯಕಾರಿ ಮಂಡಳವೇ ಎಂದು ತಿಳ್ಳು ಗ್ರಹಿಕೆ ಮಾಡಿಕೊಂಡು, ಆ ರಜಿಸ್ಟ್ರಾರರು ಸಂಘದ ಕಾಗದಪತ್ರಗಳನ್ನೂ ಶಿಲ್ಕಿನ್ನೂ ಈ ಬಗ್ಗೆ ನೇಮಕಪಟ್ಟ ಸುಪರಿಣ್ಯಾಧುರರ ವಶಾ ಒಟ್ಟು ನೋಕಂಡೀಕ ಪ್ರಯತ್ನ ಬೇಕೆಂದು ಹುಕುಮು ಮಾಡಿದ್ದು ನೋಡಿದರೆ ಮನಸ್ಸು ಬಹಳ ಉದ್ವೇಗಗೊಳ್ಳುತ್ತಿದೆ. ಆ ರಜಿಸ್ಟ್ರಾರರು ಮೊನ್ನೆ ಬರೆದ ದ ತಮ್ಮದೊಂದು ಪತ್ರದಲ್ಲಿ ತಾ. ೨೫-೯-೧೯೩೯ ಮುಂದೆ ನಡೆದ ಕಾರ್ಯಕಾರಿ ಮಂಡಳದ ಯಾವತ್ತೂ ವ್ಯವಹಾರಗಳು ಅಸಿಂಧುವಿರುತ್ತವೆಂದು ಬರೆದಿರುತ್ತಾರೆ! ಆದು ಹೇಗೆಂದು ಆ ಅಧಿಕಾರಿಗಳೇ ಗೊತ್ತು! ಕಾರ್ಯಕಾರಿ ಮಂಡಳವನ್ನು ಸಸ್ಪೆಂಡ ಮಾಡುವ ಅಧಿಕಾರ ಜಿಲ್ಲಾ ಯೂನಿಯನ್ ಬೋರ್ಡಿಗೆ ಎಲ್ಲಿಂದ ಮತ್ತು ಎಂದು ಸಿಕ್ಕಿತು? ಎಂಬ ವಿಷಯವನ್ನು ತುರ್ತಕ್ಕೆ ಬದಿಗಿಟ್ಟರೂ, ಆವರ ನಿರ್ಣಯವು ಕಾರ್ಯಕಾರಿ ಮಂಡಳದ ಕಡೆದುರಿಗೆ ಬರುವ ತನಕ ಆ ಮಂಡಳವು ಮಾಡಿದ ವ್ಯವಹಾರಗಳಾಗಲಿ ಕಾರ್ಯಕಲಾಪಗಳಾಗಲಿ ಹೇಗೆ ರದ್ದಾಗುತ್ತವೆಂದು ವ್ಯವಹಾರಕರಿಗೆ ತಿಳಿಯದೆಯೂ ವ್ಯವಹಾರದಲ್ಲಿ ಸಸ್ಪೆಂಡ-ಹುಕುಮು ಸಸ್ಪೆಂಡ ಸೂರ್ಟಿಫ್ಟ್ ವ್ಯಕ್ತಿಯು ಇಲ್ಲದೆ ಸಂಸ್ಥೆಯು ಕೈಗೆ ಸಿಗುವ ನರೆಗೆ ಆ ವ್ಯಕ್ತಿಯು ಇಲ್ಲದೆ ಸಂಸ್ಥೆಯು ನಡೆಸಿದ ಕಾರ್ಯಕಲಾಪಗಳೂ ವ್ಯವಹಾರಗಳೂ ಸಿಂಧುವೆಂತೆಲೇ ಎಣಿಸುತ್ತಾರೆ. ಈ ಮಾತು ನಮ್ಮ ಆ॥ ರಜಿಸ್ಟ್ರಾರರಿಗೆ ತಿಳಿಯದಿದ್ದದ್ದು ಒಂದು ಮಹದಾಶ್ಚರ್ಯವೇ ಸರಿ! ಇನ್ನೊಂದು ಸೂಚಾ. ಕಾರ್ಯಕಾರಿ ಮಂಡಳದ ವಿರುದ್ಧ ಚಿಲ್ಲಾ ಯೂನಿಯನ್ ಬೋರ್ಡಿನ ಇಚೆ ಸಂಘದ ಕೆಲವು ಸದಸ್ಯರ ದೂರುಗಳು ಬಂದಿದ್ದವೆಂದು ತಿಳಿಯುವಾ. ಆ ದೂರುಗಳ ಖಾಲಿಟೆ ಮಾಡಿ ಕಾರ್ಯಕಾರಿ ಮಂಡಳವನ್ನು ದಂಡಿಸುವದಾದಲ್ಲಿ ಬೋರ್ಡಿನವರು ಸಂಘದ ಕಾರ್ಯಕಾರಿ ಮಂಡಳದ ಅಭಿಪ್ರಾಯವನ್ನಾದರೂ ಕೇಳಿಕೊಳ್ಳಬೇಕಿತ್ತಲ್ಲವೇ? ಆರೋಪಿಯ ಹೇಳಿಕೆ ಕೇಳಿಕೊಳ್ಳದೆ, ಅತನಿಗೆ ಶಿಕ್ಷೆ ಮಾಡುವ ಪ್ರಕೃತ ಯಾವ ನ್ಯಾಯಶಾಸ್ತ್ರದಲ್ಲೂ ಕಾಣುಬರುವದಿಲ್ಲ! ಬೋರ್ಡಿನವರಿಗೆ ಈ ತತ್ವ ಗೊತ್ತಿಲ್ಲ ವೇನು? ಆ॥ ರಜಿಸ್ಟ್ರಾರ ಸಾಹೆಬರಾದರೂ ಆವನ್ನು ಮೊತ್ತ ಬೆಳೆಯಿಂತಾ? ಬೋರ್ಡಿನವರು ಕಾರ್ಯಕಾರಿ ಮಂಡಳದ ಆಂಥೋಪವನ್ನು ಕೇಳಿಕೊಂಡಿರುವೆವೋ ಹೇಗೆ, ಬೋರ್ಡಿನವರು ಸ್ವೀಕರಿಸಿದ ಸೂಚನೆಯು ಎಷ್ಟರ ಮಟ್ಟಿಗೆ ಗ್ರಾಹ್ಯವಿಯ್ತಿದೆ, ಇಲ್ಲಿನ ಆವರಲ್ಲಿ ಸಾದರಪ್ಪಿದೆ, ಎಂಬ

SAVING & SPENDING.

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING and SPENDING and who have, by sheer force of will, built up a bulky Savings Bank Account.

The Canara Industrial & Banking Syndicate, Ltd.

Estd.:] (Incorporated in British India.) [1925.

HEAD OFFICE:- UDUPI. (S. India.)

ಮಾಡುವದೇ ಸಂಗತಿಯು ವಿಚಾರ ಮಾಡತೆ ಆ ರಕ್ಷಿಸ್ವಿರವು ಬೋರ್ಡಿನ ಲಂಚವನ್ನು ಮುಂಬೂರ ಮಾಡಿ ಸಂಘದ ದಕ್ಷ ರವನ್ನು ಒನ್ನೂಲೇ ತಮ್ಮ ಶ್ರೇಷ್ಠತಿ ಪ್ರತಿಷ್ಠಿಗೆ ಒಪ್ಪಿಸಿ ಹೊಂಹೊರಟು ಹೋಗಿರೆಂದು ಹೊಡಗಾರ ಕಾರ್ಯಕಾರಿ ಮಂಡಳದ ಸದಸ್ಯರಿಗೆ ಹುಕುಮು ಮಾಡುವದೇನು? ಇದೇನು ನ್ಯಾಯವೋ, ನ್ಯಾಯದ ವಿಡಂಬನೆಯೋ? ಕಾರ್ಯಕಾರಿ ಮಂಡಳದವರು ಸುಮ್ಮನೆ ಕೈಚಾಚಿಕೊಂಡು ಕೂಡ್ರದೆ, ಈ ಪ್ರಕರಣದ ವೀರು-ವೀರುಗಳನ್ನು ವಿಕಲಿಗೆ ತಂದು ಕಾರಸ್ಥಾನಗಳ ಕಾರಸ್ಥಾನವನ್ನೂ, ಅಧಿಕಾರಿಗಳ ಅವಿವೇಕವನ್ನೂ ಬೈಲಿಗೆ ತರಬೇಕಾಗಿ ಸೂಚನೆಮಾಡಿದೆನೆ.” ಇತ್ಯಾದಿ.

ಹೊನ್ನಾವರ— (ತಾ. ೩-೧೧-೩೯) ಇಲ್ಲಿಯ ಆರ್ಯ ಸೇವಕಾರಿ ವೀಂಕಿನ ಪಾಪಿಕ ಸಾಧಾರಣ ಸಭೆ ಕಳೆದ ರವಿವಾರ ಮಧ್ಯಾನ್ನ ೪ ಘಂಟೆಗೆ ವೀಂಕಿನ ಕವೀಂಯಲ್ಲಿ ಕೂಡಿತ್ತು. ಸಭೆಗೆ ೪೦-೪೫ ಸಭಾಸದರು ಬಂದಿದ್ದರು. ಅಧ್ಯಕ್ಷಸ್ಥಾನವನ್ನು ಹಳೇ ಚೆಅರಮನ್ ರಾ॥ ಶೆಣೈಯವರೇ ಅಲಂಕರಿಸಿದ್ದರು. ಅಧ್ಯಕ್ಷರು ತಮ್ಮ ವ್ಯಾಸ್ಥಾನಿಕ ಭಾಷಣದಲ್ಲಿ ಸಾಹಿತ್ಯ ವರಿಪಡಿಕೆಗಿನ ಕೆಲವು ಅಂಶಗಳನ್ನು ತಿಳಿಸಿ ಹೇಳಿ, ವೀಂಕಿನವರು ತಿರಸ್ಕರಿಸಿದ ಹುರಿಯಾಳು-ಪತ್ರಗಳ ಕುರಿತು ಆಗಿ ರಚಿಸ್ವಾರರು ಕೆಲವೆ ನಿಮಿಷಲು ವಿರುದ್ಧ ಅಸಿಲು ನಡೆದಿರುವದರಿಂದ ತುರ್ತಕ್ಕೆ ಕಾರ್ಯಾವಕಾಶ ಮಾಡಿಕೊಡಲು ಕೆಲಸ ಮುಂದೂಡಲ್ಪಟ್ಟಿವೆಯೆಂದು ಖುಲಾಸೆ ಮಾಡಿದರು. ಆ ನಂತರ ಕಳೆದ ವರ್ಷದ ವರದಿಯೂ ಲೆಕ್ಕಪತ್ರ ಮಂಜೂರ ಮಾಡಲ್ಪಟ್ಟವು. ಶೇರುದಾರರಿಗೆ ೭೫ ಸಲಿಯಂತೆ ಮುನಾಫೆ ಹಂಚಿಕೊಡತಕ್ಕದ್ದೆಂದು ನಿರ್ಣಯವಾಯಿತು. ವರದಿಯ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ ವೀಂಕಿಗೆ ರೂ. ೧೦೦೦ ಹೆಚ್ಚಿಗೆ ಲಾಭ ಸಿಕ್ಕಿದೆಯೆಂತಲೂ, ೭೫ ಸಲಿಗಿಂತ ಹೆಚ್ಚಿಗೆ ಮುನಾಫೆ ಹಂಚಬಲುತ್ತಿರ್ತಂತಲೂ, ಆದರೆ ರಿಜಸ್ಟರ ಸಾಹೇಲರ ಹುಕುಮಿನಂತೆ ೭೫ ಸಲಿಗಿಂತ ಹೆಚ್ಚಿನ ಮುನಾಫೆಹಂಚಬದುದುವರಿಲ್ಲವೆಂತಲೂ ಚಿಅರಮನ್‌ರು ಸುಧುಗಿದರು! ಆ ನಂತರ ಗೌರವ-ಕಾರ್ಯದರ್ಶಿಗಳಿಗೆ ಗೌರವ-ವೇತನ ಕೊಡುವ ಪ್ರಶ್ನೆ ಚರ್ಚೆಗೆ ಬಂತು. ವರದಿಯ ವರ್ಷದಲ್ಲಿ ವೀಂಕಿಗೆ ಹೆಚ್ಚಿಗೆ ಲಾಭ ಉಳಿದಿರುವದರಿಂದ ಆ ಮಾನದಿಂದ ಕಾರ್ಯದರ್ಶಿಗಳಿಗೆ ಕೊಡುವ ಬಕುಮಾನವನ್ನು ಹೆಚ್ಚಿಸಬಹುದಿತ್ತು; ಆದರೆ ಆ ಬಗ್ಗೆ ಕಾರ್ಯದರ್ಶಿಗಳ ಅಚೀಯೇ ಇಲ್ಲವಾದ್ದರಿಂದ ನಿರುಪಾಯವಾಗಿದೆಯೆ; ಎಂದು ಅಧ್ಯಕ್ಷರು ಪ್ರಸ್ತಾವನೆ ಮಾಡಿದರು. ಆದರಂತೆ ಗೌರವ ಕಾರ್ಯದರ್ಶಿಗಳಿಗೆ ರೂ. ೬೦೦ ಗೌರವ-ವೇತನ ಕೊಡಬೇಕೆಂದು ನಿರ್ಣಯವಾಯಿತು. ಮುದ್ದತ್ತಿನವಿಗೆ ಸಾಲ ವಸೂಲ ಕೊಡುವ ಸಾಲಗಾರರಿಗೆ ಅವರು ಕೊಡಬೇಕಾಗುವ ಬಡ್ಡಿಯಲ್ಲಿ ಶೇಕಡಾ ೩೭ರಂತೆ ಸೂಟ್ ವಿದಬೇಕೆಂತಲೂ ಒಂದು ಗೊತ್ತುವೇಯಾಯಿತು. ವೀಂಕಿನ ಕತ್ತ ಧರ್ಮ ಬೇಡಿ ಕೆಲವು ಅರ್ಜಿಗಳು ಬಂದಿದ್ದವು. ಅವುಗಳ ವಿಚಾರವು ಆಯಿತು. ಇಲ್ಲಿಯ ನ್ಯೂ ಇಂಗ್ಲಿಷ ಶಾಲೆಯು ಇತ್ತೀಚಿನ-ಸಿಧಿಗೆ ಶಿಕ್ಷಣ ಮತ್ತು ಧರ್ಮದಾವ ನಿಧಿಯೊಳಗಿಂದ ರೂ. ೬೦೦ ಕೊಡಬೇಕೆಂದು ವಿರ್ಮಾನವಾಯಿತು. ಕಳೆದ ವರ್ಷ ಕನ್ನಡ ಕಸಬಾ ಶಾಲೆಗೆ ಕೊಟ್ಟ ಹಣಗಳ ವಿಶಯೋಗವೇಷಣೆಯಿಂದು ಶಾಲೆಯ ಉಧ್ಯೋಪಕರು ಲೆಕ್ಕ ತೋರಿಸುತ್ತಿಲ್ಲೆಯೆಂದು ಮುಖಾಸೆ ಮಾಡಿದ್ದರಿಂದ ಆ ಶಾಲೆಗೆ ರೂ. ೧೦ ಕೊಡುಬುದಾಗಿ ಗೊತ್ತಾಯಿತು. ಕನ್ನಡ ನಾಡ ಜೇನು ಸಾಕುವವರ ಸಂಘದ ಕಾರ್ಯದರ್ಶಿಗಳೂ ಸಹಾಯ ಬೇಡಿ ಅರ್ಜಿ ಮಾಡಿದ್ದರು; ಆದರೆ, ಸಂಸದದ ಕಾರ್ಯಕ್ಷೇತ್ರವು ವೀಂಕಿನ ಕಾರ್ಯಕ್ಷೇತ್ರದ ಹೊರಗಿನುವದರಿಂದ ಆ ಅರ್ಜಿ ಮನ್ನಿಸಲಾಗದೆಂದು ಅಕ್ಷೇಪ ಬಂದಿದ್ದರಿಂದ ಅದು ತಿರಸ್ಕೃತಗೊಳ್ಳಬೇಕು. ಇಸ್ಪು ವರ್ಷ ವೀಂಕಿನ ಕಚೇರಿ ತಮ್ಮ ಸಮಾಯಿದ್ದಿದಗೊಟ್ಟ ಬಗ್ಗೆ ಗೌರವ-ಕಾರ್ಯದರ್ಶಿಗಳು ಏನೂ ಕೊಳ್ಳುತ್ತಿರಿದ್ದಿಲ್ಲ; ಈಗ ಅವರು ತಿಂಗಳೊಂದಕ್ಕೆ ರೂ. ೨೦ ರಂತೆ ತಮಗೆ ಭಾಡಿಗೆ ಕೊಡಬೇಕೆಂದು ಅರ್ಜಿ ಮಾಡಿದ್ದರು, ಆ ಅರ್ಜಿಯು ಸರ್ವಾನುಮತಿಯಿಂದ ಮಂಜೂರಾಯಿತು. ಇನ್ನು ಹೆಚ್ಚು ಜಾಗಿಗೆ ಕೊಡುವದಕ್ಕಿಂತ ಊರಲ್ಲಿ ಕಡಿಮೆ ಜಾಗೆಗೆ ಸ್ಥಳ ಸಿಗುವಂತಾಯೇ ಇಲ್ಲವೋ ಎಂಬುದರ ವಿಚಾರ ಇಲ್ಲವೆ ವೀಂಕಿನವರೇ ಸ್ವತಂತ್ರ ಮಾಳ್ಕಿಯ ಇತ್ತೂರು ಕಟ್ಟಿಸುವ ವಿಚಾರ ಸಭೆಯಲ್ಲಿ ಸೇರಿದ ಸಭಾಸದರಿಗೆ ಹೊಳೆಯದಿದ್ದದ್ದು ನೋಜಿಗದ ಸಂಗತಿ! ಕೊನೆಗೆ ಬಂದ ಸಭಾಸದರಿಗೆ ಚಹಾಪಾನವಾಗಿ ಸಭೆಯು ಮುಕ್ತಾಯವಾಯಿತು. ಚಿಅರಮನ್‌ರ ವಿರೋಧಿ ಪಕ್ಷದ ಪರು ಈ ಸಭೆಗೆ ಬಹಿಷ್ಕಾರ ಹಾಕಿರಂತೆ ತೋರುತ್ತಿದೆ.

ತಾ. ೦೫-೧೦-೩೯ ನೇಗೆ ಜೈಗುಂದದಲ್ಲಿ ಸುಮ್ಮು ಮುತ್ತಿನಿಜ ೪-೦೦ ಹಳ್ಳಿಗಳ ವೈಕರ ಸಭೆ ಸೇರಿತ್ತು. ಹೊನ್ನಾವರದಿಂದ ರಾ॥ ಪಿ. ಟಿ. ಕರ್ಕಿ, ಎಮ್. ಡಿ. ಕರ್ಕಿ, ಜಾಲಿಶಕ್ತಿ ವಕೀಲ ಮತ್ತು ಜಾಲಿಶಕ್ತಿ ಮಾಸ್ತರ ಇವರು ಮುದ್ದಾಂ ಆ ಸಭೆಗೆಂದು ಹೋಗಿದ್ದರು. ರಾ॥ ಪಿ. ಟಿ. ಕರ್ಕಿಯವರು ಸಭಾಧ್ಯಕ್ಷರಾಗಿದ್ದರು. ಅಧ್ಯಕ್ಷರೂ ರಾ॥ ಮಂ ಜನಾಥ ಭಟ್ಟ ಕರ್ಕಿಯವರೂ ಆ ಸೀಮೆಯಲ್ಲಿ ಒಂದು ದವಾಖಾನೆಯನ್ನು ತೆರೆಯಬೇಕೆಂದು ಸರಕಾರದವರು ಅಲೋಚಿಸಿದ್ದಾರೆಂತಲೂ, ಸೀಮೆಯು ಜನರು ರೂ. ೪೦೦ ಕೂಡಿಸಿ ದವಾಖಾನೆಯ ಬಗ್ಗೆ ಒಂದು ಇಮಾರತು ಕಟ್ಟಿಸಿ ಕೊಡಬೇಕೆಂತಲೂ ತಿಳಿಹೇಳಿದರು. ಡಾಕ್ಟರವಸಕ್ತಿಯುಬ್ಬಗ್ಗೆ ಈಗಿದ್ದ ಬೋರ್ಡ್ ಧರ್ಮದಾಲೆಯು ನಡೆಯದೆ ಇದಂದು ಅವರು ಅಧಿಪ್ರಾಯ ವ್ಯಕ್ತಗೊಳಿಸಿದರು. ಮೇಲಿನಂತೆ ಇಮಾರತು-ನಿಧಿ ಕೂಡಿಸಲು ೧೬ ಜನರಿಂದೊಂದು ಸಮಿತಿ ನೇಮಿಸಲಾಯಿತು. ಸಭೆಯಲ್ಲೇ ರೂ. ೨೫೧ ರ ವಾಗ್ದಾನಗಳು ದೊರೆತವು. ಜೈಗುಂದದ ರಾ॥ ಶಿವರಾಮ ಹೆಗಡೆಯವರಿಗೆ ಈ ಹೊಸ ದವಾಖಾನೆಯ ಡಾಕ್ಟರರನ್ನಾಗಿ ನೇಮಿಸಬೇಕೆಂದು ಶಿಫಾರಸು ಮಾಡುವ ಇನ್ಸ್ಯೂಮೆಂಟ್ ಗೊತ್ತುವಳಿಯೂ ಮಾಡಲ್ಪಟ್ಟಿತು. ಕೊನೆಗೆ ದವಾಖಾನೆ ತೆರೆಯುವ ವ್ಯವಸ್ಥೆ ಮಾಡಿದ ಬಗ್ಗೆ ಸರಕಾರವ ಹಾಗೂ ಜಿ. ಲೋ. ಬೋರ್ಡಿನ ಮತ್ತು ಅಧ್ಯಕ್ಷ-ಅಭ್ಯಾಗತರ ಆಧಾರ ಮನ್ನೆಯಾಗಿ ಸಭೆಯು ಮುಕ್ತಾಯವಾಯಿತು.

ಶಿರಾಲಿ— ಚಿತ್ರಾಪುರ ಮಠದ ಅಕ್ಕಿ ಬಡಿಯಗ್ಗರಿಗೆ ಆಗ್ಗ ದರದಿಂದ ಮಾರುವ ಕ್ರಮು ಇನ್ನೂ ನಡೆಯುತ್ತಿದೆ. ಈ ಕೆಡಿಯ ಕೆಲ ಸಾವುಕಾರರು ಮಾತ್ರ ತಮ್ಮ ಅಕ್ಕಿಯನ್ನು ಕರಸ್ಥಳಿಗಳ ಪರಿಚಯಿರಿಗೆ ಮಾರುತ್ತಿರುವದು ಕೋಟ ಸಲಿಯು.

ಈಗ ಈ ಊರಲ್ಲಿ ಹುಲಿ-ಹಾವಳಿಗೆ ಪ್ರಾರಂಭವಾಗಿದೆ. ಇಪ್ಪೆತ್ತೈದಿಗೆ ೫-೬ ದನಗಳು ಹುಲಿಯ ಪಾಲಾಗಿ ಹೋಗಿವೆ. ಅಧಿಕಾರಿಗಳೂ ಉತ್ಸಾಹಿ ಬೇಟೆಗಾರರೂ ಹುಲಿಯ ಪಾರು ಪತ್ಯ ಮಾಡಿ ಜನರಿಗೆ ಕಾಯರಿಬೇಕೆಂದು ಸೂಚನೆ.

ಭಟ್ಕಳ— (ತಾ. ೪-೧೧-೩೯) ಕಳೆದ ರವಿವಾರದಿಂದ ಇಲ್ಲಿ ಕಾರಾವಾರದ ಸೆಕನ್ಸ ಜಜ್ಜರ ಮುಂದೆ ಕರಾರ ದರೋಡೆ ವಿಟ್ಟಿಯ ವಿಚಾರ ನಡೆದಿದೆ. ಈ ಹೊತ್ತು ಮುಂಜಾನೆ ಸಾಕ್ಷಿ-ಪುರಾವೆಗಳು ಮುಗಿದಿರುತ್ತಿದ್ದು, ನಾಡಪು ಸೋಮವಾರ ವಕೀಲರ ಪ್ರತಿವಾದನೆಗಳಾ ನಡೆಯುವವೆ.

ಇಲ್ಲಿಯ ಹಿಂದೀ ಕೇಂದ್ರದಿಂದ ಪ. ಭಾ. ಹಿಂದೀ ಪರೀಕ್ಷೆಗಳಿಗೆ ಕುಳಿತ ೨೦ ಮಂದಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ೩, ಮಧ್ಯಮೆಯಲ್ಲಿ ೧೨ ಮತ್ತು ಪ್ರಥಮೆಯಲ್ಲಿ ೩, ಹೀಗೆ ೧೭ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. (ಇನೇ ಪಾನ ಮೇಲೆ ಮುಂದರಿಸಿದೆ.)

—: ಶ್ರೀ ರಘುವೀರ ಸಮರ್ಥ :—

ತನ್ನಮ್ಮೂ ತಮ್ಮ ಎಂದಿಜ ಮಕ್ಕಳಮ್ಮೂ

ಆಮಾಂಶ-ಅತಿಸಾರ

ವಿಷಮಜ್ವರ

ಈ ಭಯಂಕರ ರೋಗಗಳಿಂದ ರಕ್ಷಿಸಿಕೊಳ್ಳಿರಿ!!

ಈ ಕೆಳಗಿನ ವಿಷಧಗಳು ರೋಗನಿವಾರಕ ಹಾಗೂ ಗುಣಕಾರಿ ಇರುತ್ತವೆ.

ಲಶುನಾದಿ ಗುಟಿಕಾ:- ಅಜೀರ್ಣ ಮೂಲಕ ವಿರೇಚನ, ಹೊಟ್ಟೆಯುಬ್ಬೋಣ, ತೀವ್ರ ಹೊಟ್ಟೆನೋವು, ಅಗ್ನಿಮಾಂದ್ಯ ಮುತ್ತು ವಾತವಿಕಾರ ಇವುಗಳಲ್ಲಿ ಬಹಳ ಉಪಯುಕ್ತ ವಾದದ್ದು.

ಸುಲೇರಿಯಾ ಮಿಕ್ಕರ:- ಎಲ್ಲಾ ಶರದ ಜ್ವರಗಳ ಮೇಲೆ ರಾಮಬಾಣ ಔಟ ಮದ್ದು.

ಆವಶ್ಯ ಬೀಳುವಮ್ಮು, ಸಲಹೆಯ ಮೇರೆಗೆ ಕೊಂಡುಕೊಳ್ಳಿರಿ.

ದತ್ತಾತ್ರೇಯ ಕೃಷ್ಣಸಾಂಡೂ ಬ್ರದರ್ಸ

ಆರ್ಯೌಷಧಿ ಕಾರಖಾನೆ, ಚೆಂಬೂರ-ಮುಂಬಯಿ.

ಹುಬ್ಬಳ್ಳಿ ಶಾಖೆ:-

ಮೆನೇಜರ, ಗೋ. ವೆಂ. ಭುಜಲೇ, ಆಯುರ್ವೇದತೀರ್ಥ,

ಮರಾಠಾಗಲ್ಲಿ, ಹುಬ್ಬಳ್ಳಿ.

ಜಾತೀಯ ಸಮಸ್ಯೆ ಬಿಡಿಸಲು ಜಿನ್ನಾ-ಜವಾಹಿರಲಾಲರ ಪುನಃ ಪ್ರಯತ್ನ!

(೩ನೇ ಪಾನಿನಿಂದ ಮುಂದರಿಸಿದ್ದು)

ಕೊಂಗ್ರೆಸ್-ಲೀಗ ಐಕ್ಯ ಸಾಧಿಸಲಿಲ್ಲ!

ಬಿ|| ಜಿನ್ನಾ ವತ್ತು ಪಂ|| ಜವಾಹಿರಲಾಲರ ನಡುವೆ ನಡೆದ ಮಾತು-ಕತೆಗಳು ಪ್ರಮುಖ್ಯವಾಗಿ ಘಟ್ಟನಾತ್ಮಕ ಸಮಸ್ಯೆಗಳ ಸಂಬಂಧವಾಗಿಯೇ ಇದ್ದವೆಂದೂ ಜಾತೀಯ ಪ್ರಶ್ನೆ ಸಿಂದಿನಿಂದ ಚರ್ಚಿಸಲಾಗುವದೆಂದೂ ದಿಲ್ಲಿಯ ಸುದ್ದಿಗಾರರು ತಿಳಿಸುತ್ತಾರೆ ಸರ್ವಾಧಿಪತಿಗಳ ಮಂಡಿ ಇಡಬೇಕಾದ ಯೋಜನೆ ಕೊಂಗ್ರೆಸ ಲೀಗದವರ ಒಮ್ಮತದ ಸಂಯುಕ್ತ ಯೋಜನೆಯಾಗಿರತಕ್ಕದ್ದಾದು ಮಹಾತ್ಮಾ-ರಾಷ್ಟ್ರಪತಿಗಳ ನಿರ್ಣಯತ್ವಾಗಿ ಕಾಣುತ್ತದೆ ಆದರೆ ಜಿನ್ನಾ ಜವಾಹಿರರ ನಡುವೆ ಒಪ್ಪಂದವಾಗದ್ದರಿಂದ ಸರ್ವಾಧಿಪತಿಗಳಿಗೆ ಕೊಂಗ್ರೆಸ್ಸಿನ ಪ್ರತಿನಿಧಿಗಳ್ಳೇ ಶನಿವಾರ ಮುಂಜಾನೆ ತಮ್ಮ ಪ್ರತ್ಯುತ್ತರ ಕಳುಹಿಸಿಕೊಟ್ಟರೆಂದು ತಿಳಿಯುತ್ತದೆ ಬಿ|| ಜಿನ್ನಾರವರೂ ತಮ್ಮ ಪ್ರತ್ಯೇಕ ಪ್ರತ್ಯುತ್ತರ ಕಳುಹಿಸಿಕೊಟ್ಟಿದ್ದಾರೆಂದು ಸುದ್ದಿ

ಆ ಉತ್ತರಗಳನ್ನು ತಲ್ಪಿದ ತರುವಾಯ ಶನಿವಾರ ಮಧ್ಯಾಹ್ನ ೧೧-೩೫ ಕ್ಕೆ ಸರ್ವಾಧಿಪತಿಗಳ ನಿಮಂತ್ರಣೆಯ ಮೇರೆಗೆ ಮಹಾತ್ಮರು ಪುನಃ ಸರ್ವಾಧಿಪತಿಗಳಿಗೆ ಭೆಟ್ಟಿಯಾದರು ಮತ್ತು ೨ ತಾಸು ಅವರೊಡನೆ ಚರ್ಚೆ ಮಾಡಿ ೧-೩೦ ಕ್ಕೆ ಮರಳಿ ಬಿರ್ಲಾ ಭವನಕ್ಕೆ ಬಂದರು ಬಿ|| ಜಿನ್ನಾರವರೂ ಸರ್ವಾಧಿಪತಿಗಳಿಗೆ ಭೆಟ್ಟಿಯಾಗಿ ಚರ್ಚೆ ಮಾಡಿದರೆಂದು ತೀರ್ಮಾನಿಸುತ್ತದೆ ಕೊಂಗ್ರೆಸ್ಸಿನವರೂ ಬಿ|| ಜಿನ್ನಾರವರೂ ಸರ್ವಾಧಿಪತಿಗಳಿಗೆ ಕಳುಹಿಸಿಕೊಟ್ಟಿರುವ ಉತ್ತರಗಳಿಂದಾಗಿ ಈ ಸಂದರ್ಭದಲ್ಲಿ ಚರ್ಚೆಯಾಯಿತೆಂಬ ಸುದ್ದಿ ರವು ತಿಳಿಸುತ್ತಾರೆ ಕೊಂಗ್ರೆಸ-ಲೀಗುಗಳ ಸಂಯುಕ್ತ ಸೂಚನೆಗಳನ್ನು ಸರ್ವಾಧಿಪತಿಗಳಿಗೆ ಸಾದರಪಡಿಸಲು ಸಾಧ್ಯವಾಗದಿದ್ದರೂ ಕೊಂಗ್ರೆಸ ಲೀಗ ಪ್ರತಿನಿಧಿಗಳೊಳಗೆ, ಅಂದರೆ ಜಿನ್ನಾ ಜವಾಹಿರಲಾಲರೊಳಗೆ ಕೊನೆಯ ನಿರ್ಣಯವೇನಿಗುವದಿಲ್ಲವೆಂಬ ಈ ಸುದ್ದಿಗಾರರ ಸುದ್ದಿ

ಶನಿವಾರ ದಿನ ಸಂಜೆ ದಿಲ್ಲಿಯಲ್ಲಿ ಪಂ|| ಜವಾಹರಲಾಲರ ಸಾರ್ವಜನಿಕ ಭಾಷಣವಾಯಿತು ಪಂಡಿತಜಿಯವರು ತಮ್ಮ ಭಾಷಣದಲ್ಲಿ ಕ್ಷಣ-ಕ್ಷಣಕ್ಕೆ ಒದಗುತ್ತಿರುವ ಆಂತರ್‌ರಾಷ್ಟ್ರೀಯ ಪರಿಸ್ಥಿತಿಯನ್ನು ವಿವೇಚಿಸುತ್ತ ನಾವು ಭಾರತೀಯರು ಅನುಸರದಿಂದ ಯಾವದೇ ಕಾರ್ಯ ಕೈಕೊಳ್ಳಬಾರದೆಂತಲೂ ಸತ್ಯಾಗ್ರಹ ಮಾಡುವ ಪ್ರಸಂಗ ಮುಂದೆ ಬರಬಹುದಾದರೂ, ಅದನ್ನು ಈಗಲೇ ವಿಚಾರ ಮಾಡದೆ ಪ್ರಾರಂಭಿಸಕೂಡದಂತಲೂ ನುಡಿದರು ಮತ್ತು ಅದೇ ಭಾಷಣದಲ್ಲಿ ತಮ್ಮೊಳಗೂ ಬೆ ಜಿನ್ನಾರವರೊಳಗೂ ಜಾತೀಯ ಸಮಸ್ಯೆಯ ಬಗ್ಗೆ ನಡಯುತ್ತಿರುವಂತೆಯೂ, ಅದು ಬೇಗನೇ ಮುಂದರಿಯುವಂತೆಯೂ, ಈ ಚರ್ಚೆಯಿಂದ ಸಧರಿಣಾಮವಾಗುವಂತಲೂ ಅವರು ಆತೆ ಪ್ರಯತ್ನಿಸುವರು ಪಂ|| ಜವಾಹರಲಾಲರೊಡನೆ ಚರ್ಚೆ ನಾಡುವದು ಬಿ|| ಜಿನ್ನಾರವರಿಗೂ ಬಹಳ ಮೆತ್ಸ್ರವಂತೆ! ಬೇರೆ ಯಾವ ಕಾರಣಗಳಿಗಾಗಿ ಅಲ್ಲದಿದ್ದರೂ ಪಂ|| ಜವಾಹಿರಲಾಲರ ಬಗ್ಗೆ ತಮಗೊ ಕೈ ಆದರವಿರುವದರಿಂದ, ಅವರ ಸಲುವಾಗಿಯೇ ತಾವು ಜಾತೀಯ ಸಮಸ್ಯೆಯ ಮಾತುಕತೆ ನಡಿಸಲು ಸಿದ್ಧರಿದ್ದೇವಾಗಿ ಬಿ|| ಜಿನ್ನಾರವರು ಪತ್ರಿಕಾ ಪ್ರತಿನಿಧಿಗಳ ಕಡೆ ನಿವೇದಿಸಿದರು

ಸರ್ವಾಧಿಪತಿಗಳ ಸಂದೇಶ ನಡಕೆಲಸವನ್ನು ವಹಿಸಿಕೊಂಡು ಮಹಾತ್ಮರು ಶನಿವಾರ ಸಂಜೆ ವರ್ಧಾಕ್ಕೆ ಬರಲು ತಿರುಗಿ ಹೊರಟರು ರಾಷ್ಟ್ರಪತಿ ರಂಜೆಂದ್ರ ಪ್ರಸಾದರು ಪಾಟ್ನಾಕ್ಕೆ ಹೊರಟರು, ಪಂ|| ಜವಾಹಿರ್‌ಲಾಲರೂ ಕೂಡ ನಿನ್ನೆ ಪ್ರಯಾಗಕ್ಕೆ ಹೊರಟರು

ಸರ್ವಾಧಿಪತಿಗಳ ಆರವ ನೆಯ ಜ್ಞಾಪಕ ದಿನವು ಆದಿಯ ವರದಿಯಂತೆ ಈ ಹೊತ್ತು ಪ್ರಕಟವಾಗಿದೆಯೆಂದು ತಿಳಿಯುತ್ತದೆ ಮತ್ತು ಸರ್ವಾಧಿಪತಿಗಳ ಹೊಸ ಸೂಚನೆಗಳನ್ನು ಕೊಂಗ್ರೆಸ ಪರವಾಗಿ ಮಹಾತ್ಮಾ ರಾಜೇಂದ್ರ ಬಾಬೂರವರು ಕೊಟ್ಟಿರುವ ಉತ್ತರವನ್ನೂ ಪರಿಶೀಲಿಸಿ ನುಂದಿನ ಧೋರಣೆಯನ್ನು ನಿರ್ಧರಿಸಲೋಸುಗ ಕೊಂಗ್ರೆಸ ಕಾರ್ಯ ಸಮಿತಿಯ ಮುಂತಾದ ಸಭೆ ಬರುವ ಬುಧವಾರ ಪ್ರಯಾಗ ಕ್ಷೇತ್ರದಲ್ಲಿ ಕೂಡಲಿಕ್ಕಿದೆ

***

ಅಸಾಮ ಸ್ಯಾಂತದ ಪರಿಸ್ಥಿತಿಯನ್ನು ಅನುಲಕ್ಷಿಸಿ ಅಲ್ಲಿಯ ಮಂತ್ರಿಮಂಡಳಿಕ್ಕೆ ಈಗಿಂಗಲೇ ರಂಜಿಸಾಮೆ ಕೊಡಲಿಕ್ಕೆ ಆಪ್ತರೆ ಕೊಡಬ ರವಾಗಿ ನಡೆದ ಪ್ರಯತ್ನಗಳು ವಿಫಲವಾದವಂತ ಗಿ ತಿಳಿಯುತ್ತದೆ ಅಸಾಮ ಪ್ರಾಂತದ ಕೊಂಗ್ರೆಸ ಮಂತ್ರಿಗಳಿಗೆ ತಮ್ಮ ಪ್ರತ್ಯೇಕ ಆಪ್ತರೆ ಕೊಡಲಾರೆವೆಂದು ಕೊಂಗ್ರೆಸ ಪಾರ್ಲಿಮೆಂಟರಿ ಸಬ್ ಕಮಿಟಿಯವರು ಅವರಿಗೆ ತಿಳಿಸಿರತ್ತಾರಂತೆ

***

ಹಿಂದುಸ್ಥಾನದಲ್ಲಿ "ಅರಾಜ್ಯದ್ರೋಹಿ ಫಕೀರ" ನು (ಗಂಧಿಜಿಯವರ) ತಿರುಗಿ ಸತ್ಯಾಗ್ರಹ ಪ್ರಾರಂಭಿಸುತ್ತಾರೋ ಏನೋ ಎಂದು ವಿಶಾಯತೆಯಲ್ಲಿ ಚಿಂತೆಯಂಟುಗಾದೆ ಭಾರತೀಯ ಸಮಸ್ಯೆ ಬಿಡಿಸುವ ಅಧಿಕಾರವನ್ನು ಬ್ರಿಟಿಶ ಸರಕಾರವು ಸರ್ವಾಧಿಪತಿ ಲಿನ್‌ಲಿತ್‌ಗೋ ಇವರಿಗಿಗೆ ಕೊಟ್ಟಿರುತ್ತದೆಂತಲೂ ದೊರೆಗಳಿಗೆ ಅವಶ್ಯ ಕಂತರೆ ಈಗಲೇ ಹಿಂದುಸ್ಥಾನದಲ್ಲಿ ಒಂದು ದುಂಡು ಮೇಜಿನ ಪರಿಷತ್ತನ್ನು ಕರೆಯಲಡ್ಡಿಯಿಲ್ಲವೆಂದು ಸರಕಾರವು ಅಪ್ಪಣೆ ಕೊಟ್ಟಿದೆಯೆಂತಲೂ ಸರ್ವಾಧಿಪತಿಗಳು ಬಹುತರವಾಗಿ ದಿಶಂಬರ ತಿಂಗಳ ವಾರಂಭದಲ್ಲಿ ದುಂಡು ಮೇಜಿನ ಪರಿಷತ್ತನ್ನು ಕರೆಯುವ ಸಂಭವವುಂಟೆಂಕೂ 'ಕೇಸರಿ' ಪತ್ರಿಕೆಯ ಲಂಡನಿನ ಸುದ್ದಿಗಾರರು ತಿಳಿಸುತ್ತಾರೆ ಈ ಪರಿಷತ್ತಿನಲ್ಲಿ ಬೇರೆ ಬೇರೆ ಪ್ರಾಂತಿಕ ಕಾನೂನು ಮಂತರ್ಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳೂ ಮಿ ಸ್ಲಿಮ್ ಲೀಗ ಪ್ರಾಗತಿಕರಿ ಪರಿಷತ್ತು ಮತ್ತು ಹಿಂದ ಮಹಾಸಭೆಗಳ ೨ ೨ ಪ್ರತಿನಿಧಿಗಳೂ ಸೇರಿರೆ ೬೪ ಜನರ ವರೆಂಡೂ ಆತರಿಗೆ ಸುದ್ದಿ ಸಿಕ್ಕಿದೆ ಪರಿಷತ್ತಿನ ಅಧ್ಯಸ್ಥಾನವನ್ನು ಹೆಚ್ಚಾಗಿ ಜಾಮನಗರದ ಮಹಾರಾಜಾ ಜಡೆಜಿಗೆ ಕೊಡಲಾಗುವದಂತೆ

ಚಕ್ರಬಿಂದು

ಮಕ್ಕಳ ಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ್) (ಲಿವರ ಕ್ಯೂರ್)

ವಿಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡವಾಗುವಿಕೆ ಪಸುರು ನರಗಳು, ಕಾಮಿಲೆ ಗಡ್ಡೆಕೋಗೆ, ಕೋನೆರೋಗ, ನೈ ಕೈ ಜಾವುಗಲಿಗೆ ದಿವ್ಯೌಷಧ!

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಪಿತೃಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಪ್ಲೀಹ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಮಬಾಣೌಷಧವಾಗಿದೆ

ಡಾ|| ಏ ಎನ್ ತ್ರಿನಿವಾಸರಾವ್, ಲಿವ್ಹರ್ ಸ್ಪೆಶಲಿಸ್ಟ

ಎಂ ವಿ ಪ್ರಾಸಾದಿಕ ಔಷಧಾಲಯ

ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿ

ಶಿರಿ ಏಜಂಟ್—

ಸುಬ್ರಾಯ ಸೀತಾರಾಮ ಹೆಗಡೆ

ಕುಮಟೆಯ ಏಜಂಟ

ದೇವಪ್ಪಾ ಅಯ್ಯು ನಂಯ್ಕು

ಜಿಲ್ಲಾ ಸಮಾಚಾರ.

(ಳಿಕೆಪ ವಾರದ್ದು)

ಅಂಕೋಲಾ— ಇಲ್ಲಿಯ ಪೋಲೀಸರ ಕರ್ತವ್ಯ ಗಳೇನು? ಅವರ ಕರ್ತವ್ಯ ವ್ಯಾಪ್ತಿಯೆಷ್ಟು? ಎಂಬುದೇ ತಿಳಿಯದಾಗಿದೆ ಕೆಲವು ದಿನಗಳ ಹಿಂದೆ ಬುಧವಾರದಿಂದು ೩-೪ ಮುಸಲ್ಮಾನರು ಒಬ್ಬ ಹಿಂದು ಹೆಂಗಸಿಗೆ ಮೋಟರಿನಲ್ಲಿ ಒದಿಸಿಕೊಂಡು ಹೋಗುತ್ತಿದ್ದರು. ಇದ್ದಿಯ ಮೋಟರ ಸ್ಟೆಂಡಿನಲ್ಲಿದ್ದ ಕೆಲವರಿಗೆ ಅವರ ಬಗ್ಗೆ ಸಂಶಯ ಬಂತು ಮತ್ತು ಅವರು ಅಲ್ಲಿದ್ದ ಪೋಲೀಸರಿಗೆ ಬೊಕಡಿ ಮಾಡಲು ಜೋಕಳೊಂದಿಗೆ ಅವರ ಒನಪು ಕಿವಿಗೊಡದಿಲ್ಲ ಕುಸು ಕೊಕ್ಕಿನಲ್ಲಿ ಆ ಹೆಂಗಸಿನ ಮುದಿ ತಂಯಿಯು ಮಗಳನ್ನೆ ಹುಡುಕುತ್ತ ಬಂದರು ಈ ವರ್ತಮಾನ ತಿಳಿಯೊಂದು ಗೃಹ ಸ್ಥರೊಬ್ಬರು ಪೋಲೀಸ ಕಚೇರಿಗೆ ಹೋಗಿ, ವಿಚಿತ್ರ ಗುತ್ತಿದ್ದ ಮುಸಲ್ಮಾನರನ್ನೂ ಹೆಂಗಸನ್ನೂ ತಡೆದು ಒದಿದಿಡಲು ಕುಮಟೆಯ ಪೋಲೀಸರಿಗೆ ತಂತಿಕೊಡಿರೆಂದು ಅವ ಅವರಿಗೆ ಬಹಳ ಹೇಳಿಕೊಂಡರು ಆದರೆ, ಆಮಲ ದಾರರು ಆಕಡೆ ಲಕ್ಷಗೊಡಲಿಲ್ಲ ಮುಂದೆ ಮೇಲ್ಕಾಣಿಸಿದ ಗೃಹಸ್ಥರು ತಾವೇ ತಂತಿ ಕೊಟ್ಟು ಹೊನ್ನಾವರದಲ್ಲಿ ಆ ಹೆಂಗಸನ್ನು ತಡೆಸಿಕೊಳ್ಳುವ ವ್ಯವಸ್ಥೆ ಮಾಡಿಸಿದರು ಇನ್ನೊಂದು ದಿನ ಕಾರವಾರಕ್ಕೆ ಬಂದ ಕೆಲಸ ಕುಂಪುರ ಕಡೆಯ ಮೀನುಗಾರರ ತಂಡವೊಳಗಿನ ಒಬ್ಬನು ಇನ್ನೊಬ್ಬನ ಕೈಬಟ್ಟೆಗೆಯನ್ನು ಕದ್ದುಕೊಂಡು ಈ ಊರಿಗೆ ಬಂದಿದ್ದನು ಬಟ್ಟೆಗೆಯು ಮಾಲೀಕನು ಅವನನ್ನು ಹಿಂಬಾಲಿಸಿ ಇಲ್ಲಿಗೆ ಒಂದು ಇಪ್ಪತ್ತು ಪೋಲೀಸ ಕಚೇರಿಗೆ ಹೋಗಿ ಕಳ್ಳನ ತಪಾಸಣೆ ಮಾಡಬೇಕೆಂದು ಆಂಗಲಾಟ ಬೇಡಿಕೊಂಡನು ಆದರೆ ಈ ಕಳವು ಕಾರವಾರ ಹದ್ದಿನಲ್ಲಿ ಆವದ್ದರಿಂದ ತಾವು ಕೈಹಾಕಲಾರವೆಂದಾಗಿ ಹಾಂಕಿಯು ಉತ್ತರ ಕೊಟ್ಟು ಅಮಲದಾರರು ಅವನಿಗೆ ಕಳಿಸಿಕೊಟ್ಟರು ಮುಂದೆ ಇಲ್ಲಿಯ ಗೃಹಸ್ಥರೊಬ್ಬರು ಮಧ್ಯಸ್ಥಿಕೆ ಮಾಡಿ ಪೋಲೀಸ ಪೇದೆಯೊಬ್ಬನನ್ನು ಕರೆಸಿ ತಂದು ತಪಾಸಣೆ ಮಾಡಿಸಲಾಗಿ ಆ ಕೈ-ಪಟ್ಟಿಗೆ ಸಿಕ್ಕಿತು! ೩ ತಿಂಗಳ ಹಿಂದೆ ಇಲ್ಲಿಯ ಪಬ್ಲಿಕ ಕೇರಿಯಲ್ಲಿ ಬ ಒಹತ್ಯೆಯೊಂದು ಸಂಭವಿಸಿದ್ದು ಕಂಡುಬಂದು ಆ ಬಗ್ಗೆ ಪಂಚನಾಮೆ ಸಹ ಆಗಿತ್ತು ಇವೆಲ್ಲ ಆ ಪ್ರಕರಣ ಇನ್ನೂ ನ್ಯಾಯಾಸನದ ಮುಂದೆ ಬಂದಿರುವದಿಲ್ಲ! ಪೋಲೀಸರು ಈ ಪ್ರಕಾರ ಕರ್ತವ್ಯಪರಾಙ್ಮುಖರಾಗಿ ಕೂತಾಗ ಊರಲ್ಲಿ ಕಳವು ತುಡುಗಾಗಳು ಹೆಚ್ಚಾದರೆಂತ್ಚರ್ಯ! ಕೆಲವು ದಿನಗಳ ಹಿಂದೆ ಪೋಲೀಸ ಲ್ಯಾನಿನ ಮುಂದುಗಡೆಯಲ್ಲಿರುವ ಅಂಗಡಿಯೊಂದರಲ್ಲಿ ನೆಯ್ತು ಒಡೆದು ಕಳವಾಯಿತು ಕೆಲವು ದಿನಗಳಾದ ಮೇಲೆ ಪ್ರಯತ್ನ ವಕನೊಬ್ಬನು ಕೈಕವಿದಿಂದ ಗುಂಡಾ ತಂದಿದ್ದಾನೆಂದು ಇದ್ದ ಕೆಲವನಿಗೆ ಸುದ್ದಿ ಸಿಕ್ಕಿತು ಆ ಬಗ್ಗೆ ತಪಾಸಣೆ ಆವಾಗ ಲಿಕ್ಕೆಂದು ಆಧಿಕಾರಿಗಳಿಗೆ ತಾಡುಕಲಾಗಿ ಅವನು ಸಿಗಲಿಲ್ಲ, ಆವನು ದಕ್ಷಿಣೆಗೆ ಹೋಗಿದ್ದನು ಆದ್ದರಿಂದ ಆ ಜನರು ಪೋಲೀಸ ಅನುಮತಿಸಿಲ್ಲವೆಂಬ ಆ ಗುನ್ಹೆ ಹಿಡಿಯಲು ದಿನ್ನವಿಸಿಕೊಂಡರು, ಆಗ ಅಲಕ್ಷಿಂ ಗುನ್ಹೆ ತಪಾಸಣೆ ಮಾಡುವ ಕೆಲಸ ತನ್ನ ದಲ್ಲವೆಂದು ಮಾರುತ್ತರ ಕೊಟ್ಟು ಅತ ಪಾರಾದನು! ಪೋಲೀಸರು ಹೀಗೆ ಅಲಕ್ಷ ಮಾಡಿದರೆ ಊರೊಳಗೆ ಗುನ್ಹೆಗಳು ಹೆಚ್ಚಾಗದೆ ಹೇಗೆ ಉಳಿಯುವವು?

ಆವುಸೇಯೊಳಗಿನ ನರಸಿಂಹ ಇಂಗ್ಲಿಷ ಸ್ಕೂಲಿನಲ್ಲಿ ಕಳೆದ ದುಕ್ಕೃತ ಸರಸ್ವತೀಪೂಜೆಯ ಉತ್ಸವ ನಡೆಯಿತು ರಾ। ಬಾಲಮುಕುಂದ ಆಚಾರ್ಯರ ಕೀರ್ತನೆಯೂ ವಿದ್ಯಾರ್ಥಿಗಳಿಗೆ 'ಜೈಕ್ಯತೆ' ಎಂಬ ಇಂಗ್ಲಿಷ ನಾಟಕದ ಪ್ರಯೋಗವೂ ಆವವು

ಸುಪಾ— (ತಾ ೩೪-೧೦-೧೯೩೯) ಸುಪಾ ಕುಂಭಾರವಾಡಾ ರಸ್ತೆಯು ಬಹಳ ಕೆಟ್ಟುಹೋಗಿದೆ ಈ ರಸ್ತೆಗೆ ಖರ್ಚಿಹಾಕಿದ ೪೦ ವರ್ಷಗಳಾದವು. ವರ್ಷದಲ್ಲಿ ೧-೩ ಮೈಲು ರಸ್ತೆಗೆ ಮುರಮು ಹಾಕಿ ತಾತ್ಪುರ್ತಿಕ ಮತುಸ್ತಿಯನ್ನಷ್ಟೇ ಮಾಡುತ್ತಾರೆ ಆದೇ ಮೇರೆಗೆ ದಿಗ್ಗಿ-ಗೋಳಿ ರಸ್ತೆಯೂ ಬಹಳ ಕೆಟ್ಟುಹೋಗಿದೆ ರಸ್ತೆಯ ಮೇಲೆ ನಿಡಗಂಟಿಗಳು ಜೆರೆದಿದ್ದು ಆ ರಸ್ತೆಯು ಈಗ ಕಾಲುದಾರಿಯೊಪಾದಲ್ಲಿ ಪರಿಣಮಿಸಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು! ಮೊಗಪ ಮೇಲೆ ದೊಡ್ಡ ದೊಡ್ಡ ಹೊಂಡಗಳಾಗಿದ್ದು ಅಗಪುಳ್ಳಿ ಮನುಷ್ಯರ್ಯಾರಾದರೂ ಬಿದ್ದರೆ ಅವರು ಹುಗಿದು ಹೋಗಲಿದ್ದಾರೆಯ್ನೆ! ಹೀಗೆ ರಸ್ತೆಗಳು ಹಾಳಾದ ಸಂಗತಿಯನ್ನೂ ಮತುಸ್ತಿಯ ವಿಷಯತೆಯನ್ನೂ ಇಲ್ಲಿಯ ಸಬ್ ಇಜ್ಜರೋಯರು ತಮ್ಮ ಮೇಲಧಿಕಾರಿಗಳಿಗೆ ತಿಳಿಸುತ್ತಾರೋ ಇಲ್ಲವೋ ತಿಳಿಯದು ಅವರಿದರೂ ಆ ರಸ್ತೆಗಳನ್ನು ನೋಡಿದ್ದಾರೋ ಇಲ್ಲವೋ ಸಂಶಯ ಬರುತ್ತಿದೆ! ಸರಕಾರದವರು ಈ ಕಡೆ ಲಕ್ಷ ಕೊಟ್ಟು ಬೇಗನೆ ಸದರಿ ರಸ್ತೆಗಳ ಮರುಸ್ತಿ ಕೈಕೊಳ್ಳಬೇಕಾಗಿ ಸೂಚನೆ ಯಿದೆ

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ. 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಕಮೀಶನ್‌ಗಳೂ ಬಹಳ ಸೋಯಿಜವಿದ್ದು ಇವೆ. ಕಂಪೆನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಪ್ರಸ್ ಎಸ್ಟೇನ ನಿಯಮಗಳಂತೆ ಜವಾಬ್ದಾರಿಯ ಸರ್ಕಾರಿ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮೆಚ್ಯೂರಿಟಿ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ವಿಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೇಳಿದ ವಿಳಾಸಕ್ಕೆ ಬರೆದರೆ ಕಿಗ ವದು.

Run to Agents
D K Nayak Bros
K N Nayak
Ho war Agent.
R V, Prabhu

K. PadmanabhaRao & Sons,
BELGAUM
Chief Agents for
Karnatak Districts & S M States



The Asian Assurance Company, Limited.

ASIAN BUILDINGS, . BOMBAY.

ದಿ ಏಶಿಯೆನ್ ಎಶ್ಯೂರನ್ಸ್ ಕಂಪನಿ, ಲಿಮಿಟೆಡ್.

THE PROGRESSIVE FIGURES WILL GIVE YOU AN IDEA:

Year	Business in force	Total Income	Life Fund
1932	1 48,40,801	9,24,965	24,50,234
1935	2 52,08,118	18,39,296	42,98,820
1938	3 61,56,764	22,34,391	67,66,528

It pays you to represent or Insure with us !

For Agency terms etc please apply to :—

BASTI M. MIRAN ALISAHEB,
Representative for Goa & N Kanara,
Bhagwat Road, KUMTA.

OR

S. R. NARVEKAR,
Organiser,
MANGALORE.

ಭಟಿಕಳದಲ್ಲಿ ಬಂದಾಗ ಎಲ್ಲಿ ಉಳಿಯುವಿರಿ ?

ಶ್ರೀ ಲಕ್ಷ್ಮೀ ನಿವಾಸ ಹಿಂದು ಹೊಟೆಲ್,

ಪೋಸ್ಟ ಆಫೀಸಿನ ಬಳಿ, ಭಟ್ಕಳ.

ಪ್ರಯಾಣಿಕರಿಗೆ ಊಟ-ಉಳಕೊಳ್ಳಲು ಉತ್ತಮ ವ್ಯವಸ್ಥೆ !

☞ ಟವಾಲ ಒಸ್ಸಿಗೆ ಹೋಗಿ-ಬರುವ ಪ್ರಯಾಣಿಕರಿಗೆ ಹಾಗು ಆಸ್ಪತ್ರೆಯಲ್ಲಿ ಚಿಕಿತ್ಸೆಯ ಬಗ್ಗೆ ಬಂದವರಿಗೆ ಆಲೋ ವ್ಯವಸ್ಥೆ ಇದೆ !

ಒಮ್ಮೆ ಬಂದು ಸಂದರ್ಶಿಸಿರಿ!

ಭಿಷಗ್ರತ್ನ ಆಯುರ್ವೇದ ವಿದ್ಯಾನ್ ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್. (ರಿಜಿಸ್ಟರ್ಡ)

ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದರಲ್ಲೂ ಅಗ್ರಶ್ರೇಷ್ಠವಾಗಿದೆ.

ಶ್ರೀಕರ ಕಸ್ತೂರೀ ಮಾತ್ರೆ. [ಪೊಟ್ಟಣಕ್ಕೆ 0-1-0.

ಸುವಾಸನೆಯುಳ್ಳ ಈ ಮಾತ್ರೆಗಳು ಮಕ್ಕಳ ಮತ್ತು ಹೊಟ್ಟೆಯ ನೆನಸಿ, ಕೆಮ್ಮು, ಅಜೀರ್ಣ, ಜ್ವರ ಮುಂತಾದವಕ್ಕೆ ಸಿದ್ಧೌಷಧವಾಗಿದೆ ಬೆಲೆ 0—4—0, 0—2—0.

ಶ್ರೀಕರ ಬಾಲಸಂಜೀವಿನಿ.

ಚಿಕ್ಕ ಮಕ್ಕಳ ಮಂದಜ್ವರ, ಶೀತಜ್ವರ, ಎಳವೆ ಇತ್ಯಾದಿ ರೋಗಗಳಿಗೆ ಸಂಜೀವನಿ. ಬೆಲೆ 0—4—0.

ದೊರೆಯುವ ಸ್ಥಳ- ಹೊನ್ನಾವರ:- ಕಲ್ಯಾಣಪುರ ಬ್ರದರ್ಸ. ಕುಮಟಾ: ದೇವಜ್ಞಾ ಆಯ್ಯ ನಾರ್ಯ. ದಿ ನ್ಯೂ ಸಪ್ಲಾಯ ಏಜನ್ಸಿ, ದಿ ಸ್ವದೇಶಿಕ ಫಾರ್ಮಸಿ.

ನಂಜನಗೂಡು ಸದ್ವೈದ್ಯಶಾಲಾ, ಬ್ರಿಂಜ್- ರಥಬೀದಿ, ನುಂಗಳೂರು.

ನೋಡಿದರೆ ಬಿಡದಿರುವ ಪುಸ್ತಕಗಳು.

೧ ಸಭಾಕ ಬೋಲಿ.
(ದಿ ನ್ಯೂ ಬೊರ್ಡಿಗಿಂದ ಹೊಸದಾಗಿ ಮಾಜಿಸಾರಾದ ಹಿಂದುಸ್ತಾನಿ ಪುಸ್ತಕ)

೨ ಹಿಂದುಸ್ಥಾನಿ-ಮರಾಠಿ ಶಬ್ದಕೋಶ
(ಸುಮಾರು ೧೫ ಸಾವಿರ ಶಬ್ದಗಳುಳ್ಳದ್ದು.)

೩ ತ್ರಿಭಾಷಾ ಶಿಕ್ಷಕ.
(ಕನ್ನಡ,ಮರಾಠಿ,ಹಿಂದಿ ೩ ಭಾಷೆಕಲಿಸುವ ಒಂದೇ ಪುಸ್ತಕ)

೪. ಸರ್ವಜ್ಞ ವಚನಗಳು.
(ಪದ್ಯ ಮತ್ತು ಟೀಕಾ ಸಹಿತವಾದದ್ದು)

೫ ಆಂಗ್ಲಭಾಷಾ ಪ್ರಕಾಶಕ
ಭಾಗ I ರಿಂದ III
(ಆಸ್ಪರ ಸಹಾಯವಿಲ್ಲದೆ ಸ್ವತಃ ಇಂಗ್ಲಿಷ ಕಲಿಯುವ ಸಾಧನ)

ಇವಲ್ಲದೆ ದಿ ಭಾ ಹಿಂದೀ ಪ್ರಚಾರ ಸಭಾ, ಮಂಗ್ಳೂರ ಇವರ ಹಿಂದೀ ಪುಸ್ತಕಗಳೂ ಎಲ್ಲ ಬಗೆಯ ಶಾಲೋಪಯೋಗಿ ಕನ್ನಡ ಪುಸ್ತಕಗಳೂ ಸಮೃದ್ಧಿ ಸಿಗುತ್ತವೆ

ದಿ ನ್ಯೂ ಸಪ್ಲ್ಯಾಯ ಏಜನ್ಸಿ, ಕುಮಟಾ.

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧ ನಕ್ಕಿದ ಪುಡಿ. ಸುಲಭ ಕ್ರಯ



ಲೋಕಪ್ರಸಿದ್ಧವಾದ ಈ ಸುಗಂಧ ನಕ್ಕಿದ ಪುಡಿಯು ಕಂಡು ಪಿಡಿಯುಲ್ಲಟ್ಟು ಸಾವಿರಾರು ಮಂದಿಗಳು ಇದನ್ನು ಉದಯೋಗಿಸಿ, ಸಾವಿರಾರುಗಳಾಗಿ ಪೆರ್ಮೆಗ್ಯತಾಪತ್ರಿಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಕ್ಕಿದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಹುಮನೆಂದರೆ— ವಿಸಿತಿ, ಒಂಟೆತಲೆನೋವು ಕಲೆಯುಳ್ಳಿಯು ರೋಗಗಳು, ಕಣ್ಣುಗಳಲ್ಲಿ ಕಾಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಂಳ್ಕೆ ನೀಲ್ಬಟ್ಟ್ಯಕ್ಕೆ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ದಿಟ್ಟನಪ್ರಧಾರಣ ನಕ್ಕಿದ ಸಂಗಡ ಈ ಸುಗಂಧ ನಕ್ಕಿದ ಪುಡಿಯಲ್ಲಿ ಒಂದು ಚಿಟಕೆಯನ್ನು ನಿತ್ಯವಿಸಿದರೆ ಎಲ್ಲವೂ ಪರಿಹಾರವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಉಟ್ಟೂಂಬ ಔಷಧವಾಗಿ ಉಪಯೋಗಿಸುತ್ತಾರೆ. ನವಾದರಿ ಸೀಸೆ ಪುಕ್ಕಟೆ ಳಿಸಲಾಗುವದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦ ವ್ಹಿ ಪಿ. ಳಿ ಡಜನ್ ೧ ಕ್ಕೆ ರೂ. ೩-೮-೦. ವಿ. ಪಿ. ೦-೬-೦

ದಯಮಾಡಿ ನಿಮ್ಮ ಹೆಸರನ್ನೂ, ಅಕ್ಕರಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ರೆ – ಗುರುಬಸವ ಆಂಡ್ ಕಂಪನಿ ಲಿಮಿಟೆಡ್, ಪೋ. ಬಾ. ೫೧೦, ಪೀರ್ಕಟ್ಟೌನ್, ಮದರಾಸ

ಸಾರ ಆಫ್ ಕೆನಡಾ ಪೆಸಿ. "ಫಲಿ ಮುದ್ರಿಸಿ ಪ್ರಕಟಿಸಿದರು.

Reg. No. B 1270. Monday, 13th November, 1939.

ವರ್ಷ ೨೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೦

ಪತ್ರದ ವರ್ಗನಿ.

ಉಮಜೆಯಲ್ಲಿ ಅಗಾವು
ರೂಪಾಯಿ ೨-೪-೦.
ಮುನಿಯಾರ್ಡರಿನಿಂಜ
ರೂ. ೩-೧-೦.
ವಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ ೩-೪-೦.
ಬಿಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೨-೦

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಮ್ಯಾಟ್ರಾಸಿನ (೧೫ ಎಮ್ ಇದ್ದ) ೪ ಸಾಲುಗಳವರೆಗೆ ರೂ.೧-೦-೦
ಆ ನಂತ್ರ ಪ್ರತಿಸಾಲಿಗೆ ೦-೨-೦.
ಹತ್ತಿಂಗದ ಸಾಲು ಎಷ್ಟು ಹೊತ್ತಿಗುವದೋ ಆ ಮಾಸ ನಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಜಾಗ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸರ್ವಜನಹಿತಕರ್ತಾ ಕ್ಷೇಪ್ತಾ ಯಾತಿ ಲೋಕೇ ಜನಪದಹಿತಕರ್ತಾ ಸ್ವಕ್ಷತೇ ಪಾರ್ಥಿವೇಭ್ಯಃ।
ಇತಿ ಸಹತೇ ವಿರೋಧೇ ವರ್ತಮಾನೇ ಸಮಾನೇ ನೃಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ ॥

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೩ ನೇ ನವೆಂಬರ ಸನ್ ೧೯೩೯ನೇ ಇಸವಿ.)

KANAN DEVAN TEA

— QUALITY PRODUCTION ! —

* ಇಡೀ ಹಿಂದುಸ್ಥಾನದಲ್ಲೆಲ್ಲ ಸುಪ್ರಸಿದ್ಧವಾದ *

ಕಾನನ್ ದೇವನ್

ಕಂಪನಿಯ ಚಹಾ

ಈ ಚಹವು ಸಮುದ್ರ ೨ಡೆಯಿಂದ ೬,೦೦೦ ಫೂಟು ಎತ್ತರವಾದ
ನೀಲಗಿರಿ ಬೆಟ್ಟದಲ್ಲಿ ಬೆಳೆವಿದ್ದು, ಒಳ್ಳೇ ಸುವಾಸನೆಯುಳ್ಳದ್ದಿರುತ್ತದೆ !
ನಮ್ಮಲ್ಲಿ ಎಲ್ಲಾ ತರಗತಿಯ ಚಹಾ ತೋಕ ಯಾ ಚೆಲ್ಲರೆಯಾಗಿ ದೊರೆಯುತ್ತದೆ.
☞ ವ್ಯಾಪಾರಸ್ಥರಿಗೆ ವಿಶೇಷ ಸವಲತು ಕೊಡಲ್ಪಡುವದು !

ಹೊನ್ನಾವರ-ಭಟ್ಕಳ-ಸಿದ್ದಾಪುರ್ ಸ್ಪೆಶಿಸ್ಟರು:—
ವಿ. ವಿ. ಶಾನಭಾಗ ಎಂಡ್ ಕೋ,
ಹೊನ್ನಾವರ.

ಕುಮಟಾ ಸ್ಪೆಶಿಸ್ಟರು:—
ಡಿ. ಕೇ. ನಾಯಕ ಎಂಡ್ ಕೋ,
ಕುಮಟಾ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ರಿಜಿಸ್ಟರ್ಡ ಆಫೀಸು:— "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸ— ಕುಂದಾಪುರ. ದ. ಕ.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು.
ನ್ಯಾಯಂ ತೇವಣಾತಿಗಳ ಬಡ್ಡಿ ದರಗಳು- 6 ತಿಂಗಳು ಮುದ್ದತ್ತಿಗೆ 3½%; 1 ವರ್ಷದ ಮುದ್ದತ್ತಿಗೆ 4%;
2 ವರ್ಷ ಯಾ ಹೆಚ್ಚಿನ ಅವಧಿಗೆ 4½%.
ಅಲ್ಪ ಮುದ್ದತ್ತಿನ ತೇವುಗಳು (Short term deposits) ಸಹ ಅಂಗೀಕರಿಸಲ್ಪಡುವವು.
ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಕುಂದಾಪುರ,
1—1—1939.

The Agricultural & Industrial Bank, Ltd.

ವಿಲ್ಲಿ ಸಂದರ್ಶನಗಳ ಫಲಶ್ರುತಿ: ನ್ಯಾತಂತ್ರ್ಯ ದಾನದ ಮಾತಿಲ್ಲ!

ಕಳೆದ ವಾರ ನಮೂದಿಸಿದಂತೆ ಸರ್ವಾಧಿಪತಿಗಳು ತಾ ೧೯ನೇ ಬುಧವಾರ ಸುಂದರ ನಡೆ ಕಾಲಕ್ಕೆ ತಾವು ಹೇಳಿದ ಮಾತುಗಳನ್ನೇ ನೆಪ್ಪಕ್ಕಾಗಲಿಸುವದಕ್ಕಾಗಿ ಮರುದಿನ ರಾಷ್ಟ್ರಪತಿ ಡಿ || ರಾಜೇಂದ್ರ ಪ್ರಸಾದರಿಗೂ ಬೆ|| ಜನ್ಮಾದರವಿಗೂ ಒರೆದ ಪತ್ರವನ್ನೂ, ಆವರಿಬ್ಬರೂ ಸರ್ವಾಧಿಪತಿಗಳಿಗೆ ಬರೆದ ಪ್ರತುತ್ತರಗಳನ್ನೂ ಆಕೆಯ ರವಿವಾರ ೦೩ನೆ ಪ್ರಕಟಣೆಗೆ ಕೊಟ್ಟರು ಮತ್ತು ಅದೇ ರಾತ್ರೆ ಆಕಾಶವಾಣಿಯ ಮೂಲಕ ತಮ್ಮದೊಂದು ಹೃಳಿಕೆಯನ್ನೂ ಕೊಟ್ಟರ ಅವುಗಳ ಸಾರಂಶ ಈ ಕೆಳಗೆ ಕೊಟ್ಟಿದೆ

ಸರ್ವಾಧಿಪತಿಗಳ ಆಕಾಶವಾಣಿಯ ಭಾಷಣ

ನಾನು ಕೊಂಗ್ರೆಸ ಮತ್ತು ಮುಸ್ಲಿಮ್ ಲೀಗ ಇವುಗಳ ಪ್ರತಿನಿಧಿಗಳನ್ನು ಒತ್ತಟ್ಟಿಗೆ ಕೂಡಿಸಿ ವ್ಯಾಲಂಭಿಸಿಕೊಟ್ಟ ಅವರೆಲ್ಲರಿಗಿನ ಮಾತುಕತೆಗಳು ನಿಸ್ಸಲವಾದವೆಂಬ ತಿಳಿಸಲು ನನಗೆ ಒಲು ವಿಷಾದವಾಗುತ್ತದೆ ಅವರೊಳಗೆ ನಡೆದ ಮಾತುಕತೆಯ ವಿಷಯ ಎಳಕೊಳ್ಳು ಜನತೆಗೆ ಹಕ್ಕಿದೆ ಅದ್ದರಿಂದ ಎಲ್ಲ ವಿಷಯಗಳನ್ನು ಪಸ್ಪೀಕರಿಸುವಂತೆ ನಾನು ನಮ್ಮೆಗಳೆ ನಡೆದ ಪ್ರಯತ್ನವಿಫಲಾವನ್ನು ನಾಳೆ ಪ್ರಕಟ ಮಾಡುವವನಿದ್ದೇನೆ ಇಶ್ಟಿನವರೆಗೆ ನಾಳೆ ಪ್ರಕಟಿಸಬೇಕಾಗಿರುವ ಸಾಹಿತ್ಯದಲ್ಲಿ ಸಾಹಿತ್ಯವನ್ನೊದಗಿಸಿತಂದು ಮಕ್ತು ನನ್ನ ಕೈಯಿಂದ ಆಗುವಷ್ಟು ಸಮಯ ಮಾಡಿ ಅವರು ಬೇರೆ ಬೇರೆ ಪ್ರಾಂತಗಳ ಆಡಳತೆಯ ವಿಷಯದಲ್ಲಿ ಒತ್ತಾಸ್ಸಿನ ವ್ಯವಸ್ಥೆ ಮಾಡಿಕೊಂಡು ಯದ್ಧ ಕಾಲದಲ್ಲಿ ನನ್ನ ಕಾರ್ಯಕಾರಿ ಮಂಡಳವನ್ನು ವಿಸ್ತರಿಸಿ ಅದರೊಳಗೆ ಕೊಂಗ್ರೆಸ ಲೀಗುಗಳ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಲಿಕ್ಕಾಗುವಂತಹ ಒಂದು ಯೋಜನೆಯನ್ನು ಸೂಚಿಸಲು ಅನುಕೂಲತೆಗಳನ್ನು ಮಾಡಿಕೊಡುವನೇ ನಾನು ಅವರನ್ನು ಸಂದರ್ಶಿಸುವದರ ಉದ್ದೇಶವಾಗಿತ್ತು. ತಾ ೧೮ ರ ನನ್ನ ಪ್ರಕಟಣೆಯಲ್ಲಿ ನಾನು ಸಲಹೆಗಾರ ಮಂಡಳದ ಸೂಚನೆ ಮಾಡಿದ್ದೆ ಹಿಂದುಸ್ತಾನದ ಎರಡು ದೊಡ್ಡ ಸಮಾಜಗಳಲ್ಲಿ ಭಿನ್ನಾಭಿಪ್ರಾಯಗಳೂ ವೈಷಮ್ಯವೂ ಇರುತ್ತಿರುವಾಗ, ಒಮ್ಮನಸ್ಸಿನಿಂದ ಕಾರ್ಯ ಮಾಡಬೇಕಾದ ನನ್ನ ಕಾರ್ಯಕಾರಿ ಮಂಡಳದಲ್ಲಿ ಆ ಸಮಾಜದ ಪ್ರತಿನಿಧಿಗಳು ಪರಸ್ಪರ ಸೌಹಾರ್ದದಿಂದ ಕೆಲಸ ಮಾಡುವ ಸಂಭವ ಬಹಳ ಕಡಿಮೆ ಇದ್ದದರಿಂದ ನಾನು ಸಂಕುಚಿತ ಕ್ಷೇತ್ರದ ಸಲಹೆಗಾರ ಮಂಡಳದ ಯೋಜನೆಯನ್ನು ಮುಂದಿಟ್ಟಿದ್ದೆ ಈ ಮಂಡಳದ ಮಹತ್ವ ಜನರು ತಿಳಿಯದಕ್ಕಿಂತ ಬಹಳ ಹೆಚ್ಚಿಗೆ ಇದೆಯೆಂದು ನನಗೆ ನಂಬಿಗೆಯಿದೆ ನಾನೂ ನನ್ನ ಸಂದರ್ಶಕರೂ ಏನೂ ಕೆಲಸ ಮಾಡಿ ತೋರಿಸಲುಗಲಿಲ್ಲವೆಂಬ ಬಗ್ಗೂ, ಬಹಳ ಪ್ರಾಂತಗಳಲ್ಲಿ ವಿಶೇಷಾಧಿಕಾರಗಳನ್ನು ಪಯೋಗಿಸಿ ಪ್ರಾಂತಾಧಿಪತಿಯು ರಾಜ್ಯಭಾರದ ಸೂತ್ರಗಳನ್ನು ತಮ್ಮ ಕೈಯ ಲ್ಲೆ ತಕ್ಕೊಳ್ಳಬೇಕಾದ ಬಗ್ಗೂ ನನಗೆ ಬಹಳ ವ್ಯಸನವಾಗಿದೆ ಆ ವ್ಯವಸ್ಥೆ ಕೇವಲ ತಾತ್ಕಾಲಿಕವಿದೆ ಶತ್ರುವೆಲ್ಲ ಫತ್ತೇಪುರ ಸಿಕ್ರಿ ನಗರದ ಮಹಾದ್ವಾರದ ಮೀಲೆ, " ಜೀವನವೊಂದು ಸಂಕ ಆ ಸಂಕವನ್ನು ನೀವು ದಾಟಿಯೇ ತೀರುವಿರಿ ಅವರ ಮೆಲೆ ನೀವು ನಿಮ್ಮ ಮನೆ ಕಟ್ಟಬಾರದಿ" ಎಂದು ಬರೆದಿರುವ ಅರಬೀ ಭಾಷೆಯ ವಚನವಿದೆ ಆ ವಚನದೊಳಗಿನ ಅಭಿಪ್ರಾಯವೇ ಪ್ರಸ್ತುತಕ್ಕೆ ನನ್ನ ವಸ್ಸಿನ ಅಭಿಪ್ರಾಯವಿರತ್ತದೆ ಈಗ ನನ್ನ ಪ್ರಯತ್ನಗಳು ನಿಸ್ಫಲವಾದ ಬಗ್ಗೆ ನಾನು ನಿರಾಶರಗೊಂಡಿಲ್ಲ ದೇಶದೊಳಗಿನ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡು, ನನ್ನ ಸಾಮಾನ್ಯ ಧ್ಯೇಯ ಉದ್ದೇಶಗಳ ನ ಧನೆಗಾಗಿ ನಾವು ಸ್ನೇಹ ಭಾವನೆಯಿಂದ ಸಹಕರಿಸುವಂತೆ ಪುನಃ ಪ್ರಯತ್ನಗಳನ್ನ ಮಾಡುವದನ್ನ ನ ನು ಬಿಡಲಾರೆ ಈಗ ನವ್ಯ ರಾಜಕೀಯ ಪ್ರಗತಿಗೆ ಅಡ್ಡಿಮಾಡುತ್ತಿರುವ ವೈಷಮ್ಯಗಳೂ ಎಡರು ಗಳೂ ತ ವಂಗಿ ಮಾಯ ವಾಗಲಾರವು ಆ ಎಡರು ವೈಷಮ್ಯಗಳು ಇಲ್ಲವೆಂದು ಭಾವಿಸಿದರೂ ಅವು ಅನೈತ್ಯಸಾಗಲಂರವು ಪರಸ್ಪರ ಪೀತಿ ವಿಶ್ವಾಸಗಳಿಂದಲೂ ನಿರ್ಧಾರದಿಂದಲೂ ಪರಸ್ಪರರ ಕೂಡ ಆಲೋಚನೆ ಮಾಡಿಕೊಂಡೇ ಅವನ್ನ ದೂರಪಡಿಸಿಕೆಳ್ಳಬೇಕು ಈಗ ನಾನು ಇದಕ್ಕೂ ಹೆಚ್ಚಿ ಹೇಳಲಾರೆ ಧರತದ ಜನತೆಗೂ ದೇಶರೆಕ್ಷಣಗಿನ ದೊಡ್ಡ ರಾಜಕೀಯ ಸಂಸ್ಥೆಗಳ ಸಭಾಸದರಿಗೂ ಮುಂದಾಲುಗಳಿಗೂ ನ ನು ಇಷ್ಟೇ ಹೇಳಬಯಸುತ್ತೇನೆ ತಕ್ಕೆ ಹಿಡಿಯಿರಿ ನಾನು ಮಾಡುತ್ತಿರುವ ಪಯತ್ನಗಳ ಬಗ್ಗೆ ಸದಭಿಪ್ರಾಯ ತಳೆಯಿರಿ ನಮ್ಮ ಮುಂದಿರುವ ಕೆಲಸಗಳು ಭಯಂಕರವಿವೆ ಈ ಒ ವಾರಗಳಲ್ಲಿ ಬಿಟ್ಟಿಸಿದ ಫಟಿನೆಗಳ ಪೆಲಿಂದ ಅವೆನ್ನ ಭಯಂಕರವೆಂಬ ಸಂಗತಿ ಸ್ಪಷ್ಟವಾಗಿದೆ ಅವುಗಳನ್ನು ಪರಿಹರಿಸಿಕೊಳ್ಳಲು ಪಯತ್ನ ಮಾಡದೆ ಗತ್ಯಂತರವಿಲ್ಲ ನನ್ನ ಕೈಯಿಂದ ಪ್ರಯತ್ನಗಳನ್ನು ಮಾಡಿ ಧರತದ ಕಲ್ಯಾಣನನ್ನೂ ಧರತದ ಉಜ್ವಲ ಬವಿತವ್ಯತೆಯನ್ನು ಒಯಸುವ ಪತಿಯೊಬ್ಬನೂ ಕೋರ ಟ್ಟಿರುವ ಆ ಸ್ವಿಯನ್ನು ನ ಧಿಸಲು ನಾನು ಹೆಡಗಾಡ ವೆನು

ಸರ್ವಾಧಿಪತಿಗಳ ಹೃ

ಜೋಸ ದಿಲ್ಲಿ ನವಂಬರ ತಾ ೨

ನಿನ್ನೆ ಭೆಟ್ಟಿಯ ಕಾಲಕ್ಕೆ ನಾನು ಮಾಡಿದ ಸೂಚನೆಗಳನ್ನು ಪೂರ್ತರಗಿಸಲ್ಲಿ ಕಳಸಿಕೊಡಲು ನಾನು ಒಪ್ಪಿಕೊಂಡ ಸಂಗತಿ ನಿಮ್ಮಲ್ಲರಿಗೆ ಕೀಂದ್ರ ಸರಕಾರದಲ್ಲಿ ಒನ್ನಸ್ಸಿನಿಂದ ಕೆಲಸ ನಡೆಯುವದು ಆಗಕ್ಯ ವಸ್ತು ಮಕತ್ತದ್ದಿದೆ ಎಂಬ ಸಂಗತಿ ಗೃಹೀತ ಹಿಡಿಮು ನೀವು ಅಂದರೆ ಕೊಂಗ್ರೆಸ ಲೀಗುಗಳ ಪ್ರತಿನಿಧಿಗಳು ಪ್ರಾಂತಿಕ ರಾಜ್ಯ ಕಾರಭಾರದ ಸಂಬಂಧದಲ್ಲಿ ಯಾವದೊಂದು ಒಮ್ಮನಸ್ಸಿನ ಯೋಜನೆಯನ್ನು ಕೈಕೊಳ್ಳಲು ಒತ್ತಟ್ಟಿಗೆ ಕೂತು ಆಲೋಚನೆ ಮಾಡಬೇಕಾಗಿಯೂ ಮತ್ತು ತತ್ಪರಿಣಾಮವಾಗಿ ನಿಮ್ಮ ಎರಡೂ ಸಂಸ್ಥೆಗಳ ಪ್ರತಿನಿಧಿಗಳು ಕೂಡಲೇ ನನ್ನ ಕಾರ್ಯಕಾರಿ ಮಂಡಳದ ಸಭಾಸದರಾಗಿ ಕೇಂದ್ರ ಸರಕಾರದಲ್ಲಿ ಸೇರ್ಪಡೆಯಾಗುವ ಕುರಿತು ನಿಮ್ಮ ಸೂಚನೆಗಳನ್ನು ನನ್ನ ಮುಂದಿಡಬೇಕಾಗಿಯೂ ನಾನು ನಿಮಗೆ ತಿಳಿಸಿದ್ದೆ ಪ್ರಾಂತಿಕ ಕಾರಭಾರದಲ್ಲಿ ತೊರಿಬರುವ ಶ್ರುತಿಯೊದು ಮತಭೇದದ ತೀರ್ಮಾನ ಮಾಡಿಕೊಳ್ಳುವದು ಅವಶ್ಯವಿಲ್ಲೆಂದೂ ನಾನು ಸ್ಪಷ್ಟಮಾಡಿದ್ದೇನೆ ಎರಡೂ ಸಂಸ್ಥೆಗಳೂ ನನ್ನ ಸಂದರ್ಶಕರೂ ಕೇಂದ್ರ ಸರಕಾರದ ವಿಸ್ತರಣೆಯ ಬಗ್ಗೆ ಒಮ್ಮತದ ಸೂಚನೆಗಳನ್ನು ನೂತಲು ಅನುಕೂಲವಾಗುವಂತಹ ಸಾಮಾನ್ಯ ಏಕ್ಯ ಪ್ರಾಂತಿಕಸರಕಾರಗಳ ಕಾರಭಾರದ ವಿಷಯದಲ್ಲಿ ಒಡಂಬಡಿಕೆಯಾಗಬೇಕೆಂಬುದಕ್ಕೇ ನನ್ನ ಅಭಿಪ್ರಾಯವಿರುತ್ತದೆ

ಕೇಂದ್ರ ಸರಕಾರದ ವ್ಯವಸ್ಥೆಯ ಕುರಿತು ನಾನು ಈ ಕೆಳಗಿನ ಸೂಚನೆಗಳನ್ನು ಮಾಡಿದ್ದೆ (೧) ಕೇಂದ್ರ ಸರಕಾರದಲ್ಲಿ ಇನ್ನಿತರ ಮಹತ್ವವುಳ್ಳ ಸಂಸ್ಥೆಗಳ ಒಂದು ಯಾ ಹೆಚ್ಚು ಪ್ರತಿನಿಧಿಗಳನ್ನು ಸೇರ್ಪಡಿಸಿ ಕೊಳ್ಳುವದರಿಂದ ಒಳತಾಗಬಹುದು ಕಾರಣ ನಿವರ್ಗಗಳನ್ನು ಆಲೋಚಿಸುವಾಗ ನಾನೆಲ ಕುರಿತು ಎನ್ನು ಸಲಕೆ ಪಡಕೊಳ್ಳಬೇಕಾದೀತು (೨) ನಾನು ನಿಮ್ಮ ಮುಂದಿಟ್ಟ ಯೋಜನೆಯು ಯುದ್ಧ ಕಾಲಕ್ಕಷ್ಟೇ ಸಂಬಂಧಿಸಿದ್ದು ಇರುತ್ತದೆ ಯುದ್ಧಾನಂತರ ಕಾಲದ ಸ್ಥಾರಣೆಗಳಿಗೂ ಈ ಯೋಜನೆಗೂ ಸಂಬಂಧವಿಲ್ಲ ಯುದ್ಧಾನಂತರ ಕಾಲದ ಆಗು-ಹೋಗುಗಳು ನಾನು ನನ್ನ ತಾ ೧೮ ರಂ-ಕ ರ ಪ್ರಕಟಣೆಯಲ್ಲಿ ವಿವರಿಸಿರಂತೆಯೇ ಧರೆಯ ಎವ್ವ (೩) ನನ್ನೆ ಕಾರ್ಯಕಾರಿ ಮಂಡಳದಲ್ಲಿ ಸೇರಿಸಿಕೊಳ್ಳಲಾಗುವ ರಾಜಕೀಯ ಸಂಸ್ಥೆಯ ಪ್ರತಿಯೊಬ್ಬ ಸಭಾಸದನ ಅಧಿಕಾರವೂ ಹೊಣೆಯೂ ಈಗಿರುವ ನನ್ನ ಕಾರ್ಯಕಾರಿ ಮಂಡಳದ ಸಭಾಸದರದ್ದೇ ಇರುವವು (೪) ಈ ವ್ಯವಸ್ಥೆಯು ಪ್ರಾಕ್ತತಕ್ಕೆ ಅಮಲಿನಲ್ಲಿರುವ ಪಟನಾ ಕಾಯಿದೆಯ ಅನ್ವಯವೇ ಮಾಡಲಾಗವದು ಮತ್ತು ಅದು ಯುದ್ಧ ಕಾಲದ ತಾತ್ಕಾಲಿಕ ವ್ಯವಸ್ಥೆಯೆಂದಿಟ್ಟ ಅಮಲಿನಲ್ಲಿ ತರಲುವೀತು ನ ವ ಜ್ಞಾ ಕೂಡಿ ಯಾವದೊಂದು ನ್ಯವಹಾರ್ಯ ಯೋಜನೆಯನ್ನು ತಯಾರಿಸಲುವ್ಯತ್ತಿದರೆ ಅದನ್ನು ಕೂಡಲೆ ಅಮಲಿನಲ್ಲಿ ತರುವದವಶ್ಯವೆಂಬುದಂತೂ ಖರೆ ಯದ್ಧ ತೀರಿದ ಬಳಿಕ ಸಾವನ್ಯಾಜ್ಯ ಸರಕಾರವು ೦ ಜ್ಯಘಟನೆಯ ಸಂಸ್ಥೆಯನ್ನು ಇನ್ನೊಮ್ಮೆ ಅಮೂಲಾಗ್ರ ಪರ್ಯಾಲೋಚನೆಗೆ ಒಪ್ಪಿಕೊಂಡಿರುತ್ತದಾಗಿ ಯ ನ ನು ನಿವಗ ಸ್ಪಷ್ಟಪಡಿಸಿ ಹೇಳಿದ್ದೇನೆ

ನನ್ನ ಹೇಳಿಕೆ ಈಗ ಸ್ಪಷ್ಟವಾಗಿದೆಯೆಂದು ನನ್ನ ಭಾವನೆ ನಿನ್ನೆ ಹೇಳಿದಂತೆ ನಾನು ನಿಮಗೆ ಕೂಡಿ ಇಲ್ಲವೆ ವೈಕ್ತಿಕ ಬೇಕಾದ ಸಹಾಯ ಮಾಡಲಿಕ್ಕೂ ಚಿತ ಮಹತ್ವದ ವಿಷಯಗಳ ನಿರ್ಣಯ ಮಾಡುವಲ್ಲಿ ನೆರವಾಗಲಿಕ್ಕೂ ಸದಾ ಸಿದ್ಧನಿದ್ದೇನೆ ನಾನು ಮಾಡಿರುವ ಸೂಚನೆಗಳೊಳಗೆ ಸಾಮ್ರಾಜ್ಯ ಸರಕಾರದ ಆನ ನಯ ಬುದ್ಧಿಯ ಬುದಾವೆ ಸಾಕಸ್ಟ ಕಂಡು ಬರುವಂತಿದೆಯೆಂದು ನನ್ನ ದೃಢವಾದ ಅಭಿಪ್ರಾಯ ವೆರುತ್ತದೆ

ಮೇಲಿನ ಪತ್ರಕ್ಕೆ ರಾಷ್ಟ್ರಪತಿಗಳ ಪ್ರತ್ಯುತ್ತರ

ಹೊಸದಿಲ್ಲಿ ನವಂಬರ ತಾ ೨

ತಮ್ಮ ಪತ್ರದ ಒಗ್ಗೆ ನಾನು ತಮ್ಮ ಅಧಂರವೆಡೆ ಸ್ಮತ್ತೇನೆ ಆದರಲ್ಲಿದ್ದ ಸೂಚನೆಗಳ ಸಂಪೂರ್ಣ ವಿಚಾರ ನಾನೂ ನಪ್ಪ ಸಹಕಾರಿಗಳೂ ಕೂಡಿ ಮಾಡಿರುತ್ತೇವೆ ಮಿ|| ಜಿನ್ನಾರವರ ಕಾಡ ನಡೆದ ಮಾತುಕತೆಗಳೂ ನಮ್ಮ ಒಪರ್ಯೋಕ್ಕೆ ಬಿಡ್ಡಿವೆ ಆದರೂ ನ ವು ತಮಗೆ ಸಂದರ್ಶನದ ಕಾಲಕ್ಕೆ ಕೊಟ್ಟ ಪ್ರತ್ಯುತ್ತರದಲ್ಲಿ ವೃತ್ಯಾಸ ವಾತಾಂಶಕ್ಕೆ ಅಸಮರ್ಥಂಗಳಾದ್ದೇವೆ ಸಂದರ್ಶನದ ಕಾಲದಲ್ಲಿ ರ್ಚ್ಚೆಯ ಸಭೆಯ ವೆರು ಕೆಂಬುತ್ತಿರು ಯುದ್ಧದ ಉದ್ದೇಶವೇನು ?

ಮೊದಲು ಸ್ವಾತಂತ್ರ್ಯ ಬೇಕು; ಆ ಮೇಲೆ ಗೌಣ ವಿಷಯಗಳ ಚರ್ಚೆ.

ಎಂಬ ಮುಖ್ಯ ಪ್ರಶ್ನೆಯು ನಿರೀಕ್ಷಕವೇ ತನ್ನ ಮುಂತಾನೆಲ್ಲಿ ನನಗೂ ವ ಹಾತ್ಮಕರಿಗೂ ಕಂಡುಬರಲಿಲ್ಲ ಆ ೪ ದ್ದೇಶವು ಸ್ವಪ್ನವಾಸದಕ ರಂಪ್ಟಿಯ ಸಭೆಯವರು ಬೇರೆ ಗೌಣ ವಿಷಯಗಳನ್ನು ಆಲೋಚಿಸಲು ಎಂದೂ ಒಪ್ಪಲಿಕ್ಕಿಲ್ಲವೆಂದು ನಾನು ಪೇಟ್ಟನೆಂದಲು ಸ್ಪಷ್ಟೀಕರಣ ಮಾಡಲಿಚ್ಛಿಸುತ್ತೇನೆ ಯುರೋಪ ಖಂಡದಲ್ಲಿ ಯುದ್ಧಕ್ಕಾರಂಭವಾದ ಮೇಲೆ ಬ್ರಿಟಿಶ ಸರಕಾರವು ಹಿಂದೀ ಜನತೆಯ ಸಮ್ಮತಿ ಪಡೆಯದೆ ಭಾರತವು ಸಮರಾಸಕ್ತ ರಾಷ್ಟ್ರವೆಂದು ಸಾರಿದ್ದರಿಂದಲೇ ಪ್ರಕೃತ ತೊಡಕು ಉಂಟಾದ್ದಿರುತ್ತದೆ ಈ ತೊಡಕು ಕೇವಲ ರಾಜಕೀಯ ಸ್ವತಂತ್ರತೆದ್ದಿರುತ್ತದೆ ಅದಕ್ಕೂ ಜಾತೀಯ ಸಮಸ್ಯೆಗೂ ಸಂಬಂಧವಿರುವದಿಲ್ಲ ಬ್ರಿಟಿಶ ಸರಕಾರದ ಯುದ್ಧಸಾಧ್ಯ ಉದ್ದೇಶಗಳೇನು? ಮತ್ತು ಆ ಉದ್ದೇಶಗಳು ಹಿಂದುಸ್ಥಾನಕ್ಕೆ ಎಷ್ಟರ ಮಟ್ಟಿಗೆ ಅನ್ವಯಿಸುವವು? ಎಂಬ ಮಹತ್ವದ ಪ್ರಶ್ನೆಯಷ್ಟೇ ಈ ತೊಡಕಿನಲ್ಲಿ ಉದ್ಭವವಾದ ಪ್ರಶ್ನೆಯಾಗಿರುತ್ತದೆ ತಾ ೧೪-೯-೪೫ ರ ಪ್ರಕಟಣೆಯಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳಿಯು ಬ್ರಿಟಿಶ ಸರಕಾರಕ್ಕೆ ತನ್ನ ಯುದ್ಧೋದ್ದೇಶಗಳನ್ನು ಸ್ಪಷ್ಟವಾಗಿ ಜಂಹೀರಪಡಿಸಲಿಕ್ಕೂ, ಆ ಉದ್ದೇಶಗಳು ಹಿಂದೂಸ್ಥಾನಕ್ಕೆ ಹೇಗೆ ಅನ್ವಯಿಸಲ್ಪಡಬಹುದು ಎಂಬುದನ್ನು ಇದಿರಿಲೇ ಆ ಉದ್ದೇಶಗಳಿಗನುಸಾರವಾಗಿ ಏನು ವ್ಯವಸ್ಥೆ ಮಾಡಲಾದೀತು ಎಂಬದನ್ನು ಸ್ಪಷ್ಟೀಕರಿಸಲಿಕ್ಕೂ ಕೇಳಿಕೊಂಡಿತ್ತು ಹಿಂದುಸ್ಥಾನಕ್ಕೆ ಸ್ವಯಂ ನಿರ್ಣಯದ ಅಧಿಕಾರ ಬೇಕು, ಕನ್ನ ರಾಜ್ಯಘಟನೆಯನ್ನು ಪರಸ್ಪರ ಕೈ ಚಳಕವಲ್ಲದೆ ಪ್ರಜಾಪ್ರತಿನಿಧಿ ಸಭೆಯು ಮುಂ ಅಂತರ ನಿರ್ಮಿಸಿಕೊಳ್ಳುವ ಅಧಿಕಾರ ಭಾರತಕ್ಕೆ ಬೇಕ, ಎಂದು ಕಾರ್ಯಕಾರಿ ಮಂಡಳಿದ ಬೇಡಿಕೆಯಿತ್ತು. ತಾ ೧೧-೧೦ ರನೇಸೀಗ ಕೂಡಿದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಕಾರ್ಯಕಾರಿ ಮಂಡಳದ ಬೇಡಿಕೆಗೆ ಬೆಂಬಲ ಕೊಟ್ಟಿತಲ್ಲದೆ, ಹಿಂದುಸ್ಥಾನವು ಸ್ವತಂತ್ರ ರಾಷ್ಟ್ರವೆಂದು ಜಾಹೀರಪಡಿಸಬೇಕೆಂತಲೂ ಮತ್ತು ಆ ಸ್ವಾತಂತ್ರತ್ಯವು ಪ್ರಜಾಸತ್ತೆ ಐಕ್ಯ ಮತ್ತು ಎಲ್ಲ ಅಲ್ಪಸಂಖ್ಯಾಕರ ಹಿತಸಂಬಂಧಗಳ ಸಂಪೂರ್ಣ ಸಂರಕ್ಷಣೆ ಇವುಗಳನ್ನು ಆಧರಿಸಿರತಕ್ಕದ್ದೆಂತಲೂ ಆ ಕಮಿಟಿಯು ನಿರ್ಣಯಿಸಿರು ಇಂದಿ ಮೇಲೆ ತಮ್ಮ ಪ್ರಕಟಣೆ ಹೊರಬಿತ್ತು ಅನು ಹೊರಬಿದ್ದ ತುಸು ದಿವಸಗಳಲ್ಲಿಯೇ ಕೊಂಗ್ರೆಸ ಕಾರ್ಯಕಾರಿ ಮಂಡಳವು ಸಭೆಸೇರಿ, ತಾವು ಹೊರಡಿಸಿದ ಪ್ರಕಟಣೆಯು ದುರ್ವ್ಯಾಖ್ಯಾನಕ್ಕೆ ಇರುತ್ತದಂತಲೂ ತೀರ ಅಸಮಾಧಾನಕರವಿರುತ್ತದೆಂತಲೂ ಆಘಾತ್ಯಾಯ ವ್ಯಕ್ತಗೊಳಿಸಿ, ಮತ್ತು ಬ್ರಿಟಿಶ ಸರಕಾರಕ್ಕೆ ಭಾರತೀಯರು ಸಹಾಯ ಮಾಡಬಹುದೆಂಬುದಲ್ಲಿ ಸ್ಪಷ್ಟವಾಗಿ ಕೊಂಗ್ರೆಸ ಜನರು ಬಹುಸಂಖ್ಯಾಕರಿಂದಿದ್ದ ವ್ಯಾಂಗಗೊಳಗಿನ ಮಂತ್ರಿಮಂಡಳಗಳಿಗೆ ರಾಜಿನಾಮೆಯಿತ್ತು, ಹೊರ ಹೊರಟು ಬರಲು ಆಜ್ಞಾಪಿಸಿತು ಬ್ರಿಟಿಶ ಸರಕಾರದ ಯೋಯವೇನಿರುತ್ತಿದೆಂಬ ಒಗ್ಗೆ ತಾವು ಹೊರಡಿಸಿದ ಪ್ರಕಟಣೆಯಿಂದ ಕಾಂಗ್ರೆಸ್‌ತರ ಬಹುಜನ ಭಾರತೀಯರಿಗೂ ಬಹಳ ಅಸಮಾಧಾನವಾಗಿದೆ ಎಂಬ ಸಂಗತಿಯನ್ನೂ ತಾವು ಮರೆಯಕಕ್ಕದ್ದಲ್ಲ ತಮ್ಮ ಪ್ರಕಟಣೆಯ ನಂತರ ಬ್ರಿಟಿಶ ವಾರ್‌ಕ್ಯಾಬಿನೆಟ್ಟಿನಲ್ಲಿ ಸರಕಾರದ ಪರವಾಗಿ ಮಾಡಲ್ಪಟ್ಟ ಬೇರೆ ಬೇರೆ ಹೇಳಿಕೆಗಳ ಮೇರಿಂದಲೂ ಆ ಪರಿಸ್ಥಿತಿಯಲ್ಲಿ ಏನೂ ಸುಧಾರಣೆ ಯಾಗಿರುವದಿಲ್ಲ ತಾವು ಮಾಡಿದ ಸ್ಪಷ್ಟೀಕರಣವೇ ಇನ್ನೂ ಊರ್ಜಿತವಿದೆ ಇಂಥ ಸ್ಥಿತಿಯಲ್ಲಿ ನಾವು ತಮ್ಮ ನೀತಿಯನ್ನು ಮಾನ್ಯ ಮಾಡುವದಾಗಲಿ, ಸರಕಾರದೊಡನೆ ಸಹಕಾರವು ಆಲೋಚನೆ ಮಾಡುವದಾಗಲಿ ಎಂದೂ ಸಾಧ್ಯವಿಲ್ಲ

ಈ ಸಂದರ್ಭದಲ್ಲಿ ತಾವು ಜಾತೀಯ ಸಮಸ್ಯೆಯನ್ನು ಪ್ರಸ್ತಾಪಿಸುತ್ತಿರುವದು ತೀರ ಕೋಚಕ್ಷಿಯಾಯವಾದುದು ಹಾಗೆ ಮಾಡುವದರಿಂದ ಮುಖ್ಯ ಪ್ರಶ್ನೆಯ ಮರೆಮಾಡಿದಂತಾಗುತ್ತದೆ ಜಾತೀಯ ಸಮಸ್ಯೆಯನ್ನು ತಮ್ಮೊಳಗೇ ಒಪ್ಪಂದ ಮಾಡಿಕೊಂಡು ಬಗೆಹರಿಸಿಕೊಳ್ಳಿಬೇಕೆಂದು ರಂಪ್ಟಿಯ ಸಭೆಯು ತಿರುತಿರುಗಿ ಸಾರಿತು, ಮತ್ತು ನಾವೂ ಆ ದಿಶೆಯಲ್ಲಿ ಪ್ರಯತ್ನ ಮಾಡುತ್ತಲಿದ್ದೇವೆ ಆದರೆ ರಾಷ್ಟ್ರೀಯ ಸಭೆಯು ಕೇವಲವಂತೆ ಹಿಂದುಸ್ಥಾನವು ಸ್ವತಂತ್ರ ರಂಪ್ಟವೆಂದು ಜಹೀರಪಡಿಸಲಿಕ್ಕೆ ಆ ಜಾತೀಯ ತೊಡಕು ಎಂದೂ ಅಡ್ಡ ಬರಲಾರದು ಇಂದ ಜಹೀರಾಯಿಯು ಇಡೀ ರಂಪ್ಟಿಕೈ ಅನ್ವಯಿಸುವದಿಲ್ಲ ಭಾರತದ ರಂಪ್ಟಿಘಟನೆಯನ್ನು ತಯಾರಿಸಲು ಕೂಡಿಸಲಾಗುವ ಪ್ರಜಾಪ್ರತಿನಿಧಿ ಸಭೆಯಾದರೂ ಬಹಳ ಮಟ್ಟಿಗೆ ಅಧಿಕಾರದಿಂದಲೂ ಬೇರೆ ಜಾತಿಗಳ ಪ್ರತಿನಿಧ್ಯದ ಒಗ್ಗೆ ಪರಸ್ಪರ ಸಮ್ಮತಿಯಿಂದಲೂ ಆರಿಸಲ್ಪಡುವದು ಎಲ್ಲಿಯವರೆಗೂ ಹಿತಸಂಬಂಧಗಳ ಸಂರಕ್ಷಣೆಯಾಗತಕ್ಕ ದ್ದೆಂದು ನಾವೆಲ್ಲರೂ ಶ್ವೇನ ಮತ್ತು ಸ್ಪಂದನೆಯೂ ಸಂಬಂಧಪಟ್ಟ ಪಕ್ಷ-ಪಂಗಡಗಳ ನಮ್ಮತಿಯಿಂದಲೇ ಆಗತಕ್ಕದ್ದೆಂದೂ ನಾವು ನಿರ್ಧರಿಸಿದ್ದೇವೆ ಈ ಸಮಸ್ಯೆಯಲ್ಲಿ ಬ್ರಿಟಿಶ ಸರಕಾರವು ಕೈಹಾಕಿದ್ದರಿಂದಲೇ ಆ ಪಕ್ಷ ಸೈ ಬಡಿಸುವ ಕೆಲಸವು ಕಠಿಣವಾಗಿದೆಯೆಂದು ನಮ್ಮ ಅಭಿಪ್ರಾಯವಿರುತ್ತದೆ ನಿಜವಾದ ಅಲ್ಪಸಂಖ್ಯಾಕರ ಹಿಂದಿನೆಯ ವ್ಯವಸ್ಥೆಯಿಲ್ಲವಾಯಿತೆ ರಾಜ್ಯಘಟನೆಯನ್ನೂ ಕೊಂಗ್ರೆಸು ಒಪ್ಪಲಿಕ್ಕಿಲ್ಲ ಎಂಬ ಕೊಂಗ್ರೆಸಿನ ಪ್ರತಿಜ್ಞೆಯೇ ಈ ಕುರಿತು ಬ್ರಿಟಿಶ ಸರಕಾರಕ್ಕೆ ಇರಬಹುದಾದ ಚಿಂತೆಯನ್ನು ದೂರಪಡಿಸಲಿಕ್ಕೆ ಸಾಕು

ಪ್ರಸ್ತುತ ಪ್ರಶ್ನೆಯನ್ನು ತಿರುಗಿ ಆಲೋಚಿಸಬೇಕಂದರೆ ಕೊಂಗ್ರೆಸು ಬೇಡುವ ಸ್ಪಷ್ಟ ಸ್ಪಷ್ಟೀಕರಣ ಮಾಡದವಶ್ಯವಿರುತ್ತದೆಂದು ನಿಮಗನಿಸುತ್ತಿದೆ ಇಷ್ಟಿಂತಿಗೆ ಯುರೋಪದ ಯುದ್ಧದಲ್ಲಿ ಒದಗಿಬಂದ ಕೆಲವು ಘಟನೆಗಳ ಮೇಲಿಂದಲೂ ಯಜ್ಞೋದ್ದೇಶಗಳ ಸ್ಪಷ್ಟೀಕರಣ ಮಾಡಿಕೊಳ್ಳವದು ತೀರ ಅವಶ್ಯಕವಾಗಿದೆಯೆಂದು ನಾನು ನಮೂದಿಸಲಿಚ್ಛಿಸುತ್ತೇನೆ ಇಂದ ಸಮಾಧಾನಕರ ಸ್ಪಷ್ಟೀಕರಣ ಮಾಡಲ್ಪಟ್ಟಲ್ಲಿ ತಾವು ಮಾಡಿದ ಸೂಚನೆಗಳನ್ನು ನಾವು ಆನಂದದಿಂದ ಅಲೋಚಿಸುವೆವು ಈ ಪತ್ರದ ಅಭಿಪ್ರಾಯ ಗಾಂಧಿಜಿಯವರಿಗೆ ಪೂರ್ಣ ಸಮ್ಮತವಿರುತ್ತದೆಂದು ಹೇಳುವದಿಗತ್ಯವಿಲ್ಲ ತಾವು ಹಾಗೆ ಮಾಡಬಾರದೆಂದು ಬಯಸಿದ್ದರೆ ನಾವು ನಾಳೆ ಸಂಜೆಗೆ ವರ್ಧಾಕ್ಕೆ ಹೊರಡುವವರಿದ್ದೇವೆ

***

ಬೈ| ಜಿನ್ನಾರವರ ಪತ್ರದ ಸಾರಾಂಶ

ಬೈ| ಜಿನ್ನಾರವರು ನವಂಬರ ತಾ ೪ ನೇಗೆ ಪ್ರತ್ಯೇಕ ಪತ್ರ ಬರೆದು, ಕೊಂಗ್ರೆಸ ಪ್ರತಿನಿಧಿಗಳು ತಾವು ಈ ಹಿಂದೆ ಕೇಳಿದಂತೆ ಯುದ್ಧೋದ್ದೇಶಗಳ ಸ್ಪಷ್ಟೀಕರಣ ಮಾಡಲ್ಪಟ್ಟನಕ ಬೇರೆ ಗೌಣ ವಿಷಯಗಳ ಚರ್ಚೆ ಮಾಡಲಿಕ್ಕೆ ಒಪ್ಪದ ಮೂಲಕ ತಾವೂ ಕೊಂಗ್ರೆಸ ಪ್ರತಿನಿಧಿಗಳೂ ಸರ್ವಾಧಿಕತೆಗಳು ಮಾಡಿದ ಸೂಚನೆಗಳ ಆಲೋಚನೆಯ ನ್ನೇ ಮಾಡಲನು ಕೂಲವಾಗಿಲ್ಲವೆಂದು ತಿಳಿದ್ದರು

***

ಪುನಃ ದೊರೆಗಳ ಸಭೆಯಲ್ಲಿ.

ಸೋಮವಾರ ಪ್ರಕಟವಾದ ಸವ ರ್ಧಿಪತಿಗಳ ಕೌಂಸಿಯಂದಲೂ ಅವರು ಪ್ರಕಟಿಸಿದ ಪತ್ರವ್ಯವ ಹಾರದಿಂದಲೂ ಉಂಟಾದ ಸ್ಥಿತ್ಯಂತರಗಳನ್ನು ತಿಳಿಹೇಳಲು ಸ್ಪೆಲ್ ದೊರೆಗಳು ಬಿನ್ನವಿಸಿದಂತೆ, ಬ್ರಿಟಿಶ ಸರಕಾರದ ಪರವಾಗಿ ಭಾರತ ಮಂತ್ರಿಗಳಾದ ರೆಟ್ಟಿಂಡ ದೊರೆಗಳು ಸರಕಾರದ ಅಧಿಪತ್ಯವನ್ನು ಇನ್ನೊಂದೆ ಸ್ವಪ್ನಗೊಳಿಸಿದರು ಕೊಂಗ್ರೆಸ ಮತ್ತು ಮುಸ್ಲಿಮ್ ಲೀಗು ಇವುಗಳೊಳಗೆ ಮೈತ್ರಿಕ್ಯ ಮಾಡಿತರಲು ಸರ್ವಾಧಿಪತಿಗಳು ಮಾಡಿದ ಪ್ರಯತ್ನಗಳು ನಿಷ್ಫಲವಾದ ಬಗ್ಗೆ ಬ್ರಿಟಿಶ ಸರಕಾರಕ್ಕೂ ವೈಸರಾಯರಿಗೆ ವಿಷಾದವಾಗಿದೆಯೆಂದು ಪ್ರಸ್ತಾವನೆ ಮಾಡಿ, ಪೊಲೆಗಳು ಸರ್ವಾಧಿಪತಿಗಳ ಹೊಸ ರಾಷ್ಟ್ರಪತಿಗಳ ಪತ್ರಗಳ ಸಾರಾಂಶವನ್ನು ಸಭಿಕರಿಗೆ ನಿವೇದಿಸಿ, ಮುಂದೆ ಆವರು ನುಡಿದದ್ದೇನಂದರೆ -" ಕೊಂಗ್ರೆಸ್ಸಿನ ಬೇಡಿಕೆ ಮನ್ನಿಸಿ ಮಾಡುವದು ಬ್ರಿಟಿಶ ಸರಕಾರಕ್ಕೆ ಸಂಧ್ಯಿಪಲ್ಲಿ ಬ್ರಿಟಿಶಿಗೂ ಭಾರತಕ್ಕೂ ಬಹಳ ಕಾಲದ ಸಂಬಂಧವಿದೆ, ಭಾರತೀಯರ ವಿಷಯದಲ್ಲಿ ನ ನ್ಯಾಯ್ಯ ಸರಕಾರದ ಮೇಲೆ ಬಹಳ ಹೊಣೆಗಳವ, ಭಾರತದ ಭಾವೀ ರಾಜ್ಯಘಟನೆಯನ್ನು ರಚಿಸುವ ಕೆಲಸದೊಳಗಿಂದ ಸಾಮ್ರಾಜ್ಯ ಸರಕಾರವು ತನ್ನ ಅಂಗ ಹಿಂತೆಗೆದುಕೊಂಡರೆ ಅದು ತನ್ನ ಹೊಣೆಗಳನ್ನು ವಾಲಿಸಿದಂತಾಗಿಲಿಕ್ಕಿಲ್ಲ ಮೇಲಾಗಿ, ಮೆನ್ನೆ ಮೆನ್ನೆ ನಡೆದ ಚರ್ಚೆಯಲ್ಲಿ ರಾಷ್ಟ್ರೀಯ ಸಭೆಯು ಹೇಳುವಂಥ ಜಾಹೀರನಾಮೆ ಹೊರಡಿಸಲಿಕ್ಕೂ ಸಾಮ್ರಾಜ್ಯ ಸರಕಾರವು ಅಧಿಕಾರ ತ್ಯಾಗ ಮಾಡಲಿಕ್ಕೂ ಬಹುಜನ ಹಿಂದೂ ಸಮಾಜವು ವಿರುದ್ಧ ವಿರೆಯೆಂಬ ಮಾತು ಸ್ಪಷ್ಟವಾಗಿದೆ ಇಷ್ಟೆಂದ ಮಾತ್ರಕ್ಕೆ ನಾವು ಭಾರತೀಯರಿಗೆ ಕೊಟ್ಟು ವಚನದಂತೆ ಹಿಂದುಸ್ಥಾನಕ್ಕೆ ಬ್ರಿಟಿಶ ರಂಪ್ಟಸಂಘದಲ್ಲಿ ಯೋಗ್ಯ ಸ್ಥಾನವನ್ನು ಆದಷ್ಟು ತೀವ್ರ ದೊರಕಿಸಿಕೊಡುವ ಕಾರ್ಯದಲ್ಲಿ ಸಹಾಯ ಮಾಡುವ ನಮ್ಮ ನಿರ್ಧಾರವನ್ನು ತಿಲಿಲಗೊಳಿಸ್ದೇನೆಂದು ತಿಳಿಯಲಾಗದು ಈಗ ತಮ್ಮ ಪ್ರಯತ್ನ ಗಳು ವಿಫಲವಾದರೂ ಪುನಃ ಸಂಧಿ ನಿಕ್ಕಾಡನೆ ತಾವು ಕೊಂಗ್ರೆಸ ಮತ್ತು ಮುಸ್ಲಿಮ್ ಲೀಗ ಇವುಗಳೊಳಗೆ ಸಾಹಚರ್ಯ ಒದಗಿಸಿ ತರುವ ಪ್ರಯತ್ನ ಮಾಡಬೆ ಇರಲಿಕ್ಕೆಲ್ಲೆಂದು ಸರ್ವಾಧಿಪತಿಗಳು ಸ್ಪಷ್ಟ ಹೇಳಿದ್ದಾರೆ ೧೧ ವ್ಯಾಂತರಗಳಲ್ಲಿ ಬಂಗಾಲ, ಪಂಜಾಬ

ಬ್ರಿಟಿಶ ಸರಕಾರಕ್ಕೆ ಅಲ್ಪಸಂಖ್ಯಾಕ ಭಾರತೀಯರ ಕಲ್ಯಾಣದ ಚಿಂತೆ !

ಮತ್ತು ಸಿಂಧ ಈ ಮೂರು ಪ್ರಾಂತಗಳಲ್ಲಷ್ಟೆ ಕೊಂಗ್ರೆಸ ಪಕ್ಷಕ್ಕೆ ವಿಧೇಯವಾಗದ ವಂತ್ರಿಮಂಡಳಗಳುವೆ ಉಳಿದ ೮ ಪ್ರಾಂತಗಳಾದ ೫ ಪ್ರಾಂತಗಳ ಮಂತ್ರಿಮಂಡಳಗಳು ಈಗ ಗಲೆ ರಾಜೀನಾಮೆ ಕೊಟ್ಟಿವೆ ಇಂಳಿದ ೩ ಪ್ರಾಂತಗಳ ಮಂತ್ರಿಮಂಡಳಗಳೂ ಬೆಗನೇ ರಾಜೀನಾಮೆಗಳನ್ನು ಕೊಡುವವು ಇವುಗಳಲ್ಲಿ ಆಸಾಮು ಪ್ರಾಂತದೊಗೆ ಮಾತ್ರ ಹೊಸ ಮಂತ್ರಿವಂಡಳ ರಚಿಸುವದು ಶಕ್ಯವಾಗಬಹುದು ಆದರೆ ಬೇರೆ ಪ್ರಾಂತಗಳಲ್ಲಿ ಕಾಯಿದೆ ಮಂಡಳಗಳ ವಿಶ್ವಾಸಕ್ಕೆ ಪಾತ್ರವಾದ ಮಂತ್ರಿಮಂಡಳಗಳನ್ನು ರಚಿಸುವದು ಶಕ್ಯವಾಗದ್ದರಿಂದ ಆಯಾ ಪ್ರಾಂತಗಳ ಪ್ರಾಂತ ಧಿಕಾರ ಸರ್ವಾಧಿಕಾರವನ್ನು ತಾವೇ ವಹಿಸಿಕೊಳ್ಳಬೇಕಾಗಿದೆ ಇದೇನು ಕಿತ್ತಾತ್ಮಕ ವ್ಯವಸ್ಥೆಯಲ್ಲ ಘಟನಾ ಕಾಯಿದೆಯಲ್ಲಿ ಯೋಜಿಸಿರುವಂತೆ ಯಾವದೊಂದು ಪ್ರಾಂತದ ಆಡಳಿತ ನ್ನು ನಿಂಗಿಸಿಕೊಂಡು ಹೋಗಲು ಪ್ರತಿಕೂಲವಾದ ಪರಿಸ್ಥಿತಿ ಉಂಟಾಗುವರ್ಯಂತದಲ್ಲಿ ಇಂಥ ವ್ಯವಸ್ಥೆಯನ್ನು ಪಾಲಿವೆ ಂಟನವರೇ ಬಲು ಜಾಣತನದಿಂದ ಮಾಡಿಟ್ಟಿರುತ್ತಾರೆ ಈ ಹೊಸ ವ್ಯವಸ್ಥೆಯಿಂದ ಪ್ರಾಂತಿಕ ಆಡಳಿತ ಯಂತ್ರ ಕಾನೂನು ಮಂಡಳಿಕ್ಕೆ ಹೊಣೆಗಾರವಿರುವ ಮಂತ್ರಿಗಳ ಸಲಹೆಯ ಮೇರೆಗೆ ನಡಿಸಲ್ಪಡುವದರ ಬದಲು ಬ್ರಿಟಿಶ ಪಾರ್ಲಿಮೆಂಟಿಗೆ ಹೊಣೆಗಾರರಿರುವ ಅಧಿಕಾರಿಗಳ ಸಲಹೆಯಂತೆ ನಡಿಸಲ್ಪಡುವದು " ಈ ಪ್ರಕಾರ ಸ್ಪಷ್ಟೀಕರಣ ಮಾಡಿ ಕೊಂಗ್ರೆಸವರು ತಾವು ಮಾಡುತ್ತಿದ್ದ ಲೋಕಸೇವೆಯ ಕಾರ್ಯವನ್ನು ನಡುವೆಯೇ ಬಿಟ್ಟುಕೊಟ್ಟು ನಡೆದ ಬಗ್ಗೆ ದು ಪ್ರದರ್ಶನ ಮಾಡಿ ಅವರು ಬೇಗನೇ ತಿರುಗಿ ಬಂದು ತಮ್ಮ ಕಾರ್ಯ ಕೈಕೊಳ್ಳಲು ಶಕ್ಯವಾಗಬಹುದೆಂದು ಹಾರೈಸಿದರು

ಆವರೆ ಹಿಂದಿನಿಂದ ಸೈಲ್ ದೊರೆಗಳೂ ಸೆಮ್ಬಿಲ್ ದೊರೆಗಳೂ ಸರ್ವಾಧಿಪತಿಗಳ ಪ್ರಯತ್ನಗಳಿಗೆ ಯಶಸ್ಸು ದೊರಕದ ಬಗ್ಗೆ [ದುಃಖಾಶ್ಚರ್ಯಗಳನ್ನು ಸೂರಿಸಿ ಸರ್ವಾಧಿಪತಿಗಳು ಪುನಃ ಪುನಃ ಪ್ರಯತ್ನ ಮಾಡಿ ಹಿಂದು ಮುಸಲ್ಮಾನರೊಳಗೆ ಸೌಹಾರ್ದವನ್ನು ಒದಗಿಸಿಕರಲು ಯತ್ನಿಸಬೇಕೆಂದು ಇಚ್ಛೆ ಪ್ರದರ್ಶಿಸಿದರು

***

ಕೊಮನ್ಸ ಸಭೆಯಲ್ಲೂ ಪ್ರಶ್ನೋತ್ತರಗಳು

ದೊರೆಗಳ ಸಭೆಯ ಲ್ಲಿ ಭಾ ಮಂ ಗಳು ಮಾಡಿದ ಸ್ಪಷ್ಟೀಕರಣದ ಸಾರಂಶವನ್ನು ಉಭ ಭಾ ಮಂ ಗಳು ಕೊಮನ್ಸ ಸಭೆಯಲ್ಲೂ ಓದಿಹೇಳಿದರು ಆಬಳಿಕ ಕೆಲವು ಪ್ರಶ್ನೋತ್ತರಗಳಾದವು ಕೊಂಗ್ರೆಸ ಬೆಂಬಲಪಡೆಯಾಶ್ರು ತಿನಿಧಿ ಸಭೆಯ ಮೂರ್ತಸ್ವರೂಪವನ್ನು ಸರಕಾರದವು ಈಗಿಂದಿರ ವರೆ? ಎಂದು ಮಿ॥ ಗ್ರೆಹೆಮ್ ವ್ಹೈಟ್ ರವರು ಕೇಳಿದ ಪ್ರಶ್ನೆಗೆ "ಕೊಂಗ್ರೆಸಿನ ಪ್ರತಿನಿಧಿಗಳಲ್ಲೂ ಅಲ್ಪಸಂಖ್ಯಾಕರ ಪ್ರತಿನಿಧಿಗ ಜೂ ಆ ವೈಕ್ಯತಾಗ ವ ಸಂಪದ ತೋರಿಬಂದಲ್ಲಿ ಕ ಯ ಈ ಪ್ರತಿನಿಧಿಗಳೊಡನೆ ಪುನಃ ಚರ್ಚೆ ಮಾಡಲು ಒಂದಾಗುವಂತೆ ಸರ್ವಾಧಿಪತಿಗಳಿಗೆ ಹೇಳಬಲ್ಲೆ" ಎಂದು ಉತ್ತರಿಸಿದರು ಮಂತ್ರಿಗಳಾದ ಸರ್ ಹ್ಯೂಒನೆಲ್‌ರವರು ಪ್ರತ್ಯುತ್ತರ ಕೊಟ್ಟರು ಗುರುವಾರ ಪುನಃ ಮಿ॥ ಕರ್ಚಿವೆರ್ ರವರು ಭಾರತೀಯರ ಸಹಕಾರಿತೆಯ ನ್ನು ಸಂಪಾದಿಸುವದ್ದಕ್ಕಿಂತಲೂ ಶಕ್ಯವಾದ ಕೂಡಲೆ ಹಿಂದು ಸ್ಥಾನಕ್ಕೆ ಹೋಗಿ ರಿತೆಯ ಸ್ಫೂರ್ತಿಯನ್ನು ಕೊಡುವದೇ ಬಿಟ್ಟಿಶ ಸರಕಾರದ ಧ್ಯೇಯವಿರುತ್ತೆಂತಲೂ ಪೂರ್ಣ ಸ್ವರಾಜ್ಯದ ಘಟನೆಯನ್ನ ತಯಾರಿಸುವದಕ್ಕಾಗಿ ಕೂಡಲೆ ಎಲ್ಲ ಪ್ರಯತ್ನ ಪ್ರಯತ್ನ ಹಾಗು ಸಮಾಜಗಳ ಪ್ರತಿನಿಧಿಗಳಂದೊಗೂಡಿದ ಪರಿಷತ್ತನ್ನು ಕರೆಯಲಾಗುತ್ತಿರುವದೂ, ಸರಕಾರದ ಪರವಾಗಿ ಉಪ ಭಾರತ ಮಂತ್ರಿಗಳು ತಿಳ್ಳಿದಲ್ಲಿಯೇ ಜಾಹೀರ ಮಾಡಲಿರುವರೆ?" ಎಂದು ಪ್ರಶ್ನೆ ಕೇಳಿದ್ದಕ್ಕೆ, ಉಪ ಭಾರತ ಮಂತ್ರಿಗಳು ಪ್ರಸ್ತಾಪ ಸಮಯ ಕ ಉತ್ತರ ಕೊಡುವೆ ವಂತ್ರಿಗಳ ಪ್ರಕಟನೆಯು ಕಡೆಗೂ ಸರ್ ಸೆಮ್ಯುಅಲ್ ಹೋರರ ವ ಕ್ತವ್ಯ ರು ಟ್ಟಿಂಡ ದೊರೆಗಳ ಭಾಷಣಗಳ ಕಡೆಗೂ ಬೊಟ್ಟು ತೋರಿಸಿ ಪಾರಾದರ '

***

ಕಳೆದ ವರ ಮಧ್ಯಪ್ರಾಂತ ಬಡಿಸಾ ಮುಸ್ಲಿಮ ಗಡಿನಾಡು ಇವುಗಳ ವಂತ್ರಿಮಂಡಳಗಳು ರಾಜೀನಾಮೆ ಯನ್ನಿತ್ತು ಹೊರಬಿದ್ದು ಬಂದವು ಬಿಹಾರ ಎಸೆಂಬ್ಲಿಯಲ್ಲಿ ಯದ್ದ ನಿಷೇಧದ ಗೊತ್ತುವಳಿಯು ೩೨ ವಿರುದ್ಧ ೧೩ ಮತಗಳಿಂದ ಸ್ವೀಕರಿಸಲ್ಪಟ್ಟಿತು ಸಂಯುಕ್ತ ಗಡಿನಾಡಿನ ಎಸೆಂಬ್ಲಿಯಲ್ಲಿ ಕೊಂಗ್ರೆಸ ವಂತ್ರಿಗಳ ಗೊತ್ತುವಳಿಗೆ ಹಲಕೆವು ಅಸಮೂಹಜನೆಗಳು ಬಂದಾಗ್ಯೂ ಅವೆಲ್ಲ ಬಿದ್ದುಹೋಗಿ, ಮಂತ್ರಿಮಂಡಳದ ಗೊತ್ತುವಳಿಯು ಮತಗಣನೆಯಲ್ಲಾದರೆ ಸ್ವೀಕಾರವಾಗಿರುವದು ಸಿಂಧ ಪ್ರಾಂತದ ಮಂತ್ರಿಮಂಡಳವು ಸಹ ಸಲ್ಪಟ್ಟಿತು ಒಡಿಸಾದ ಗವ್ಹರ್ನರರ ಮುಂಬಯಿ-ಮದ್ರಾಸ ಪ್ರಾಂತಗಳ ಸ್ವಾಂತಾಧಿಕಾರದಂತೆ ರಾಜ್ಯ ಸೂತ್ರಗಳನ್ನು ತಮ್ಮ ಕೈಯಲ್ಲಿ ತಕ್ಕೊಂಡಿರುತ್ತಾರೆ ಗಡಿನಾಡು ಮತ್ತು ವಧ್ಯಪ್ರಾಂತಗಳ ವ್ಯಾಂತಾಧಿಕಾರ ಮಾತ್ರ ಇನ್ನೂ ತನಕ ಸರ್ವಾಧಿಕಾರವನ್ನು ವಹಿಸಿಕೊಂಡಿಲ್ಲ ಅವರು ಹೊಸ ಮಂತ್ರಿಮಂಡಳ ರಚಿಸಲು ಶಕ್ಯವುಂಟೇ ಹೇಗೆಂದು ಸರಕ್ಷಿಸ ತ್ರಿ ರ್ಯಾ. ಸಂಸ್ಥಾನ್ಯಾಂತದೊಳಗಿನ ಹಿಂದೆ ಕೊಂಗ್ರೆಸ ನುಯಾಯಿ ಪ್ರಧಾನರಾಗಿದ್ದ ಡಾ॥ ಖರೆಯವರು ಮುಸ್ಲಿಮ್ ಲೀಗ ಪಕ್ಷದವನ್ನೂ ಇನ್ನಿತರ ವಿರೋಧಿ ಪಕ್ಷದ ವರನ್ನೂ ಒಟ್ಟುಗೂಡಿಸಿ ಹೊಸ ಮಂತ್ರಿಮಂಡಳ ರಚಿಸುವ ಆಲೋಚನೆ ನಡಿಸುತ್ತಿದ್ದಾರೆಂದು ನಾಗಪುರ ದೊಳಗಿನ 'ಯುನೈಟೆಡ್ ಪ್ರೆಸ್' ವ ರ್ತಾವಾಹಿಕ ಸಂಸ್ಥೆಯ ಸದ್ದಿಗಾರರು ತಿಳಿಸುತ್ತಾರೆ !

***

ಮದ್ರಾಸ ಶಾಲಾಬೆಯ ಗವ್ಹರ್ನರು ಕಾನೂನು ಮಂಡಳದ ಅಧಿಕ ರ ಸಹಿತವಾಗಿ ಪ್ರಾಂತದ ಸರ್ವಾಧಿಕಾರವನ್ನು ತಾವೇ ವಹಿಸಿಕೊಂಡಿದ್ದರಿಂದ ಕಾನೂನು ಮಂಡಳ ಸದ್ಯಸರಿಗೆ ಕೊಡಲ್ಪಡುತ್ತಿದ್ದ ವಾಸಿಕ ವೇತನವನ್ನು ಇನ್ನು ಮುಂದೆ ಕೊಡಲ್ಪಡುವದೋ ಇಲ್ಲವೋ ಎಂಬ ಬಗ್ಗೆ ಪಂಡೀಹವುಂಟಾಗಿತ್ತು ಸರಕಾರದವರು ಇದೀಗ ಒಂದು ಪ್ರಕಟಣೆಯನ್ನು ಹೊರಡಿಸಿ ಈ ಸಂದೇಹವನ್ನು ದೂರಪಡಿಸಿದ್ದಾರೆ ಕಾನೂನು ಮಂಡಳದ ಅಧಿಕಾರವನ್ನು ಪ್ರಾಂತಾಧಿಪರು ತಮ್ಮ ಕದೆ ಸೆಳಕೊಂಡಾಗ್ಯೂ, ಕಾನೂನು ಮಂಡಳವು ವಿಸರ್ಜಿಸಲ್ಪಟ್ಟಿಲ್ಲವ ದ್ದರಿಂದ ಲೂ ಮಂಡಳದ ಸಭ್ಯಸದರು ಸಭಾಸದತ್ವ ಊರ್ಜಿತವಿರುವದರಿಂದಲೂ ಕಾಯಿದೆಯಂತೆ ಸಭಾಸದರಿಗೆ ಸಲ್ಲತಕ್ಕ ವೇತನವು ನಿರಾತಂಕವಾಗಿ ಸಲ್ಲಿಸಲ್ಪಡುವದೆಂದು ಸರಕಾರದವರು ಸ್ಪಷ್ಟೀಕರಿಸಿದ್ದಾರೆ

***

ಮುಂಬಯಿ ಸರಕಾರದ ಹೊಸ ಸಲಹೆಗಾರರು ಕಳೆದ ಸೋಮವಾರ ಸ್ವಸ್ಥಾನಾಪನ್ನರಾದರು. ಸರ್ ಗ್ಯಾರ್ಫ್ ವ್ಯಾಲ್ಲರವರು ಪ್ರಧಾನ ಸಲಹೆಗಾರರಾಗಿ ನೇಮಿಸಲ್ಪಟ್ಟಿದ್ದಾರಂತೆ ! ಆವರು ಗೃಹ ಇಲಾಖೆ, ಹಣಕಾಸಿನ ಇಲಾಖೆ, ಸರಕಾರಿ ನೌಕರರ ಇಲಾಖೆ ಮತ್ತು ರಾಜಕೀಯ ಇಲಾಖೆ ಇವುಗಳ ಕಾರಭಾರ ನಡಿಸುವರು ೦॥ ಮೆದನರವರು ಭೂಕಂದಾಯ,

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್
ಸ್ಥಾಪನೆ 1908.
ಈ ಕಂಪನಿಯು ಪೂರ್ಣ ಹಿಂದೀ ಇಷ್ಟು, ಇದರ ಕಂಟಿನ ದರಗಳೂ, ಕರ್ತುಗಳೂ ಬಹಳ ಸಾಯಿಷಾಲವು ಇವೆ ಕಂಪೆನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್‌ಪ್ರಭುತ್ವ ಎಕ್ಸೆಸ ನಿಯಮಗಳಿಂದ ಒವಾಬ್ಬರಿಯ ಶೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ
ಮಲ್ಟಿಪಲ್ ಬೆನಿಫಿಟ್ ಎಂಬ ಕಲನು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ
ಸವಿಸ್ತರ ವಾಹಿತಿ ಸ್ಥಳಿಕ ವಿಜಯಪುರ ಕಡೆಗೆ ಅಥವಾ ಪತ್ರದ್ವಾರದಿಂದ ತಿಳಿಸಿದ ವಿಳಾಸಕ್ಕೆ ಬರೆದಲ್ಲಿ ತಿಗುವದು.
Kanara Agents
D K Nayak Bros
K N Nayak.
Honavar Agent.
R. V. Prabhu
K. PadmanabhaRao & Sons,
BELGAUM
Chief Agents for
Karnatak Districts & S M States

ಕೊಂಗ್ರೆಸ ಕಾರ್ಯಕಾರಿ ಮಂಡಳದ ಮೇಲೆ ಬೆ|| ಜಿನ್ನಾರವರ ಹಗೆತನ!

ಶಿಕ್ಷಣ ಮತ್ತು ಸ್ವಾನಿಕೆ ಸ್ವರಂಜ್ಯ ತಾಲೂಟಿಗಳ ಕಾರಭಾರವನ್ನೂ ಮಿ|| ತಾಯ್ಟರವರ್ ಆರೋಗ್ಯ,ಆಲಕಾರಿ, ಸಹಕಾರಿ, ಗ್ರಾಮ ಸುಧಾರಣೆ, ಉದ್ಯೋಗ ಮತ್ತು ಸರಕಾರಿ ಕಾಮಗಾರಿ ಇಲಾಖೆಗಳ ಕಾರಭಾರವನ್ನೂ ಕೈಕೊಂಡಿದ್ದಾರೆ ಕಳೆದ ೨ ವರ್ಷಗಳಲ್ಲಿ ಕೊಂಗ್ರೆಸ ಮಂತ್ರಿಮಂಡಳದವರು ಜಾರಿಕೊಟ್ಟ ರಾಜನೀತಿಯ ಫಲ ಪ್ರತ್ಯಕ್ಷಕ್ಕೆ ವಿಶೇಷ ಒದಲುವನೆಗಳು ಮಾಡಿಲ್ಲತಲಿಕ್ಕಿಲ್ಲವೆಂದು ಹೇಳುತ್ತಿರೆ ಪ್ರಾಂತದ ಹಣಕಾಸಿನ ಪರಿಸ್ಥಿತಿಯು ಸರಿಯಾಗಿರುವ ತನಕ ಮಧ್ಯಪಾನ ಪ್ರತಿಬಂಧಕ ಕಾರ್ಯಕ್ರಮದಲ್ಲೂ ಬದಲಾವಣೆಯಾಗಿಲಿಕ್ಕಿಲ್ಲವೆಂದು ಸರಕಾರದ ಅಂತರಂಗವನ್ನು ಬಲ್ಲವರು ಹೇಳುತ್ತಾರೆ

ಕೊಂಗ್ರೆಸ ಮುಸ್ಲಿಮ್ ಲೀಗುಗಳ ಏಕ್ಯದ ಪ್ರಯತ್ನ

ದಿಲ್ಲಿಯಲ್ಲಿ ಜಿನ್ನಾ ಜವಾಹರಲಾಲರಿಗೆ ಇತಿಯ ಸಮೀಸ್ಯೆ ಬಿಡಿಸುವ ಕುರಿತು ನಡೆದ ಮಾತುಕತೆಗಳು ಬೇಗನೇ ತಿರುಗಿ ಮುಂದರಿಯುವೆವೆಂದು ತಿಳಿಯುತ್ತರೆ ಈ ಮಾತುಕತೆಯನ್ನು ವಿಂಬರಿಸುವದಕ್ಕಾಗಿ ಪಂ|| ಜವಾಹರಲಾಲ ನೆಹರೂರವರು ಇನ್ನು ಕೆಲ ದಿನಗಳಲ್ಲಿಯೇ ಮುಂಬಯಿಗೆ ಬರುವರೆಂದ್ದಾರೆ ದಿಲ್ಲಿಯಲ್ಲಿ ಮಾತುಕತೆ ನಡೆದಾಗ ತಮಗೂ ಬೆ|| ಜಿನ್ನಾರವರಿಗೂ ವಿತ್ಕಸವಾದ ಮತಭೇದ ಕಂಡು ಬರಲಿಲ್ಲವಾಗಿ ಪಂ|| ಜವ ಹರಲಾಲರರು ಪ್ರಕಟಿಸುತ್ತಾರೆ " ನಮ್ಮ ಮಾತುಕತೆಗಳಲ್ಲಿ ಅನೇಕ ಸಂಶಯಗಳ ನಿವಾರಣೆಯಾಯಿತು, ಮತ್ತು ಈ ಹಲವು ವರ್ಷಗಳಲ್ಲಿ ನಿರ್ಣಸ್ಪಿದ್ಧಕ್ಕಿಂತ ನಾವು ಬಹಳ ಸಮೀಪ ಬಂದೆವು ಕೊಂಗ್ರೆಸ ಮತ್ತು ಮುಸ್ಲಿಮ್ ಲೀಗುಗಳೊಳಗಿರುವ ರಂಜಕೀಯ ಇಲ್ಲವ ಜಾತಿವಿಷಯಕ ಮತಭೇದಗಳನ್ನ ಪರಿಹರಿಸಲು ಶಕ್ಯವಿದೆಯೆಂತಲೂ ಬೇಗನೇ ಅವು ಪರಿಹರಿಸಲ್ಪಡುವವೆಂತಲೂ ನನಗೆ ಸಂಪೂರ್ಣ ಮನವರಿಕೆಯಾಗಿದೆ" ಹೀಗೆ ಪಂ|| ಜವಾಹರಲಾಲರು ನುಡಿಯುತ್ತಾರೆ ದಿಲ್ಲಿಯಲ್ಲಿ ನಡೆದ ಮಾತುಕತೆಗಳ ಕಾಲಕ್ಕೆ ಪಂಡಿತಜಿಯವರು ರಾಷ್ಟ್ರ ಸಭೆಯ ಪರವಾಗಿ ಈ ಕಳೆಗಿನಂತೆ ಸವಾಲು ಮಾಡಿದಂಗಿ ತಿಳಿಯುಸ್ತದೆ

" ಯುದ್ಧ ಸಮಾಪ್ತವಾದ ಕೂಡಲೇ ಸ್ವತಂತ್ರ್ಯಾದ ಅಧಿಷ್ಠಾನದ ಮೇಲೆ ಭಾರತೀಯ ರಾಜ್ಯಘಟನೆಯನ್ನು ರಚಿಸತಕ್ಕದ್ದೆಂಬ ರಾಷ್ಟ್ರೀಯ ಬೇಡಿಕೆಯನ್ನು ಮುಂದಿಡ ವ ಕಾರ್ಯದಲ್ಲಿ ನೀವು ನಮ್ಮೊಡನೆ ಸೇರಿ ನಾವು ನಿವ್ವಳ ಹಾಗು ಬೇಗೆ ಅಲ್ಪಸಂಖ್ಯಾತ ಸಮಾಜಗಳ ಹಿತಸಂಬಂಧಗಳನ್ನು ನಿಮಗೆ ಸಮಾಧಾನವಾಗುವಂತೆ ಸಂರಕ್ಷಿಸುವವೆಂದು ಅಶ್ವಾಸನೆ ಕೊಡುತ್ತೀವೆ ಈ ಕಾರ್ಯದಲ್ಲಿ ಪರಸ್ಪರರು ಮಾತ್ರ ಕೈಹಾತಕತ್ಕದ್ದಲ್ಲ ಹೀಗೆ ಪಂ|| ಜವಾಹರಲಾಲರು ರಾಷ್ಟ್ರೀಯ ಸಭೆಯ ಭೂಮಿಕೆಯನ್ನು ನಿಶ್ಚೈಸಿದಾಗಿ ಮುಂದಿಡಲು, ಬೆ|| ಜಿನ್ನಾರವರು ಗೊಂದಲದಲ್ಲಿ ಬಿದ್ದಿದ್ದೆಂದು 'ಹಿಂದು ಪತ್ರಿಕೆಯ ವಿದ್ವಾಂಸ ಚಿತ್ರಗುಪ್ತರು ತಳಿಯುತ್ತಾರೆ ಪಂಡಿತಜಿಯವರ ಸವಾಲಿಗೆ ಒಪ್ಪಿಕೊಂಡರೆ ಸರ್ ಸಿಕಂದರ ಹಯಾತಖಾನರವರೂ ಬಂಗಾಲದ ಮುಖ್ಯ ಪ್ರಧಾನರಾದ ವಿ|| ಫಜಲುಲ್ ಹಕ್‌ರವರೂ ಕೊಂಗ್ರೆಸಿನ ಈ ಭೂಮಿಕೆಯನ್ನು ಮನ್ನಿಸಲು ಒಪ್ಪಲಿಕ್ಕಿಲ್ಲವೆಂದು ಜೆದರಿ ಬೆ|| ಜಿನ್ನಾರವರು ಯಾವತೇ ಉತ್ತರ ಕೊಡಲಿಲ್ಲವೆಂತೆ! ಸ್ವಾತಂತ್ರ್ಯದ ಬೇಡಿಕೆಗೆ ವಿರೋಧ ಮಾಡಲಿಕ್ಕೂ ಬೆ|| ಜಿನ್ನಾರವರಿಗೆ ಧೈರ್ಯವಿಲ್ಲ, ಹಾಗೆ ವಿರೋಧ ಮಾಡಿದಲ್ಲಿ ಮುಸ್ಲಿಮ್ ಲೀಗಿನ ಮುಂಚಿನ ಧ್ಯೇಯವನ್ನು ಬದಲಿಸಿ ಸ್ವಾತಂತ್ರ್ಯ ಪ್ರಾಪ್ತಿಯ ಧ್ಯೇಯವನ್ನು ಸ್ವೀಕರಿಸಬಹುದೆಂತ ಲೀಗಿನ ಒಳಮತ ಪಕ್ಷದವರು ಲೀಗಿಗೆದ್ದಾರೆಂದು ಬೆ|| ಜಿನ್ನಾರವರಿಗೆ ಅಂಜಿಕೆಯಿದೆ!

ಅದಕ್ಕೆ ಮಂಗಳವಾರ ರಾತ್ರಿ ಮುಂಬಯಿಯಲ್ಲಾದ ಬೆ|| ಜಿನ್ನಾರವರ ಭಾಷಣ ನೋಡಿದರೆ ಅವರು ಕೊಂಗ್ರೆಸಿನೊಡನೆ ಒಪ್ಪಂದ ಮಾಡಿಕೊಳ್ಳಲು, ಸಿದ್ಧರಾದಾರೆಂದು ಹೇಳಲುವುದಿಲ್ಲ ಕೊಂಗ್ರೆಸಿನವರು ಹಿಂದುಗಳ ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆಂಬಲೂ ಕೊಂಗ್ರೆಸ ಸಂಸ್ಥೆಯಲ್ಲಿ ಅಪ್ಪುಮಾಡಿಕತನ ಗುಂಬಿಕೊಂಡಿರುತ್ತದೆಂತಲೂ ಬೆ|| ಜಿನ್ನಾರವರು ಆರೋಪ ಮಾಡುತ್ತಾರೆ " ನನಗೆ ಬೇಕಾಯವರು ನನ್ನು ನೆಲೆ ಹೂರಿಸುವ ರಾಜ್ಯಘಟನೆ ಬೇಡ, ನನ್ನ ಸಮ್ಮತಿಯಿಂದ, ನನ್ನ ಒಪ್ಪಿಗೆಯುಂದ ಕಯಾಂದ ರಾಜ್ಯಘಟನೆಯೇ ನನಗ ಬೇಕು! ಇಂತಹ ರಾಜ್ಯಘಟನೆಯನ್ನೇ ಮುಸಲ್ಮಾನ ಸಮಾಜವು ಒಪ್ಪುವೆವು ಮತ್ತು ಅದಕ್ಕಾಗಿ ನಾನು ಕೊನೆಯ ತನಕ ಹೋರಾಡುವೆನು ನನ್ನ ಮುಸಲ್ಮಾನ ಬಾಂಧವರು ಕೊನೆಯ ವರಗೆ ಹೋರಾಟ ನಡಿಸಲು ಸಮರ್ಥರಿದ್ದಾರೆಂದು ನಾನು ಹೇಳಬಲ್ಲೆ ಹಿಂದುಗಳ ಕೂಡ ನನ್ನ ಜಗಳವಿಲ್ಲ ಹಿಂದು ಬ ವರೂ ಮುಸಲ್ಮಾನರೂ ಸರಿಸಮಾನಸ್ಥಿಯಂಧರಿಂಗಿ ಜ್ಞಾಟ್ಟಿಗೆ ಸೇರಿ ಒಪ್ಪಂದ ಮಾಡಿಕೊಳ್ಳಲು ನನ್ನ ಪೂರ್ಣ ಒಪ್ಪಿಗೆಯಿದೆ ಆದರೆ ಕೊಂಗ್ರೆಸಿನಲ್ಲಿ ಅಧಿಕಾರಾರೂಢರುಗಳನ್ನು ಮೆಸಿಕೊಂಡ ಸರ್ವಾಧಿಕಾರಿಗಳೇ ಈ ಕಾರ್ಯದಲ್ಲಿ ಅಡ್ಡಿ ಮಾಡುತ್ತಿದ್ದಾರೆ! ಈ ಸರ್ವಾಧಿಕಾರಿಗಳ ಮಂಡಳವು ಅಸ್ತಿತ್ವದಲ್ಲಿರುವ ವರೆಗೆ ಹಿಂದುಗಳ ಹಾಗು ಮುಸಲ್ಮಾನರ ಕಲ್ಯಾಣಾದಿಯು ಉಳಿಯಲಿರು ಲಕ್ಷಣ ಲಿಡಬೇಕಾದ ಸಂಗತಿಯಾಗಿದೆ!" ಬೆ|| ಜಿನ್ನಾರವರ ಈ ಘೂತ್ಕಾರಗಳಲ್ಲಿ ಕಂಡುಬರುವ ಮನೋವೃತ್ತಿಯು ಕೊಂಗ್ರೆಸ ಲೀಗುಗಳೊಳಗೆ ಏಕ್ಯವನ್ನು ಸಾಂಧಿಸಿರಲು ಸಹಾಯಕವಾವೀತೋ ಹೇಗೆಂದು ನಿರ್ಣಯಿಸುವ ಕಲಸವನ್ನು ನಾವು ವಂಚಕರಿಗೇ ಬಿಟ್ಟುಕೊಡುತ್ತೇವೆ

ಈ ನಂದರ್ಭದಲ್ಲಿ ಬೆ|| ಜಿನ್ನಾರವರ ಮುಸ್ಲಿಮ್ ಲೀಗು ಅಖಿಲ ಭಾರತೀಯ ಮುಸಲ್ಮಾನರ ವಿಕಮೇವ ಪ್ರತಿನಿಧಿಕ ಸಂಸ್ಥೆಯಲ್ಲನೆಂಬದನ್ನು ಪುರೆಯಾಗದು ಬೆ|| ಜಿನ್ನಾರವರು ಕವ್ಯ ಲೀಗೇ ಮುಸಲ್ಮಾನ ಸಮಾಜದ ಪ್ರತಿನಿಧಿ ಸಂಸ್ಥೆಯೆಂದು ಕೊಂಗ್ರೆಸು ಒಪ್ಪಬೇಕೆಂದು ಹಟ ಹಿಡಿದಿರ ತ್ತಾರೆ ಆದರೆ ಕೊಂಗ್ರೆಸಿನೊಳಗಿನ ಮುಸಲ್ಮಾನರನ್ನೂ ಕೊಂಗ್ರೆಸಿನೊಡನೆ ಸಹಕರಿಸುವ ಅಹರ್ನಾಶ ಜನಾಯತ್-ಉಲ-ಉಲೆಮಾ ಮೊದಲಾದ ಸಂಸ್ಥೆಗಳನ್ನೂ ತಿರಸ್ಕರಿಸಿದಂತೆ ಆದಿಕೆಂಬ ಭಾವನೆಯಿಂದಲಾ ಸತ್ಯ ಸ್ಥಿತಿಯನ್ನು ಮರೆಮಾಚಲಿಕ್ಕೆ ಮನಸ್ಸನ್ನು ಒಪ್ಪಪ್ಪದೆ ರಿಂದಲಾ ಬೆ|| ಜಿನ್ನಾರವರ ಭೂಮಿಕೆಯನ್ನು ಮನ್ನಿಸಲು ರಾಷ್ಟ್ರೀಯ ಸಭೆಯವರು ಸಿದ್ಧರಾಗಿಲ್ಲ ಈ ಅಡಚಣಿಯನ್ನ ಪರಿಹರಿಸಲೋಸುಗ ಕಳೆದ ವಾರ ಲಂಡೋರದಲ್ಲಿ ಸಭೆ ಸೇರಿದ ಆಯ್ದ ಮುಸ್ಲಿಮ್ ಪರಿಷತ್ತಿನವರು ಈ ಕೆಳಗಿನಂತೆ ಮಹತ್ವದ ಒಂದು ಗೊತ್ತು ವಳಯನ್ನು ಮಾಡಿರುತ್ತಾರೆ —

" ಮುಸ್ಲಿಮ್ ಲೀಗ್ ಹಿಂದೀ ವುಸಲ್ಮಾನರ ವಿಕ

(೧೦೫ನೇ ಸಾಲು ನೋಡಿರಿ)

ಜವಾಹೀರ ನೋಟೀಸು.

ಪಣ್ಣಮ್ಮಾ ಕೋಂ ವೆಂಕಟ್ಟಪ್ಪಣ ನಾಯ್ಕ ಸಾಕೀನ ನಾಡುಮಾಸ್ಕೇರಿ ಇವಳು ಬರಕೊಳ್ಳುನ ಸೇನಂದರೆ —

ನನ್ನ ಗಂಡ ವೆಂಕಟ್ಟಪ್ಪಣ ಹಮ್ಮಣ್ಣಾ ನಾಯ್ಕ ಇವರು ಕಳೆದ ೩—೪ ತಂಗಳ ಅಗಾಗ್ಯಾ ಮೊದಲಿನಂತೆ ಭ್ರಾಂತರಾಗಿದ್ದಾರೆ ಈ ಹಿಂದೆ ೧೯೩೬ನೇ ಇಸ್ವಿ ಜೂನ ತಾ ೩೦ನೇ 'ವ್ಯಕ್ತ'ದ ಸಂಚಿಕೆಯಲ್ಲಿ ಜಾಹೀರ ನೋಟೀಸು ಕೊಟ್ಟಿತ್ತ, ಈಗಲೂ ಆದರಂತೆ ಭ್ರಾಂತರಾಗಿ ಹೊಲಿರುಳು ಅಲೆದಾಡುತ್ತಾರೆ ಕಾರಣ ಅವರಿಂದ ಯಾರೂ ಯಾವದೇ ತರದ ಲೇವಿ ಕಾಗದಪತ್ರ ದಸ್ತ್ಯವಲು-ರಕೀದಿ ಮಾಡಿಸುವಾರದು ಮಾಡಿಸಿಕೊಂಡಲ್ಲಿ ನನ್ನು ಆಸ್ತಿಗೆ ಯಾ ಹೊಣ್ಕೆ ಬಾಧಿಪಲ್ಲರದು ಮತ್ತು ಯಾರೂ ಇವರ ಕಡಗೆ ಆಸ್ತಿ ಭತ್ತ ವಗೈರೆ ಯಾವ ತರದ ಕೊಡ ಕೊಳ್ಳುವ ವ್ಯಾಪಾರ ಸಹೆ ಮಾಡಬಾರದಾಗಿ ಬೇಡಿಕೊಳ್ಳುತ್ತೀನೆ ತಿಳಿಯುವದು

● ಇದು ಸಣ್ಣಮ್ಮಾ ಕೋಂ ವೆಂಕಟ್ಟಪ್ಪಣ ನಾಯ್ಕ ನಾಡುಮಾಸ್ಕೇರಿ ಇವಳ ಎಜಮೈ ಹೆಬ್ಬೊಟ್ಟಿನ ಗುರ್ತ ತಾ ೧೨ ೧೧-೩೯

ಚಿಕ್ಕ ಮಕ್ಕಳ ಯಕೃತ್ ಮತ್ತು ಪ್ಲೀಹೆಗೆ ವಿಶೇಷ ಉಪಕಾರ ಮಾಡುವದು
ದುಃಸಾಧ್ಯವಿರುತ್ತದೆಂದು ಬಹಳ ಜನರು ತಿಳಿಯುತ್ತಾರಷ್ಟೆ ಆದರೆ
ಜಮ್ಮಿ ವೆಂಕಟರಮಣಯ್ಯನವರು ಶೋಧಿಸಿ ಪೂರ್ಣತೆಗೆಯ್ದ
ಲಿವ್ಹರ್ ಕ್ಯೂರ್ (ರಜಿಸ್ಟರ್ಡ)
ಎಂಬ ರಾಮಬಾಣ ಔಷಧದ ಪ್ರಯೋಗದಿಂದ ಈ ವಿಕಾರಗಳನ್ನು ಯ ಶಸ್ಸು ರೀತಿಯಿಂದ ಗುಣ ಪಡಿಸಬರುತ್ತದೆಂದು ಬಹುತೇಕ ಎಲ್ಲ ವೈದ್ಯ-ಡಾಕ್ಟರರಿಗೆ ಈಗ ಪೂರ್ಣ ಮನವರಿಕೆಯಾಗಿದೆ
ವಿಶೇಷ ಮಾಹಿತಿಯ ಬಗ್ಗೆ ಈ ಕೆಳಗಿನ ಪತ್ತೆಗೆ ಬರೆಕೊಳ್ಳರಿ —
ಜಮ್ಮಿ ವೆಂಕಟರಮಣಯ್ಯ ಎಂಡ್ ಸನ್ಸ್.
ಲಿವರ್ ಕ್ಯೂರ್ ಆಫೀಸ, ೨ ಮತ್ತು ೮ ಸಲ್ಯು ಸ್ಟ್ರೀಟ್, ವೈಲಂಪೂರ, ಮದ್ರಾಸ

ಕಾನಡಾವೃತ್ತ.

ಮತ್ತಿ ಪ್ರಮಥಿ ಸಂವತ್ಸರ ಕಾರ್ತಿಕ ಬಹು ೨೧, ಸೋಮವಾರ

ಮೊದಲು ಸಂಘಟನೆ; ಆನಂತರ ಹೋರಾಟ!

ಬ್ರಿಟಿಷ ಸರಕಾರವು ಹಿಂದೀ ರಾಷ್ಟ್ರೀಯ ಸಭೆಯು ಅಪೇಕ್ಷೆಯಂತೆ ತನ್ನ ಯುದ್ಧ ಸಾಧ್ಯ ಉದ್ದೇಶಗಳನ್ನು ಸಾರುವಲ್ಲಿಲ್ಲ, ಯುದ್ಧೋಪಯೋಗಿನ ಟಿಕ್ಕ ಮೂಡ್ಡ ರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿ, ಅವುಗಳ ಸ್ವಾತಂತ್ರ್ಯರಕ್ಷಣೆಗಾಗಿ ಮತ್ತು ಭೂಮಂಡಲದಲ್ಲೆಲ್ಲೂ ಪ್ರಜೆಯ ರಾಜ್ಯಕ್ಕೆ ಜಂಬು ಸಿಗಲಾರದೆಂದು ಸಿದ್ಧ ಮಾಡಿತೋರಿಸುವದಕ್ಕಾಗಿ ತಾವು ಯುದ್ಧ ಹೊಡಿರುತ್ತೇನೆಂದು ಕರ್ದಾರಮ್ಯ ವೇದಾಂತವನ್ನು ಬಾಯಿಯಿಂದ ಹೇಳುತ್ತಿರುವರಾದರೂ, ಅವರು ಆ ತತ್ವವನ್ನಾಗಲಿ ವೇದಾಂತವನ್ನಾಗಲಿ ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹಾತೊರೆಯುತ್ತಿರುವ ಭಾರತೀಯ ಮಿಗೂ ನಿಶ್ಚಯವಾಗಿ ಅನ್ವಯಿಸುವೆವೆಂದು ಹೇಳಲು ಹಿಂಜರಿಯುತ್ತಿದ್ದಾರೆ, ಮತ್ತು ರಾಷ್ಟ್ರೀಯ ಸಭೆಯವರು ಪುನಃ ಪುನಃ ಹಿಂದೀ ರಾಷ್ಟ್ರವು ಯಾವದೇ ಸಾಮ್ರಾಜ್ಯವಾಲಸೆಯ ಯುದ್ಧದಲ್ಲಿ ಸೇರಲೊಪ್ಪಲಿಕ್ಕಿಲ್ಲೆಂದು ಸಾರುತ್ತಿದ್ದರೂ ಬ್ರಿಟಿಶ ಸರಕಾರವು ಹಿಂದೀ ಪ್ರಜೆಗಳಿಗೆ ಹೇಳಲು ಕೇಳಲೆ, ಬಲಾತ್ಕಾರದಿಂದ ಹಿಂದುಸ್ಥಾನವು ಸಮರಾಸಕ್ತ ರಾಷ್ಟ್ರವೆಂದು ಸಾರಿ, ಹಿಂದೀ ಜನರನ್ನು ಅವರ ಇಚ್ಛೆಯ ವಿರುದ್ಧ ಯುದ್ಧದಲ್ಲಿ ನೂಕಿದಾರೆ, ಹಿಂದುಸ್ಥಾನಕ್ಕೆ ಗಣನೀಯ ಇಚ್ಛೆಯ ರಾಜ್ಯಪಟ್ಟಿನೆಯ ಕಾನೂನಿನನ್ವಯ ಮತೊಟ್ಟು ಅಲ್ಪ ಸ್ವಲ್ಪ ಸ್ವಾಂತಿಕ ಸ್ವಾಯತ್ತತೆಯ ಅಧಿಕಾರವನ್ನೂ ಯುದ್ಧವು ನೆವ ಮುಂದೆ ಮಾಡಿ ಸಂಪೂರ್ಣವಲ್ಲಿ ತಂದಿದ್ದಾರೆ ಆದ್ದರಿಂದ ಬ್ರಿಟಿಶ ಸರಕಾರವು ಇದೀಗ ಯುದ್ಧ-ಸಂಕಟದಲ್ಲಿ ಬಿದ್ದಿರುವದೆಂದು ಭಯ ಮಾಯೆ ತೋರಿಸದೆ ನಾವು ನಮ್ಮ ಸ್ವಾತಂತ್ರ್ಯದ ಹೋರಾಟವನ್ನು ತಿರುಗಿ ಪ್ರಾರಂಭಿಸುವಾ, ಸಾಮೂಹಿಕ ಸತ್ಯಾಗ್ರಹವನ್ನು ಹೂಡುವಾ, ಸ್ವಾತಂತ್ರ್ಯಪ್ರಾಪ್ತಿಗಾಗಿ ಮೊರೆತ ಈ ಜನರೂ ಸಂಘಿಯ ಪ್ರಯೋಜನ ಮಾಡಿಕೊಳ್ಳುವ, ಎಂದು ಬಹಳ ಮಂದಿ ಕೊಂಗ್ರೆಸ್ಸಿಗರು ತೊಂಗ್ರೆಸ ಎಂದಾಳುಗಳಿಗೆ ಆಗ್ರಹ ಮಾಡುತ್ತಿದ್ದಾರೆ ಸುಭಾಷ್ಚಂದ್ರ ಮಹಾತ್ಮರ ತಂತ್ರದಿಂದ ನಡೆಯುತ್ತಿರುವ ಕೊಂಗ್ರೆಸ ಕಾರ್ಯಕಾರಿ ಮಂಡಳಿವು ಏಕೆ ಆಹಿಂಸಾತ್ಮಕ ಸತ್ಯಾಗ್ರಹ ಸಮರದ ಪಂಬಾನಾದವನ್ನು ಮಾಡುವದಿಲ್ಲೆಂದು ಅವರು ತೀವ್ರ ಉತ್ಕಂಠೆಯಿಂದ ಆಕುರತೆಯಿಂದ ಕೇಳುತ್ತಿದ್ದಾರೆ ಇಂಥವರಿಗೆ ಮಹಾತ್ಮರು ಕಳವಳ ಬಾರದೆ ಜೊಕ್ಕ ಉತ್ತರ ಕೊಟ್ಟಿದ್ದಾರೆ ಒಳ್ಳೆ ಉಪಾಮ ಉತ್ತಾಹದಿಂದ ಇಲ್ಲವೇ ಉಚ್ಚೃಂಖಲ ವೃತ್ತಿಯ ವೀರೋತ್ಸಾಹದಿಂದ ಸತ್ಯಾಗ್ರಹ ಸಮರವನ್ನಾರಂಭಿಸಲು ತಾವು ರಾಷ್ಟ್ರೀಯ ಸಭೆಗೆ ಸಲಹೆ ಕೊಡಲಾರೆವೆಂತಲೂ, ಸಮರ ಹೂಡುವ ಮೊದಲು ರಾಷ್ಟ್ರೀಯ ಸಭೆಯ ಸಮಸ್ತ ಸಭಾಸದರು ಅಂತಃಶುದ್ಧಿಯನ್ನು ಪಡಾದಿ ಕೊಳ್ಳುವದು ಒತ್ತರವಿರುತ್ತದೆಂತಲೂ, ಜಾತಿಮತ ಸಿದ್ಧತೆಯಿಲ್ಲದ ಏಪೇಕ್ಷಿತದಿಂದ ಸತ್ಯಾಗ್ರಹವನ್ನಾ ರಂಭಿಸಿದರೆ ನಾವು ಸರ್ವಾಗ ಯಾರೀ ಜಗಳವನ್ನು ಹೂಡಿದ ಪಾಪಕ್ಕೆ ಗುರಿಯಾಗುವೆವೆಂದೂ ಮಹಾತ್ಮರು ರಾಷ್ಟ್ರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ ರಾಷ್ಟ್ರೀಯ ಸಭೆಯನ್ನು ಪರಿಶುದ್ಧ ಮಾಡಿದನಕ, ರಾಷ್ಟ್ರದಲ್ಲಿ ಒಕ್ಕಟ್ಟುಂಟು ಮಾಡಿತಂದನಕ, ರಾಷ್ಟ್ರೀಯ ಸಭೆಯ ಸಾಮರ್ಥ್ಯವು ದೃಢಮೂಲವಾದನಕ ಮಹಾತ್ಮರು ರಾಷ್ಟ್ರೀಯ ಸಭೆಗೆ ಸಮರ ಹೂಡುವ ಆಜ್ಞೆಯನ್ನೀಯಲು ಒಪ್ಪಲಾರರು

ಸತ್ಯಾಗ್ರಹವೊಂದು ಹೊಸ ಸಂಗ್ರಾಮ ನೀತಿ, ಹೊಸ ಯುದ್ಧ ಕ್ರಮ ಮಹಾತ್ಮರೇ ಆ ಯುದ್ಧದ ರೀತಿ ನೀತಿ ಕ್ರಮಗಳ ಜನಕರು ಹಿಂದೆ ಅನೇಕಾನೇಕ ಸತ್ಯಾಗ್ರಹವನ್ನು ಹೂಡಿ ಅನುಭವ ಹೊಂದಿದ ವೀರಾಗ್ರಣಿಗಳು ಮಹಾತ್ಮರೇ! ಸತ್ಯಾಗ್ರಹ ಸಮರವನ್ನು ಸುರಿ ರೀತಿಯಿಂದ ನಡಿಸಲಿಕ್ಕ, ಸತ್ಯಾಗ್ರಹ ಶಾಸ್ತ್ರದ ತತ್ವಗಳಾನುಸಾರವಾಗಿ ಅದನ್ನು ವ್ಯವಹರಿಸುವದಕ್ಕೆ ಮತ್ತು ಮುಂದುರಿಸಲಿಕ್ಕೆ ಅವರಿಗಿಂತ ಸಮರ್ಥರು ಸಿದ್ಧತೆ ರಾಷ್ಟ್ರದಲ್ಲಿ ಇಂದೇ ಇಲ್ಲವೆಂದು ನಿರ್ಧರಿಸುವ ಅಧಿಕಾರ ಮಹಾತ್ಮರಿಗೇ ಒಪ್ಪಿಪೆ ಆಜ್ಞಾಪಿಸಲು ಸ್ಪಷ್ಟಕ ಸಮಯವಲ್ಲಿ ರಾಷ್ಟ್ರಕ್ಕೆ ಮುಂದಿನ ಮಾರ್ಗ ತೋರಿಸಿಕೊಡುವ ಹಾಗೂ ರಾಷ್ಟ್ರೀಯ ಸಭೆಯ ಕಾರ್ಯ ಸಮರ ನೀತಿಯನ್ನು ನಿರ್ಧರಿಸುವ ಸರ್ವಾಧಿಕಾರವನ್ನು ಕೊಂಗ್ರೆಸ್ಸ ಕಾರ್ಯಕಾರಿ ಮಂಡಳಿವರು ಮಹಾತ್ಮರಿಗೆ ಒಪ್ಪಿಸಿರುತ್ತಾರೆ ಮತ್ತು ಮಹಾತ್ಮರ ಆಜ್ಞೆಯಂತೆ ನಡೆಯಲಿಕ್ಕ ರಾಷ್ಟ್ರಕ್ಕೆ ಉಪದೇಶ ಮಾಡಿ ಸ್ತಿದ್ದಾರೆ

ಮಹಾತ್ಮರು ಕಳೆದ ಬುಧವಾರ ಹೊರಡಿಸಿದ ಒಂದು ಸ್ಪಷ್ಟಿಕರಣೆಯಲ್ಲಿ, ಇದೀಗ ಸತ್ಯಾಗ್ರಹವನ್ನು ಪ್ರಾರಂಭಿಸಲು ಮೂರು ಅಡಚಣಿಗಳಿವೆಯೆಂದು ಸ್ಪಷ್ಟ ಮಾಡಿದ್ದಾರೆ ಅವ್ಯಾವವೆಂದರೆ (೧) ಸರ್ಕಾರಿ ಪತ್ರಿಕೆಗಳು ಒಟ್ಟಂದದ ಪ್ರಯತ್ನಗಳನ್ನು ನಡಿಸುತ್ತಿರುವ ಕಾಲಕ್ಕೆ ಸತ್ಯಾಗ್ರಹವನ್ನು ಪ್ರಾರಂಭಿಸಲಾಗದು, (೨) ಮುಸ್ಲಿಮ್ ಲೀಗಿನವರು ರಾಷ್ಟ್ರೀಯ ಸಭೆಗೆ ವಿರೋಧ ಮಾಡುತ್ತಿರುವಾಗ ಸತ್ಯಾಗ್ರಹ ಹೂಡುವದು ಪ್ರಶಸ್ತವಾಗಲಾರದು, ಮತ್ತು (೩) ರಾಷ್ಟ್ರೀಯ ಸಭೆಯಲ್ಲಿ ಜವಿಧೇಯತನವು ಅಶ್ಯಕ್ಕವೂ ಹೆಚ್ಚಿಕೊಂಡಿರುವಾಗ ಸತ್ಯಾಗ್ರಹ ಹೂಡುವದು ಸಾಧ್ಯವಿಲ್ಲ ಹೀಗೆ ಮಹಾತ್ಮರು ಸತ್ಯಾಗ್ರಹ ಸಮರ ಪ್ರಾರಂಭಿಸಲು ತ್ರಿವಿಧ ಅಡಚಣಿಗಳಿವೆಯೆಂತಲೂ ಆ ಅಡಚಣಿಗಳ ಪರಿಹಾರವಾಗುವವರೆಗೆ ತಾವು ಸತ್ಯಾಗ್ರಹವನ್ನು ಪ್ರಾರಂಭಿಸಲಾರೆವೆಂತಲೂ ಸ್ಪಷ್ಟವಾಗಿ ಸಾರಿರುತ್ತಾರೆ

ಇವುಗಳಲ್ಲಿ ಮೊದಲನೆಯ ಅಡಚಣಿಯು ಪರಾಧೀನವಾದದ್ದು, ಸರ್ವಾಧಿಪತಿಗಳನ್ನು ಹೊಂದಿಕೊಂಡದ್ದು ಪರಸ್ಪರ ವಿಚಾರವಿನಿಮಯದಿಂದ, ಸಂಧಿ ಮಾರ್ಗದಿಂದ ಧ್ಯೇಯಸಿದ್ಧಿಯಾಗದಿದ್ದರೆ ಮಾತ್ರ ಕೊನೆಗೆ ಸತ್ಯಾಗ್ರಹದ ಅಸ್ತ್ರವನ್ನು ಎಸೆಯತಕ್ಕದ್ದು, ಬೇರೆ ಮಾರ್ಗಗಳು ಇನ್ನೊತೆರೆದಿರುವಾಗ ಸತ್ಯಾಗ್ರಹದ ಒಡ್ಡವನ್ನು ಹಿರಿಯತಕ್ಕದ್ದಲ್ಲ ಹೀಗೆ ಮಹಾತ್ಮರ ಸತ್ಯಾಗ್ರಹ ಶಾಸ್ತ್ರದ ಮೊದಲನೆಯ ನಿಯಮವಿದೆ ಅವರಂತೆ ಸರ್ವಾಧಿಪತಿಗಳು ಪ್ರಾಮಾಣಿಕ ಬುದ್ಧಿಯಿಂದ ಒಪ್ಪಂದ ಮಾಡಿ ತರುವ ಪ್ರಯತ್ನಗಳನ್ನು ನಡಿಸುತ್ತಿರುವ ತನಕ ಸತ್ಯಾಗ್ರಹದ ಮಾತು ಎತ್ತ ತಕ್ಕದಲ್ಲವೆಂದು ಮಹಾತ್ಮರು ನುಡಿಯುವದು ಯುಕ್ತೋಚಿತವೇ ಸರಿ.

ಮಹಾತ್ಮರು ಹೇಳುವ ಎರಡನೆಯ ಅಡಚಣಿಯು ಮುಸ್ಲಿಮ್ ಲೀಗಿನ ವಿರೋಧದ್ದು ಮುಸ್ಲಿಮ್ ಲೀಗಿನವರು ಇದೀಗ ತಮ್ಮ ದೇಶಬಾಂಧವ ರಾದ ರಾಷ್ಟ್ರೀಯ ಸಭೆಯವರ ಮೇಲೆ ವಿಶ್ವಾಸ ಇಟ್ಟು ನಡೆಯುವವರೆಗೆ ಬದಲು "ಆತ್ಮಸಂರಕ್ಷಣೆ" ಗಾಗಿ, ತಮ್ಮವರ ಹಕ್ಕು-ಬಾಧ್ಯತೆಗಳ ರಕ್ಷಣೆಗಾಗಿ ಸರಸ್ಥ ಆಸರೆಸರ ಮೊರೆಹುಕ್ಕುತ್ತಿದ್ದಾರೆ! ರಾಷ್ಟ್ರೀಯ ಸಭೆಯು ಹೇಳುವಂತೆ ಬ್ರಿಟಿಶ ಸರಕಾರವರು ಹಿಂದೀ ಸ್ವಾತಂತ್ರ್ಯದ ಜಾಹೀರನಾಮೆ ಹೊರಡಿಸಿದರೆ, ರಾಷ್ಟ್ರೀಯ ಸಭೆಯ ಅಪೇಕ್ಷೆಗನುಸಾರವಾಗಿ ಬ್ರಿಟಿಶ ಸರಕಾರದವರು ಪ್ರಜಾಪ್ರತಿನಿಧಿ ಸಭೆಯ ಮುಖಾಂತರ ಹಿಂದೀ ರಾಜ್ಯಘಟನೆಯನ್ನು ತಯಾರಿಸಿಕೊಳ್ಳಲು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಟ್ಟರೆ ತಮ್ಮವರ ಹಿತಸಂಬಂಧಗಳು ಮುಳುಗಿ ಹೋಗಾವಂದು ಅವರು ಅಂಜುತ್ತಿದ್ದಾರೆ! ಅವರ ಭೀತಿ ಅಯಥಾರ್ಥವಿರಬಹುದು, ಇಲ್ಲವ ನಿರಾಧಾರವಿರಬಹುದು! ಆದೇನಿದ್ದರೂ ಮುಸ್ಲಿಮ್ ಲೀಗ ಪಕ್ಷಕ್ಕೆ ಇಂತಹ ಅಂಜಿಕೆಯೆಂಬುದಾಗಿದೆ ಇಲ್ಲವೆ ತಮಗೆ ಬಂಧ ಬೀತಿಯುಂಟಾಗಿದೆಯುಂದು ಒತರು ಹೇಳುತ್ತಾರೆ ಎಂಬ ಮಾತ್ರವು ನಾವು ಒಪ್ಪಬೇಕಾಗಿದೆ ಮುಸ್ಲಿಮ್ ಲೀಗಿನ ಈ ವಿರೋಧವನ್ನು ಲೆಕ್ಕಿಸದೆ ರಾಷ್ಟ್ರೀಯ ಸಭೆಯು ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹವನ್ನು ಹೂಡಿದರೆ ಆಗರಸರೊಡನೆ ಸೇರಿಕೊಂಡು ಲೀಗ ಪ್ರಭೃತಿ ಮುಸಲ್ಮಾನರು ರಾಷ್ಟ್ರೀಯಸಭೆಯವರೊಡನೆ ಹೋರಾಡಲಿಕ್ಕ ಸಿದ್ಧರಾದಾರೆಂಬ ಭೀತಿ ಮಹಾತ್ಮರಂಥ ವಿಶಾಲ ದೃಷ್ಟಿಯ ರಾಜಕಾರಣಪಟುಗಳಿಗೆ ಉಂಟಾಗಿರುತ್ತದೆ ಹಿಂದೆ ೧೯೩೧ರ ಆಸಹಕಾರದ ಆಂದೋಲನದಲ್ಲಾಗಲಿ, ೧೯೩೦-೩೪ರ ಕಾನೂನು ಭಂಗದ ಹೋರಾಟದಲ್ಲಾಗಲಿ ಮುಸಲ್ಮಾನ ಬಾಂಧವರು ರಾಷ್ಟ್ರೀಯ ಸಭೆಯವರಿಗೆ ವಿರೋಧ ಮಾಡಲು ಮುಂದೆ ಬಂದಿದ್ದಿಲ್ಲ ಆ ಕಾಲ ಈಗ ಉಳಿದಿರುವದಿಲ್ಲ ಈಗ ಬ್ರಿಟಿಶರ ಭೇದ ನೀತಿಯ ಪ್ರಯೋಗದಿಂದ ಲೀಗ ಪಕ್ಷದ ಮುಸಲ್ಮಾನರಿಗೂ ರಾಷ್ಟ್ರೀಯ ಸಭೆಯವರಿಗೂ ಒಂದು ತರದ ಹಗೆತನ ನೂಂಟಾಗಿದ ಈ ಹಗೆತನವನ್ನು ನಾವು ಸೌಹಾರ್ದ ಬಾವನೆಯಿಂದಲೂ ಪರಸ್ಪರ ಸಂಯಮಗಳ ನಿವಾರಣೆಯಿಂದಲೂ ಒಮ ತೆಗಯಬೇಕಾದುದು ನಮ್ಮ ಪ್ರದಮ ಕರ್ತವ್ಯವಾಗಿರುತ್ತದೆ ಮುಸಲ್ಮಾನ ಬಾಂಧವರಿಗೆ ಮುಸಲ್ಮಾನೇತರ ಸಮಾಜದವರಲ್ಲಿ ವಿಶ್ವಾಸವುಟು ಮಾಡುವದು ಅವರಿಗಾಗಿರುತ್ತದೆ

ಈ ದಿಶೆಯಲ್ಲಿ ಮಹಾತ್ಮರ ನೇತೃತ್ವದ ಕೆಳಗೆ ಕೊಂಗ್ರೆಸ ಮುಂದಾಳುಗಳು ಇದೀಗಲೇ ಪ್ರಯತ್ನ ನಡಿಸಿದ್ದಾರೆ ಆ ಪ್ರಯತ್ನಗಳು ಯಶಸ್ವಿಯಾಗಲೆಂದು ನಾವು ಹೆಗಲಿರುಸು ಪ್ರಾರ್ಥನೆ ಮಾಡುವಾ ಮತ್ತು ಸ್ವತಂತ್ರ ಹಿಂದುಸ್ತಾನದಲ್ಲಿ ಮುಸಲ್ಮಾನ ರಾಗಲಿ ಕ್ರಿಶ್ಚಿಯನ್ನರಾಗಲಿ, ಪಾರ್ಸಿಗಳಾಗಲಿ ತೀಬರಾಗಲಿ ಯಾರೂ ತಮ್ಮ ಹಕ್ಕು ಬಾಧ್ಯತೆಗಳ ರಕ್ಷಣೆಯ ಬಗ್ಗೆ ಸಂಶಯಪಡತಕ್ಕ ಕಾರಣವಿಲ್ಲವೆಂದು ನಮ್ಮ ಸಂಸ್ಥ ಬಾಂಧವರಲ್ಲಿ ನಂಬಿಗೆಯನ್ನುಂಟು ಮಾಡುವಂತೆ ನಮ್ಮ ಉಚ್ಚಾರ-ವಿಚಾರ-ಆಚಾರ ಗಳನ್ನು ಸರಿಪಡಿಸಿಕೊಳ್ಳುವಾ.

ಇನ್ನು ಮಹಾತ್ಮರ ಮೂರನೆಯ ಅಡಚಣೆ ಯೆಂದರೆ ರಾಷ್ಟ್ರೀಯ ಸಭೆಯಲ್ಲಿ ಇತ್ತೀಚೆಗೆ ತಲೆಯೆತ್ತಿರುವ ಅವಿಧೇಯತನ ಹಾಗೂ ಉಚ್ಛೃಂಖಲ ವೃತ್ತಿ ಈ ಅಡಚಣೆಯೇ ಮಹಾತ್ಮರ ಮಾರ್ಗದಲ್ಲಿ ಅಡ್ಡಬರುತ್ತಿರುವ ದೊಡ್ಡ ಅಡಚಣೆಯೆಂದು ನಾವು ಭಾವಿಸುತ್ತೇನೆ ಇತ್ತ ಎರಡು-ಮೂರು ವರ್ಷಗಳಲ್ಲಿ ರಾಷ್ಟ್ರೀಯ ಸಭೆಯಿಳಗೆ ಒಳ ಪಕ್ಷ-ಪಂಗಡಗಳು ಒಳ-ಜಗಳಗಳೂ ಬಹಳವಾಗಿವೆ. ಹಿಂದುಸ್ತಾನದಂಥ ವಿಶಾಲ ರಾಷ್ಟ್ರದಲ್ಲಿ, ರಾಷ್ಟ್ರೀಯ ಸಭೆಯಂಥ ಸರ್ವವ್ಯಾಪಿ ಸಂಸ್ಥೆಯಲ್ಲಿ ಪಕ್ಷ-ಪಂಗಡಗಳು ಇರುವದು ಸೋಜಿಗವಲ್ಲ, ಅಸ್ವಾಭಾವಿಕವೂ ಅಲ್ಲ ಕೇವಲ ತತ್ವಗಳ ನೈಷ್ಠಿಯಿಂದ ಈ ಪಕ್ಷ-ಪಂಗಡಗಳು ಅಸ್ತಿತ್ವದಲ್ಲಿ ಬರುತ್ತಿದ್ದರೆ, ಇಲ್ಲನೆ ರಾಷ್ಟ್ರೀಯ ಸಭೆಯ ಗೌರವಕ್ಕೂ, ಸಂಘಶಕ್ತಿಗೂ ಒಳ್ಳಕ್ಕೂ ಹಾನಿಯಾಗದಂತೆ ಕೆಲಸ ಮಾಡುತ್ತಿದ್ದರೆ ಯಾವುದೂ ವ್ಯಸನ ಪಡತಕ್ಕ ಪ್ರಸಂಗವುರುತ್ತಿದ್ದಿಲ್ಲ ಮಹಾತ್ಮರು ಇದನ್ನೇ ಹೇಳುತ್ತಾರೆ "ಈ ಪಕ್ಷ-ಪಂಗಡಗಳು ಕೇಂದ್ರದ ಕಡೆ ಸೆಡೆಯುತ್ತಿರುವವೋ ? ಕೆಂದ್ರ ಬಿಟ್ಟು ಓಡುತ್ತಿರುವವೋ? ಅವು ರಾಷ್ಟ್ರ ಸಭೆಯ ಸಾಮರ್ಥ್ಯವನ್ನು ಬೆಳಸುತ್ತಿನೆಯೋ ಕುಗ್ಗಿಸುತ್ತಿವೆ? ಈ ಪಕ್ಷ-ಪಂಗಡಗಳು ಸರಸ್ವರ ವಿಶ್ವಾಸವಿಲ್ಲದೆ, ಅಧಿಕಾರಸ್ಪರ್ಧಿಗಾಗಿ ಹೆಣಗಾಡುತ್ತಿರುವ ದಿಲ್ಲವೇ? ಅವು ರಾಷ್ಟ್ರೀಯ ಸಭೆಗೆ ವಿಧೇಯವಾಗಿ ಶಿಸ್ತಿನಿಂದ ನಡೆಯಲು ಸಿದ್ಧವಿರುವರೇ?' ಎಂದು ಮಹಾತ್ಮರು ಕೇಳುತ್ತಾರೆ ಈ ಪ್ರಶ್ನೆಗಳಿಗೆ ಆಲೋಚಾತ್ಮಕ ಉತ್ತರ ದೊರೆಯುವದೆಂದು ಮಹಾತ್ಮರು ತಿಳಿಯುವದಿಲ್ಲ ಈ ಪಕ್ಷ-ಪಂಗಡಗಳ ಮೂಲಕ ರಾಷ್ಟ್ರೀಯ ಸಭೆಯ ಶಕ್ತಿಯು ಕುಂದಿ ಹೋಗಿದೆ ಯೆಂದು ಮಹಾತ್ಮರ ಅಭಿಪ್ರಾಯ ರಾಷ್ಟ್ರೀಯ ಸಭೆಯು ತನ್ನ ಮುಂದಿಟ್ಟಿರುವ ಅಹಿಂಸಾ ತತ್ವದ ಮೇಲೆ ಸಮಸ್ತ ರಾಷ್ಟ್ರೀಯ ಸಭೆಯ ಸದಸ್ಯರಿಗೆ, ದೃಢವಾದ ಶ್ರದ್ಧೆಯಿರುತ್ತಿದ್ದರೆ, ಇವರು ಕಾರ್ಯ, ವಾಚಾ, ಮನಸಾ ಅಹಿಂಸೆಯನ್ನು ಪಾಲಿಸುತ್ತಿದ್ದರೆ ಇಂಥ ಅನವಸ್ಥೆ ಎಂದೂ ಕಂಡುಬರುತ್ತಿದ್ದಿಲ್ಲವೆಂದು ಮಹಾತ್ಮರು 'ಹರಿಜನ' ಪತ್ರಿಕೆಯಲ್ಲಿ ಹೇಳಿರುತ್ತಾರೆ ಮತ್ತು ರಾಷ್ಟ್ರೀಯ ಸಭೆಯಲ್ಲಿ ಅಹಿಂಸೆಯ ಮೇಲೆ ಶ್ರದ್ಧೆಯುಳ್ಳವರೆಷ್ಟು ಮತ್ತು ಶ್ರದ್ಧೆಯಿಲ್ಲದವರೆಷ್ಟು ಹಾಗು ತಮ್ಮ ಉಪದೇಶಕ್ಕೆ ಇಲ್ಲವೆ ಆಪ್ತವಚನಗಳ ಆಪ್ತಫಲಗಳಿಗೆ ತಲೆಬಾಗಿ ವಿಧೇಯತನದಿಂದ ನಡೆಯಲಿಕ್ಕೆ ಸಿದ್ಧವರಿರುವೆಷ್ಟು ಮತ್ತು ಹಾಗೆ ನಡೆಯಲು ಒಪ್ಪದವರೆಷ್ಟು ಎಂಬದನ್ನು ತಿಳಿಕೊಳ್ಳಲು ಮಹಾತ್ಮರು ಇದೀಗ ಪ್ರಯತ್ನ ನಡಿಸಿದ್ದಾರೆ ರಾಷ್ಟ್ರೀಯ ಸಭೆಯವರು ತಮ್ಮ ತಮ್ಮೊಳಗೆ ಜಗಳಾಡಲಿತ್ಯಾಗಲಿ, ಅವಿಧೇಯತನದಿಂದ ವರ್ತಿಸಲಿಕ್ಕಾಗಲಿ ಈಗ ಸಮಯವಲ್ಲೆಂದು ಅವರು ಎಚ್ಚರಿಕೆ ಕೊಡುತ್ತಾರೆ. ಸಮಸ್ತ ರಾಷ್ಟ್ರೀಯ ಸಭೆಯ ಸಜ್ಜನರು ದೃಢ ನಿರ್ಶ್ಚಯದಿಂದ, ಒಮ್ಮನಸ್ಸಿನಿಂದ, ತಮ್ಮ ನಾಯಕನಿಗೆ ಪೂರ್ಣ ವಿಧೇಯರಾಗಿ ನಡೆಕೊಂಡರೆ ಯಶಸ್ವೀ ಹೋರಾಟ ನಡಿಸಲು ಸಾಧ್ಯವಾದೀತೆಂದು ಅವರು ರಾಷ್ಟ್ರಕ್ಕೆ ಮುಂಜಾಗ್ರತೆ ಕೊಟ್ಟಿದ್ದಾರೆ ಸರದಾರ ವಲ್ಲಭಭಾಯಿ ಪಟೇಲರವೂ ಹೀಗೆಯೇ ಬೋಧಿಸುತ್ತಿದ್ದಾರೆ. "ಎಲ್ಲ ಕೊಂಗ್ರೆಸ ಜನರು ಒಂದೇ ದನಿಯಿಂದ ಮಾತಾಡಬೇಕು; ತಮ್ಮೊಳಿಗಿನ ವೈಷಮ್ಯಗಳನ್ನೂ ಒಳ ಜಗಳಗಳನ್ನೂ ಮರೆತುಹೋಗಬೇಕು ಸ್ವಯಂಸೇವಕರ ಮೇಲೆ ವಿಶೇಷ ಹೊಣೆಯಿದೆ ಯಾವ ಸ್ಥಳದಲ್ಲೂ ರಾಷ್ಟ್ರೀಯ ಸಭೆಯ ಆಜ್ಞೆಯ ಭಂಗವಾಗಲಿಕ್ಕೆ ತಮ್ಮೆ, ರಾಷ್ಟ್ರೀಯ ಸಭೆಯ ಅಪ್ಪಣೆಗಳು ವಾಲಿಸಲ್ಪಡುವಂತೆ ಅವರು ದಕ್ಷತೆಯನ್ನು ಕೊಳ್ಳಬೇಕು" ಹೀಗೆ ಸರದಾರ ಪಟೇಲರವರು ನುಡಿಯುತ್ತಾರೆ ರಾಷ್ಟ್ರದ ದುರ್ದೈವದಿಂದ ಇದೀಗ ರಾಷ್ಟ್ರೀಯ ಸಭೆಯಲ್ಲಿ ಇಂಥ ಸಂಘಟನೆ, ಇಷ್ಟು ಆತ್ಮ ವಿಶ್ವಾಸ, ಇಷ್ಟು ಶಿಸ್ತು ಪಾಲನೆಯ ಪ್ರವೃತ್ತಿ ಕಂಡು ಬರುವದಿಲ್ಲ ಕೊಂಗ್ರೆಸಿಗರೆಲ್ಲಾಗೆ ಅದಿಕಾರಕ್ಕಾಗಿ, ಆತ್ಮಪ್ರತಿಷ್ಠೆಗಾಗಿ ಪೈಪೋಟಿಯಾಗುವ ಪ್ರವೃತ್ತಿಯೇ ಈಗ ಹೆಚ್ಚಾಗಿದೆ ಇನ್ನಿತರ ವ್ಯಾಂಶಗಳ ಮಾತನ್ನು ಬಿಟ್ಟುಕೊಟ್ಟು, ನಮ್ಮ ಕರ್ನಾಟಕ ಸ್ವಾಂತವನ್ನೆಜ್ಜೆಗೆ ಪರೀಕ್ಷಿಸಿದರೂ ಮಯಿಲ್ಕುರು ಹೇಳುವ ದೋಷಗಳೆಲ್ಲ ನಮ್ಮ ಕರ್ನಾಟಕ ಕೊಂಗ್ರೆಸ ಅಭಿಮಾನಿಗಳಲ್ಲಿ ಅಧಿಪಾ ಕೊಂಗ್ರೆಸ ಅಭಿಮಾನಿಗಳೆಂದು ಹೇಳಿಸಿಕೊಳ್ಳುವವರಲ್ಲಿ ತುಂಬಾ ಬೇರೂರಿಕೊಂಡಿರುವದು ಕಂಡು ಬರದಿರಲಾರದು ಕೊನೆಗೆ ಜನರಲ್ಲಿ ಈ ಪ್ರಕಾರ ಈರ್ಷ, ಅಸೂಯೆ ಸ್ವಸ್ಥರು, ಅಧಿಕಾರಲಾಲಸೆ ಮುಂತಾದ ದೋಷಗಳು ಹೆಚ್ಚಾಗಿ ರಾಷ್ಟ್ರೀಯ ಸಭೆಯ ಸಾಮರ್ಥ್ಯವೂ ಸಂಘಶಕ್ತಿಯೂ ಹ್ರಾಸಗೊಂಡಿದೆಯೆಂದು ನಾವು ಒಪ್ಪಬೇಕಾಗಿದೆ ಈ ಪರಿ ರಾಷ್ಟ್ರೀಯ ಸಭೆಯಲ್ಲಿ ಅನವಸ್ಥೆಯುಂಟಾಗದೆ ರಾಷ್ಟ್ರೀಯ ಸಭೆಯೊಳಗಿನ ಸಮಸ್ತರೂ ಪರಸ್ಪರ ವಿಶ್ವಾಸದಿಂದ, ಒಕ್ಕಟ್ಟಿನಿಂದ ಮತ್ತು ವಿಧೇಯತನದಿಂದ ನಡೆಯುತ್ತಿದ್ದರೆ, ನಡೆಯಲು ಸಿದ್ಧರಾಗುತ್ತಿದ್ದರೆ ರಾಷ್ಟ್ರೀಯ ಸಭೆಯ ಬೇಡಿಕೆಯನ್ನು ತಿರಸ್ಕರಿಸಲಿಕ್ಕೆ ಸರ್ಕಾರಿಪಕ್ಷಿಗೆ ಗಾಗಲಿ ಬ್ರಿಟಿಶ ಸರಕಾರಕ್ಕಾಗಲಿ ಎಂದೂ ಧೈರ್ಯ ಬರುತ್ತಿದ್ದಿಲ್ಲವೆಂದು ನಮಗನಿಸುತ್ತಿದೆ ಅಷ್ಟೇ ಅಲ್ಲ, ಈಗಲಾದರೂ ರಾಷ್ಟ್ರೀಯ ಸಭೆಯ ವರು ಒಂದೇ ಧ್ವಜದಡಿ, ಒಂದೇ ನಾಯಕನ ನೇತೃತ್ವದಲ್ಲಿ ಮತ್ತು ಒಂದೇ ಧ್ಯೇಯದಿಂದ ಹೋರಾಡಲು ಸಿದ್ಧರಾಗುವದಾದರೆ ಸತ್ಯಾಗ್ರಹ ಸಮರದ ಅವಶ್ಯಕತೆಯೇ ಬೀಳಲಿಕ್ಕಿಲ್ಲವೆಂಕಲೂ, ಸಮರದಿಳವ ಪ್ರಸಕ್ತತೆಯಿಲ್ಲದೆ ನಮ್ಮ ಧ್ಯೇಯವನ್ನು ಸಾಧಿಸಬಹುದು ದೆಂತಲೂ ನಾವು ವಿಶ್ವಾಸದಿಂದ ಹೇಳಬಲ್ಲೆವು

ಆದ್ದರಿಂದ ಮಹಾತ್ಮರು ಹೇಳುವಂತೆ ಸಮಸ್ತ ರಾಷ್ಟ್ರೀಯ ಸಭಾಭಿಮಾನಿಗಳು ಅಂತರ್ಮುಖರಾಗಿ ಅಂತಶ್ಶುದ್ಧಿಯನ್ನು ಮಾಡಿಕೊಳ್ಳಬೇಕೆಂದೂ, ರಾಷ್ಟ್ರೀಯ ಸಭೆಯವರಲ್ಲಿ ಕಂಡುಬರುವ ಸಮಸ್ತ ದೋಷಗಳನ್ನು ನಿರ್ಮೂಲಿಸಬೇಕೆಂದೂ ರಾಷ್ಟ್ರೀಯ ಸಭೆಯ ಎಲ್ಲ ಅಂಗಾಂಗಗಳನ್ನು ಸಂಘಟಿಸಿ ರಾಷ್ಟ್ರೀಯ ಸಭೆಯ ಸಾಮರ್ಥ್ಯವನ್ನು ಬೆಳಿಸಬೇಕೆಂತಲೂ, ನವಾಸ್ತ ರಾಷ್ಟ್ರೀಯ ಸಭೆಯ ಕಾರ್ಯಕರ್ತರೊಳಗೆ ಶಿಸ್ತು, ತತ್ವನಿಷ್ಠೆ, ವಿಧೇಯತನ ಮತ್ತು ನಿಸ್ವಾರ್ಥ ರಾಷ್ಟ್ರಸೇವಾ ತತ್ಪರತೆ ಒಡಮೂಡುವಂತೆ ಪ್ರಯತ್ನಿಸತಕ್ಕದ್ದೆಂತಲೂ ನಾವು ಸೂಚಿಸದಿರಲಾರೆವು ರಾಷ್ಟ್ರೀಯ ಕಾರ್ಯಕರ್ತರು ಈ ಪ್ರಕಾರ ಸಂಘಟಿತರಾದರೆ ಮಹಾತ್ಮರು ಆನಂದದಿಂದ, ವಿಶ್ವಾಸದಿಂದ ಸಮರ ಹೂಡಲು ಮುಂಪಾದಾರು ಆದ್ದರಿಂದ ಸ್ವಾತಂತ್ರ್ಯ ಸಮರದ ಉತ್ಕರ್ಷೆಯುಳ್ಳವರೆಲ್ಲರೂ ಕೂಡಲೆ ಸಂಘಟನೆಯ ಕಾರ್ಯಕ್ಕೆ ತೊಡಗಬೇಕಾಗಿ ನಮ್ಮ ಪ್ರಾರ್ಥನೆಯಿದೆ

ಮುಂದಿನ ವಾರ ಪೋರ ಸಂಗ್ರಾಮ?

[ನಿರೀಕ್ಷಕನು ಬರೆದುದು]

ಕಳೆದ ವಾರ ನಾನು ಪಶ್ಚಿಮ ರಣಭೂಮಿಯಲ್ಲಿ ಹೋರಾಟಕ್ಕೆ ಯುದ್ಧ ಕಂಡುಬರುವದಿಲ್ಲವೆಂದು ನಮೂದಿಸಿದ್ದೆ! ಮತ್ತು ಹೋರಾಟವಿಲ್ಲದೆ ಯುದ್ಧ ಕೊಡುವ ಪ್ರವೃತ್ತಿಯೇ ಕಂಡುಬರುತ್ತಿದೆಯೆಂದು ತಿಳಿಪಡಿಸಿದ್ದೇನೆ! ಆದರೆ, ಇದೀಗ ತಿಳಿದುಬಂದ ವಾರ್ತೆಗಳನ್ನು ಪರ್ಯಾಲೋಚಿಸಿದರೆ ಇನ್ನು ೪-೬ ದಿನಗಳಲ್ಲಿ ಜರ್ಮನ್ ಸೈನಿಕರು ಸ್ಟಿಯೆಲ್‌ಲಂಡ ಗಡಿಯಿಂದ ಉತ್ತರ ಸಮುದ್ರದ ತನಕ ಅಂದರೆ ಜರ್ಮನಿಯ ಇತೀ ಪಶ್ಚಿಮ ಗಡಿಯ ಮೇಲೆ ಘನಘೋರ ಸಂಗ್ರಾಮವನ್ನು ಹೂಡಲು ನಿಶ್ಚಯಿಸಿದ್ದಾರೆಂದು ಕಂಡುಬರುತ್ತಿದೆ. ಹಿಟ್ಲರನಿಗೆ ಈಗ ಫೈಂಡರ ಮೇಲೆ ಆಪತ್ಪ ಬಿಟ್ಟಿಲ್ಲ ಅವನ ಎಲ್ಲ ಸಿಟ್ಟು ಬ್ರಿಟಿಶರ ಮೇಲೆ! ಬ್ರಿಟಿಶರೇ ತನ್ನ ನಿಜವಾದ ಹಗೆಗಳೆಂದೂ ಬ್ರಿಟಿಶರ ಮೇಲೆ ಸಾಗಿ ಹೋಗಿ ಬ್ರಿಟಿಶ ನಗರಗಳನ್ನು ಉಧ್ವಸ್ತ ಗೊಳಿಸದೆ ಅವಶ್ಯಕವಿರುತ್ತದೆಂತಲೂ ಆತ ಬಗೆದಿದ್ದಾನೆ! ಆದ್ದರಿಂದ ಒಮ್ಮೆಲೇ ನೂರಾರು ವಿಮಾನುಗಳನ್ನು ಬ್ರಿಟನ್ನಿನ ಮೇಲೆ ಜಾಂಬುಗುಂಡುಗಳ ವರ್ಷ ಗೈರೆಯಲು ಕಳಿಸಿಕೊಟ್ಟು ಬ್ರಿಟಿಶರಿಗೆ "ತ್ರಾಹಿ ತ್ರಾಹಿ" ಮಾಡಿಬಿಡಬೇಕೆಂದು ಆತನು ಹವಣಿಸಿರುತ್ತಾನೆ. ಜರ್ಮನಿಯಲ್ಲೇ ವಿಮಾನುಗಳ ಉತ್ಪಾದನೆಯನ್ನು ಬ್ರಿಟನ್ನಿನ ಮೇಲೆ ದಾಳಿ ಮಾಡುವದು ಶಕ್ಯವಿಲ್ಲೆಂದೂ ಬೆಲ್ಜಿಯಮ್ ಇಳುವಿಕೆ ಹೊಲಂಡ ದೇಶದ ಮೇಲೆ ವಿಮಾನುಗಳನ್ನು ಇಡುವ ವ್ಯವಸ್ಥೆಯಾದರೆ ಮಾತ್ರ ಆಕಾಶ ಮಾರ್ಗವಾಗಿ ಇಂಗ್ಲಂಡದ ಮೇಲೆ ದಾಳಿ ನಡಿಸಬಹುದೆಂತಲೂ ಹಿಟ್ಲರನ ಲಕ್ಷ್ಯದೀಕ್ಷೆ ಸಲಹೆಗಾರರು ಅಭಿಪ್ರಾಯಪಟ್ಟಿದ್ದಾರೆಂದೂ, ಹಿಟ್ಲನು ಇದೀಗ ಬೆಲ್ಜಿಯಮ್ ಮತ್ತು ಹೊಲಂಡ ದೇಶಗಳ ಮೇಲೆ ದಾಳಿ ನಡಿಸಿ, ಆ ದೇಶಗಳನ್ನು ಆಕ್ರಮಿಸುವ ಉದ್ಯೋಗ ಕೈಕೊಂಡಿರುವನೆಂದು ತಿಳಿದುಬರುತ್ತಿದೆ. ಹಲವು ದಿನಗಳಿಂದಲೂ ಜರ್ಮನ್ನರು ಬೆಲ್ಜಿಯಮ್ ಮತ್ತು

(ಇಗನೇ ಪಾಪಿನ ಮೇಲೆ ಮುಂದರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ಹವೆಯು ವಿಚಿತ್ರವಾಗಿನೆ ಒಂದೊಂದು ದಿನ ಚಲೋ ಚಳಿ ಬೀಳುತ್ತಿದೆ ಒಂದೊಂದು ದಿನ ಕಕೆಯಾಗುತ್ತಿದೆ! ಊರಲ್ಲಿ ವಿಷಮಜ್ವರ ಜಲಿಸ್ಸಾರೆ ಮೊದಲಾದ ಬೇನೆಗಳ ಹಾವಳಿ ನಡೆದಿದೆ ಬುತ್ತುಗಳ ಈ ಸಂಧಿ ಕಾಲದಲ್ಲಿ ಜನರು ಜಾಗ್ರತೆಯಿಂದ ನಡೆದಪ್ಪು ಕಡಿಮೆ

ಹೊಸ ಪ್ರಾಂತಾಂಜೇಬಲ್ ಡಿ ರಾಜ್ಯವು ಮುಖ್ಯವಾಗಿ ಅಲ್ಲಿಯ ಚಿತನುಂಗಲಕರರವರು ಇದೀಗ ಈಲ್ಲರ್ಲಿ ಮುಖ್ಯವಾ ಮಾಡಿದ್ದಾರೆ ಅಲ್ಲಿಯ ಜೇಸಾಯ ಪ್ರಯೋಗಗ ಹೊಲದ ಸಲ ಪಾಗಿ ಈ ವರೆಗೆ ಸರ ಕಾರದವರು ಗೇಣಿಗೆ ಪಡೆಕೊಂಡಿರುವ ಹೊಲ ಭೂಮಿಗಳನ್ನು ಎಕಾಯರ ಮಾಡುವ ಪ್ರಕರಣ ನಡೆದಿರುತ್ತಿದ್ದು ವಿಶೇಷವಾಗಿ ಆ ಪ್ರಕರಣದ ಸವಾಲೋಚನೆಗಾಗಿಯೇ ಸಚಿವರು ಇಲ್ಲಿ ಬಂದಿದ್ದಾರಂತೆ ಕೆಲ ವರ್ತಕರು ಪಾರಕ್ಕೆ ನಿಯಂತ್ರಣದ ಹುಕುಮುಗಳನ್ನು ಉಲ್ಲಂಘಿಸಿ ಗಿರಿಕಿಗಳಿಂದ ಮಿಕಿಪಾರು ಬೆಲೆ ಪಡಕೊಳ್ಳುತ್ತಾರೆಂದು ಕೆಲವರು ಬೆಲ್ಲಾಧಿಪತಿಗಳ ಕಡೆ ದೂರಿಕೊಂಡಿದ್ದರಾಗಿ ತಿಯು ತ್ತಿದೆ ಆ ದೊಡ್ಡಗಳ ಬೊಕ್ಕಿಯನ್ನೂ ಸ್ಯಾಂತ ಸಾಹೇಬರು ಮಾಡುತ್ತಿದ್ದಾರೆ

ದೀವಾನಗಿರಿಯ ಹುದ್ದೆ ನಿಮಿತ್ತ ಶ್ರೀ ಪಾಂತೇಂ ಕ ಮಾಕ್ತಿ ದೇವಸ್ಥಾನದಲ್ಲಿ ರಾ। ಮುಕುಂದಂಗ ಶಿರಸಿಬವಾರರ ವರ ಕೀರ್ತನೆಗಳನ್ನೂ, ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ರಾ। ವಿಷ್ಣುನಂದರ ಶ್ರೀ ವೆಂಕಟಗಿರಿ ಮಹಾತ್ಮೆಯ ಸಪ್ತಾಹವೂ ನಡೆಯುತ್ತಲಿವೆ ರಾ ಶಿರಸಿಯ ಬುವಾರರವರ ಕೀರ್ತನೆಗಳಲ್ಲಿಯು ಬಹಳ ಚಿತ್ರವೇಧಕವಾಗಿರುವುದು ಆವರ ಕೀರ್ತನೆ ಕೇಳಲು ಜನರು ಗುಂಪುಗುಂಪಾಗಿ ನೆರೆತ್ತಿರುವರು

ಮೊನ್ನೆ ಶುಕ್ರವಾರ ರಾತ್ರಿ ಹಳಕ ರವೆಗಳಿಗೆಯ ಒಂದು ಆಂಗಡಿಯಲ್ಲಿ ಮಧ್ಯರಾತ್ರಿಯ ಸಮಯ ಪರೆಯದವರಿಬ್ಬರು ಮಾಡಿದ ಮೇಲಿಂದ ಆಂಗಡಿಯೊಳಗಿಂದು ಕಳವು ಮಾಡುವ ಪ್ರಯತ್ನದಲ್ಲಿದ್ದರು ಆಷ್ಟರೊಳಗೆ ಆಂಗಡಿಕಾರನು ಎಚ್ಚತ್ತು ತನ್ನ ನೆರೆಯ ಸಹಾಯದಿಂದ ಕಳ್ಳರು ಪ್ರವೇಶ ಮಾಡಿದ ಮಾರ್ಗದಿಂದಲೇ ಆಂಗಡಿಯೊಳಗೆ ಪ್ರವೇಶ ಮಾಡಿ ಆ ಕಳ್ಳರನ್ನು ಅಲ್ಲಿಯೇ ಕಟ್ಟಿ ಪ್ಪನು ಮತ್ತು ಪೋಲೀಸರಿಗೆ ವರದಿ ಕೊಟ್ಟನು ಆದರಂತೆ ಅಲ್ಲಿಂದ ಪೋಲೀಸರು ಹೋಗಿ ಪಂಚನಾಮೆ ಮಾಡಿ ಆ ಕಳ್ಳರಿಗೆ ಸೆರೆಹಿಡಿದು ತಂದಿಟ್ಟಿದ್ದಾರೆ

ಈಕಡೆ ಸಪ್ತಂಬರ ತಿಂಗಳಲ್ಲಾದ ದ ಧಾ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಿಗೆ ಗೋಕರ್ಣ ಕೇಂದ್ರದಿಂದ ಪ್ರಥಮಾ ಪರೀಕ್ಷೆಗೆ ೨೧, ಮಧ್ಯಮಾ ಪರೀಕ್ಷೆಗೆ ೧೮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗೆ ೧೫, ಈ ರೀತಿ ೫೧ ವಿದ್ಯಾರ್ಥಿಗಳು ಕುಳಿತುಕೊಂಡಿದ್ದರು ಅವರಲ್ಲಿ ಅನುಕ್ರಮವಾಗಿ ೧೬ ೧೫ ಮತ್ತು ೧೩ ಕೂಡ ಆಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ ಉತ್ತೀರ್ಣರಾದವರಲ್ಲಿ ಮುಂದಿ ಶೆಷ್ಟು ಮಕ್ಕಳಿದ್ದಾರೆ

ಹೊನ್ನಾವರ— (ತಾ ೦೧ ೧೧ ೩೯) ಕಡತೋಕೆಯ ಶ್ರೀ ಸ್ವಯಂಭೂ ದೇವಸ್ಥಾನದಲ್ಲಿ ಬಹಳ ಅವ್ಯವಸ್ಥೆ ನಡೆದಿರುವುದು ಲೋಕವಾರ್ತೆ ಹಬ್ಬಿದೆ ಆ ಜನ ಮೊಕ್ತೇಸರರು ರಾಜಿನಾಮೆ ಕೊಟ್ಟಿರುತ್ತಾರೆ ಹೀಗಾಗಿ ದೇವಸ್ಥಾನದಲ್ಲಿ ಈಗ ಅನಾಯಕತ್ವ ಉಂಟಾಗಿದೆ ದೇವಾಲಯ ಕಮಿಟಿಯವರು ಬೇಗನೇ ಇತ್ತ ಲಕ್ಷ ಕೊಡೆಸಿ ಸುವ್ಯವಸ್ಥೆ ಮಾಡಿಕರಬೇಕಾಗಿ ಸೂಚನೆ ಯಿದೆ

ಅಂಕೋಲಾ— (ತಾ ೧೦ ೧೧ ೩೯) ಇಲ್ಲಿಯ ಸ್ಟೇಷನ್ ವರ್ತಕರಾದ ಶಾಂಭುರಂಗ ಅನಂತ ಭಟ್ಟ ಇವರ ಅನುಜ ಗೋಪಾಲಕೃಷ್ಣ ನೆಂಬವನು ಕಳೆದ ತಾ ೨ ನೇ ಶುಕ್ರವಾರ ಬೆಳಂಬಾರದೊಳಗಿನ ಹುಲಿದೇವರ ಗುಡ್ಡದ ಮೇಲಿನ ಬಂಡೆಗಲ್ಲಿನ ಕೆಳಗೆ ಆತ್ಮಹತ್ಯೆ ಮಾಡಿಕೊಂಡ ಹೃದಯವ್ಯಾಪಕ ವರ್ತಮಾನ ತಿಳಿಸಲು ಬಹಳ ವ್ಯಸನವಾಗುತ್ತಿದೆ ಗೋಪಾಲ ಕೃಷ್ಣನು ೨೦ ೨೨ ದಿನಗಳ ಹಿಂದೆ ಕಾರವಾರದೊಳಗೆ ತನ್ನ ಭಾವನ ಮನೆಗೆ ಹೋಗುತ್ತೇನೆಂದು ಮನೆಯವರಿಗೆ ಹೇಳಿ ಹೊರಟು ಹೋಗಿದ್ದನಂತೆ ಆ ನಂತರ ಆವನು ತಿರುಗಿ ಮನೆಗೆ ಬರಲೇ ಇಲ್ಲ ಶುಕ್ರವಾರ ಬೆಳಂಬಾರದಲ್ಲಿ ಆವನ ಶವ ಸಿಕ್ಕ ಸಂಗತಿ ತಿಳಿದೊಡನೆ ಮನೆಯವರಿಗೆ ಅಕ್ಷರಿತ ವಜ್ರಾಘಾತವಾಯಿತು! ಗೋಪಾಲಕೃಷ್ಣನು ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲಿ ಆವನ ಭಗವದ್ಗೀತೆ, ಶ್ರೀ ಗೋಪಾಲಕೃಷ್ಣ ದೇವರ ಭಾವಚಿತ್ರ ಮತ್ತು ಆವನೊಂದು ಪತ್ರ ಇಷ್ಟೆ ಸಿಕ್ಕಿದವು ಪತ್ರದಲ್ಲಿ ಗೋಪಾಲಕೃಷ್ಣನು ತಾನು ಮಾಡಿಕೊಂಡಿರುವ ಆತ್ಮಹತ್ಯೆಯ ಕಾರಣವರಂಪರೆಯನ್ನು ವಿಸ್ತಾರವಾಗಿ ಬರೆದಿಟ್ಟಿದ್ದಾನೆ ಆ ಪತ್ರದಲ್ಲಿ ಭಗವದ್ಗೀತೆಯೊಳಗಿನ ಪಾಸಾಂಸ ಜೇರ್ಣಾ ಯ ಯಾ ವಿಹಾಯ "ಎಂಬ ಶ್ಲೋಕವನ್ನು ಆನತರಿಸಿ ೨೯ ಬರೆ ಪ್ರಯೋಗಕ್ಕಾಗಿ ದೇಹತ್ಯಾಗ ಮಾಡುತ್ತಿರುವೆನೆಂದು ನಮೂದಿಸಿದ್ದಾನೆ ಆತ್ಮಹತ್ಯೆ ಮಾಡಿಕೊಂಡು ದೇಹತ್ಯಾಗ ಮಾಡಬೇಕೆಂಬ ಕಲ್ಪನೆ ಬಹು ದಿನಗಳಿಂದ ತನ್ನಲ್ಲಿ ನಿಸರ್ಗಿಕವಾಗಿತ್ತೆಂದೂ ಹಿಂಮೆ ಮೈ ಕಿತ್ತಿಯಲ್ಲಬಾರದೆಂದೂ ತಾನು ಅಹಿಂಸಾ ತತ್ವವನ್ನು ಪ್ರಯತ್ನ ಮಾಡಿದ್ದೆನೆಂತಲೂ ಅಹಿಂಸಾ ಸಾಕಷ್ಟು ಮಾರಕ ವಿದ್ಯೆಯಾದ್ದರಿಂದ ತನ್ನ ಪ್ರಯತ್ನ ಆಗ್ನ ಸಫಲವಾಗಲಿಲ್ಲವೆಂತಲೂ, ಪುನಃ ನುಷಿಯಲ್ಲೇ ಅಹಿಂಸಾ ತಿಂದು ಆತ್ಮಹತ್ಯೆ ಮಾಡಿಕೊಳ್ಳುವ ವಿಚಾರ ಇತ್ತೀಚೆಗೆ ಹಿಂಮೆ ಮೈ ತನ್ನ ಮನಸ್ಸಿನಲ್ಲಿ ಬಂದಿರ್ತಿಂತಲೂ, ಆದರೆ ಹಾಗೆ ಮಾಡುವದರಿಂದ ಮನೆಯವರ ಮೇಲೆ ಕಷ್ಟ ಬಂದೀತೆಂಬ ಆಂಜಕೆಯುಂಟಾಗುತ್ತಿದ್ದರಿಂದ ತಾನು ಆ ವಿಚಾರ ಬಿಟ್ಟುಕೊಟ್ಟು ೬ ನೆಯಿಂದ ೩ ಮೈಲು ಅಂತರದಲ್ಲಿರುವ ಬೆಳಂಬರ ಗ್ರಾಮದೊಳಗಿನ ಗುಡ್ಡದ ಮೇಲೆ ಆತ್ಮಹತ್ಯೆ ಮಾಡಿಕೊಳ್ಳು ವ ನಿರ್ಧಾರ ಮಾಡಿದೆನೆಂತಲೂ ಗೋಪಾಲಕೃಷ್ಣನು ತನ್ನ ಪತ್ರದಲ್ಲಿ ಬರೆದಿದ್ದಾನೆ ತಾನು ಆತ್ಮಹತ್ಯೆ ಮಾಡಿಕೊಂಡು ಸ್ಯಾಯವೆನೆಂದು ತನ್ನ ಪತ್ರ ಸಾಮುದ್ರಿಕದಿಂದಲೂ ಜಾತಕದ ಮೇಲಿಂದಲೂ ತಜ್ಞರಿಗೆ ಮನವರಿಕೆಯಾಯಿತೆಂತಲೂ ಆತನು ನಮೂದಿಸಿದ್ದಾನೆ! ಹಿಂದಿನ ಜನ್ಮದಲ್ಲಿ ಏನೋ ಪಾಪ ಮಾಡಿದ್ದರಿಂದ ಆದರ ಪ್ರಾಪ್ತಿಗಾಗಿಯೇ ಈ ಜನ್ಮಕ್ಕೆ ಬಂದೆ, ಈ ಜನ್ಮದಲ್ಲಿ ನಾನು ಯಾರಿಗೂ ಕೇಡು ಬಗೆದಿರುವದಿಲ್ಲ, ಯಾರಿಗೂ ಕಷ್ಟ ಕೊಟ್ಟಿಲ್ಲ, ಆದರೆ ಈಗಿನ ಪರಿಸ್ಥಿತಿಯಲ್ಲಿ ವಿಶೇಷ ಕಾರ್ಯ ಮಾಡಲು ಸಾಧ್ಯವಾಗದ ಮೂಲಕ ಈ ದೇಹವನ್ನು ಪರಿತ್ಯಜಿಸಿ ವಿಶೇಷವಾದ ಕಾರ್ಯ ಮಾಡಿ ತೋರಿಸಲು ಅನುಕೂಲವಾಗುವಂತಹ ಇನ್ನೊಂದು ಉತ್ತಮ ಜನ್ಮ ಶೀಘ್ರವು ದೊರೆಯಲಿ ಎಂತಲೂ ಗೋಪಾಲಕೃಷ್ಣನು ತನ್ನ ಪತ್ರದಲ್ಲಿ ಬರೆದಿಟ್ಟಿ

NOTIFICATION.

Applications are invited from candidates belonging to the Intermediate and Backward classes Christians and Muhammadans for the post of a clerk in the Office of the District School Board Kanara Karwar The pay of the post is with time scale pay of Rs 25 5/2 55 Only those who have passed the Matriculation Examination scoring more than 50/ of marks having a thorough knowledge of Kannada need apply Applicants should be the residents of the North Kanara District

2 The application should be sent so as to reach the Undersigned on or before 30—11—1939 It should be in the applicants own hand writing and contain the following particulars —

(1) Name of the candidate in full
(2) Place of residence
(3) Caste
(4) Age (with proofs)
(5) Educational qualifications
Qualification in type writing should also be given
(6) The candidate should furnish certificate of good character
(7) Total number of marks obtained at the Matriculation Examination and the percentage to the total number of marks

3 Selected candidates will be called for an interview at their own expense At the time of the interview they will be required to show the certificates referred to above in original

Office of the District School Board, Kanara
KARWAR 10—11—1939

N. S. HERLEKAR,
Administrative Officer, D. S B Kanara

ದ್ವಾನೆ ಗೋಪಾಲಸ್ವಾಮಿ ಅಯ್ಯಂಗಾರ್ಯರವರ ಮೇಲೆ ಬಹಳ ಅಸಕ್ತಿಯಿತ್ತೆಂದು ತಿಳಿಯುತ್ತದೆ ಅವನ ಬಳಿಯಲ್ಲಿ ಗಿಣಿಯು ಶುತ್ತಕದಲ್ಲಿ ಅವನು ತರಬರಿಕೆ ಬಿಕ್ಷಗಳನ್ನು ಒರೆದಿಟ್ಟಿರುತ್ತಾನೆ ಅತನ ಮಾರ್ಗದರ್ಶನದ ನೇರಾಂಶ ವಿಚಾರಗಳೇ ಗೋಪಾಲಕೃಷ್ಣನನ್ನು ಆತ್ಮಹತ್ಯೆಯ ಮಾರ್ಗದಲ್ಲಿ ಪ್ರೇರೇಪಿಸಿರಬೇಕು ಗೋಪಾಲಕೃಷ್ಣನ ಬಯಸಿ ಪೂರ್ತಿಯಾಗುವ ಭಾರ ಈಗ ಶ್ರೀ ಗೋಪಾಲಕೃಷ್ಣನ ಮೇಲಿದೆ !

ತೀರ್ಥ— (ತಾ ೧೦ ೧೧ ೬೯) ಇಲ್ಲಿ ಕಂಡಲಿರುವ ೧೧೦ನೆಯ ಸಾಮಿಲ ಕರ್ನಾಟಕ ಆಯುರ್ವೇದ ಸಮ್ಮೇಲನದ ಅಧ್ಯಕ್ಷಸ್ಥಾನಕ್ಕೆ ವಿದಾಪುರದ ಸುಪ್ರಸಿದ್ಧ ವೈದ್ಯರಾದ ಶ್ರೀ ಆಚ್ಯ ಅನಂತಾಚಾರ್ಯರವರು ಆರಿಸಲ್ಪಟ್ಟಿದ್ದಾರೆ ಸಮ್ಮೇಲನವು ದಿಸಿಂಬರ ತಾ ೩೮, ೩೯ ಮತ್ತು ೪೦ ಹೀಗೆ ಮೂರು ದಿನಗಳ ವರೆಗೆ ನಡೆಯುವದು ಸ್ವಾಗತ ಸಮಿತಿಯವರು ಎಲ್ಲ ಸಿದ್ಧತೆಗಳನ್ನು ಮಾಡುತ್ತಿದ್ದರಲ್ಲಿ ತೊಡಗಿದ್ದಾರೆ ಪ್ರತಿನಿಧಿಗಳ ಇಳಿಕೊಳ್ಳುವ ಮುಂತಾದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ ಎಲ್ಲ ವೈದ್ಯರೂ ಆಯುರ್ವೇದಾಭಿಮಾನಿಗಳೂ ಸಮ್ಮೇಲನಕ್ಕೆ ಬಂದು ಸಮ್ಮೇಲನದ ಕಾರ್ಯವನ್ನು ಯಶಸ್ವಿ ಮಾಡಿ ಕೊಡಬೇಕಾಗಿ ಸ್ವಾಗತ ಸಮಿತಿಯವರು ವಿನ್ನೆವಿಸುತ್ತಾರೆ

ನಿನ್ನೆ ಇಲ್ಲಿಯ ವೈದ್ಯ ರಾ ನೀಲಕಂಠರಾವ ಹಟವರ್ಧನ ಇವರ ಮನೆಯಲ್ಲಿ ಶ್ರೀ ಧನ್ವಂತರೀ ಜಯಂತಿಯ ಉತ್ಸವ ಬಲು ವಿಜೃಂಭಣೆಯಿಂದ ಜರುಗಿತು ಉತ್ಸವಕ್ಕೆ ಎಲ್ಲ ವೈದ್ಯ-ಡಾಕ್ಟರರೂ ಬಹಳ ಮಂದಿ ಊರ ಪ್ರತಿಷ್ಠಿತರೂ ಬಂದಿದ್ದರು ಮೊದಲು ಶ್ರೀ ಧನ್ವಂತರಿಯ ಪೂಜೆ, ಮಂಗಳಾರತಿ, ಸ್ತೃಸಾದ ಸ್ತೀರಾದಿ ಮುಂತಾದವುಗಳಾದವು ಆ ಮೇಲೆ ಇಲ್ಲಿಯ ವೈದ್ಯ ಸಂಶೋಧಕರು ಶಿವಮೊಗ್ಗಿಯ ಪ್ರಸಿದ್ಧ ವೈದ್ಯರಾದ ರಾ ಪಾರ್ಥಸಾರಥಿಯಾಚಾರ ಪಂಡಿತರ ಅಧ್ಯಕ್ಷತೆಯಲ್ಲಿ ಸೆಳೆ ಸೇರಿ, ಈ ಕೆಳಗಿನಂತೆ ಠರಾವುಗಳನ್ನು ಮಂಡಿಸಲು —

(೧)ಮುಂಬಯಿ ಸರಕಾರದವರು ವೈದ್ಯ ಹಕೀಮರು ನೋಂದಣಿಯ ಅಸಿನಾನಸನ್ನು ನೇಮಿಸಿದ ವೈದ್ಯ ಮಂಡಳದಲ್ಲಿ ಕರ್ನಾಟಕಕ್ಕೆ ಪ್ರಾತಿನಿಧ್ಯ ದೊರೆಯದ ಬಗ್ಗೆ ವಿಷಾದ ಪ್ರದರ್ಶನ, ಮತ್ತು ಆ ಮಂಡಳದಲ್ಲಿ ಕನಿಷ್ಠ ಇಬ್ಬರು ಕನ್ನಡಿಗ ವೈದ್ಯರನ್ನು ನೇಮಿಸಬೇಕೆಂದು ಸರಕಾರಕ್ಕೆ ಪ್ರಾರ್ಥನ (೨) ಕರ್ನಾಟಕದಲ್ಲಿ ಸ್ಥಾಪಿಸಲ್ಪಡುವ ಆಯುರ್ವೇದ ವಿದ್ಯಾಲಯದಲ್ಲಿ ಆಯುರ್ವೇದ ವಿದ್ಯಾಂತರೇ ಪ್ರಾಮ್ಯಾಪಕರಾಗಿ ನೇಮಿಸುವದಕ್ಕಾಗಿ ವಿದ್ಯುತ್ತಿದೆಂತಲೂ, ವಿದ್ಯಾಲಯದ ಆಡಳಿತ ಸ್ವತಂತ್ರವನ್ನು ಏರ್ಪಿಸಲು ಕರ್ನಾಟಕದ ಪ್ರಮುಖ ವೈದ್ಯರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಕಳ್ಳ ಬೇಕೆಂತಲೂ ಮುಂಬಯಿ ಸರಕಾರಕ್ಕೆ ಸೂಚನೆ (೩) ಆ ಳ ಆಯುರ್ವೇದ ಮಂಡಲದವರು ಸಿದ್ಧಗೊಳಿಸಿದ ಅಭ್ಯಾಸಕ್ರಮವನ್ನು ಕೂಡಲೆ ಸರಕಾರಕ್ಕೊಪ್ಪಿಸುವಂತೆ ಮಂಡಳಿಕ್ಕೆ ವಿನ್ನಪ (೪) ಇದೇ ಬರುವ ದಿಸಂಬರ ತಿಂಗಳ ಕೊನೆಯ ವಾರದಲ್ಲಿ ಇಲ್ಲಿ ಕೂಡಲಿಕ್ಕಿದ್ದ ಅ ಕ ಆಯುರ್ವೇದ ಸಮ್ಮೇಲನಕ್ಕೆ ಚೆತ್ಯೆಸಿ ಸಮ್ಮೇಲನವನ್ನು ಬಲವಂತಗೊಳಿಸಲು ಅಖಿಲ ಕರ್ನಾಟಕ ವೈದ್ಯರಿಗೆ ವಿನಂತಿ

ಯೆಲ್ಲಾಪುರ— (ತಾ ೯ ೧೧ ೬೯) ಜಿಲ್ಲೆ ಬೀಳುತ್ತಿರುವ ಒಳ್ಳಾಗಾಲ ಬೆಳೆ ಕೊಯ್ಯುವ ಕಲಸದಲ್ಲಿ ತೊಡಗಿದ್ದಾರೆ ಈ ವರ್ಷ ಅಡಿಕೆ ಮರದ್ದಕ್ಕೆ ಕೊಳೆ ಬಂದದ್ದರಿಂದ ಅಡಿಕೆ ಬಹಳ ಬೆಳೆ ನಿಕ್ಷಪ್ತವಾಗಿದೆ

ಈಚೆ ವಾರ ತಾಲೂಕಾ ಬೆಟ್ಟದಲ್ಲಿ ಇಲ್ಲಿಯ ಆನೆ ಶಿಕಾರಿಗಾರಾದ ರೇವಣ ಸಿದ್ದಪ್ಪನವರು ಒಂದೇ ದಿನ ೩ ದೊಡ್ಡ ಆನೆಗಳನ್ನು ೨ ಮರಿಗಳನ್ನೂ ಕೊಂಯ ನೆಲಕ್ಕುರುಳಿಸಿದರು ಅನೆಗಳನ್ನು ಹಾಡುಳುತ್ತ ಇವರು ಅಡವಿಯಲ್ಲಿ ತಿರುಗಾಡುತ್ತಿದ್ದಾಗ ೩೦ ೪೦ ಆನೆಗಳ ದೊಡ್ಡ ಹಿಂಡು ಬಂದು ಇವರನ್ನು ಮುತ್ತಿತಂತೆ! ಆಗ ಅವರು ಧೈರ್ಯ ಬಿಡದೆ ಹಿಂದಿರಿ ಹಿಂದೊಂದು ಗುಂಡು ಹಾರಿಸುತ್ತ ೪ ಆನೆಗಳನ್ನು ನೆಲಕ್ಕೆ ಕೆಡವಿದರು ಆಗ ಒಂದು ಆನೆ ಮರಿಯು ಹಿಂದಿನಿಂದ ಇವರ ಮೇಲೆ ನಿಲುಬಂದು ಅವರನ್ನು ಕೆಡವಿತಂತೆ! ಆದ್ದರಲ್ಲಿ ಪ್ರತಿಂಗಾಷಧಗಳ ತಾಳಿ ಬೇಟೆಗಾರರು ಆ ಮರಿಯನ್ನೂ ಗುಂಡಿಟ್ಟು ಯಮಸದನಕ್ಕೆ ಕಳಿಸಿಕೊಟ್ಟರು! ತುಸು ವಿಳಂಬವಾಗಿದ್ದರೆ ಆನೆಮರಿಯ ಬದಲು ಬೇಟೆಗಾರರೇ ಯಮಲೋಕದ ಯಾತ್ರೆ ಮಾಡ ಬೇಕಾಗುತ್ತಿತ್ತು!

ಈ ತಾಲೂಕಿನ ಕನ್ನಡಗಳ್ ಗ್ರಾಮದ ದ್ಯಕ ಮಾದ ಕ ನುಷಿಯೊಬ್ಬಿ ಒಂದು ಅಳಿಲು ಮತ್ತು ಎರಡು ಕರಗಳ ಬಗ್ಗೆ ಇಟ್ಟ ಒಳ್ಳಿಗರಲ್ಲಿ ಜಗಳಾಟ ನಡೆದಿತ್ತು ಈ ಸಂಗತಿ ಇಲ್ಲಿಯ ಪೋಲೀಸ ಮಾತ್ತರರಿಗೆ ತಿಳಿದು ಬಂತು ಅವರು ಕೂಡಲೆ ಮಾಪಳೆಗೆ ಹೋಗಿ ಮೇಲಿ ನ ವಿವಾದಕ್ಕೆ ಕಾರಣವಾದ ಜನಾವರಗಳೊಳಗಿಂದ ಒಂದು ಅಳಿಲನ್ನೂ ಒಂದು ಕರವನ್ನೂ ತಾವು ಕಟ್ಟಿ ಕೊಂಯ ತಂದು ವಿವಾದ-ಕಾರಣವನ್ನು ಬಗೆಹರಿಸಿ ಬಿಟ್ಟರು! ಅಳಿಲ ಮಾಲೀಕನು ಈಗ ಸದರ ವಾಸ್ತರದ ಮೇಲೆ ಧಿರ್ಯಾದು ಒಟಾಲಕಡಿಸಿದ್ದಾನೆಂದು ಸುದ್ದಿಯುಂಟು ಬೇಲಿಯೇ ಹೊಲವನ್ನು ಮೇಯುಪತ್ತಿದರೆ ಮುಂದೇನು ಗತಿ?

